ಬೆಂಗಳೂರು ಜಿಲ್ಲೆಯ ಆಚರಣೆಗಳು : ಸಾಂಸ್ಕೃತಿಕ ಸ್ಥಿತ್ಯಂತರಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಕೆ.ಜಿ. ರೇಖಾ

ಮಾರ್ಗದರ್ಶಕರು

ಡಾ. ಸಿ.ಟಿ. ಗುರುಪ್ರಸಾದ್

ಸಹ ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ– ೫೮೩ ೨೭೬

೨೦೧೬

ಬೆಂಗಳೂರು ಜಿಲ್ಲೆಯ ಆಚರಣೆಗಳು : ಸಾಂಸ್ಕೃತಿಕ ಸ್ಥಿತ್ಯಂತರಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಕೆ.ಜಿ. ರೇಖಾ

ಮಾರ್ಗದರ್ಶಕರು

ಡಾ. ಸಿ.ಟಿ. ಗುರುಪ್ರಸಾದ್

ಸಹ ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೬

ಪರಿವಿಡಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಕೆ.ಜಿ. ರೇಖಾ ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಬೆಂಗಳೂರು ಜಿಲ್ಲೆಯ ಆಚರಣೆಗಳು : ಸಾಂಸ್ಕೃತಿಕ ಸ್ಥಿತ್ಯಂತರಗಳು** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಸಿ.ಟಿ. ಗುರುಪ್ರಸಾದ್
ಸಹ ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ: 8.12.16

ಸಂಶೋಧಕರ ಘೋಷಣಾ ಪತ್ರ

ಬೆಂಗಳೂರು ಜಿಲ್ಲೆಯ ಆಚರಣೆಗಳು : ಸಾಂಸ್ಕೃತಿಕ ಸ್ಥಿತ್ಯಂತರಗಳು ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಸಿ.ಟಿ. ಗುರುಪ್ರಸಾದ್** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

K G Rekha

ಕೆ.ಜಿ. ರೇಖಾ
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 8.12.16

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧: ಅಧ್ಯಯನದ ಉದ್ದೇಶ

೧.೨: ಅಧ್ಯಯನದ ಸ್ವರೂಪ, ವ್ಯಾಪ್ತಿ

೧.೩: ಬೆಂಗಳೂರು ನಗರದ ಈವರೆಗಿನ ಅಧ್ಯಯನಗಳು ಹಾಗೂ ಪ್ರಮುಖ ವಿದೇಶಿ ಆಕರಗಳು

೧.೪: ಅಧ್ಯಯನದ ವಿಧಾನ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಪ್ರವೇಶ :

ಸಂಸ್ಕೃತಿಯನ್ನು ಕೇಂದ್ರವಾಗಿಟ್ಟುಕೊಂಡು ನಡೆಸುವ ಯಾವುದೇ ಅಧ್ಯಯನವನ್ನು ಆ ಪದದ ನಿರ್ವಚನ ಮತ್ತು ಪರಿಕಲ್ಪನೆಗಳನ್ನೂ ವಿವಿಧ ಕಾಲಘಟ್ಟಗಳ ನಿಕಷದಲ್ಲಿ ಒರೆ ಹಚ್ಚಿಯೇ ಮಾಡಬೇಕಾಗುತ್ತದೆ. ಮಾನವ ಶಾಸ್ತ್ರೀಯ ನೆಲೆಯಲ್ಲಿ ಒಂದು ಪ್ರದೇಶದ ಜನಪದ ಆಚರಣೆಯನ್ನು ಸಂಶೋಧನೆಗೆ ಒಳಪಡಿಸಬೇಕಾದರೆ ಈ ಸಾಂಸ್ಕೃತಿಕ ನಿಕಷದಲ್ಲಿ ಹಾದು ಹೊರಬರುವ ಪ್ರಕ್ರಿಯೆ ಅತ್ಯಂತ ಅನಿವಾರ್ಯವೂ ಆತ್ಯಂತಿಕವೂ ಹೌದು. ಸಂಸ್ಕೃತಿಯನ್ನು ಕುರಿತು ಮಾತನಾಡಬೇಕಾದರೆ ಈ ಪರಿಕಲ್ಪನೆಯ ಹಿಂದೆ ಇರುವ ವಿವಿಧ ಚಿಂತನ ಹಾಗೂ ದೃಷ್ಟಿಕೋನಗಳನ್ನು ಕೇವಲ ಸಂವೇದನಾ ನೆಲೆಯಲ್ಲಿ ನೋಡದೆ, ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ನೆಲೆಯಲ್ಲಿ ಸದಾ ಗಮನದಲ್ಲಿರಿಸಿಕೊಳ್ಳಲೇಬೇಕಾಗುತ್ತದೆ. ವಾಸ್ತವವಾಗಿ 'ಸಂಸ್ಕೃತಿ' ಎಂಬ ಪದಕ್ಕೆ ಒಂದು ನಿರ್ದಿಷ್ಟ ನಿರ್ವಚನ ನೀಡುವುದು ಅಸಾಧ್ಯದ ಕೆಲಸ. ಜನಾಂಗ, ಭಾಷೆ, ಸಾಂಸ್ಕೃತಿಕ ಪರಿಸರ, ಆರ್ಥಿಕ ಪರಿಸರ, ರಾಜಕೀಯ ಶಕ್ತಿ ಕೇಂದ್ರಗಳು, ಧಾರ್ಮಿಕ ಆಯಾಮಗಳು ಬದಲಾದಂತೆ ವಿವಿಧ ಕಾಲಘಟ್ಟದಲ್ಲಿ ವಿವಿಧ ರೀತಿಯ ನಿರ್ವಚನಗಳನ್ನು ಮಾನವಶಾಸ್ತ್ರಜ್ಞರು, ಸಂಸ್ಕೃತಿ ಚಿಂತಕರು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಈ ನೆಲೆಯಲ್ಲಿ ವರ್ತಮಾನದ ಕಾಲಕ್ಕೆ ತಕ್ಕಂತೆ ಕೇವಲ ನಿರ್ವಚನಗಳಷ್ಟೇ ಅಲ್ಲದೇ, ಪ್ರಕ್ರಿಯೆಗಳೂ ಸಹಾ ಮರು ವ್ಯಾಖ್ಯಾನಕ್ಕೆ, ನಿರ್ವಚನಕ್ಕೆ ಒಳಗಾಗುತ್ತಲೇ ಇರುತ್ತದೆ. ಮಾನವ ಶಾಸ್ತ್ರೀಯ ಸಂಶೋಧನೆಗಳ ಪ್ರಧಾನ ಉದ್ದೇಶವೇ ಮನುಷ್ಯ ಸಮಾಜದ ಕ್ರಿಯೆ, ಚಿಂತನೆ, ವ್ಯವಸ್ಥೆ ಹಾಗೂ ಪ್ರತಿಕ್ರಿಯೆಗಳನ್ನು ವಿವಿಧ ಕಾಲಘಟ್ಟದಲ್ಲಿ ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸುವುದು. ಹಾಗೆ ಒಳಪಡಿಸಬೇಕಾದರೆ ಆ ಸಂಶೋಧನೆಯು ಪ್ರಜ್ಞಾವಾಹಿನಿಯಲ್ಲಿ

ನಿರಂತರವಾಗಿ ತ್ರಿಕಾಲ ಪ್ರಜ್ಞೆಯೊಂದು ಪ್ರವಹಿಸುತ್ತಲೇ ಇರಬೇಕಾಗುತ್ತದೆ. ಅದೆಂದರೆ ವಿವಿಧ ಕಾಲಘಟ್ಟದಲ್ಲಿ ಹಲವಾರು ತಿರುವುಗಳ ನಡುವೆಯೂ ಸಂಸ್ಕೃತಿಯೊಂದು ತನ್ನ ಜೀವಂತಿಕೆಯನ್ನು, ಅಸ್ಮಿತೆಯನ್ನು ಉಳಿಸಿಕೊಳ್ಳುವ "ಸಾಂಸ್ಕೃತಿಕ ಎಚ್ಚರ". ಕಳೆದ ೨-೩ ಶತಮಾನಗಳ ಅವಧಿಯ ಸಾಂಸ್ಕೃತಿಕ ಭೂಪಟವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕೆಲವು ಸಂಸ್ಕೃತಿಗಳು ಗಾಢವಾಗಿ ಇನ್ನೂ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡಿದ್ದರೆ, ಇನ್ನೂ ಹಲವು ತಮ್ಮ ಮೂಲ ಚಹರೆಗಳನ್ನೇ ಬದಲಾಯಿಸಿಕೊಂಡುಬಿಟ್ಟಿರುವುದನ್ನು ಕಾಣಬಹುದು. ಅದಕ್ಕೆ ಕಾರಣ ಆಧುನೀಕರಣ, ತಾಂತ್ರಿಕ ಆವಿಷ್ಕಾರಗಳು, ಜಾಗತೀಕರಣ ಏನೇ ಇರಬಹುದು ಸಂಸ್ಕೃತಿಯ ಚಿಂತನೆಗಳು, ಸಂಶೋಧನೆಗಳು ಹಲವಾರು ಅವಸ್ಥಾಂತರಗಳನ್ನು ಕಂಡಿರುವುದಂತೂ ನಿಜ. ಹಾಗೆ ಈ ವಿವಿಧ ಅವಸ್ಥಾಂತರಗಳಿಗೆ ಒಳಗಾಗುವ ನಡುವಿನ ಕಾಲವನ್ನು ನಾವು "ಸ್ಥಿತ್ಯಂತರದ ಕಾಲಘಟ್ಟ" ಎಂದು ಕರೆಯುತ್ತೇವೆ. ಈ ಕಾಲಘಟ್ಟದಲ್ಲಿ ಅನಿವಾರ್ಯವಾಗಿ ಪರಿವರ್ತನೆಗೆ ಒಳಗಾಗುವ ಸಂಸ್ಕೃತಿಯ ವಿನ್ಯಾಸವೂ ಅಂತರಂಗದಲ್ಲಿ ತನ್ನ ನೆಲೆಯನ್ನು ಉಳಿಸಿಕೊಳ್ಳಲು ಎಲ್ಲ ಕಾಲದಲ್ಲೂ ಹೆಣಗಾಡುತ್ತಲೇ ಬಂದಿದೆ. ಸಂಸ್ಕೃತಿಯನ್ನು ಸಾಮಾಜಿಕ ವ್ಯವಸ್ಥೆಯೊಂದರ ಭಾಗವಾಗಿಯೇ ಅಧ್ಯಯನ ಮಾಡಬೇಕಾಗಿರುವುದು ಅನಿವಾರ್ಯವಾಗಿರುವುದರಿಂದ ಸಾಮಾಜಿಕ ಪರಿಸರ, ವ್ಯವಸ್ಥೆಗಳ ಮೇಲೆ ಬೀಳುವ ಬಾಹ್ಯ ಪರಿಣಾಮಗಳು ಸಂಸ್ಕೃತಿಯ ನೇಯ್ಗೆಯ ಮೇಲೆ ಪ್ರಭಾವ ಬೀರುವುದು ಅನಿವಾರ್ಯವಾಗಿದೆ. ಹೀಗಾಗಿ ಸಂಸ್ಕೃತಿಯ ಅಖಂಡ ವ್ಯಾಪ್ತಿಗೆ ಸೇರುವ ಎಷ್ಟೋ ಉಪಸಂಸ್ಕೃತಿಗಳು ಈ ಮಹಾಸಮುದ್ರದೊಳಗೆ ಲೀನವಾಗಿ ಒಂದು ಬೆರಗನ್ನು ವಿಸ್ಮಯವನ್ನೂ ಸ್ಥಿತ್ಯಂತರದ ಕಾಲಘಟ್ಟದಲ್ಲಿ ಹುಟ್ಟಿಸಿರುವುದಂತೂ ನಿಜ. ಅದಕ್ಕೇ ಈ ಶತಮಾನ ಹಾಗೂ ಕಳೆದ ಶತಮಾನದಲ್ಲಿ ನಡೆದ ಸಾಂಸ್ಕೃತಿಕ ಚಿಂತನೆಯ ಎಲ್ಲ ಅಧ್ಯಯನವೂ ಬಹುಮುಖೀ ಹಾಗೂ ಅಂತರ್‌ಶಾಸ್ತ್ರೀಯ ಅಧ್ಯಯನವಾಗಿ ಬೆಳೆದು ಬಂದಿರುವುದು ಹಾಗೂ ವಿವಿಧ ರೀತಿಯ ವೈರುಧ್ಯ ಹಾಗೂ ಗ್ರಹಿಕೆಗಳು ಕಾಣಿಸಿಕೊಂಡಿರಬಹುದು. ಮನುಷ್ಯನ ಮೂಲಭೂತ ಸ್ವಭಾವ ಬದಲಾಗುವಲ್ಲಿ ಈ ಸಾಂಸ್ಕೃತಿಕ ಚಿಂತನೆಗಳು ಸ್ಥಿತ್ಯಂತರದ ಕಾಲಘಟ್ಟದಲ್ಲಿ ಬದಲಾಗಿರುವುದನ್ನು ಗುರುತಿಸುತ್ತಾ ಬಂದಿದ್ದೇವೆ. ಒಂದು ಕಾಲಘಟ್ಟದ ಚಿಂತನೆಗೂ, ಮತ್ತೊಂದು ಕಾಲಘಟ್ಟದ ಸಾಂಸ್ಕೃತಿಕ ಚಿಂತನೆಗೂ ಇರುವ ವ್ಯತ್ಯಾಸವೆಂದರೆ ಗ್ರಹಿಕೆ, ಭಾವನೆ, ನೀತಿ, ರಾಜಕೀಯ, ಸಾಮಾಜಿಕ, ಧಾರ್ಮಿಕತೆ ಇವುಗಳ ಬಗೆಗಿನ ಪಲ್ಲಟಗಳು. ಅದಕ್ಕೇ ಬದಲಾಗುತ್ತಿರುವ ಕಾಲಘಟ್ಟದಲ್ಲಿ ಸಂಸ್ಕೃತಿಯ ಚಿಂತನೆಯೊಂದು ಏಕ ಪ್ರಕಾರವಾಗಿ ನಡೆಯದೆ, ವಿವಿಧ ಆಯಾಮಗಳ ನಡುವೆ ಅಧ್ಯಯನಕ್ಕೆ ಒಳಪಡಬೇಕಾದ ತುರ್ತು ಇದೆ. ಮಾನವ ಶಾಸ್ತ್ರೀಯ ಸಂಶೋಧನೆಯ ಮುಖ್ಯ ಕೇಂದ್ರವಾಗಿ ಸಂಸ್ಕೃತಿ ಚಿಂತನೆಯೂ ಸೇರ್ಪಡೆಯಾಗಿರುವುದು ಈ ಕಾರಣಕ್ಕಾಗಿಯೇ. ಈ ಅಧ್ಯಯನದ ವ್ಯಾಪ್ತಿಯು ಪ್ರತೀ ಕಾಲಘಟ್ಟದಲ್ಲೂ ತನ್ನ ಮೂರ್ತಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಲೇ ಬಂದಿರುವುದನ್ನು ಮನಗಾಣಬಹುದು. ಸಮಾಜದ ಪ್ರಧಾನವಾಹಿನಿಯನ್ನು ಒಡೆದು, ಸಂಸ್ಕೃತಿಗೆ ಪ್ರತಿ ಸಂಸ್ಕೃತಿಯನ್ನು

ಕಟ್ಟುವುದು, ಉಪಸಂಸ್ಕೃತಿಗಳ ವಿಲೀನೀಕರಣ ಮತ್ತು ಬೇರ್ಪಡಿಸುವಿಕೆ, ಚರಿತ್ರೆಯ ಮರು ನಿರೂಪಣೆ, ಜಾನಪದ ಸಿದ್ಧಾಂತವೊಂದನ್ನು ಟಥಿಣ್ಣು ನ ಹಿನ್ನೆಲೆಯಿಂದ ಬೇರ್ಪಡಿಸಿ ಒಡೆದು ಕಟ್ಟುವ, ಸವಾಲು, ತೌಲನಿಕ, ಚಾರಿತ್ರಿಕ ಸಂಕಥನಗಳ ಮರು ನಿರೂಪಣೆ. ಹೀಗೆ ವಿವಿಧ ದರ್ಪಣಗಳ ಮೂಲಕ ಸಂಸ್ಕೃತಿಯನ್ನು ಬಿಂಬಿಸುವ ಯತ್ನಗಳು ನಿರಂತರವಾಗಿ ನಡೆಯುತ್ತಲೇ ಇದೆ. ಇದಕ್ಕೆ ಪೂರಕವಾಗಿ ಈವರೆಗೆ ನಡೆದಿರುವ ಸಂಸ್ಕೃತಿಯ ವಿವಿಧ ಚಿಂತನೆಗಳನ್ನು ಮರು ಪರಿಶೀಲನೆ ಮಾಡುವುದು ಅನಿವಾರ್ಯವಾಗಿರುತ್ತದೆ. ಕಳೆದ ಶತಮಾನದಿಂದ ನಡೆದು ಬಂದಿರುವ ಸಂಸ್ಕೃತಿಯ ಚಿಂತನೆಗಳನ್ನು ವಿಭಾಗೀಕರಿಸಿದಾಗ ಕೇವಲ ಮೂಲ ಅಂತಃಸತ್ವದ ಅರ್ಥದ ನೆಲೆಯಲ್ಲಿ ನಡೆದ ಚಿಂತನೆಗಳು, ಅನನ್ಯತೆಯನ್ನು ಉಳಿಸಿಕೊಳ್ಳಲು ಹೋರಾಡಲು ನಡೆಸಿದ ಚಿಂತನೆಗಳು, ಹಾಗೂ ಪಾಶ್ಚಿಮಾತ್ಯ ಚಿಂತನೆಯ ಪ್ರಭಾವವನ್ನು ಪಡೆದ ಓರಿಯಂಟಲಿಸಂ ಹಿನ್ನೆಲೆಯಲ್ಲಿ ನಡೆಸಿದ ಚಿಂತನೆಗಳ ಮಾದರಿಗಳು ನಮಗೆ ಕಾಣಸಿಗುತ್ತವೆ. ಈ ಬೃಹತ್ ಸಾಂಸ್ಕೃತಿಕ ಸಂಕಥನವು ಸ್ಥಿತ್ಯಂತರ ಕಾಲದ ತಲ್ಲಣಗಳನ್ನು ಎದುರಿಸುತ್ತಲೇ ಮತ್ತೆ ಮತ್ತೆ ಅನುಷಂಗಿಕವಾಗಿ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸಿಕೊಳ್ಳಲು ಹೆಣಗಾಡುತ್ತಾ ಬಂದಿರುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಒಂದು ಪ್ರದೇಶದ ಸಂಸ್ಕೃತಿಯ ಅಧ್ಯಯನ ಸಂಶೋಧನೆಗೆ ಒಳಪಡಿಸಬೇಕಾದರೆ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುನ್ನಡೆಯುವುದು ಅನಿವಾರ್ಯವಾಗಿರುತ್ತದೆ. ಪ್ರದೇಶವೊಂದು ತನ್ನ ಮೂಲ ಸಂಸ್ಕೃತಿಯ ಅಸ್ಮಿತೆಯನ್ನು ಕಂಡುಕೊಳ್ಳಬೇಕಾದರೆ, ತನ್ನ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಬೇಕಾದರೆ ಅದು ರೂಪುಗೊಂಡಿರುವ ಕಾಲದ ಚಾರಿತ್ರಿಕ, ಭೌಗೋಳಿಕ, ಸಾಮಾಜಿಕ ಹಾಗೂ ರಾಜಕೀಯ ಒತ್ತಡಗಳನ್ನು ಗಮನಿಸಲೇಬೇಕಾಗುತ್ತದೆ. ಮಾನವಶಾಸ್ತ್ರೀಯ ತಳಹದಿಯಲ್ಲಿ ಸಂಸ್ಕೃತಿಯ ಅಧ್ಯಯನ ನಡೆಸುವುದು ಅನಿವಾರ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಾರ್ಗನ್ ತನ್ನ Ancient society ಎಂಬ ಕೃತಿಯಲ್ಲಿ ಸಂಸ್ಕೃತಿಯ ವಿಕಾಸದ ಬಗ್ಗೆ ಮಾತನಾಡುತ್ತಾ ಮಾನವನ ಪೂರ್ವ ಸಂಸ್ಕೃತಿಯನ್ನು ಕುರಿತು ಚರ್ಚಿಸುತ್ತಾನೆ. "ಸಂಸ್ಕೃತಿಯ ವಿಕಾಸ ಸರಳ ರೇಖೆಯಂತೆ ಸಾಗುತ್ತದೆ. ಕಾಡು ಮನುಷ್ಯತನ, ಬರ್ಬರತನ ಮತ್ತು ನಾಗರಿಕತೆ ಎಂಬ ಮೂರು ಹಂತಗಳಲ್ಲಿ ಸಂಸ್ಕೃತಿ ವಿಕಾಸ ಹೊಂದುತ್ತದೆ." ಎಂದು ಹೇಳುತ್ತಾನೆ. ಹಾಗೆ ವಿವಿಧ ಹಂತಗಳಲ್ಲಿ ವಿಕಾಸ ಹೊಂದಿದ ಮಾನವ, ಆದಿಮಾನವ ಹಂತದಿಂದ ಬರ್ಬರತನದ ಹಂತಕ್ಕೆ ಬೆಳೆದು ಬಂದ, ಕಲಿಕೆ ಅವಶ್ಯಕತೆಗಳನ್ನು ಪೂರೈಸತೊಡಗಿದಾಗ ಅವನ ಬೇಕುಗಳ ಪರಿಧಿ ವಿಸ್ತಾರವಾಗಿ ಅವನ ಪ್ರವೃತ್ತಿಯಲ್ಲಿ ಸುಧಾರಣೆಗಳಾದವು. ಗ್ರಾಮೀಣ ಸಂಸ್ಕೃತಿಯೊಂದು ರೂಪುಗೊಂಡು ಕ್ರಮೇಣ ಅದಕ್ಕೆ ನಿರ್ದಿಷ್ಟ ವಿಧಾನ, ನಿಯಮಗಳು ಹುಟ್ಟಿಕೊಂಡವು. ನಿಗದಿತ ಜೀವನ ವಿಧಾನ ಮುಂದೆ ಹಲವಾರು ಅವಸ್ಥಾಂತರಗಳನ್ನು ಹಾದು ಬಂದು ನಗರೀಕೃತವಾದವು. ಹಾಗೆ ರೂಪುಗೊಂಡ ನಗರಗಳಲ್ಲಿ ಬೆಂಗಳೂರು ಅತ್ಯಂತ ವೇಗವಾಗಿ ತನ್ನನ್ನು ತಾನು ವಿವಿಧ ಸಂಸ್ಕೃತಿಗಳ ಪ್ರಯೋಗಗಳಿಗೆ ಒಡ್ಡಿಕೊಂಡ ನಗರ.

ಹಳ್ಳಿಯೊಂದು ನಗರವಾಗಿ ಉದ್ದೇಶಪೂರ್ವಕವಾಗಿ ಮಾರ್ಪಟ್ಟಿತೋ ಅಥವಾ ಚರಿತ್ರೆ, ಧರ್ಮ, ಭೌಗೋಳಿಕ ಪರಿಸರಗಳು ವೈಶಿಷ್ಟಪೂರ್ಣವಾಗಿ ರೂಪಾಂತರಗೊಂಡು ನಗರೀಕೃತವಾಯಿತೋ ಇಂದಿಗೂ ಚರಿತ್ರಕಾರರನ್ನು ಕಾಡುತ್ತಿರುವ ಪ್ರಶ್ನೆ.

೧.೧. ಅಧ್ಯಯನದ ಉದ್ದೇಶ :

ಜಾಗತೀಕರಣವು ಬೆಂಗಳೂರಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ತಲ್ಲಣಗಳಿಗೆ ಮಹತ್ತರವಾದ ಕಾರಣಗಳಾಗಿವೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಜನಪದ ಆಚರಣೆಗಳು ಭಗ್ನಾವಶೇಷಗೊಂಡಿರುವ ಸಂಸ್ಕೃತಿಯ ಪರ್ಯಾಯ ಗುರುತುಗಳೋ ಅಥವಾ ಮನುಷ್ಯ ದೈವದ ಸಂಬಂಧದ ನಡುವಿನ ಸೇತುವೆಯಾಗಿರುವ ಸಾಂಸ್ಕೃತಿಕ ಪಳೆಯುಳಿಕೆಗಳೋ ಎಂಬ ಅನುಮಾನ ಮೂಡಿಸುತ್ತಿವೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಆಚರಣೆಗಳನ್ನು ಸಮಗ್ರವಾದ ಮೈಕ್ರೋ ಅನಾಲಿಸಿಸ್‌ಗೆ ಒಳಪಡಿಸಬೇಕಾದ ಅನಿವಾರ್ಯತೆ ಇದೆ.

ಭಾರತದ ಇತಿಹಾಸದ ಮರು ನಿರೂಪಣೆಯ ಕಾಲದಲ್ಲಿ ನಾವಿಂದು ನಿಂತಿದ್ದೇವೆ. ಭಾರತವೂ ಸೇರಿದ ಹಾಗೆ ಈ ಸ್ಥಿತ್ಯಂತರದ ಕಾಲಘಟ್ಟವು ಜಗತ್ತಿನಲ್ಲಿ ಊಹಾತೀತ ಪಲ್ಲಟಗಳಿಗೆ ಒಡ್ಡಿಕೊಂಡಿರುವ ನಿರ್ಣಾಯಕ ಘಟ್ಟ. ನಿಂತ ಹೆಜ್ಜೆಯನ್ನು ಅರಿಯಲು ಮುಂದಣ ಹೆಜ್ಜೆಯನ್ನು ಅರ್ಥೈಸಲು ಹಿಂದಿನ ಹೆಜ್ಜೆಯನ್ನು ಅರಿಯುವುದು ಅನಿವಾರ್ಯ. ಭಾರತೀಯ ಸಮಕಾಲೀನ ಸಂದರ್ಭವು ಬದಲಾಗುತ್ತಿರುವ ಈ ಹಂತದಲ್ಲಿ ಭಾರತದ ಮುಂದಿನ ಸಾಂಸ್ಕೃತಿಕ ಚರಹೆಗಳ ಮುನ್ನೋಟದ ನಕಾಶೆಯನ್ನು ಸ್ಪಷ್ಟವಾಗಿ ಚರ್ಚೆ ಮಾಡುವುದು ಸ್ಥಿತ್ಯಂತರ ಕಾಲಘಟ್ಟದ ಅಧ್ಯಯನವಾಗಬೇಕು. ಇಂದು ನಾಗರೀಕತೆಗಳು ಹಿಂದೆಂದಿಗಿಂತಲೂ ತೀವ್ರವಾಗಿ ಗಂಭೀರವಾಗಿ ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಗುರುತಿಸುವ ಕೆಲಸವನ್ನು ಮಾಡುತ್ತಿದೆ. ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಸಂಸ್ಕೃತಿ, ಸಾಂಸ್ಕೃತಿಕ ಚಹರೆ, ಅನುಭಾವ ಈವತ್ತಿನ ಅಗತ್ಯಗಳಾಗಿ ರೂಪುಗೊಳ್ಳುತ್ತಿವೆ. ತಂತ್ರಜ್ಞಾನದ ತುತ್ತತುದಿ ತಲುಪಿರುವ ಹಾಗೆ ಕಾಣುವ ಈ ಕಾಲಘಟ್ಟದಲ್ಲಿ ಮನುಷ್ಯ 'ಅನುಭಾವದ ಅತಂತ್ರತೆ' ಅನುಭವಿಸುತ್ತಿರುವ ಹಾಗಿದೆ. ಮಾನವ ತನ್ನ ಬದುಕನ್ನು ಆರೋಗ್ಯಪೂರ್ಣಗೊಳಿಸುವ ಧಾತುಗಳ ಮರು ಹುಡುಕಾಟದ ಕಾಲ ಘಟ್ಟದಲ್ಲಿ ನಿಂತಿದ್ದಾನೆ. ಅದನ್ನು ಅಂತರ್‌ಶಿಸ್ತೀಯ ಕ್ರಮಗಳಲ್ಲಿ ಕಂಡುಕೊಳ್ಳುತ್ತಿದ್ದು, ಮತ್ತೆ ಅವುಗಳನ್ನು ನಗರಗಳ ಕೇಂದ್ರವಾಗಿಸಿಕೊಳ್ಳಬೇಕಾಗಿದೆ.

ಬೆಂಗಳೂರು ನಗರವನ್ನು ಕೇಂದ್ರವಾಗಿ ಅಧ್ಯಯನಕ್ಕೆ ಆರಿಸಿಕೊಂಡ ಪ್ರಮುಖ ಉದ್ದೇಶವೆಂದರೆ ಬೆಂಗಳೂರು, ಕೇವಲ ನಗರವಾಗಿಯಷ್ಟೇ ಬೆಳೆಯದೆ ಮಹಾನಗರ/ ಕಾಸ್ಮೋಪಾಲಿಟನ್ ನಗರವಾಗಿಯೂ ಬೆಳೆದು ಚನ್ನೈ, ಮುಂಬಯಿ, ದೆಹಲಿಯಷ್ಟೇ ಸಾಮ್ಯತೆಗಳನ್ನು ಹೊಂದಿದೆ. ಬೆಂಗಳೂರಿನಂತಹ ನಗರದಲ್ಲಿ ಸಂಸ್ಕೃತಿಯು ಇಂದು ಏಕಕಾಲಕ್ಕೆ ಧನಾತ್ಮಕವಾದ ಮತ್ತು ಋಣಾತ್ಮಕವಾದ ಪರಿಣಾಮ, ಪ್ರಭಾವಗಳನ್ನು ಗಳಿಸಿಕೊಂಡಿದೆ. ತೀವ್ರ ಪ್ರಮಾಣದಲ್ಲಿ ಹೆಚ್ಚುತ್ತಿರುವ ಮೂಲಭೂತದ ಅತಿರೇಕದ ಹುಡುಕಾಟ ಇಲ್ಲಿ ನಡೆಯುತ್ತಿದೆ. ಧನಾತ್ಮಕ ನೆಲೆಯಲ್ಲಿ ಸಂಸ್ಕೃತಿಯ ಅಧ್ಯಯನದ ನೆಲೆಯೊಂದು

ಕಡೆ ರೂಪುಗೊಳ್ಳುತ್ತಿದ್ದರೆ, ಮತ್ತೊಂದೆಡೆ ಸಂಸ್ಕೃತಿಯ ಹೆಸರಿನಲ್ಲಿ ಕೋಮುಗಲಭೆ, ಮರ್ಯಾದಾ ಹತ್ಯೆಯಂತಹ ಭೀಕರ ಪರಿಣಾಮಗಳು ಅಂತರಂಗದ ಹುಡುಕಾಟದ ವಿಕಾರದ ನೆಲೆಗಳಾಗಿ ಮಾರ್ಪಟ್ಟಿವೆ. ಈ ನಿಟ್ಟಿನಲ್ಲಿ ಸಂಸ್ಕೃತಿಯನ್ನು ಕೇಂದ್ರವಾಗಿಟ್ಟುಕೊಂಡ ಅಧ್ಯಯನದ ಮಾನವಶಾಸ್ತ್ರದ ವಿಧಾನವು, ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಕೇವಲ ಒಂದು ಶೈಕ್ಷಣಿಕ ಆಸಕ್ತಿಯ ನೆಲೆಯಾಗದೆ ಒಂದು ಸಮುದಾಯದ ತುರ್ತಿನ ನೆಲೆಯಾಗಬೇಕಾಗಿದೆ. ಆದ್ದರಿಂದಲೇ ಈ ಅಧ್ಯಯನ ಸಾಹಿತ್ಯ, ಚರಿತ್ರೆ, ಸಮಾಜ, ಸಂಸ್ಕೃತಿಯನ್ನು ಕೇಂದ್ರವಾಗಿಟ್ಟುಕೊಂಡ 'ಸಮುದಾಯದ ಧಾತುವಿನ ಹುಡುಕಾಟ'ವನ್ನು ಉದ್ದೇಶವಾಗಿಟ್ಟುಕೊಂಡಿದೆ. ಇದು ಒಂದು ಸಮುದಾಯ ತನ್ನ ಅನನ್ಯತೆಯನ್ನು ಹುಡುಕುವ, ಕಟ್ಟುವ, ಕಾಪಾಡಿಕೊಳ್ಳುವ ಪ್ರಕ್ರಿಯೆಯ ಅಧ್ಯಯನ. "ಸಮುದಾಯ ಅಧ್ಯಯನ" ಇಂದು ಬಹಳ ಮುಖ್ಯವಾದ ಅಧ್ಯಯನ ಶಿಸ್ತಿನ ವಿಧಾನವಾಗಿದೆ. ತನ್ನ ಮೂಲಭಿತ್ತಿಯನ್ನು ಹಾಗೆಯೇ ಉಳಿಸಿಕೊಂಡು ವಿವಿಧ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ಹಾದು ಬರುವ ಅಂತರ್ಯಾನ ಇದು. ಈ ಅಧ್ಯಯನದ ಅನುಕೂಲದ ಕಾರಣಕ್ಕಾಗಿ ಸಂಸ್ಕೃತಿಯ ನಿರ್ವಚನದ ಹಲವು ಮಾದರಿಗಳನ್ನು ಇಲ್ಲಿ ಗಮನಿಸಲಾಗಿದೆ. ಪ್ರಧಾನ ಸಂಸ್ಕೃತಿ ತನ್ನ ಅಧೀನ ಸಂಸ್ಕೃತಿಯನ್ನು ನಿಯಂತ್ರಣದಲ್ಲಿಟ್ಟುಕೊಂಡ ಕಾಲದಲ್ಲಿ ಬೆಳೆದ ಬೆಂಗಳೂರು ನಗರ ಇಂದು ತೀವ್ರ ಸ್ವರೂಪದಲ್ಲಿ ಬದಲಾಗಿ ಇಂದು ಬೆಂಗಳೂರಿನ ಸಂಸ್ಕೃತಿ ಪ್ರಧಾನ ಮತ್ತು ಅಧೀನ ಸಂಸ್ಕೃತಿಯ ವ್ಯಾಖ್ಯಾನಗಳನ್ನು ಬದಲಾಯಿಸಿಬಿಟ್ಟಿದೆ. ಆ ಬಗೆಯ ಶ್ರೇಣೀಕರಣವನ್ನು ಮಹಾನಗರಗಳ ಸಂಸ್ಕೃತಿಯ ಅಧ್ಯಯನ ನಿರಾಕರಿಸುತ್ತವೆ. ಈ ಅಧೀನ ಸಂಸ್ಕೃತಿಯು ಪ್ರಧಾನ ಸಂಸ್ಕೃತಿಯಷ್ಟೇ ಶಕ್ತಿಶಾಲಿಯಾಗಿದ್ದರೂ ಇದನ್ನು ಅಲ್ಪ ಸಂಖ್ಯಾತರದ್ದು ಎನ್ನುವ ಕಾರಣಕ್ಕೆ ಒಪ್ಪಲಾಗಿತ್ತೋ, ಒಪ್ಪಿಸಲಾಗಿತ್ತೋ ಎಂಬುದು ಈ ಅಧ್ಯಯನದ ಬಹಳ ಮುಖ್ಯ ಶೋಧ.

ಹಳ್ಳಿಗಳ ನಗರವಾಗಿದ್ದ ಭಾರತ ಹಾಗೂ ನಗರಗಳ ನಾಡಾಗುತ್ತಿರುವ ಭಾರತದ ಅರ್ಥೈಸುವಿಕೆ ಇಂದು ಬದಲಾಗಿದೆ. ಬದಲಾಗುತ್ತಿರುವ ಭಾರತದ ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ಸ್ಥಿತ್ಯಂತರಗಳು ಭಾರತದ ಸಂಸ್ಕೃತಿಯ ಚಹರೆಯನ್ನು ಇಂದು ಬದಲಾಯಿಸಿಬಿಟ್ಟಿದೆ. ಸ್ಥಿತ್ಯಂತರದ ಕಾಲಘಟ್ಟದ ಚಿಂತನೆಗಳು ಕೃಷಿಯ ನಾಡಾಗಿ, ಕೈಗಾರಿಕೆಗಳ ನಾಡಾಗಿ ಪರಿವರ್ತನವಾಗಿದ್ದ ಭಾರತೀಯ ಕ್ರಮವನ್ನು ಕ್ರಾಂತಿಕಾರಕವಾಗಿಸಿಬಿಟ್ಟಿರುವುದನ್ನು ಸಂಸ್ಕೃತಿಯ ಒಂದು ಭಾಗವಾಗಿರುವ ಆಚರಣೆಗಳ ಪಲ್ಲಟದೊಂದಿಗೆ ಮರುಶೋಧಕ್ಕೆ ಒಳಪಡಿಸುವುದು ಈ ಅಧ್ಯಯನದ ಉದ್ದೇಶ.

ಈ ನಿಟ್ಟಿನಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಹಲವಾರು ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಒಳಗಾಗಿರುವ ಬೆಂಗಳೂರಿನ ಮೂಲ ಸಾಂಸ್ಕೃತಿಕ ಚಹರೆಗಳನ್ನು ಜನಪದ ಆಚರಣೆಗಳ ಹಿನ್ನೆಲೆಯಲ್ಲಿ ಶೋಧಿಸುವುದು ಈ ಅಧ್ಯಯನದ ಉದ್ದೇಶ. ನಗರಗಳು ಸ್ಥಿತ್ಯಂತರ ಹೊಂದಲು ಪ್ರಗತಿಯ ಆಶಯದ ಹಿನ್ನೆಲೆಯಿರುತ್ತದೆ. ಸಮುದಾಯವೊಂದರ ಬೌದ್ಧಿಕ ಒತ್ತಡವೂ, ಚಾರಿತ್ರಿಕ ಕಾಲಘಟ್ಟಗಳಲ್ಲಿನ ಆರ್ಥಿಕ ಮುನ್ನಡೆಯ ಪ್ರಭಾವ, ಒಂದು ಸಮುದಾಯದ ಮಾನಸಿಕ ಸಮುದಾಯದ ಮೇಲೆ

ಅಗಾಧವಾದ ಪರಿಣಾಮವನ್ನು ಬೀರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಒಂದು ಪ್ರದೇಶಕ್ಕೆ ಪರಿಮಿತವಾಗಿ ಸಂಸ್ಕೃತಿಯ ಸ್ಥಿತ್ಯಂತರದ ಕಾಲಘಟ್ಟಗಳ ವಿವೇಚನೆಯನ್ನು ಮಾಡಲಾಗಿದೆ. ಇದಕ್ಕೆ ನಾಲ್ಕು ಮುಖ್ಯ ಕಾರಣಗಳನ್ನು ನೀಡುವುದು ಸೂಕ್ತವಾಗಿದೆ.

೧. ಬೆಂಗಳೂರಿನ ಸಂಸ್ಕೃತಿಯ ಮೇಲೆ ಆದ ನಿರಂತರ ಸ್ಥಿತ್ಯಂತರಗಳ ಪ್ರಭಾವದಿಂದ ಬೆಂಗಳೂರಿನ 'ಮೂಲ ಸಂಸ್ಕೃತಿ' ಯ ಚಹರೆಯನ್ನು ಹುಡುಕುವುದು.

೨. ಇಲ್ಲಿನ ಪ್ರಮುಖ ಆಚರಣೆಗಳ ಹಿಂದಿರುವ ಮೂಲ ಸಂಸ್ಕೃತಿಯ ಶೋಧ ಮತ್ತು ವಲಸೆ ಸಂಸ್ಕೃತಿಯ ಪ್ರಭಾವ

೩. ವೈಜ್ಞಾನೀಕರಣ ಮತ್ತು ಆಧುನೀಕರಣ, ಜಾಗತೀಕರಣದ ಕಾಲಘಟ್ಟಗಳಲ್ಲಿ ಮೂಲ ಆಚರಣೆಗಳ ಮೇಲಿನ ರೂಪಾಂತರಗಳು. .

೪. ಬ್ರಿಟೀಷ್ ಔದ್ಯಮೀಕರಣದಿಂದ ನಿರ್ಮಾಣವಾದ ಬೆಂಗಳೂರು ನಗರದ ರಚನಾ ವಿನ್ಯಾಸ ಸಹಜವಾಗಿಯೇ ಒಂದು ವಲಸೆ ಸಂಸ್ಕೃತಿಯನ್ನು ಹುಟ್ಟುಹಾಕಿ ಅಲ್ಲಿನ ಜನರ ಸಂಸ್ಕೃತಿ ಸ್ವೀಕರಣೆ ನಿರಾಕರಣೆಯ ಪ್ರಕ್ರಿಯೆ ನಗರೀಕರಣದ ಪ್ರಕ್ರಿಯೆಯೊಂದಿಗೆ ಬೆರೆತು ಹೋಯಿತು. ಹೀಗಾಗಿ ಬೆಂಗಳೂರಿನ ನಾಗರಿಕತೆಯ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವಾಗ ಇಲ್ಲಿ ಮಾನವ ಹಾಗೂ ಕ್ರಿಯಾಶೀಲ ಸಮುದಾಯ ಎರಡರ ಅಧ್ಯಯನವನ್ನು ಏಕ ಕಾಲಕ್ಕೆ ಮಾಡಬೇಕಾಗಿರುತ್ತದೆ. ಇಲ್ಲಿನ ಸಾಂಸ್ಕೃತಿಕ ಸಂರಚನೆಗಳ ವ್ಯತ್ಯಯಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಮೂಲಭೂತ ಧೋರಣೆಯೊಂದು ಅಂತರ್ಗತವಾ ಗಿರುವುದು ಕಂಡುಬರುತ್ತದೆ. ಪ್ರಧಾನ ಸಂಸ್ಕೃತಿಯೊಂದು ಪ್ರಭಾವಕ್ಕೊಳಗಾಗಿ ಬದಲಾದರೂ ಮನೋಭಾವದಲ್ಲಿ ತನ್ನ ಮೂಲ ಸಂವೇದನಾಶೀಲತೆಯನ್ನು ಉಳಿಸಿಕೊಂಡಿರುವುದು ಗಮನಾರ್ಹ.ಬೆಂಗಳೂರಿನ ನಾಗರಿಕ ಪ್ರಜೆ ಎಷ್ಟೋ ಹಳ್ಳಿಯಾಧಾರಿತ ಆಚರಣೆಗಳಿಗೆ ಸಕ್ರಿಯವಾಗಿ ಭಾಗವಹಿಸುತ್ತಿರುವುದೇ ಇದಕ್ಕೆ ಸಾಕ್ಷಿ.

ಬೆಂಗಳೂರಿನ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗಮನಿಸಿದಾಗ ಇಲ್ಲಿ ಕಂಡುಬಂದ ಎರಡು ಅಂಶಗಳೆಂದರೆ ನಗರಗಳು ಹಳ್ಳಿಗಳನ್ನು ಸೆಳೆದುಕೊಳ್ಳುತ್ತಾ ಬೆಳೆದುರುವುದು ಒಂದು ಕಡೆ, ಮತ್ತೊಂದು ಕಡೆ ಹಳ್ಳಿಗಳೇ ನವೀಕರಣದತ್ತ ವಾಲಿ ಕ್ರಮೇಣ ನಗರ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವುದು. ಈ ಎರಡೂ ಅಂಶಗಳು ಪೂರಕವಾಗಿ ಈ ಅಧ್ಯಯನದಲ್ಲಿ ಶೋಧನೆಗೆ ಒಳಪಡಿಸಬೇಕಾಗಿದೆ. ಈ ದಶಕದಲ್ಲಿ ಬೆಂಗಳೂರು ಕಂಡ ಎರಡು ಮಹತ್ತರದ ವಿದ್ಯಮಾನಗಳೆಂದರೆ ಅಭಿವೃದ್ದಿಯ ನೆಪದಲ್ಲಿ ಜಾಗತೀಕರಣದ ನೆಪದಲ್ಲಿ ರೂಪುಗೊಂಡ ಬೆಂಗಳೂರಿನ ಉತ್ತರ ಭಾಗದಲ್ಲಿ ನಿರ್ಮಾಣಗೊಂಡ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ - ಹಾಗೂ ದಕ್ಷಿಣ-ಪೂರ್ವ-ಕೇಂದ್ರ ಭಾಗದಲ್ಲಿ ಸಂಪರ್ಕಕ್ಕಾಗಿ ರೂಪುಗೊಂಡ ನೈಸ್ ರಸ್ತೆಗಳ ನಿರ್ಮಾಣ. ಇವು ಬೆಂಗಳೂರಿನ ಸಾಂಸ್ಕೃತಿಕ ಮೂಲ ಚಹರೆ ಈ ಎರಡೂ ಪ್ರಧಾನ ಸಾಂಸ್ಕೃತಿಕ ಸ್ಥಿತ್ಯಂತರಗಳು ಎಷ್ಟೋ ಆಚರಣೆಗಳ ಉಗಮಕ್ಕೆ ಮತ್ತು ವಿಸ್ಮೃತಿಗೆ ನಾಂದಿಯಾಯಿತು.

೧.೨. ಅಧ್ಯಯನದ ವ್ಯಾಪ್ತಿ, ಸ್ವರೂಪ :

ವ್ಯಾಪ್ತಿ :

ಸಂಶೋಧನಾ ಅಧ್ಯಯನಕ್ಕೆ ಶಿಸ್ತುಬದ್ಧ ಚೌಕಟ್ಟು ಬಹಳ ಮುಖ್ಯ. ಸದಾ ವಿಸ್ತರಣೆಯನ್ನೇ ಬೆಳವಣಿಗೆಯ ಮಾನದಂಡವಾಗಿರಿಸಿಕೊಂಡಿರುವ ನಗರಗಳಿಗೆ ಒಂದು ಸೀಮಿತ ಚೌಕಟ್ಟು ಹಾಕುವುದು ಸವಾಲಿನ ಮಾತು. ಇಲ್ಲಿ ಕಟ್ಟುವ ಮತ್ತು ಮೀರುವ ಪ್ರಕ್ರಿಯೆಯೊಂದು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಪ್ರತೀ ಅವಸ್ಥಾಂತರಗಳಲ್ಲೂ ನಗರೀಕರಣವು ತನ್ನ ಚೌಕಟ್ಟನ್ನು ವಿಸ್ತರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿರುವಾಗ ಅವುಗಳ ಅಧ್ಯಯನಕ್ಕೆ ಅನಿವಾರ್ಯವಾಗಿ ಒಂದು ಭೌಗೋಳಿಕ ವಿನ್ಯಾಸವನ್ನು ಗಮನಿಸಿದಾಗ ಅದರ ವ್ಯಾಪ್ತಿ ಉಳಿದ ಮಹಾನಗರಗಳಂತೆಯೇ ಅತ್ಯಂತ ವಿಶಾಲ. ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಬೆಂಗಳೂರಿನ ಕೆಲವು ಪ್ರಮುಖ ಆಚರಣೆಗಳನ್ನು ಮಾತ್ರ ವಿಶ್ಲೇಷಿಸುವ ಮಿತಿಯನ್ನು ಹಾಕಿಕೊಳ್ಳಲಾಗಿದೆ. ಈ ಅಧ್ಯಯನ ವ್ಯಾಪ್ತಿಯು ೧೬, ೧೭, ೧೮, ೧೯ ನೇ ಶತಮಾನದ ಮೂಲ ಮತ್ತು ವಲಸೆ ಬಂದ ಪ್ರದೇಶದ ಕೆಲವು ಆಚರಣೆಗಳನ್ನು ಒಳಗೊಂಡಿದೆ. ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವಾಗ ಕಾಲಮಿತಿಯನ್ನು ಪ್ರಾದೇಶಿಕ ಮಿತಿಯನ್ನು ಕೇವಲ ಅಧ್ಯಯನದ ದೃಷ್ಟಿಯಿಂದ ಹಾಕಿಕೊಂಡು ಸಮಕಾಲೀನ ಸ್ಥಿತ್ಯಂತರಗಳ ಜೊತೆಗೆ ಅನುಸಂಧಾನವನ್ನು ಕಟ್ಟಿಕೊಡುವ ನೆಲೆಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಸ್ವರೂಪ :

"ಬೆಂಗಳೂರು ಜಿಲ್ಲೆಯ ಆಚರಣೆಗಳು ಸಾಂಸ್ಕೃತಿಕ ಸ್ಥಿತ್ಯಂತರಗಳು" ಈ ಮಹಾ ಪ್ರಬಂಧವನ್ನು ಅಧ್ಯಯನದ ದೃಷ್ಟಿಯಿಂದ ಒಟ್ಟು ಏಳು ಅಧ್ಯಾಯಗಳಾಗಿ ವಿಸ್ತರಿಸಿಕೊಳ್ಳಲಾಗಿದೆ. ಅವು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರುತ್ತದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ತಾತ್ವಿಕ ಅಂಶಗಳನ್ನು ಒಳಗೊಂಡಿರುವುದು ಮಹಾ ಪ್ರಬಂಧದ ಉದ್ದೇಶ, ವಿಷಯದ ವ್ಯಾಪ್ತಿ ಹಾಗೂ ಈ ಅಧ್ಯಯನಕ್ಕೆ ಬಳಸಿಕೊಂಡಿರುವ ವಿಧಾನ ಮತ್ತು ಈವರೆಗೆ ಅಧ್ಯಯನದ ಕಾರ್ಯ ಕ್ಷೇತ್ರಗಳಲ್ಲಿ ನಡೆದಿರುವ ವಿವಿಧ ಅಧ್ಯಯನದ ವಿಧಾನ ಮತ್ತು ಆಕರ ಸಾಮಗ್ರಿಗಳನ್ನು ಒಳಗೊಂಡಿರುತ್ತದೆ.

ಎರಡನೆಯ ಅಧ್ಯಾಯವು ಜನಸಮುದಾಯಕ್ಕೆ ಧರ್ಮವು ಜೀವನದ ಮೂಲತಂತುವಾಗಿದೆ. ಹುಟ್ಟಿನಿಂದ ಸಾವಿನವರೆಗೆ, ಏಕೆ ಜೀವನದುದ್ದಕ್ಕೂ ತಮಗೆ ಆತ್ಮತೃಪ್ತಿಯನ್ನು ನೀಡುವ ಧಾರ್ಮಿಕ ವಿಧಿಗಳಿಗೆ, ಆಚರಣೆಗಳಿಗೆ ಜನ ಅಂಟಿಕೊಂಡಿರುತ್ತಾರೆ. ದೈವಭಯ ಧಾರ್ಮಿಕ ವಿಧಿಗಳ ಆಚರಣೆಗೆ ಕಾರಣವಾದರೆ, ಸಂಪ್ರದಾಯಗಳನ್ನು ನಿಷ್ಠೆಯಿಂದ ಆಚರಿಸುವುದು ಒಳ್ಳೆಯ ಅದೃಷ್ಟವೆಂಬ ನಂಬಿಕೆಯಲ್ಲಿ. ಸಂಪ್ರದಾಯ ಪದ್ಧತಿಗಳು ಗುಂಪಿನಿಂದ ಗುಂಪಿಗೆ, ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸವಾಗಬಹುದು ಅಥವಾ ಅವುಗಳಲ್ಲಿ ಸಾಮ್ಯ ಎದ್ದು ಕಾಣಬಹುದು. ಅರ್ಥವುಳ್ಳ ಆಶಯಗಳಿಂದ ತುಂಬಿದ ಆಚರಣೆಗಳು

ಉಳಿದು, ತಲೆಮಾರಿನಿಂದ ತಲೆಮಾರಿಗೆ ಹರಿಯಲಾರಂಭಿಸಿದವು. ಅವುಗಳಲ್ಲಿ ವಿಜ್ಞಾನವಿದೆ. ಮಾನವಿಕ ವಿಚಾರಗಳಿವೆ. ಈ ಜ್ಞಾನವನ್ನು ಪರಂಪರೆಯಿಂದ ಪರಂಪರೆಗೆ ಆಚರಣೆಗಳ ಮೂಲಕ ಸಾಗಿಸುತ್ತವೆ. ಒಟ್ಟಾರೆಯಾಗಿ ಅವು ಒಳಿತನ್ನು ತುಂಬಿಕೊಂಡು ಸದಾ ನಮ್ಮೊಂದಿಗೆ ಬರುತ್ತಿವೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೆಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮಾತೃ ಪ್ರಧಾನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಂಗಳೂರಿನ ಕೆಲವು ಪ್ರಧಾನ ಆಚರಣೆಗಳನ್ನು ವಿಶ್ಲೇಷಿಸಲಾಗಿದ್ದು ದ್ರಾವಿಡ ಮತ್ತು ಆರ್ಯ ಸಂಸ್ಕೃತಿಯು ಬೆಂಗಳೂರಿನ ಆಚರಣೆಗಳ ಮೇಲೆ ಬೀರಿರಬಹುದಾದ ಪ್ರಭಾವವನ್ನು ಚರ್ಚಿಸಲಾಗಿದೆ. ದ್ರಾವಿಡ ಸಂಸ್ಕೃತಿಯಲ್ಲಿ ರೂಪಾಂತರಗೊಂಡಿರಬಹುದಾದ ಮೂಲ ಶಕ್ತಿದೇವತೆಗಳು ಹಾಗೂ ವಲಸೆ ಶಕ್ತಿ ದೇವತೆಗಳ ಆಚರಣೆಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮಾತೃ ಪ್ರಧಾನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಂಗಳೂರಿನ ಕೆಲವು ಪ್ರಧಾನ ಆಚರಣೆಗಳನ್ನು ವಿಶ್ಲೇಷಿಸಲಾಗಿದ್ದು ದ್ರಾವಿಡ ಮತ್ತು ಆರ್ಯ ಸಂಸ್ಕೃತಿಯು ಬೆಂಗಳೂರಿನ ಆಚರಣೆಗಳ ಮೇಲೆ ಬೀರಿರಬಹುದಾದ ಪ್ರಭಾವವನ್ನು ಚರ್ಚಿಸಲಾಗಿದೆ. ದ್ರಾವಿಡ ಸಂಸ್ಕೃತಿಯಲ್ಲಿ ರೂಪಾಂತರಗೊಂಡಿರಬಹುದಾದ ಮೂಲ ಶಕ್ತಿ ದೇವತೆಗಳು ಹಾಗೂ ವಲಸೆ ಶಕ್ತಿ ದೇವತೆಗಳ ಆಚರಣೆಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸಂಸ್ಕೃತೀಕರಣದ ಕವಲುಗಳಲ್ಲಿ ಶಿಷ್ಟ ದೇವತೆಗಳು ತಳೆದಿರುವ ರೂಪಾಂತರಗಳ ಅಧ್ಯಯನವನ್ನು ಮಾಡಲಾಗಿದೆ. ಪ್ರಧಾನವಾಗಿ ದುರ್ಗೆ, ನವರಾತ್ರಿಯಂತಹ ಆಚರಣೆಗಳ ಉಗಮಕ್ಕೆ ಕಾರಣ ಮತ್ತು ಶಿಷ್ಟ ದೇವತೆಗಳ ನಡುವಿನ ಸಾಮ್ಯತೆ, ವಿಭಿನ್ನತೆ ಮತ್ತು ಘರ್ಷಣೆಗಳನ್ನು ಸ್ಥಿತ್ಯಂತರದ ಕಾಲಘಟ್ಟದಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಆಚರಣೆಗಳು ಮತ್ತು ಅವುಗಳ ಸಾಂಸ್ಕೃತಿಕ ಅನನ್ಯತೆಯನ್ನು ಕುರಿತು ಚರ್ಚಿಸಲಾಗಿದೆ. ಬೆಂಗಳೂರಿನ ಪ್ರಮುಖ ದೇಸೀ ಮತ್ತು ಪ್ರಾಕೃತಿಕ ಆಚರಣೆಗಳನ್ನು ವಿಶ್ಲೇಷಣೆ ಮಾಡಿ, ಮನುಷ್ಯನ ಪ್ರಜ್ಞಾ ಪಾತಳಿಯ ನೆಲೆಯಲ್ಲಿ ಈ ಆಚರಣೆಗಳ ಮರುಶೋಧವನ್ನು ಮಾಡಲಾಗಿದೆ. ಪ್ರಮುಖ ಗ್ರಾಮೀಣ ಅಸ್ಮಿತೆಯನ್ನು ಉಳಿಸಿಕೊಂಡಿರುವ ಕಡಲೆಕಾಯಿ ಪರಿಷೆಯ ಒಳನೋಟಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯ 'ಸಮಾರೋಪ'ದಲ್ಲಿ ಪ್ರಸ್ತುತ ಕಾಲಮಾನದಲ್ಲಿ ವರ್ತಮಾನದ ಜೊತೆ ಆಚರಣೆಗಳು ಬೆಸೆದುಕೊಂಡಿರುವ ವಿನ್ಯಾಸ ಮತ್ತು ಸಂಶೋಧನೆಯ ಫಲಿತಗಳನ್ನು ನೀಡಲಾಗಿದೆ ಹಾಗೂ ಅನುಬಂಧದಲ್ಲಿ ಪರಾಮರ್ಶನ ಗ್ರಂಥ, ವಕ್ತೃ ವಿವರ, ನಕ್ಷೆ, ಛಾಯಾಚಿತ್ರ, ಪ್ರಶ್ನಾವಳಿ, ಕೆಂಪೇಗೌಡನ ಲಾವಣಿ ಇತ್ಯಾದಿ ಉಲ್ಲೇಖಗಳನ್ನು ನೀಡಲಾಗಿದೆ.

೧.೩. ಬೆಂಗಳೂರು ನಗರದ ಈವರೆಗಿನ ಅಧ್ಯಯನಗಳು ಹಾಗೂ ಲಭ್ಯವಾದ ಪ್ರಮುಖ ಆಕರಗಳು :

ಬೆಂಗಳೂರಿನ ಬಗ್ಗೆ ಕನ್ನಡದ ಬರಹಗಳಲ್ಲಿ ಇರುವ ವಿವರಗಳಿಗಿಂತ ಬಹಳ ವಿಸ್ತೃತವಾಗಿ ಇಂಗ್ಲೀಷ್ ಭಾಷೆಯಲ್ಲಿರುವುದನ್ನು ಕಾಣಬಹುದು. ಇದಕ್ಕೆ ಕಾರಣವೂ ಇದೆ. ಬ್ರಿಟೀಷರು ಮತ್ತು ಟಿಪ್ಪು ಸುಲ್ತಾನನ ನಡುವೆ ನಡೆದ ಮೂರು ಮತ್ತು ನಾಲ್ಕನೇ ಆಂಗ್ಲೋ ಮೈಸೂರು ಯುದ್ದದ ಸಮಯದಲ್ಲೇ ಬ್ರಿಟೀಷರು ಬೆಂಗಳೂರಿನ ಮಹತ್ವವನ್ನು ಅರಿತುಬಿಟ್ಟಿದ್ದರು. ಇದನ್ನು ೧೮೦೦ರಲ್ಲಿ ಬ್ರಿಟೀಷರು ತಮ್ಮ ಸೇನೆ ಮತ್ತು ಆಡಳಿತ ಕೇಂದ್ರವನ್ನು ಬೆಂಗಳೂರಿಗೆ ವರ್ಗಾಯಿಸಿದ ಮೇಲಂತೂ ಇಲ್ಲಿನ ಹವಾಗುಣ, ಜನಜೀವನ ಎಲ್ಲವೂ ಹೇಗೆ ಅನುಕೂಲಕರವಾಗಿದೆ ಎಂಬ ವಿಷಯ ತಿಳಿಯತೊಡಗಿದಂತೆ ಸೇನೆ ಮತ್ತು ಮಿಷನರಿ ಉದ್ದೇಶದಿಂದ ಬ್ರಿಟೀಷರು ಬರತೊಡಗಿದರು. ತಾವು ಕಂಡದ್ದನ್ನು ವರದಿ ಅಥವಾ ಆತ್ಮ ಕಥನದ ರೂಪದಲ್ಲಿ ದಾಖಲಿಸುವ ಪ್ರವೃತ್ತಿಯೂ ಅವರಲ್ಲಿ ಇದ್ದುದರಿಂದ ಅವರೆಲ್ಲರ ಬರಹಗಳು ಕಳೆದ ಎರಡು ಶತಮಾನಗಳ ಬೆಂಗಳೂರಿನ ಇತಿಹಾಸವನ್ನು ಕಟ್ಟಿಕೊಡುತ್ತದೆ.

ಇಂಗ್ಲೀಷ್ ಭಾಷೆಯಲ್ಲಿ ಹೀಗೆ ಬರಹಗಳು ರೂಪುಗೊಳ್ಳುವ ಪ್ರಕ್ರಿಯೆ ೧೭೮೮ ರಿಂದಲೇ ಅಂದರೆ ಟಿಪ್ಪು ಸುಲ್ತಾನನ ಕಾಲದಿಂದಲೇ ಪ್ರಾರಂಭವಾಗಿತ್ತೆಂಬುದು ಗಮನಾರ್ಹ ಸಂಗತಿ. ಯುದ್ದ ಖೈದಿಗಳಾಗಿ ಇಲ್ಲಿಗೆ ಬಂದ ಯೋಧರು ಇಲ್ಲಿ ಅನುಭವಿಸಿದ ಸೆರೆಮನೆವಾಸ ಮತ್ತು ಇತರ ಕಷ್ಟಗಳ ಬಗ್ಗೆಯಷ್ಟೇ ಅಲ್ಲದೆ, ತಾವು ಕಂಡ ಆಗಿನ ಈ ಊರಿನ ಭೌತಿಕ ಸ್ಥಿತಿಯನ್ನೂ ತಿಳಿಸಿದ್ದಾರೆ. ಅವರ ಪ್ರಕಾರ ಆಗ ಈ ಪಟ್ಟಣ ಐದು ಮೈಲಿಯ ವ್ಯಾಪ್ತಿಯಲ್ಲಿತ್ತಲ್ಲದೆ, ಉತ್ತಮ ಜಲ, ಹಸಿರು ಸಂಪತ್ತನ್ನು ಹೊಂದಿತ್ತು. ಇವರು ಆಗ ರಚಿಸಿದ "ಪ್ರಿಸನ್ ಸಾಂಗ್ ಇನ್ ಬ್ಯಾಂಗಲೂರ್" ಆಗಿನ ಬ್ರಿಟೀಷ್ ಖೈದಿಗಳ ಸ್ಥಿತಿಗತಿಗಳ ಚಿತ್ರಣವನ್ನು ನೀಡುತ್ತದೆ.

ಇನ್ನು ಅಧಿಕೃತವಾಗಿ ಈ ಊರಿನ ದಾಖಲೆ ಆದದ್ದು ೧೮೦೦ ರಲ್ಲಿ, ಫ್ರಾನ್ಸಿಸ್ ಬುಕಾನನ್ ಎಂಬಾತನಿಂದ, ಇವರು ಮೂಲತಃ ಈಸ್ಟ್ ಇಂಡಿಯಾ ಕಂಪನಿಯ ವೈದ್ಯಾಧಿಕಾರಿ, ಭೂಗೋಳ ವಿಜ್ಞಾನದಲ್ಲೂ ಅಷ್ಟೇ ಪರಿಣಿತಿ ಹೊಂದಿದ್ದ ಇವರು ರಾಯಲ್ ಸೊಸೈಟಿ ಮತ್ತು ಇತರ ಪ್ರತಿಷ್ಠಿತ ಸಂಸ್ಥೆಗಳ ಫೆಲೋ ಆಗಿದ್ದರು. ಇವರನ್ನು ಇಂಡಿಯಾದ ಆಗಿನ ಗವರ್ನರ್ ಜನರಲ್ ಆಗಿದ್ದ ಮಾರ್ಕ್ವಿಸ್ ವೆಲ್ಲೆಸ್ಲಿ ಅವರು ಮೈಸೂರು ರಾಜರ ಮತ್ತು ಈಸ್ಟ್ ಇಂಡಿಯಾ ಕಂಪನಿ ವ್ಯಾಪ್ತಿಯಲ್ಲಿದ್ದ ಪ್ರದೇಶದಲ್ಲಿ ಸಂಚರಿಸಿ ದಾಖಲಿಸುವ ಸಲುವಾಗಿ ೧೮೦೦ ರಲ್ಲಿ ನೇಮಕ ಮಾಡಿದರು. ಅದರಂತೆ ವ್ಯಾಪಕವಾಗಿ ಪ್ರಯಾಣಿಸಿದ ಅವರು "Journey from madras through the countries of Mysore, canara and mysore" ಎಂಬ ಹೆಸರಿನ ಮೂರು ಸಂಪುಟಗಳಲ್ಲಿ ರಚಿಸಿದ ಕೃತಿಯನ್ನು ಈಸ್ಟ್ ಇಂಡಿಯಾ ಕಂಪನಿ ೧೮೦೭ರಲ್ಲಿ ಪ್ರಕಟಿಸಿದೆ. ಇಂದಿಗೂ ದಕ್ಷಿಣ ಭಾರತದ ಭೂಗೋಳ ಮತ್ತು ಐತಿಹಾಸಿಕ ಸಂಗತಿಗಳ ಬಗ್ಗೆ ಅಧ್ಯಯನ ಮಾಡುವವರಿಗೆ ಪೂರಕವಾದ

ಆಕರ ಕೃತಿ ಇದು. ಈ ಕೃತಿಯಲ್ಲಿ ಬುಕಾನನ್ ಸುಮಾರು ೭೦ ಪುಟಗಳ ಒಂದು ಅಧ್ಯಾಯವನ್ನೇ ಮೀಸಲಿಟ್ಟಿದ್ದು ಇಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ವಾಣಿಜ್ಯ ವಲಯಗಳ ಸ್ಥಿತಿಯನ್ನು ತಾವು ಕಂಡಂತೆ ಬರೆದಿದ್ದಾರೆ.

ಮತ್ತೊಬ್ಬ ವಿದೇಶಿ ಪ್ರವಾಸಿಗ ಹೋಮ್ಸ್‌ರವರ "ಸೆಲೆಕ್ಟ್ ವ್ಯೂಸ್" ೧೮೦೮ರಲ್ಲಿ ಬೆಂಗಳೂರಿನ ಟಿಪ್ಪು ಅರಮನೆ, ಅಲಸೂರು ಕೆರೆ ಮುಂತಾದ ದೃಶ್ಯಗಳನ್ನು ಕಣ್ಣಾರೆ ಕಂಡು ಸ್ವತಃ ಹೋಮ್ಸ್ ರವರೇ ಚಿತ್ರಿಸಿರುವುದು ವಿಶೇಷ ಇವಾನ್ಸ ಬೆಲ್ ರವರ "ಮೆಮೋರಿಸ್ ಆಫ್ ಜನರಲ್ ಜಾನ್ ಟ್ರಗ್ಸ ಆಫ್ ಮದ್ರಾಸ್ ಆರ್ಮಿ ವಿತ್ ಕಾಮೆಂಟ್ಸ್ ಆನ್ ಸಮ್ ಆಫ್ ಹಿಸ್ ವರ್ಡ್ ಎಂಡ್ ವರ್ಕ್ಸ್(೧೮೮೫) ಎಂಬ ಪುಸ್ತಕದಲ್ಲಿ ಬ್ರಿಟೀಷ್ ಕಮಿಷನರ್ಸ್‌ಗಳ ಪ್ರಾರಂಭಿಕ ಆಡಳಿತದಲ್ಲಿ ಸೀನಿಯರ್ ಕಮಿಷನರ್ ಆಗಿದ್ದ ಕರ್ನಲ್ ಬ್ರಿಡ್ಜ್ ಅವರು ಆಡಳಿತದ ವಿರುದ್ದ ಸೇನೆಯಲ್ಲಿದ್ದ ಮುಸ್ಲಿಂ ಸೈನಿಕರು ಬೆಂಗಳೂರಿನ ಸೇಂಟ್ ಮೇರಿ ಚರ್ಚ್‌ನಲ್ಲಿ ಮಾಡಿಸಿದಂತಹ ಗಲಭೆ, ಇತ್ಯಾದಿ ಕುರಿತಂತೆ ಮಾಹಿತಿ ನೀಡುತ್ತಾರೆ. ಜೆ.ಎಚ್.ಸ್ಟೀಫನ್ ರವರ ಫ್ಲೇಗ್ ಪ್ರೂಫ್ ಟೌನ್ ಪ್ಲಾನಿಂಗ್ ಇನ್ ಬೆಂಗಳೂರು, ಸೌತ್ ಇಂಡಿಯಾ ಎಂಬ ಪುಸ್ತಕ ೨೯೬೮ ರಲ್ಲಿ ಬೆಂಗಳೂರಿನಲ್ಲಿ ಉಂಟಾದ ಪ್ಲೇಗ್ ಪಿಡುಗಿನಿಂದಾದ ಬದಲಾವಣೆಗಳೂ, ಆಧುನಿಕ ಆವಿಷ್ಕಾರಗಳು, ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ. ಇವಿಷ್ಟೂ ಇತಿಹಾಸದ ಕಣ್ಣಿನಿಂದ ಕಂಡ ಬೆಂಗಳೂರಿನ ಪ್ರಮುಖ ಕೃತಿಗಳು.

ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತು ಅಧ್ಯಯನ ಮಾಡುವಾಗ ಉಲ್ಲೇಖಿಸಲೇಬೇಕಾದ ಕೃತಿಯೆಂದರೆ ಅಬೆ ದುಬೈಸ್ ರವರ "ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಅಂಡ್ ಸೆರಮೊನೀಸ್" ೧೮೦೬ ರಲ್ಲಿ ಫ್ರೆಂಚ್ ನಲ್ಲಿ ರಚಿತವಾದ ಇದು ದಕ್ಷಿಣ ಭಾರತದ ಬಹಳ ಮುಖ್ಯವಾದ ಸಾಂಸ್ಕೃತಿಕ ದಾಖಲೆ. ಕರ್ನಲ್ ವೆಲ್ಲೆಸ್ಲಿಯ ಸೂಚನೆಯಂತೆ ಶ್ರೀರಂಗಪಟ್ಟಣಕ್ಕೆ ಬಂದು ಜನರ ಪ್ರೀತಿ ಗಳಿಸಿಕೊಂಡ ತನ್ನ ಬದುಕನ್ನು ಕ್ರೈಸ್ತ ಮತ ಪ್ರಚಾರಕ್ಕಷ್ಟೇ ಸೀಮಿತಗೊಳಿಸದೆ ಜನಪದರ ನಡುವೆ ಬಂದು ಮಹತ್ತರವಾದ ಮಾಹಿತಿ ಭಂಡಾರವನ್ನೇ ರೂಪಿಸಿದ. ಇದು ೧೮೧೬ ರಲ್ಲಿ ಇಂಗ್ಲೀಷಿನಲ್ಲಿ ಅಚ್ಚಾಯಿತು. ಎರಡು ಸಂಪುಟಗಳಲ್ಲಿ ೩ ಭಾಗಗಳನ್ನು ಚಿತ್ರಿಸಿದ್ದಾನೆ. "ಬೆಂಗಳೂರು ಸಹಾ ಆಗ ಭೌಗೋಳಿಕವಾಗಿ ಮೈಸೂರು ಸಂಸ್ಥಾನಕ್ಕೆ ಸೇರಿದ ಭೂ ಪ್ರದೇಶವಾದ್ದರಿಂದ ಅವನು ಚಿತ್ರಿಸಿರುವ ಎಷ್ಟೋ ಸಾಂಸ್ಕೃತಿಕ ದಾಖಲೆಗಳೂ ಬೆಂಗಳೂರಿನ ಜನಪದ ಆಚರಣೆಗಳಿಗೂ ಸಾಮ್ಯತೆಯಿದೆ. ಹೀಗಾಗಿ ಚರಿತ್ರೆಯನ್ನು ಕೇವಲ ಚರಿತ್ರೆಯಾಗಿ ನೋಡದೆ ಚರಿತ್ರೆಯನ್ನು ವರ್ತಮಾನಗಳಲ್ಲಿ ದೊರಕುವ ಪರಿಭಾಷೆಯಿಂದ ನೋಡುವುದರಿಂದ ಒಂದು ಸಂಸ್ಕೃತಿಯ ಚರಿತ್ರೆಯನ್ನು ಕಟ್ಟಲು ಸಾಧ್ಯ" ಎಂಬ ಶಂ.ಬಾ. ಜೋಷಿಯವರ ಮಾತನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ವರ್ತಮಾನದ ಸಾಂಸ್ಕೃತಿಕ ತಲ್ಲಣಗಳನ್ನು ಸಂಶೋಧನೆಯ ನೆಲೆಗಟ್ಟಿನಲ್ಲಿ ಚಿತ್ರಿಸುವಾಗ ನಾವು ಬಹು ಮುಖ್ಯವಾಗಿ ಗಮನಿಸಬೇಕಾದ ನಿರ್ವಚನವೆಂದರೆ, ಮೊಗಳ್ಳಿ ಗಣೇಶ್ ಅವರು ತಮ್ಮ "ಅವ್ಯಕ್ತ ಚರಿತ್ರೆ" ಕೊನೆಯಲ್ಲಿ ಹೇಳಿರುವ ಮಾತುಗಳು:

"ವರ್ತಮಾನದ ಚಾರಿತ್ರಿಕ ನಿರ್ವಚನ ಎಂದರೆ ದೇಶೀ ಸಂಸ್ಕೃತಿಯನ್ನು ಮಾನವಿಕ ಶಾಸ್ತ್ರಗಳ ಅಧ್ಯಯನ ವಿಧಾನದಲ್ಲಿ ಹೊಸದಾಗಿ ಅನುಸಂಧಾನಗೊಳಿಸುವುದಾಗಿದೆ. ಜಗತ್ತು ಏಕ ಮಾದರಿಯ ಕಡೆ ತನ್ನ ಬೌದ್ಧಿಕ ಗುಂಪುಗಾರಿಕೆಯನ್ನು ಹೇರುತ್ತಿರುವಾಗ ಇಂತಹ ಬಹುಬಗೆಯ ಸಾಂಸ್ಕೃತಿಕ ವಿವರಗಳನ್ನು ಅನನ್ಯತೆಯ ವಿಶಿಷ್ಟತೆಯಲ್ಲಿಯೇ ಉಳಿಸಿಕೊಂಡು ಚರಿತ್ರೆಗೆ ನಮ್ಮದೇ ಆದ ಅರ್ಥವನ್ನು ನಿರೂಪಿಸಬೇಕಾಗುತ್ತದೆ".

ಇನ್ನು ಇತಿಹಾಸ ತಜ್ಞ ಲೂಯಿಸ್ ರೈಸ್‌ರವರು ಸಂಶೋಧಿಸಿ ಪ್ರಕಟಿಸಿರುವ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು ಎಂಬ ಪುಸ್ತಕವು ಬೆಂಗಳೂರು ಜಿಲ್ಲೆಯ ವಿವಿಧ ಶಾಸನಗಳನ್ನು ಕುರಿತು ತಿಳುವಳಿಕೆ ನೀಡುತ್ತವೆ.

ಬ.ನ. ಸುಂದರ ರಾವ್‌ರವರ ಬೆಂಗಳೂರಿನ ಇತಹಾಸ ಎಂಬ ಪುಸ್ತಕ ಬೆಂಗಳೂರು ನಗರ ಸ್ಥಾಪನೆಯಿಂದ ಹಿಡಿದು ಭಾರತಕ್ಕೆ ಸ್ವರಾಜ್ಯ ಲಭಿಸುವವರೆಗಿನ ನಗರದ ಇತಿಹಾಸದ ಬೆಳವಣಿಗೆಗಳನ್ನು ತಿಳಿಸುತ್ತದೆ.

ಎಂ.ವಿ. ಕೃಷ್ಣರಾವ್‌ರವರು ಬೆಂಗಳೂರು ನಗರದ ಸ್ಥಾಪಕನಾದ ಕೆಂಪೇಗೌಡನ ಬಗ್ಗೆ ಬರೆದಿರುವ 'ಬೆಂಗಳೂರು ಕೆಂಪೇಗೌಡ ' ಪುಸ್ತಕದಲ್ಲಿ ಬೆಂಗಳೂರನ್ನು ಕುರಿತ ಕೆಲವು ಮಾಹಿತಿಗಳು ಸಿಗುತ್ತವೆ.

ಬೆಂಗಳೂರು ರೂರಲ್ ಗೆಜೆಟಿಯರ್ ಪುಸ್ತಕದ ಮುಖ್ಯ ಸಂಪಾದಕರಾದ ಡಾ. ಸೂರ್ಯನಾಥ ಕಾಮತ್ ಕರ್ನಾಟಕ ಸರ್ಕಾರದಿಂದ ಪ್ರಕಟಿಸಲ್ಪಟ್ಟು, ಈ ಪುಸ್ತಕದಲ್ಲಿ ಬೆಂಗಳೂರು ಜಿಲ್ಲೆಯ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶಗಳ ಪೂರ್ಣ ವಿವರಗಳಿವೆ. ಇದೇ ಮಾಲೆಯಲ್ಲಿ ಪ್ರಕಟವಾದ ಬೆಂಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್ ೧೯೮೭ ನೇ ಬೆಂಗಳೂರಿನ ಜನಸಂಖ್ಯೆಯನ್ನೊಳಗೊಂಡ ವಿಸ್ತೀರ್ಣದೊಂದಿಗೆ ಇತರೆಲ್ಲ ವಿವರಗಳನ್ನೂ ದಾಖಲಿಸಿದೆ, "Bangalore through the centurie" ಇಂಗ್ಲೀಷ್ ಪುಸ್ತಕದಲ್ಲಿ ಎಂ. ಫಜ್ಲುಲ್ ಹಸನ್ ರವರು ಬೆಂಗಳೂರು ಆರಂಭದಿಂದ ದಶಕಗಳಲ್ಲಿ ನಡೆದು ಬಂದ ಇತಿಹಾಸದ ಹಾದಿಯನ್ನು ವಿವರಿಸಿದ್ದಾರೆ.

ಪ್ರೊ. ಬರಗೂರು ರಾಮಚಂದ್ರಪ್ಪನವರ ಬೆಂಗಳೂರು ನಗರ ಎಂಬ ಹಳ್ಳಿ ಲೇಖನವು ಬೆಂಗಳೂರು ಅತ್ಯಾಧುನಿಕ ನಗರವಾಗಿದ್ದೂ ಹೀಗೆ ಆಂತರಿಕವಾಗಿ ಹಳ್ಳಿಯನ್ನು ಒಳಗೊಂಡಿದೆ. ಎಂದು ಹೇಳುತ್ತದೆ.

ಡಾ. ತುಳಸಿರಾಮ ನಾಯಕ್ ಅವರ 'ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ' ಪುಸ್ತಕದಲ್ಲಿ ಬೆಂಗಳೂರಿನ ಸ್ಥಿತಿಗತಿಗಳು, ಹಾಗೂ ೧೯೨೦ರ ಬೆಂಗಳೂರು ಬೆಳವಣಿಗೆಯಲ್ಲಿ ಪುರಸಭೆಯ ಪಾತ್ರ ಇವುಗಳನ್ನು ವಿವರಿಸಿದ್ದಾರೆ.

ಆರ್. ಗೋಪಾಲ್ ಅವರು ಸಂಪಾದಿಸಿರುವ ನಾಡಪ್ರಭು ಕೆಂಪೇಗೌಡರ ಜೀವನ ಮತ್ತು ಸಾಧನೆಗಳು. ಕೃತಿಯಲ್ಲಿ ವಿವಿಧ ಇತಿಹಾಸಜ್ಞರು, ಲೇಖಕರು ಬೆಂಗಳೂರಿನ ಸಮಗ್ರ ಇತಿಹಾಸದ ಬಗೆಗೆ ಬರೆದಿರುವ ವಿವಿಧ ಲೇಖನಮಾಲೆಗಳಿವೆ.

ಯಲಹಂಕ ಕೆಂಪೇಗೌಡರ ಆಡಳಿತ, ಕೆಂಪೇಗೌಡನ ಮನೆತನದ ಸ್ತ್ರೀಯರು, ಸ್ಥಿತ್ಯಂತರ ಕಾಲದ ಕೆಂಪೇಗೌಡರ ಕಾಲದ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ದತ್ತಿಗಳು, ಜನಪದ ಕಲೆಗಳು, ಆಳ್ವಿಕೆಯ ಕೋಟೆಗಳು. ಕೆಂಪೇಗೌಡನ ಇತಿಹಾಸೋತ್ತರ ಕಾಲದ ಬೆಂಗಳೂರನ್ನು ಕುರಿತಂತೆ ವಿವಿಧ ಬಿಡಿ ಲೇಖನಗಳು ಇವೆ.

ಸ್ವಾಮಿ ಡಾ. ಐ. ಅಂತಪ್ಪ ಬರೆದಿರುವ "ಬೆಂಗಳೂರು ಸುತ್ತಮುತ್ತಲಿನಲ್ಲಿ ಕ್ರೈಸ್ತ ಧರ್ಮದ ಉಗಮ" ಪುಸ್ತಕದಲ್ಲಿ ಬೆಂಗಳೂರಿನ ಭೌಗೋಳಿಕ ಹಿನ್ನೆಲೆ, ಚಾರಿತ್ರಿಕ ಹಿನ್ನೆಲೆ, ಬೆಂಗಳೂರನ್ನಾಳಿದ ರಾಜರು, ಹಿಂದೂ ಧಾರ್ಮಿಕ ಹಿನ್ನೆಲೆ, ಕ್ರೈಸ್ತ ಧಾರ್ಮಿಕ ಹಿನ್ನೆಲೆ, ಜೆಸುಯಿಟ್ ಸಭೆಗಳ ಪತ್ರಗಳು, ಇವುಗಳನ್ನು ಕುರಿತು ಪರಿಪೂರ್ಣ ಮಾಹಿತಿ ಲಭ್ಯವಾಗುತ್ತದೆ.. ಇನ್ನು ಬೆಂಗಳೂರನ್ನು ಕುರಿತಂತೆ ಉದಯಭಾನು ಕಲಾ ಸಂಘದವರು ಪ್ರಕಟಿಸಿರುವ "ಬೆಂಗಳೂರು ದರ್ಶನ" ಎಂಬ ಪರಿಪೂರ್ಣ ಸಮಗ್ರ ೩ ಸಂಪುಟಗಳು ಬೆಂಗಳೂರಿನ ಬಗೆಗಿನ ಸಮಗ್ರ ಮಾಹಿತಿ ಇಡಿಯಾಗಿ ಲಭ್ಯವಾಗುತ್ತದೆ. ಮೊದಲ ಸಂಪುಟದಲ್ಲಿ ಒಟ್ಟು ೧ರಿಂದ ೮ ಅಧ್ಯಾಯಗಳಿದ್ದು ಬೆಂಗಳೂರಿನ ಭೂಗೋಳ ಮತ್ತು ವಿಜ್ಞಾನ, ಇತಿಹಾಸ, ಆಡಳಿತ, ಸಾರ್ವಜನಿಕ ಸೇವಾ ವ್ಯವಸ್ಥೆಗಳು, ಉದ್ಯಮಗಳು, ವಾಣಿಜ್ಯ ಬ್ಯಾಂಕಿಂಗ್, ಕಾನೂನು, ಸಾರಿಗೆ ವ್ಯವಸ್ಥೆ, ಸಂಪರ್ಕ ಮಾಧ್ಯಮ, ಕೃಷಿ ಹಾಗೂ ಪರಿಸರ, ಕೃಷಿಯ ಬಗ್ಗೆ ಬೆಂಗಳೂರಿನ ಉಗಮದ ಕಾಲದಿಂದ ಹಿಡಿದು ಸಮಕಾಲೀನ ಸಮಸ್ಯೆಗಳವರೆಗೂ ಸಮಗ್ರ ಚಿತ್ರಣ ದೊರೆಯುತ್ತದೆ.

ಸಂಪುಟ ೨ರಲ್ಲಿ ೯ರಿಂದ ೧೭ ಅಧ್ಯಾಯಗಳಿದ್ದು ಬೆಂಗಳೂರಿನ ಭಾಷಾ ಸಮಸ್ಯೆಗಳು, ಸಾಮಾಜಿಕ ಸಮಸ್ಯೆಗಳು, ಪತ್ರಿಕೋದ್ಯಮ, ಸಮಾಜ ಸೇವೆ, ಶಿಕ್ಷಣ, ವಸ್ತುಸಂಗ್ರಹಾಲಯಗಳು, ಆಸ್ಪತ್ರೆಗಳು, ಆಟೋಟ, ಕ್ರೀಡೆ ಮತ್ತು ಸಮೂಹ ಮಾಧ್ಯಮಗಳು ಇವುಗಳ ಬಗ್ಗೆ ವಿಶ್ಲೇಷಣೆ, ವಿವರಗಳು ಲಭ್ಯವಿದೆ.

ಸಂಪುಟ ೩ರಲ್ಲಿ ೧೮ರಿಂದ ೨೨ರವರೆಗಿನ ಅಧ್ಯಾಯಗಳಿದ್ದು ಪೂಜೆ, ಮತ್ತು ಪ್ರಾರ್ಥನಾ ಮಂದಿರಗಳು, ಸಾಹಿತ್ಯ ಸಂಸ್ಕೃತಿ, ಪುಸ್ತಕ ಭಂಡಾರಗಳು, ಪರಿವರ್ತನೆಯ ದೆಸೆಯಲ್ಲಿ ಬೆಂಗಳೂರಿನ ವಿವರಗಳು ಹಾಗೂ ಪ್ರಮುಖ ವ್ಯಕ್ತಿಗಳ ನೆನಪುಗಳನ್ನು ದಾಖಲಿಸಲಾಗಿದೆ. ವಿವಿಧ ಛಾಯಾ ಚಿತ್ರಗಳು, ರೇಖಾ ಚಿತ್ರಗಳು, ಹಾಗೂ ನಕ್ಷೆಗಳನ್ನೊಳಗೊಂಡಂತೆ ಬೆಂಗಳೂರಿನ ಬಗೆಗಿನ ಸಮಗ್ರ ವಿವರಗಳನ್ನು ಈ ಮೂರು ಸಂಪುಟಗಳು ಕ್ರೋಢೀಕೃತವಾಗಿದೆ. ಬೆಂಗಳೂರಿನ ಅಧ್ಯಯನಕ್ಕೆ ಒಂದು ಪ್ರಮುಖ ಆಕರ ಗ್ರಂಥವಾಗಿದೆ.

ಬೆಂಗಳೂರು ವಿವಿ ವತಿಯಿಂದ ಡಾ. ಜಮೀಲ್, ಪ್ರಧಾನ ಸಂಪಾದಕರ ನೇತೃತ್ವದಲ್ಲಿ ಯಲಹಂಕ ನಾಡ ಪ್ರಭುಗಳ ಶಾಸನ ಸಂಪುಟ– ಜನಪದ, ಸಂಪುಟ, ಶಿಲ್ಪಕಲೆ, ವಾಸ್ತುಶಿಲ್ಪ, ಸಂಪುಟ ಎಂಬ ೩ ಸಂಪುಟಗಳು ಪ್ರಕಟವಾಗಿದ್ದು– ಬೆಂಗಳೂರಿನ ೧೩ನೇ ಶತಮಾನದಿಂದ ೧೮ನೇ ಶತಮಾನದವರೆಗಿನ ವಿವಿಧ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇವು ಸಮಗ್ರವಾಗಿ

ಯಲಹಂಕ ನಾಡ ಪ್ರಭುಗಳ ರಾಜಕೀಯ, ಆಡಳಿತ, ಧಾರ್ಮಿಕ ಹಾಗೂ ಸಾಹಿತ್ಯಕ ಅಂಶಗಳನ್ನು ತೆರೆದಿಡುವಲ್ಲಿ ಯಶಸ್ವೀ ಪಾತ್ರವನ್ನು ವಹಿಸಿದೆ.

ವಾಸ್ತುಶಿಲ್ಪ-ಶಿಲ್ಪಕಲೆ ಸಂಪುಟದಲ್ಲಿ ವಿವಿಧ ದೇವಾಲಯಗಳ ವಾಸ್ತುಶಿಲ್ಪ ಅಧ್ಯಯನ ಹಾಗೂ ಶಿಲ್ಪಶಾಸ್ತ್ರದ ಬಗ್ಗೆ ಮರು ಚಿಂತನೆ ನಡೆಸಲಾಗಿದೆ. ಅವುಗಳ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ ವೈಶಿಷ್ಟ್ಯತೆಗಳು, ಅವುಗಳನ್ನು ಕುರಿತಾದ ಐತಿಹ್ಯಗಳ ಬಗ್ಗೆ ವಿವರಗಳಿವೆ. ಜಾನಪದ ಸಂಪುಟದಲ್ಲಿ ಕೆಂಪೇಗೌಡನನ್ನು ಕುರಿತಾದ ಕೋಲುಪದ, ರಾಗಿಸುಗ್ಗಿ, ಜೀವನಚರಿತ್ರೆ, ಅವರ ವಂಶಸ್ಥರ ಸಂಪ್ರದಾಯಗಳು, ಜಾನಪದದಲ್ಲಿ ಕೆಂಪೇಗೌಡರ ಬಗೆಗಿನ ಕೆಲವು ಸಂಗತಿಗಳನ್ನು ಕಲೆಹಾಕಲಾಗಿದೆ.

ಮಾಯಾ ಜಯಪಾಲ್ ಅವರು ಸಂರಚಿಸಿರುವ Bangalore roots beyond ಕೃತಿಯಲ್ಲಿ ಬೆಂಗಳೂರಿನ ಉಗಮದ ಕಾಲದಲ್ಲಿನ ಇತಿಹಾಸ, ಪಾರಂಪರಿಕ ಕಟ್ಟಡಗಳು, ಧಾರ್ಮಿಕ ಹಬ್ಬಗಳ, ಜಾತ್ರೆಗಳು, ಪ್ರಮುಖ ಪಂಗಡಗಳು, ಇವುಗಳ ಬಗ್ಗೆ ಮಾಹಿತಿ ಇದೆ.

೧೯೨೪ರಲ್ಲಿ ಎಸ್.ಕೆ. ನರಸಿಂಹಯ್ಯರವರು ಬರೆದಿರುವ founder of Bangalore ಕೃತಿಯಲ್ಲಿ ಕೆಂಪೇಗೌಡರ ವಂಶಾವಳಿ, ವಂಶದ ಚರಿತ್ರೆ, ಬೆಂಗಳೂರಿನ ಉಗಮದ ಇತಿಹಾಸ ಇವುಗಳ ಬಗ್ಗೆ ಮಾಹಿತಿ ಇದೆ.

ಟಿ.ವಿ. ಅಣ್ಣಾಸ್ವಾಮಿ ಸಂಪಾದಿಸಿರುವ urban history of Bangalore from the pre historic periods to the end of 18th century. ಪುಸ್ತಕದಲ್ಲಿ ಬೆಂಗಳೂರಿನ ಇತಿಹಾಸ ಅವಶೇಷಗಳ ವಿವರ, ಬೆಂಗಳೂರು ಹೆಸರಿನ ನಿಷ್ಪತ್ತಿಯ ಬಗ್ಗೆ ಚರ್ಚೆ, ೧೮ನೇ ಶತಮಾನದವರೆಗಿನ ವಿವಿಧ ಕಾಲಘಟ್ಟಗಳಲ್ಲಿ ಬೆಂಗಳೂರಿನ ರಾಜಕೀಯ, ಧಾರ್ಮಿಕ ಹಾಗೂ ಚಾರಿತ್ರಿಕ ಅಂಶಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಬೆಂಗಳೂರಿನ ಬಗ್ಗೆ ಬಿಡಿ ಬರಹಗಳೆಂದರೆ ೧೯೯೩ ರಲ್ಲಿ ರಾಜಧಾನಿ ಸ್ಮರಣ ಸಂಚಿಕೆಯನ್ನು ಬೆಂಗಳೂರಿನ ಸ್ಥಳಗಳ ಬಗ್ಗೆ ಬಿಡಿಬರಹಗಳು ಪ್ರಕಟವಾಗಿವೆ.

ಬೆಂಗಳೂರಿನ ದೊಡ್ಡ ಬಸವಣ್ಣ ದೇವಾಲಯ ಮುಂದಿನ ಎರಡು ಅಪ್ರಕಟಿತ ಶಾಸನಗಳು- ವೇಮಗಲ್ ಸೋಮಶೇಖರ್, ಇತಿಹಾಸ ಅಕಾಡೆಮಿ ಸಂಚಿಕೆಯಲ್ಲಿ ಪ್ರಕಟವಾಗಿದೆ. ಕರ್ನಾಟಕ ರಾಜ್ಯ ಪತ್ರಾಗಾರ ದಾಖಲೆಗಳಲ್ಲಿ ಬೆಂಗಳೂರು- ಕರ್ನಾಟಕ ಸರ್ಕಾರದಿಂದ ಪ್ರಕಟವಾಗಿದೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಗೆಜೆಟ್‌ಗಳು, ಡಾ. ಸೂರ್ಯನಾಥ ಕಾಮತ್ ಅವರು ಪ್ರಕಟಿಸಿದ್ದಾರೆ.

ಡಾ. ಆರ್.ಎ. ಪುಷ್ಪ ಭಾರತಿ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ನಗರ ಹಳ್ಳಿಗಳ ನಡುವೆ ಬೆಂಗಳೂರು ಕೃತಿಯು ಬೆಂಗಳೂರಿನ ಬೆಳವಣಿಗೆ ಮತ್ತು ಆಡಳಿತ, ಹಳ್ಳಿಯಿಂದ ನಗರಕ್ಕೆ ಸ್ಥಿತ್ಯಂತರವಾಗುವಾಗಿನ ಬೆಂಗಳೂರಿನ ಸಾಮಾಜಿಕ, ರಾಜಕೀಯ ಆಡಳಿತಾತ್ಮಕ ವಿವರಗಳು, ಹಾಗೂ ಆ ಕಾಲಘಟ್ಟದಲ್ಲಿ ಬೆಂಗಳೂರಿನ ಮೇಲಾದ ವಿವಿಧ ಸಂಸ್ಕೃತಿಗಳ ಪ್ರಭಾವವನ್ನು ಕುರಿತು ವಿಶ್ಲೇಷಿಸಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಮದನ್ ಅವರು ಸಿದ್ದಪಡಿಸಿರುವ "ಬೆಂಗಳೂರಿನ ಬಿನ್ನಿ ಮಿಲ್-ಒಂದು ಅಧ್ಯಯನ" ಎಂ. ಫಿಲ್ ಸಂಪ್ರಬಂಧವು ೧೯ನೇ ಶತಮಾನದ ಬೆಂಗಳೂರಿನ ಕಾರ್ಖಾನೆಗಳ ಸ್ಥಿತಿಗತಿಗಳು, ಬಿನ್ನಿಮಿಲ್ ಕಾರ್ಖಾನೆಯ ಉದಯ ಕಾಲ, ಹಾಗೂ ಸಂಕ್ರಮಣ ಕಾಲ ಹಾಗೂ ಉತ್ಕರ್ಷ ಕಾಲದ ವಿವರಗಳನ್ನು ಅಧ್ಯಯನ ಮಾಡಿದ್ದಾರೆ. ಡಾ. ಅಶ್ವತಮ್ಮ ಕೆ. ಬೆಂಗಳೂರು ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ "ಬೆಂಗಳೂರು ನಗರ ಹಾಗೂ ಗ್ರಾಮೀಣ ಪ್ರೇಕ್ಷಣೀಯ ಸ್ಥಳಗಳು, ಸಾಂಸ್ಕೃತಿಕ ಅಧ್ಯಯನ-" ಸಂಪ್ರಬಂಧದಲ್ಲಿ ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳ ಮಹತ್ವ, ಉದ್ದೇಶ, ಅವುಗಳ ಸಾಂಸ್ಕೃತಿಕ ಹಿನ್ನೆಲೆ, ಪೌರಾಣಿಕ ಹಿನ್ನೆಲೆ, ನಗರ ಹಾಗೂ ಗ್ರಾಮೀಣ ಸಂಕೀರ್ಣ ವ್ಯವಸ್ಥೆಯಲ್ಲಿ ಅವುಗಳ ಆಧುನೀಕರಣ ಪ್ರವಾಸಿಗರ ನೆಪದಲ್ಲಿನ ವಲಸೆ ಸಂಸ್ಕೃತಿ ಇವುಗಳ ಸಮಗ್ರ ಅಧ್ಯಯನವನ್ನು ನಡೆಸಿದ್ದಾರೆ.

೧.೪. ಅಧ್ಯಯನದ ವಿಧಾನ :

ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಗಳ ಸ್ಥಿತ್ಯಂತರಗಳ ಕಾಲಘಟ್ಟಗಳ ಅಧ್ಯಯನ ಮಾಡುವಾಗ ಬೌದ್ಧಿಕ ಮತ್ತು ಭಾವನಾತ್ಮಕ ಅಂಶಗಳೂ ಸಹಾ ಇತರ ಅಧ್ಯಯನ ಶಿಸ್ತುಗಳೊಂದಿಗೆ ಹೆಣೆದುಕೊಂಡಿರುವುದನ್ನು ಗಮನಿಸಬೇಕಾಗುತ್ತದೆ. ಈ ಸಾಮಾಜಿಕ ಅರಿವು, ಸಾಮಾಜಿಕ ನ್ಯಾಯದ ಪರಿಕಲ್ಪನೆಗಳು ಒಂದು ಸಮುದಾಯದ ನಂಬಿಕೆ, ನಡವಳಿಕೆ ಆಚರಣೆಗಳನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ. ಬಾಹ್ಯವಾಗಿ ನಗರೀಕರಣದ ಹೊದಿಕೆ ಹೊದ್ದಿರುವ ಬೆಂಗಳೂರು ಒಡಲಲ್ಲಿ ಹಳ್ಳಿಯ ಬೇಗುದಿಗಳಿಗೆ ಅಲುಗುತ್ತಾ ಆಗಾಗ್ಗೆ ಹಲವು ಆಚರಣೆಗಳ ಮೂಲಕ ಅದನ್ನು ಹೊರಹಾಕಿ ಹಳ್ಳಿಯ ಬಗ್ಗೆ ಇರುವ ಸೆಳೆತವನ್ನು ಅಭಿವ್ಯಕ್ತಿಸುತ್ತದೆ. ನಗರದಲ್ಲೂ ಗ್ರಾಮೀಣ ಆಚರಣೆಯ ಬಗೆಗಿನ ಆಳವಾದ ಹಸಿವು ಮತ್ತು ನಂಬಿಕೆ ಇದೆ ಎಂಬ ಭಾವ ನಮಗೆ ಆವಿರ್ಭವಿಸುವುದು ಇಂಥ ಸಾಕ್ಷಿ ಪ್ರಜ್ಞೆಗಳಿಂದ. ಹಲವು ಹಂತಗಳಲ್ಲಿ ಸ್ಥಿತ್ಯಂತರಗೊಳ್ಳುತ್ತಾ ಬಂದರೂ ಹಬ್ಬದ ಸ್ವರೂಪ ಹಳ್ಳಿ ಮತ್ತು ನಗರಗಳಲ್ಲಿ ಬೇರೆ ಬೇರೆಯಾಗಿದ್ದರೂ ಅದರ ಆಶಯ ಒಂದೇ ಆಗಿರುತ್ತದೆ. ಈ ಆಶಯದ ಹಿನ್ನೆಲೆಯಲ್ಲಿ ಗಮನಿಸಿದಾಗ, ಹಳ್ಳಿ ಮೂಲವಾದ ಸಂಸ್ಕೃತಿಯನ್ನು ನಗರ ಒಳಗೊಳ್ಳುವುದರ ಮೂಲಕ ನಗರದಲ್ಲಿ ಹಳ್ಳಿ ಇರುವುದನ್ನು ಗ್ರಹಿಸಬಹುದು. ಇವೆಲ್ಲವುಗಳನ್ನು ಅನುಲಕ್ಷಿಸಿ ನನ್ನ ಸಂಶೋಧನಾ ವಿಧಾನಕ್ಕೆ ಕ್ಷೇತ್ರ ಕಾರ್ಯವನ್ನು ಅವಲಂಬಿಸಿ ಜನಪದರ ಬಳಿ ನೆಡೆದು ಬೆಂಗಳೂರಿನ ಆಚರಣೆಗಳ ಬಗ್ಗೆ ತಿಳಿದು ಆಚರಣೆಗಳನ್ನು ಆಚರಿಸುವ ಸಮಯದಲ್ಲಿ ಖುದ್ದಾಗಿ ಹಾಜರಿದ್ದು ಸಂಪೂರ್ಣ ಮಾಹಿತಿಯೊಂದಿಗೆ ಕ್ರೋಢೀಕರಿಸಿ ಕಟ್ಟಿಕೊಡುವ ಪ್ರಯತ್ನ ನನ್ನದಾಗಿದೆ.

ಇಷ್ಟದೈವ ಹಾಗೂ ಪರತತ್ವದ ಪರಿಕಲ್ಪನೆಗಳು ಸಂಸ್ಕೃತಿಯಿಂದ ಸಂಸ್ಕೃತಿಗೆ ಸಂಕೀರ್ಣವಾಗುತ್ತಲೇ ಹೋಗಿದೆ, ಹಾಗೂ ಈ ಬಗೆಯ ಸಂಸ್ಕೃತಿ ಕೇಂದ್ರಿತ ಅಧ್ಯಯನಕ್ಕೆ ಒಂದು ದೀರ್ಘ ಪರಂಪರೆಯೂ ಇದೆ. ಇವುಗಳನ್ನು ಸಮಕಾಲೀನ ಸಂದರ್ಭದಲ್ಲಿ ಅಧ್ಯಯನಕ್ಕೆ ಒಳಪಡಿಸುವಾಗ

ಮೂರನೇ ಜಗತ್ತಿನ ರಾಷ್ಟ್ರಗಳ ಸಾಂಸ್ಕೃತಿಕ ನಕಾಶೆಯು ಒಂದು ನಿರ್ಣಾಯಕ ಪಾತ್ರವನ್ನು ವಹಿಸುತ್ತಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಆರ್ಥಿಕತೆಯ ಜೊತೆ ಸಂಸ್ಕೃತಿಯ ನಾಶವನ್ನೂ ಮಾಡುತ್ತಾ ಒಂದು "ಸಮವಸ್ತ್ರ ಸಂಸ್ಕೃತಿ" ಯನ್ನೂ ಹೇರಿತು. ಇಂದು ಅದು ಬದಲಾಗಿದೆ, ಮೂರನೇ ಜಗತ್ತಿನ ರಾಷ್ಟ್ರಗಳು ಜಗತ್ತಿನ ಆಗುಹೋಗುಗಳ ಮೇಲೆ ಸಾಧಿಸುತ್ತಿರುವ ನಿಯಂತ್ರಣದಿಂದ ಅವುಗಳ ಆತ್ಮವಿಶ್ವಾಸ ಹೆಚ್ಚಾಗಿದೆ. ಈ ಹೆಚ್ಚಾದ ಆತ್ಮವಿಶ್ವಾಸವು ತಮ್ಮ ತಮ್ಮ ಸಂಸ್ಕೃತಿಯ 'ಮರುಶೋಧ' ಹಾಗೂ ಮರು ನಿರೂಪಣೆಯನ್ನೂ ಕಟ್ಟಿಕೊಡುವ ಹೊಸ ವಿನ್ಯಾಸದ ಅಧ್ಯಯನದ ಮಾದರಿಯೊಂದು ಆರಂಭವಾಗಿದೆ. ಈ ದೃಷ್ಟಿಯಿಂದ ಯಾವುದು ಇದುವರೆಗೆ ಪ್ರಾಚೀನ ಸಂಸ್ಕೃತಿ ಆಗಿದೆಯೋ ಅದನ್ನು ಹೊಸ ಕಣ್ಣಿಂದ ನೋಡಲೇಬೇಕಾದ ಪ್ರಮೇಯವಿದೆ. ಯಾವ ಸಂಸ್ಕೃತಿಯನ್ನು ಇಲ್ಲಿಯತನಕ ಜಾನಪದ, ಸಂಪ್ರದಾಯ, ಆಧುನಿಕ ವಿರೋಧಿ ಹೆಸರಿನಲ್ಲಿ ಹಿಂದೆ ತಳ್ಳುತ್ತಿದ್ದರೋ ಅದನ್ನು ಮುನ್ನಡೆಗೆ ತರುವ ಪ್ರಯತ್ನ ನಡೆದಿದೆ. ಇದು ಮೇಲ್ನೋಟಕ್ಕೆ ಸಮಾಜಶಾಸ್ತ್ರೀಯ ಅಧ್ಯಯನವಾಗಿದ್ದಾಗಿಯೋ ಅದರ ಆಚೆಗೆ ಈ ಬಗೆಯ ಅಧ್ಯಯನ ವಿಧಾನಕ್ಕೆ ಒಂದು ಜಾಗತಿಕ ನೆಲೆ ಇದೆ. ವಿಶ್ಲೇಷಣಾತ್ಮಿಕ ಅಧ್ಯಯನವೆಂದು ಕರೆಯಬಹುದಾದರೂ, ಇದು ಹಲವಾರು ವಿಭಿನ್ನ ನೆಲೆಗಳನ್ನು ಒಳಗೊಂಡಿರುವುದರಿಂದ "ಸಂಯೋಜಿತ ಅಧ್ಯಯನ" ಮಾದರಿಯನ್ನು ಬಳಸಿಕೊಂಡು, ವಿಶ್ಲೇಷಣಾತ್ಮಕ ಬಹುಶಿಸ್ತೀಯ, ಅಂತರ್‌ಶಿಸ್ತೀಯ, ಸಮಾಜಶಾಸ್ತ್ರೀಯ ವಿಧಾನಗಳನ್ನು ಸಂಯೋಜಿಸಿದ ಒಂದು ಸಮೀಕರಣವನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಭಾರತದಲ್ಲಿ ನಾಗರಿಕತೆ ಅತ್ಯುಚ್ಚ ನೆಲೆ ಮುಟ್ಟಿತ್ತೋ, ಅದು ವಸಾಹತುಶಾಹಿ ಸಂದರ್ಭದಲ್ಲಿ ವಿಚಿತ್ರವಾದ ತಿರುವು ಪಡೆದುಕೊಂಡು ಇಡೀ ಭಾರತದ ಸಮುದಾಯ ಅನೇಕ ಸಂದರ್ಭಗಳಲ್ಲಿ ಅನಗತ್ಯವಾಗಿ ಹೇರಲ್ಪಟ್ಟ ಕೀಳರಿಮೆಯಿಂದ 'ಸಂಸ್ಕೃತೀಕರಣ' ಅನ್ನುವುದನ್ನು ಅನುಕರಣೆಯ ಕಡೆ ಚಲಿಸುವಂತೆ ಮಾಡಲಾಗುತ್ತಿತ್ತು. ಇಂದು ಅದನ್ನು ಬಿಡಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದ್ದು ಹಾಗೆ ಬಿಡಿಸಿಕೊಳ್ಳುತ್ತಲೇ ತನ್ನ ಮೂಲ ಸ್ವರೂಪ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದೆ.

೧. ಜೊತೆಗೆ ಈ ಅಧ್ಯಯನ ವಿಧಾನವು "ಪ್ರಧಾನ ಮತ್ತು ಅಧೀನ ಸಂಸ್ಕೃತಿಯ ಬದಲಾಗುತ್ತಿರುವ ಕಾರ್ಯವಿಧಾನ"ದ ಮಾದರಿಯನ್ನೇ ತನ್ನ ಅಧ್ಯಯನವಾಗಿರಿಸಿಕೊಂಡಿದೆ. ಇದರ ಆಶಯ ಬೆಂಗಳೂರು ಮಹಾನಗರದ ಸಾಂಸ್ಕೃತಿಕ ನಕಾಶೆಯನ್ನು ಬದಲಾದ ಸ್ವರೂಪದಲ್ಲಿ ಚಿತ್ರಿಸುವ ಆಶಯವುಳ್ಳದ್ದು. ಆ ಮೂಲಕ ಭಾರತದ ಯಾವುದೇ ಮಹಾನಗರದ ಮಟ್ಟಿಗೆ ನಿಜವಾಗಿರುವಂತಹ ಜಾನಪದ ಭಾರತ ಮತ್ತು ಆಧುನಿಕ ಭಾರತದ ನಡುವಿನ ಸಂಘರ್ಷದ ವ್ಯಾಖ್ಯೆಯೂ ಹೌದು.

೨. ಬಹುಶಿಸ್ತೀಯ ಅಧ್ಯಯನಕ್ಕೂ ಸಂಯೋಜಿತ ಅಧ್ಯಯನ ವಿಧಾನಕ್ಕೂ ಒಂದು ವ್ಯತ್ಯಾಸ ಇದೆ. ಅಲ್ಲಿ ಒಂದರ ಜೊತೆಗೆ ಇನ್ನೊಂದನ್ನು ಇಟ್ಟು ನೋಡಿದರೆ, ಸಂಯೋಜಿತ ಅಧ್ಯಯನ ವಿಧಾನದಲ್ಲಿ ಎಲ್ಲದರ ನಿಲುವು ಒಟ್ಟುಗೂಡಿಸಿ ಒಂದು ಕೇಂದ್ರ ನಿಲುವು ರೂಪಿಸಿಕೊಂಡು

ಅಧ್ಯಯನ ಮಾಡುವ ವಿಧಾನ. ಇದು ಕನ್ನಡದ ಮತ್ತು ಭಾರತದ ಮಟ್ಟಿಗೆ ಅಪರೂಪದ್ದಾದರೂ ಜಾಗತಿಕ ಮಟ್ಟದಲ್ಲಿ ಚಾಲ್ತಿಯಲ್ಲಿ ಬರುತ್ತಿರುವ ನೂತನ ವಿಧಾನ. ನಾಗರಿಕತೆಯನ್ನು ಸಮಗ್ರ ಸ್ತರದಲ್ಲಿ ಕಟ್ಟಿಕೊಡುವ ಈ ವಿಧಾನದಲ್ಲಿ ನೋಟಕ್ಕಿಂತ ಪ್ರಕ್ರಿಯೆ ಮುಖ್ಯ. ಅದನ್ನು ಆಚರಣೆಗಳಿಗೆ ಪೂರಕವಾಗಿ ಬಳಸಿಕೊಂಡು ಅಧ್ಯಯನ ಮಾಡುವ ಒಂದು ಸಣ್ಣ ಪ್ರಯತ್ನವನ್ನು ಮಾಡಲಾಗಿದೆ.

೩. ಈ ಮಹಾ ಪ್ರಬಂಧಕ್ಕೆ ಬಳಸಿಕೊಂಡಿರುವ ಮತ್ತೊಂದು ಅಧ್ಯಯನ ವಿಧಾನವೆಂದರೆ ಪ್ರಧಾನ ಮತ್ತು ಅಧೀನ ಸಂಸ್ಕೃತಿಯ ಜೊತೆಗೆ ಹೊಸ ಸಾಮಾಜಿಕ ಎಚ್ಚರವನ್ನು ಕಂಡುಕೊಳ್ಳುವ ಕಾರ್ಯವಿಧಾನ. ಈ ಅಧ್ಯಯನದ ಹಿಂದಿರುವ ಮೂಲಭೂತ ದೃಷ್ಟಿಕೋನವೆಂದರೆ ಬೇರೆ ಬೇರೆ ನೆಲೆಯಲ್ಲಿ ಕಾಣುತ್ತಿರುವ ಸಂಘರ್ಷವನ್ನು ಗುರುತಿಸುವುದು. ಸಾಹಿತ್ಯದ ಸೆಲೆಯನ್ನೂ ಒಳಗೊಂಡಂತೆ ಜಾನಪದದ ಸತ್ವ ಬಳಸಿಕೊಳ್ಳುತ್ತಾ ಆಧುನಿಕ ವಿಶ್ಲೇಷಣಾತ್ಮಕ ಮಾದರಿಯನ್ನು ಒಳಗೊಳ್ಳಲು ಹಂಬಲಿಸಿರುವ ಅಧ್ಯಯನ ವಿಧಾನ ಇದು.

೪. ಈವರೆಗೆ ಬೆಂಗಳೂರಿನ ಬಗ್ಗೆ ನೆಡೆದಿರುವ ಅಧ್ಯಯನ ವಿಧಾನದ ಮಾದರಿಗಳು ಬೆಂಗಳೂರನ್ನು ಬಹುಮುಖೀ ನೆಲೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡಿವೆ. ಬೆಂಗಳೂರಿನ ಮೂರ್ತ ವಿವರಗಳು, ಚಾರಿತ್ರಿಕ ಪುರಾವೆಗಳು, ಸ್ಮಾರಕಗಳನ್ನು ಆಧಾರವಾಗಿಟ್ಟುಕೊಂಡಿವೆ. ಆದರೆ ಈ ಅಧ್ಯಯನ ವಿಧಾನದಲ್ಲಿ ಸಂಸ್ಕೃತಿಯ ಅಮೂರ್ತ ಚಲನೆಗಳನ್ನೂ ಪ್ರಧಾನವಾಗಿರಿಸಿಕೊಳ್ಳಲಾಗಿದೆ. ಎಲ್ಲವನ್ನೂ ವಸಹಾತುಶಾಹಿ, ಆಧುನಿಕತೆ, ಜಾಗತೀಕರಣದ ನೆಲೆಯಲ್ಲಿ ಅವಲೋಕನ ಮಾಡುತ್ತಿರುವ ಸ್ಥಿತ್ಯಂತರದ ಕಾಲಘಟ್ಟದಲ್ಲಿ ಆಚರಣೆಗಳ ಅಮೂರ್ತ ಪಲ್ಲಟಗಳು ಸಂಸ್ಕೃತಿಯ ಮೇಲೆ ಬೀರುತ್ತಿರುವ ಪರಿಣಾಮಗಳನ್ನು ಈ ಅಧ್ಯಯನದ ವಿಧಾನಗಳ ಮೂಲಕ ಶೋಧಿಸುವ ಪ್ರಯತ್ನ ಮಾಡಲಾಗಿದೆ.

ಸಂಖ್ಯಾ ಟಿಪ್ಪಣಿಗಳು

೧. ಬೆಂಗಳೂರು ದರ್ಶನ, ಉದಯಭಾನು ಕಲಾ ಸಂಘ, ಪ್ರೊ. ಎಂ.ಹೆಚ್ ಕೃಷ್ಣಯ್ಯ ಮತ್ತು ಡಾ. ವಿಜಯ ಅವರ ಸಂಪಾದಕತ್ವ

ಅಧ್ಯಾಯ : ೨

ಜನಪದ ಆಚರಣೆಗಳು

ಅಧ್ಯಾಯ – ಎರಡು

ಜನಪದ ಆಚರಣೆಗಳು

ಸಾಮಾನ್ಯರ ವಿಶಿಷ್ಟ ಮಾತುಗಳು ಜನವಾಣಿಯೆನಿಸಿ ಬೆಳೆದು ಸಂಸ್ಕಾರಗೊಂಡು ಪ್ರೌಢಾವಸ್ಥೆಗೆ ಬಂದರೆ, ಕವಿವಾಣಿ ಎನ್ನಿಸಿಕೊಳ್ಳುವವು. ಅಂತೆಯೇ ಜನವಾಣಿ ಬೇರು ಎಂದೂ ಕವಿವಾಣಿ ಹೂವು ಎಂದೂ ಹೇಳುತ್ತಾರೆ. ಹೂವಿಗಿರುವ ಚಲುವು, ಬಣ್ಣ, ಕಂಪು, ಸಾರ್ಥಕತೆ ಬೇರಿನಲ್ಲಿ ಎಷ್ಟೂ ಕಂಡು ಬಂದಿರುವುದಿಲ್ಲವಾದರೂ ಅವುಗಳನ್ನು ಪಡಿಮೂಡಿಸುವ ರಸವನ್ನು ಸುರಿಯುವ ಕೆಲಸವನ್ನು ಬೇರು ನಿರಂತರ ಮಾಡುತ್ತಿರುತ್ತದೆ. ನಾಗರಿಕತೆಯ ಕಾಲದಲ್ಲಿ ಇತಿಹಾಸ, ಪುರಾಣಗಳ ಸಾರವನ್ನು ಜನದ ಮಟ್ಟಕ್ಕಿಳಿಸುವುದೂ ಚರಿತ್ರೆಯಲ್ಲಿ ನಡೆದ, ಮರೆಯಲಾಗದ ಸಂಗತಿಗಳನ್ನು ಜನದ ನೆನಪಿನಲ್ಲಿ ನಿಲ್ಲಿಸುವುದೂ, ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಮನಮನೆಗೆ ಬೀರುವದೂ ಈ ಜನಪದ ಸಾಹಿತ್ಯದ ಕೆಲಸ. ಬೀಸು ಕುಟ್ಟುವಂಥ ದುಡಿಮೆಯ ಸಮಯದಲ್ಲಿ ಹೆಣ್ಣು ಮಕ್ಕಳ ಬಾಯಿಂದ ಹಾಡು ಸೂಸಿ ಬರುತ್ತದೆ. ನಾಲ್ಕು ಮಂದಿ ಕೂಡಿದಲ್ಲಿ ಕತೆ ಹೊರಬೀಳುತ್ತದೆ. ನೇಗಿಲು ಹೊಡೆಯುವಾಗ, ಬಂಡಿ ನಡೆಸುವಾಗ, ಹುಟ್ಟು ಹಾಕುವಾಗ ಹಾಡು ಹೊರಹೊಮ್ಮುತ್ತಿರುತ್ತದೆ. ಮಕ್ಕಳು ಅಳುವಾಗ ರಂಬಿಸುವ ಜೋಗುಳವೂ ಹಾಡೇ. ಸತ್ತಾಗ ಅಳುವುದು ಕೂಡಾ ಹಾಡಿಹಾಡಿಕೊಂಡೇ. ನಕ್ಕು ನಗಿಸುವುದಕ್ಕೂ, ಕಟ್ಟಾಡಿಸಿ ನಗಿಸುವುದಕ್ಕೂ, ರಂಬಿಸಿ ನಗಿಸುವುದಕ್ಕೂ ಹಾಡೇ ಬೇಕು.

ಜನಪದ ಸಾಹಿತ್ಯವು ಬಹುಸಂಖ್ಯಾತರು ಬಳಸುವ ಜೀವಂತ ಸಾಹಿತ್ಯವಾಗಿರುವುದರಿಂದ ಅದನ್ನು ಚೆನ್ನಾಗಿ ಅಭ್ಯಸಿಸಿ ಅಚ್ಚಗನ್ನಡದ ಛಂದಸ್ಸನ್ನೂ, ಕೆಚ್ಚುಗನ್ನಡದ ವ್ಯಾಕರಣವನ್ನೂ ಬರೆಯಬಹುದಾಗಿದೆ. ಅದರಿಂದ ನಮ್ಮ ಹೊಸಗನ್ನಡಕ್ಕೆ ಜೀವಕಳೆ ತುಂಬಲಿಕ್ಕೆ ಸಾಧ್ಯವಿದೆ. ಸಾಹಿತ್ಯ ಲಕ್ಷಣವನ್ನೊಳಗೊಂಡು ಜನಜೀವನದ ಅಂತರಂಗವನ್ನು ಬೆಳಗಬಲ್ಲ ನಿತ್ಯ ದೀಪಾವಳಿಯಂತಹ ಜನಪದ ಸಾಹಿತ್ಯದ ಸ್ಥಾನವನ್ನು ಬಲ್ಲಿದರು ಇನ್ನೂ ಆಳವಾಗಿ ಅರಿತು ನಿರ್ದೇಶಿಸಬೇಕಾಗಿದೆ.

ಮಾತು ಜೀವನದ ಉಸಿರು. ಅದು ಜನಪದ ಸಮ್ಮತವಾದ ಬಳಿಕ ಅದಕ್ಕೊಂದು ಮುದ್ರೆ ಬೀಳುತ್ತದೆ. ಆ ಮುದ್ರೆಯೇ ಸಾಹಿತ್ಯದೀಕ್ಷೆಯ ಕುರುಹು. ಹಾಗೆ ದೀಕ್ಷೆ ಪಡೆದ ಮಾತು ಜನಪದ ಸಾಹಿತ್ಯವೆನಿಸುತ್ತದೆ. ಜನಪದ ಸಾಹಿತ್ಯದ ಸಾವಿರ ಪ್ರಕಾರಗಳಲ್ಲಿ ಕೊಂಕುನುಡಿಯೂ ಒಂದಾಗಿದೆ. ಸರಳ ನುಡಿಯು ಒಂದು ಕಿವಿಯನ್ನು ಸೇರಿ, ಇನ್ನೊಂದು ಕಿವಿಯಿಂದ ಸುಲಭವಾಗಿ ಹೊರಬೀಳುವದು. ಆದರೆ ಕೊಂಕುನುಡಿ ಕಿವಿಯಿಂದ ಒಳಸೇರಿ ಮುಂದುವರಿಯದೇ ಕೆಳಕ್ಕಿಳಿದು ಹೃದಯವನ್ನು ಸೇರುವದು. ಹೃದಯವನ್ನು ತಟ್ಟುವ ಮಾತೇ ನಿಜವಾದ ಸಾಹಿತ್ಯ.

ಭಾರತದಲ್ಲಿ ಕರ್ನಾಟಕವು ಜಾನಪದ ತವರೂರು ಎಂಬ ಹೆಗ್ಗಳಿಕೆಗೆ ಪ್ರಸಿದ್ಧಿಯನ್ನು ಪಡೆದಿದೆ. ಕನ್ನಡ ಜಾನಪದವು ಹಲವಾರು ಪ್ರಕಾರಗಳಲ್ಲಿ ಹಿರಿಮೆ-ಗರಿಮೆಯನ್ನು ಪಡೆದಿದೆ. ಅದರಂತೆ ಭಾರತದ ಸ್ವಾತಂತ್ರ್ಯದ ಪೂರ್ವಕಾಲದಲ್ಲೂ ಬ್ರಿಟೀಷರಿಂದ ದೇಶ ಬಿಡುಗಡೆಗೆ ಜನಪದ ಕವಿಗಳು ಜನತೆಗೆ ಮಹತ್ವದ ತಿಳುವಳಿಕೆಯನ್ನು ನೀಡಿಯಾಗಿದೆ. ಇಲ್ಲಿಯವರೆಗೆ ಜನಪದ ಗಂಗೋತ್ರಿ ಸಾಗುತ್ತಲೇ ಇದೆ.

ಜನಪದರೆಂದರೆ ಕೇವಲ ಹೊಂಗೆ ಎಣ್ಣೆ ಬುಡ್ಡಿ ಉರಿಸುತ್ತಾ ಅಕ್ಷರ ಗೊತ್ತಿಲ್ಲದ ಅನಾಗರಿಕವಾಗಿ ಬದುಕುತ್ತಿರುವ ಜನ ಸಮುದಾಯ, ಜಾನಪದವೆಂದರೆ ಆ ಜನರಿಗೆ ಸೇರಿದ ಕಲಾ ಸಂಪತ್ತು ಎಂಬ ಅಭಿಪ್ರಾಯವೇ ಅಸಂಗತವಾದುದು.ಜನಪದರು ಎಂದರೆ ಕಸುಬು, ಭಾಷೆ, ಧರ್ಮ ಹೀಗೆ ಯಾವುದೇ ಸಾಮಾನ್ಯಂಶವನ್ನು ಒಳಗೊಂಡಂತಹ ನಿರ್ದಿಷ್ಟ ಪರಂಪರೆಯುಳ್ಳ ಜನರ ಗುಂಪು. ಇಂತಹ ಗುಂಪುಗಳು ನಿರ್ದಿಷ್ಟ ಭೌಗೋಳಿಕ ಪರಿಸರದಲ್ಲಿ ವಾಸುತ್ತಿದ್ದಿರಬಹುದು.

ಸಮುದಾಯವು ತನ್ನ ಜೀವನಾನುಭವಗಳಿಗೆ ಅಭಿವ್ಯಕ್ತಿಯ ರೂಪ ನೀಡಲು ಹವಣಿಸಿದಾಗ ಹಲವು ಬಣ್ಣಗಳು ಹುಟ್ಟಿಕೊಂಡವು. ನಿಸರ್ಗವನ್ನು ಮಣಿಸುವ ಸಲುವಾಗಿ ಮನುಷ್ಯನು ತಾನು ಕಲಿತ ಮಾಂತ್ರಿಕತೆಯನ್ನು ಪ್ರಯೋಗಿಸುವುದರೊಂದಿಗೆ ಆರಾಧನೆಯ ಸ್ವರೂಪವು ಬೆರೆತುಕೊಂಡಾಗ ಮನುಷ್ಯನ ಸೃಜನಶೀಲತೆ ಮತ್ತು ಸೃಷ್ಟ್ಯಾತ್ಮಕ ಶಕ್ತಿಯ ವೈವಿಧ್ಯತೆಯನ್ನು ಸಾಧಿಸಿತು. ಹಾಡು, ಕುಣಿತ, ಅಭಿನಯಗಳೊಂದಿಗೆ ಕಥನ ನಿರೂಪಣೆ ಮತ್ತು ವರ್ಣರಂಜಿತ ವೇಷಭೂಷಣಗಳು ಬೆಳೆದು ಬಂದವು. ದೈವೀಶಕ್ತಿಗಳ ಆರಾಧನೆ ಮತ್ತು ರಾಕ್ಷಸೀಶಕ್ತಿಗಳ ನಿವಾರಣೆಯ ಸಲುವಾಗಿ ಆಚರಿಸುವ ಹಬ್ಬಗಳು-ಸಂಪ್ರದಾಯಗಳು ಜನಪದರಲ್ಲಿ ಆಯಾ ಋತುಮಾನಗಳಿಗನುಗುಣವಾಗಿ ಬೆಳೆದು ಬಂದಿವೆ. ಒಂದು ಕಾಲಕ್ಕೆ ಪರಸ್ಪರ ಸ್ನೇಹ-ವಿಶ್ವಾಸ, ನಂಬಿಕೆಗಳನ್ನು ಕುದುರಿಸುತ್ತಿದ್ದ ಹಬ್ಬಗಳಿಂದು ಆಧುನಿಕತೆಯ ಕಾರಣದಿಂದಾಗಿ ಸಡಿಲಗೊಳ್ಳುತ್ತಿವೆ.

ಮೌಖಿಕ ರೂಪದಲ್ಲಿರುವಷ್ಟೇ ಜಾನಪದ; ಲಿಖಿತ ರೂಪದಲ್ಲಿರುವುದು ಜಾನಪದವಲ್ಲ ಎಂಬ ಪರಿಕಲ್ಪನೆಯು ನಗರ ಜಾನಪದದ ನೆಲೆಯಲ್ಲಿ ಬದಲಾಗುತ್ತಿದೆ. ಜನಜೀವನಕ್ಕೆ ಅದರ ಭಾವೋನ್ನತಿಗೆ ಕಾರಣವಾದ ವರ್ಣಮಯವೂ, ವೈವಿಧ್ಯಪೂರ್ಣವೂ ಜನಪದದ ಸಮಷ್ಟಿ ಕಲೆಯೂ ಆದ ಈ ಸಾಹಿತ್ಯವನ್ನು ಪಾಶ್ಚಾತ್ಯ ದೇಶಗಳು ಹದಿನಾರು ಹದಿನೇಳನೆಯ ಶತಮಾನದಿಂದಲೇ ಅತ್ಯಂತ

ಸಮರ್ಪಕವಾದ ರೀತಿಯಲ್ಲಿ ಸಂಗ್ರಹಿಸುತ್ತಾ ಬಂದಿವೆ. ವಿವಿಧ ದೇಶಗಳ ವಿವಿಧ ಸಂಪ್ರದಾಯಗಳ ಅಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ ದೊರೆತ ಹದಿನೇಳನೇ ಶತಮಾನದಿಂದ ಈಚೆಗೆ ತೀವ್ರ ಸಂಗ್ರಹ ಕಾರ್ಯ ಆರಂಭವಾಯಿತು.

ಜನಪದ ಸಾಹಿತ್ಯ ಅತ್ಯಂತ ಪ್ರಾಚೀನವಾದುದು. ಮಾನವನ ಉದಯದೊಡನೆಯೇ ತನ್ನ ಉದ್ಭವವನ್ನು ಪಡೆದಿರಬಹುದಾದ ಅದು ಈ ಪದ ಸೃಷ್ಟಿಯಾಗುವುದಕ್ಕೆ ಮೊದಲೂ ಇತ್ತು. ಆದರೆ ಹೆಚ್ಚು ವ್ಯಾಪಕವಾದ ವಿಷಯವನ್ನು ಒಳಗೊಂಡ ಒಂದು ಶಾಸ್ತ್ರೀಯ ವಿಷಯವಾಗಿ 'Folkore' ಉಳಿಯಿತು.

ಜನಪದ ಸಾಹಿತ್ಯ ಸಂಶೋಧಕರ ಮಹಾಸಾಗರವೇ ಆಯಿತು. ವಿಶ್ವದಾದ್ಯಂತ ಜನಪದ ಸಾಹಿತ್ಯ ಸಂಗ್ರಹಕರು, ಸಂಶೋಧಕರು ಉತ್ಸಾಹದಿಂದ ಕಾರ್ಯೋನ್ಮುಖರಾಗಿ ಕಲೆಹಾಕಿದ ಸಾಹಿತ್ಯವನ್ನು ವಿಭಜಿಸಿ ವಿಶ್ಲೇಷಿಸಿ, ಅನೇಕ ಮೌಲ್ಯಗಳ ಒರೆಗೆ ಹಚ್ಚಿ ನೋಡಿ ಅದರ ಸ್ಥಾನಮಾನವನ್ನು ನಿರ್ಧರಿಸತೊಡಗಿದರು.

ಜನಪದ ಕಥೆ, ಗೀತೆ, ಲಾವಣಿ, ಸ್ಥಳಕಥೆ, ವೇಷಭೂಷಣಗಳು, ಸಂಪ್ರದಾಯಗಳು, ಹಬ್ಬ ಹರಿದಿನಗಳು, ಪೂಜೆ ಪುರಸ್ಕಾರಗಳು, ಉತ್ಸವ ಮೆರವಣಿಗೆಗಳು, ಆಟ ಕೂಟಗಳು, ಔಷಧಿಗಳು, ಕಲೆ, ಒಗಟು, ಗಾದೆ ಹೀಗೆ ಅನೇಕ ವಿಷಯಗಳನ್ನು ಸೇರಿಸಿಕೊಳ್ಳುವ Folkore ವಿದ್ವತ್ತಿನ ವಿಷಯವಾಯಿತು.

ಜನಪದ ಸಾಹಿತ್ಯದ ಅಳಿವಿಗೆ ಸಿನಿಮ, ನಾಟಕ, ವಿಜ್ಞಾನ ಮುಂತಾದವು ಎಷ್ಟು ಕಾರಣವೋ ಆಧುನಿಕ ವಾತಾವರಣವೂ ಅಷ್ಟೇ ಕಾರಣ. ಯಾರಲ್ಲಿ ನೋಡಿದರೂ ಗ್ರಾಮ ಜೀವನದಲ್ಲಿ ಶ್ರದ್ಧೆ, ಆಸಕ್ತಿ ಕಡಿಮೆ ಏನೋ ಒಂದು ನಿರ್ಲಕ್ಷ್ಯ, ಯಾವುದೋ ತಾತ್ಸಾರ, ಇನ್ನಿಲ್ಲದ ಬಿಂಕ ಎಲ್ಲರಲ್ಲೂ ಬಂದಂತೆ ಕಾಣುತ್ತದೆ. ಬಹುಶಃ ಆಧುನಿಕ ರಾಜಕೀಯದ ವಿಷ ಪ್ರಭಾವವೂ ಇದಕ್ಕೆ ಕಾರಣ ಇರಬಹುದು. ಜೀವನ ಹೋರಾಟದ ತೀವ್ರ ಪರಿಸ್ಥಿತಿ ಕಾರಣವಿರಬಹುದು.ಪ್ರತಿಯೊಂದು ರಾಷ್ಟ್ರವೂ ತನ್ನ ಪ್ರೌಢ ಸಾಹಿತ್ಯ ಪರಂಪರೆಯ ಶ್ರೀಮಂತ ಭಂಡಾರವನ್ನು ಪಡೆದಿರುವಂತೆಯೇ ಅಪೂರ್ವವಾದ ಜನಪದ ಸಾಹಿತ್ಯವನ್ನೂ ತನ್ನ ಕಣಜದಲ್ಲಿ ತುಂಬಿಕೊಂಡಿರುತ್ತದೆ. ಪ್ರೌಢ ಹಾಗೂ ಜನಪದ ಸಾಹಿತ್ಯಗಳು ವಾಗ್ದೇವಿಯ ಎರಡು ಕಣ್ಣುಗಳು. ಪ್ರೌಢಸಾಹಿತ್ಯ ಅಲ್ಪಸಂಖ್ಯಾತರ ಆರಾಧ್ಯ ವಸ್ತುವಾದರೆ ಜನಪದ ಸಾಹಿತ್ಯ ಬಹುಸಂಖ್ಯಾತರ ಜೀವದ ಉಸಿರು.

ಭಾರತದ ಜನಜೀವನದಲ್ಲಿ ಜನಪದ ಸಂಪ್ರದಾಯಗಳು ಇನ್ನೂ ದಟ್ಟವಾಗಿಯೇ ಉಳಿದಿವೆ. ಕನ್ನಡ ಸಾಹಿತ್ಯದ ಆರಂಭ ಕಾಲದಿಂದಲೂ ನಮ್ಮ ಕವಿಗಳು ಜನಪದ ಸಾಹಿತ್ಯ, ಕಲೆ, ಸಂಪ್ರದಾಯಗಳ ಎಷ್ಟೋ ಬಗೆಗಳನ್ನು ಸ್ವೀಕರಿಸಲು ತಮ್ಮ ಕೃತಿಗಳಲ್ಲಿ ವೈವಿಧ್ಯವನ್ನು ಸಾಧಿಸಿದ್ದಾರೆ. ಅಲ್ಲಿ ಪ್ರಯೋಗಗಳಿಗಿಂತ ಎಷ್ಟೋ ರೂಪಗಳು ಜನಜೀವನದಲ್ಲಿ ಇನ್ನೂ ಜೀವಂತವಾಗಿ ಉಳಿದು

ಬಂದಿವೆ. ಆ ಸುಗಮ ದಾಖಲು ಮಾಡದ ಎಷ್ಟೋ ಜೀವಂತ ಜಾನಪದ ರೂಪಗಳು ಪ್ರತ್ಯೇಕವಾಗಿಯೇ ಉಳಿದು ಬಂದಿವೆ. ಇವುಗಳ ಸಕ್ರಮ ಅಧ್ಯಯನ ತ್ವರಿಗ ಗತಿಯಲ್ಲಿ ಆಗಬೇಕು. ಜನಸಮುದಾಯಕ್ಕೆ ಧರ್ಮವು ಜೀವನದ ಮೂಲತಂತುವಾಗಿದೆ. ಹುಟ್ಟಿನಿಂದ ಸಾವಿನವರೆಗೆ, ಏಕೆ ಜೀವನದುದ್ದಕ್ಕೂ ತಮಗೆ ಆತ್ಮತೃಪ್ತಿಯನ್ನು ನೀಡುವ ಧಾರ್ಮಿಕ ವಿಧಿಗಳಿಗೆ, ಆಚರಣೆಗಳಿಗೆ ಜನ ಅಂಟಿಕೊಂಡಿರುತ್ತಾರೆ. ದೈವಭಯ ಧಾರ್ಮಿಕ ವಿಧಿಗಳ ಆಚರಣೆಗೆ ಕಾರಣವಾದರೆ, ಸಂಪ್ರದಾಯಗಳನ್ನು ನಿಷ್ಠೆಯಿಂದ ಆಚರಿಸುವುದು ಒಳ್ಳೆಯ ಅದೃಷ್ಟವೆಂಬ ನಂಬಿಕೆಯಲ್ಲಿ.

ಜನಪದ ಸಾಹಿತ್ಯ ಹೇಗೆ ಉಗಮಗೊಂಡಿತೆಂದು ಊಹಿಸಬಹುದಾದರೂ, ಎಂದು ಎಂಬ ಪ್ರಶ್ನೆಯನ್ನುತ್ತರಿಸುವುದು ಕಷ್ಟವಾಗುತ್ತದೆ. ಮಾತಿಗಿಂತ ಮುಂಚೆಯೇ ಹಾಡು ಹುಟ್ಟಿಕೊಂಡಿರಬೇಕು. ಆ ಹಾಡಿನ ಮೂಲಕವಾಗಿಯೇ ಮಾತು ಹೊರ ಹೊಮ್ಮಿರಬೇಕು. ಮೊದಮೊದಲು ಮಾತು ಭಾವನಾತ್ಮಕವಾಗಿದ್ದಿರಬೇಕು. ಆಲೋಚನೆ ವಿಚಾರಗಳು ಸಂಯಮಕ್ಕೊಳಪಡುವಂಥವು. ಈ ಸಾಹಿತ್ಯದ ಒಂದು ಮುಖ್ಯ ಗುಣವೆಂದರೆ ವಿಶ್ವಮೌಲಿಕತೆ. ಅದು ಯಾವುದೋ ಒಂದು ಮೂಲೆಯಲ್ಲಿ ಯಾವುದೋ ಕಾಲದಲ್ಲಿ ಮೈದೋರಿದರೂ, ಕಾಲದೇಶಾಭಾದಿತವಾಗಿ ನಿಲ್ಲುತ್ತದೆ. ಯಾವುದು ಹಾಗೆ ನಿಲ್ಲಲಾರದೋ ಅದು ಹುಟ್ಟಿದಲ್ಲಿಯೇ ಹುಟ್ಟಿದ ಕೂಡಲೇ ಸತ್ತು ಹೋಗುತ್ತದೆ. ಸಮಷ್ಟಿರೂಪದ ಸೃಷ್ಟಿಕಾರ್ಯ ವಿಧಾನವು ಈ ವಿಶ್ವಮೌಲಿಕತೆಗೆ ಕಾರಣವಾಗಿದೆ.

ಜನಪದ ಸಾಹಿತ್ಯದಲ್ಲಿರುವುದೆಲ್ಲ ಗಟ್ಟಿಯಾದದ್ದು, ಅತ್ಯುತ್ತಮವಾದದ್ದು. ಅದರಲ್ಲಿ ಜಳ್ಳು-ಪೊಳ್ಳುಗಳಿಲ್ಲವೆಂದು ಹೇಳುವಂತಿಲ್ಲ. ಅಸಾರವಾದದ್ದು ಅನುಪಯುಕ್ತವಾದದ್ದು ಆಧುನಿಕಾಭಿರುಚಿಗೆ ಹಿಡಿಸದ್ದು ಬೇಕಾದಷ್ಟಿದೆ. ಆಧುನಿಕಾಭಿರುಚಿ ಶ್ರೇಷ್ಠವಾದದ್ದೆಂದು ಭಾವಿಸಬೇಕಾಗಿಲ್ಲ. ಜನಪದ ಸಾಹಿತ್ಯದ ಹೆಸರೆತ್ತಿದ ಕೂಡಲೇ ಮೂಗುಮುರಿಯುವಂಥ ಆಧುನಿಕರು ಬಹುಮಂದಿ ಇದ್ದಾರೆ. ಯಾವುದೇ ಸಾಹಿತ್ಯವನ್ನಾಗಲೀ ಅದು ಹುಟ್ಟಿದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಹಿನ್ನಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭ್ಯಸಿಸಬೇಕಾಗುತ್ತದೆ.

ಜ್ಞಾನಕ್ಷೇತ್ರ ವಿಶಾಲವಾದಂತೆಲ್ಲ ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ನೂತನಾವಿಷ್ಕಾರಗಳು ಮೊಗದೋರಿದಂತೆಲ್ಲ ಹೊಸ ಮೌಲ್ಯಗಳು ತಲೆಯೆತ್ತಿದಂತೆಲ್ಲ ಕೆಲವು ಸಂಪ್ರದಾಯಗಳು ಜೀರ್ಣವಾಗುವುದುಂಟು, ಹೊಸ ಸಂಪ್ರದಾಯಗಳು ಚಿಗುರುವುದೂ ಉಂಟು. ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯವೆಂದು ಎಣಿಕೆಗೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿನಿಷೇಧಗಳಾಗಿ ಉಪಾಸನೆಗಳಾಗಿ ಸಾಕಾರತೆ ಪಡೆಯುತ್ತವೆ. ಯಾವುದಾದರೂ ಸಿದ್ಧಿಯನ್ನು ಪಡೆಯಬೇಕಾದರೆ ಏನು ಮಾಡಬೇಕೆಂಬುದೇ ಸಂಪ್ರದಾಯವಾಗುತ್ತದೆ.

ಮಳೆ ಬರದಿದ್ದಾಗ ಮಳೆರಾಯನನ್ನು ಪೂಜಿಸಿ, ಹೊತಳಿರುಗಳಿಂದ ಅಲಂಕರಿಸಿದ ಹುಡುಗನ ಮೇಲೆ ಅದನ್ನು ಹೊರಿಸಿ ಊರಲ್ಲೆಲ್ಲ ಮೆರವಣಿಗೆ ಮಾಡಿಸಬೇಕೆನ್ನುವುದು ಸಂಪ್ರದಾಯ. ಮಳೆರಾಯನ ಮೂರ್ತಿಯನ್ನೆಂತು ರಚಿಸಬೇಕು ಎಂಥ ಹೂ ತಳಿರುಗಳನ್ನು ಮುಡಿಸಬೇಕು.

ದೇವರಿಗೆಂಥ ನೈವೇದ್ಯ ಅರ್ಪಿಸಬೇಕು, ಹೇಗೆ ಮೆರವಣಿಗೆ ನಡೆಸಬೇಕು, ಇತ್ಯಾದಿ ವಿವರಗಳು ಉಪಾಸನೆಯ ಭಾಗವಾಗಿ ಬರುತ್ತವೆ. ದೇವರನ್ನು ಹೊರುವ ಹುಡುಗ ಬೆಳಗಿನಿಂದ ಉಪವಾಸವಿರಬೇಕೆನ್ನುವುದು ವಿಧಿ. ವಿಧವೆಯರು ಗರ್ಭಿಣಿಯರು ಅಥವಾ ಮುಟ್ಟಾದವರು ಮಳೆರಾಯನನ್ನು ಹೊತ್ತವನ ಮೇಲೆ ನೀರು ಹುಯ್ಯಬಾರದೆನ್ನುವುದು ನಿಷೇಧ. ಮುಂದಾಗುವ ಅಪಾಯಗಳನ್ನು ತಡೆಗಟ್ಟಲು ಮತ್ತು ಪಾವಿತ್ರ್ಯ ಕಾಪಾಡಲು ಈ ನಿಷೇಧಗಳು ಅತ್ಯಗತ್ಯ. ಉಪಾಸನಾ ಸಮಯದಲ್ಲಿ ಕೆಲವು ಆಹಾರ ಪಾನೀಯಗಳನ್ನು ಬಳಸಬಾರದು. ಬ್ರಹ್ಮಚರ್ಯವನ್ನು ಪಾಲಿಸಬೇಕು. ಕೆಲವು ವ್ಯಕ್ತಿಗಳನ್ನು ಮುಟ್ಟಬಾರದು. ಬೀಡಿ ಸಿಗರೇಟು ಸೇದಬಾರದು, ಅವಾಚ್ಯ ಶಬ್ದಗಳನ್ನು ಉಚ್ಚರಿಸಕೂಡದು, ಇವೆಲ್ಲ ನಿಷೇಧಗಳು.

ಒಂದು ಸಂಪ್ರದಾಯ ಉತ್ತಮ, ಮತ್ತೊಂದು ಅಧಮ ಎಂದು ಹೇಳುವುದು ಸರಿಯಲ್ಲ. ಒಬ್ಬನಿಗೆ ಹಿತವಲ್ಲದುದು ಮತ್ತೊಬ್ಬನಿಗೆ ಹಿತವಾಗಿ ಕಾಣಬಹುದು. ಸರಿತಪ್ಪುಗಳು ಸಾಪೇಕ್ಷವಾದುವು. ಯಾವೊಂದು ಸಮಾಜವೇ ಆಗಲಿ ತನ್ನಲ್ಲಿ ರೂಢಿಯಲ್ಲಿರುವ ಸಂಪ್ರದಾಯ ಸರಿ ಎಂದರೆ ಸರಿ ತಪ್ಪೆಂದರೆ ತಪ್ಪು.

ಕೃಷಿ ಸಂಸ್ಕೃತಿ ಪ್ರಧಾನವಾಗಿರುವ ಸಮಾಜದಲ್ಲಿ ಕೃಷಿಗೆ ಸಂಬಂಧಿಸಿದ ಆಚರಣೆಗಳು ಅನಿವಾರ್ಯ. ಅನೇಕ ಗ್ರಾಮೀಣ ಧಾರ್ಮಿಕ ಸಂಪ್ರದಾಯಗಳು ಮತ್ತು ಆಚರಣೆಗಳು ಪ್ರಾಯಶಃ ನಿಸರ್ಗ ಮೂಲವಾದವು. ಕೃಷಿಗೆ ಸಂಬಂಧಿಸಿದುವೆಂದು ತೋರುತ್ತದೆ. ವೈದಿಕ ಸಾಹಿತ್ಯದಲ್ಲಿ ನೇಗಿಲನ್ನು ಸೀತಾದೇವಿಯೆಂದು ಕರೆಯುತ್ತಾರೆ.

ಹೊಲಗದ್ದೆ ತೋಟಗಳಲ್ಲಿ ಹುಲುಸು ಬೆಳೆಯಾದರೆ ಕೆಲವು ಆಚರಣೆಗಳನ್ನು ನಡೆಸುವಂತೆ, ಪೈರಿಗೆ ರೋಗ ಬಂದಾಗಲೂ ಕೆಲವು ಉಪಾಸನೆಗಳನ್ನು ಅನುಷ್ಠಾನಗೈಯುತ್ತಾರೆ. ಬೊಬ್ಬೆ, ಬೆಂಕಿ ಬೆದರು ಬೊಂಬೆಗಳ ಮೂಲಕ ಮಿಡಿತೆಗಳನ್ನೂ ದುಷ್ಟಶಕ್ತಿಗಳನ್ನೂ ದೂರವಿರಿಸಲು ಪ್ರಯತ್ನಿಸುತ್ತಾರೆ.

ಮಳೆಗಾಲದ ಮಧ್ಯದಲ್ಲಿ ಆಚರಿಸುವ ಸಂಕ್ರಾಂತಿ ಉತ್ತರಕನ್ನಡ ಜಿಲ್ಲೆಯ ಶಿರಾಳಿಗೊಂಡರಿಗೆ ಮುಖ್ಯ. ಅವರು ಬತ್ತದ ಗದ್ದೆಗಳಲ್ಲಿ "ಮುಂಡಕಿನ" ಗಿಡವನ್ನು (ಕೇದಗೆಯ ಗಿಡದಂಥದು) ನೆಡುತ್ತಾರೆ. ಬತ್ತದ ಸಸಿಗಳ ಗಂಡನೆಂದು ತಿಳಿಯಲಾಗುತ್ತದೆ. ಸೂರ್ಯೋದಯಕ್ಕೆ ಮುಂಚೆ ನೆಡುತ್ತಾರೆ.

ಕೃಷಿಪ್ರಧಾನವಾದ ದೇಶಗಳಲ್ಲಿ ಮಳೆ ಬರಿಸುವ ಸಂಪ್ರದಾಯಗಳು ಅಸಂಖ್ಯಾತವಾಗಿವೆ. ಮುಂಬಯಿ ಸುತ್ತಮುತ್ತಣ ಪ್ರದೇಶದಲ್ಲಿ ಕುಂಬಾರರು ಮಣ್ಣಿನಲ್ಲಿ ಶಿವಲಿಂಗವನ್ನು ಮಾಡಿ, ಮರದ ಮಣೆಯ ಮೇಲೆ ಪೂಜಿಸಿ, ಬೆತ್ತಲೆ ಹುಡುಗನ ಮೇಲೆ ಹೊರಿಸುತ್ತಾರೆ. ಅವನದನ್ನು ಮನೆಯಿಂದ ಮನೆಗೆ ಒಯ್ದಾಗ ಹೆಂಗಸರು ಲಿಂಗದ ಮೇಲೆ ನೀರು ಹುಯ್ಯುತ್ತಾರೆ. ಥಾಣಾ ಜಿಲ್ಲೆಯ ಜನ ನೀರೊಳಗಿನ ಕಲ್ಲನ್ನು ಪೂಜಿಸಿ, ಹುಡುಗನೊಬ್ಬನ ಮೇಲೆ ಹೊರಿಸುತ್ತಾರೆ. ಅವನು ಮನೆ

ಮನೆಗೂ ಅದನ್ನು ಹೊತ್ತು ಹೋದಾಗ, ಮನೆಯವರು ಅದರ ಮೇಲೆ ನೀರು ಸುರಿಯುತ್ತಾರೆ. ಗ್ರಾಮದೇವತೆಗಳ ಹಬ್ಬವನ್ನಾಚರಿಸಿದರೆ ಮಳೆ ಬರುತ್ತದೆಂಬ ನಂಬಿಕೆ ಕೆಲವರಲ್ಲಿದೆ.[೧]

ಸಂಪ್ರದಾಯ ಪದ್ಧತಿಗಳು ಗುಂಪಿನಿಂದ ಗುಂಪಿಗೆ, ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸವಾಗಬಹುದು ಅಥವಾ ಅವುಗಳಲ್ಲಿ ಸಾಮ್ಯ ಎದ್ದು ಕಾಣಬಹುದು.

ಭರತಖಂಡದಲ್ಲಿ ಮೌಖಿಕ ಇತಿಹಾಸ ಬರಡಾಗಿದೆ. ನಮ್ಮ ಇತಿಹಾಸಕಾರರು ಏಕೋ ಏನೋ ಆ ಕಡೆಗೆ ಗಮನಹರಿಸಿಲ್ಲ. ಅದು ಜಾನಪದದ ಒಂದು ರೂಪವಾದದ್ದರಿಂದ ಅವರದನ್ನು ಗೌರವಿಸುತ್ತಿಲ್ಲ ಎಂದು ತೋರುತ್ತದೆ. ಮೌಖಿಕ ಸಂಗತಿಗಳಿಗೆ ಮತ್ತು ಜಾನಪದ ವಿಚಾರಗಳಿಗೆ ಆದ್ಯತೆ ನೀಡಬೇಕಾಗಿದೆ. ಕರ್ನಾಟಕವನ್ನು ಆಳಿದ ರಾಜ ಅಥವಾ ಸುಲ್ತಾನ್ ಮನೆತನಗಳ ಬಗ್ಗೆ ಹಲವು ಐತಿಹ್ಯಗಳು ಇಂದಿಗೂ ಜನರ ನಾಲಗೆಯಲ್ಲಿ ಮೆರೆಯುತ್ತಿವೆ.

ಸಂಸ್ಕೃತಿಯ ವಿಕಾಸಕ್ಕೆ, ಅದರ ನವೀಕರಣಕ್ಕೆ ಮಾನವನ ಕಲ್ಯಾಣಕ್ಕೆ ಜಾನಪದ ಸಂರಕ್ಷಣೆ ಮತ್ತು ವ್ಯಾಸಂಗಗಳು ಅನಿವಾರ್ಯವೆಂಬ ಸಂಗತಿ ಸಿದ್ಧವಾಗುತ್ತದೆ. ಇತಿಹಾಸದ ಪ್ರಾರಂಭ ಕಾಲದಿಂದ ಶಿಷ್ಟಪದದ ಅವಹೇಳನಕ್ಕೆ ಗುರಿಯಾದ ಜಾನಪದದ ಬಹುಭಾಗ ನಷ್ಟವಾಗಿರುವುದು ನಿಜ. ಈಗ ಸಿಗುವಷ್ಟನ್ನಾದರೂ ಉಳಿಸಿಗೊಂಡು, ಅದರ ಪ್ರಯೋಜನವನ್ನು ಪಡೆಯಬೇಕಾಗುತ್ತದೆ.

ಮೇಸ್ತ್ರಿ, ಗಾರೆಯಾಳುಗಳಿಲ್ಲದೆ ಮಹಾಸೌಧ ನಿರ್ಮಾಣದ ಕಲ್ಪನೆಯಂತು ದುಸ್ಸಾಧ್ಯವೋ ಜಾನಪದರಿಲ್ಲದೆ ಇತಿಹಾಸ ನಿರ್ಮಾಣವು ಅಂತೆಯೇ ಕಲ್ಪನೆಗೆ ಮೀರಿದುದು. ಸಾಂಸ್ಕೃತಿಕ ವಿಕಾಸಕ್ರಮದಲ್ಲಂತು ಜಾನಪದರ ಪಾತ್ರ ಅಮೂಲ್ಯವಾದುದೆಂದೇ ಹೇಳಬೇಕು. ಪಾಠಪ್ರವಚನಗಳಿಂದ ಸಂಲಬ್ಧವಾದ ಪಾಂಡಿತ್ಯವಲ್ಲ, ಚಿಂತನ ಮಂಥನಾನುಭವಗಳಿಂದ ಪ್ರಾಪ್ತವಾದ ಭಾವಭಾವನೆಗಳ ರಸಪಾಕವೇ ಜಾನಪದ ಸಾಹಿತ್ಯದ ತಿರುಳು.

ನಾಗರಿಕ ಮಾನವನ ಹೃದಯದಲ್ಲಿ ಹೆಡೆಯಾಡುವ ಸ್ವಾರ್ಥತಾ ಮೂಲ ಸಂಕುಚಿತ ಗುಣಗಳೂ ಮಾತ್ಸರ್ಯಾದಿ ದುಷ್ಟಪ್ರವೃತ್ತಿಗಳೂ ಜಾನಪದರಲ್ಲಿ ಅಪರೂಪ. ಇದ್ದರೂ ಅದು ಕ್ಷಣಿಕ.

ಇತಿಹಾಸವು ಕಳೆದುಹೋದ ಮಾನವನ ಬದುಕಿನ ಕತೆಯ ಸಾಕ್ಷ್ಯಾಧಾರಗಳ ಸಮೇತ ಲಿಖಿತ ರೂಪದಲ್ಲಿ ಮೂಡಿಸುವಂತಹುದು; ಮಾನವನು ಕತೆಯನ್ನು ಅದರ ನಿಜರೂಪದಲ್ಲಿ ನಿರೂಪಿಸುವ ಉದ್ದೇಶವನ್ನು ಅದು ಹೊಂದಿರುತ್ತದೆ. ಇದಕ್ಕಾಗಿ ಅದು ಶಾಸನಗಳನ್ನು, ಪಾಳು ದೇಗುಲಗಳನ್ನು, ತಾಮ್ರಪಟಗಳನ್ನು, ವಿದೇಶಿ ಬರಹರೂಪದ ಲೇಖನಗಳನ್ನು, ನಾಣ್ಯಗಳನ್ನು, ಕೈಫಿಯತ್ತುಗಳನ್ನು, ರಾಜನಿಷ್ಠ ಕವಿ ಬರಹಗಳನ್ನು ಇತ್ಯಾದಿಗಳನ್ನು ಗಮನಿಸುತ್ತದೆ. ತಾವು ನಿರೂಪಿಸುತ್ತಿರುವ ವಿಚಾರವನ್ನು ನಿದರ್ಶನಪೂರ್ವಕವಾಗಿ ಹೇಳಿದರೆ ಮಾತ್ರ ಅದು ಇತಿಹಾಸ ಎನಿಸಿಕೊಳ್ಳುತ್ತದೆ.

ಜನಪದ ಸಾಹಿತ್ಯವು ಮಾನವನ ಬದುಕಿನ ಕತೆಯನ್ನೇ ನಿರೂಪಿಸಿದರೂ ಅದರ ಉದ್ದೇಶ ಇತಿಹಾಸಕ್ಕಿಂತ ಭಿನ್ನವಾದುದು. ಮಾನವ ತನ್ನ ಬದುಕಿನಲ್ಲಿ ಕಂಡ–ಕೇಳಿದ–ಅನುಭವಿಸಿದ–

ಕಲ್ಪಿಸಿಕೊಂಡ ಅನೇಕ ವಿಚಾರಗಳನ್ನು ಇನ್ನೊಬ್ಬರ ಮನಮುಟ್ಟುವಂತೆ ಜನಪದ ಸಾಹಿತ್ಯ ಹೇಳುತ್ತದೆ. ಅದು ಸುಖದ ವಿವರಣೆ ಕಥಾನಕವೂ ಕಲ್ಪನೆಯ ಕಗ್ಗವೂ ಆಗಿರಬಹುದು. ಒಟ್ಟಾರೆ ಅನುಭವ ಸಾಮಗ್ರಿಯನ್ನು ಸಹೃದಯರಿಗೆ ರಂಜಕ ಶೈಲಿಯಲ್ಲಿ ಒಪ್ಪಿಸುವುದೇ ಇಲ್ಲಿ ಮುಖ್ಯವಾಗಿರುತ್ತದೆ.

ಜನಪದ ಸಾಹಿತ್ಯವು ಅನೇಕ ಶತಮಾನಗಳಿಂದ ಒಂದು ತಲೆಮಾರಿನ ಮತ್ತೊಂದು ತಲೆಮಾರಿಗೆ ಕಂಠಸ್ಥ ಸಂಪ್ರದಾಯದ ರೂಪದಲ್ಲಿ ಹರಿದುಕೊಂಡು ಬಂದಿರುವಂತಹುದು. ಒಂದು ಕಾಲದಲ್ಲಿ ಗಿರಿಜನರು, ಪಂಚಮರು, ಹಿಂದುಳಿದ ಪಂಗಡಗಳು ಮತ್ತು ಹೆಂಗಸರು ನಡೆಸುತ್ತಿದ್ದ ಜೀವನವನ್ನು ತುಂಬ ತಾತ್ಸಾರ ಮನೋಭಾವದಿಂದ ನೋಡಿದ್ದುಂಟು. ಇಂತಹ ದೃಷ್ಟಿಕೋನದಲ್ಲಿ ದೊಡ್ಡ ದುರಂತವಿದೆ ಎಂಬುದನ್ನು ನಮ್ಮಲ್ಲಿ ಅನೇಕರು ಗಮನಿಸಲಿಲ್ಲ. ವಿದ್ಯೆ ಕಲಿಯಬಾರದು. ವೇದಗಳನ್ನು ಉಚ್ಚರಿಸಬಾರದು– ಇದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಕಿವಿ ಮತ್ತು ನಾಲಗೆಯನ್ನು ಕತ್ತರಿಸಿಹಾಕುವಂತಹ ಶಿಕ್ಷಾ ವಿಧಾನದ ಕಾಲವೂ ಇತ್ತು.

ಇವರ ಮೇಲೆ ಶಿಷ್ಟ ಸಂಸ್ಕೃತಿಯು ಒಂದು ನಮೂನೆಯ ದಬ್ಬಾಳಿಕೆಯನ್ನು ನಡೆಸುತ್ತ ಬಂತು. ವರ್ಣವ್ಯವಸ್ಥೆ, ಅಸ್ಪೃಶ್ಯತೆಯನ್ನು ವಿವರಿಸುವ ನಾನಾ ರೀತಿಯ ಹೇಳಿಕೆಗಳು, ವೇದೋಪನಿಷತ್ತುಗಳು, ಅವುಗಳ ಆಧ್ಯಾತ್ಮ ವಿಚಾರಗಳು, ವಿಷ್ಣುವಿನ ಅವತಾರಗಳು, ಮನು ಮೊದಲಾದವರು ಹೇಳುತ್ತಿದ್ದ ಸಾಮೂಹಿಕ ಮೌಲ್ಯಗಳು ಇತ್ಯಾದಿಗಳು ಮಾತ್ರ ಭಾರತೀಯ ಸಂಸ್ಕೃತಿಯ ಹಣೆಪಟ್ಟಿಯಲ್ಲಿ ವಿಜೃಂಭಿಸುತ್ತಿದ್ದವು. ಜನಪದರು ಶಿಷ್ಟ ಸಂಸ್ಕೃತಿಯ ಇಂತಹ ಉದ್ದೇಶಿತ ದಬ್ಬಾಳಿಕೆಗೆ ಒಳಗಾಗಿದ್ದಲ್ಲದೆ ಮೂಲತಃ ತಮ್ಮಲ್ಲಿಯೇ ಬೇರುಬಿಟ್ಟಿದ್ದ ಮೂಢನಂಬಿಕೆಗಳಿಂದಲೂ ತುಳಿತಕ್ಕೊಳಗಾದರು. ಸಮಾಜದಲ್ಲಿ ರಾಜ–ಮಹಾರಾಜ ಮೊದಲಾದ ಪ್ರತಿಷ್ಠಿತ ಪೀಠಗಳನ್ನು ಅಲಂಕರಿಸಿದವರ ಕತೆಗಳನ್ನು, ಸಂಗತಿಗಳನ್ನು ಆಸ್ಥಾನಿಕರಿಂದ ಬರೆಸುವುದಾಗಲೀ, ಬರೆಯುವುದಾಗಲೀ ಅಪರೂಪವೆಂದೇನೂ ಅಲ್ಲ. ಆದರೆ ಅಂತಹವರ ಅಥವಾ ಅಂತಹ ಸಂಗತಿಗಳ ಚರಿತ್ರೆ ಬರೆಯುವವರ ಅಸಡ್ಡೆಗೆ, ನಿರ್ಲಕ್ಷ್ಯಕ್ಕೆ ಸರಿಯಾದ ಬದುಕಿನ ಹಲವಾರು ಬಾಬತ್ತುಗಳನ್ನು ಜಾನಪದ ಒದಗಿಸುತ್ತ ಬಂದಿದೆ ಎಂಬುದಂತೂ ಸತ್ಯ.

ಜನಪದರ ಬದುಕಿನಲ್ಲಿ ಘಟಿಸುವ ಘಟನೆ, ಸನ್ನಿವೇಶಗಳನ್ನು ಗುರುತಿಸುವುದರ ಮೂಲಕ ಸಾಮಾನ್ಯ ಜನತೆಯ ಗ್ರಾಮೀಣ ಸಂಸ್ಕೃತಿಯನ್ನು ಅಧ್ಯಯನ ಮಾಡಲು ತೊಡಗದೆ, ಭವ್ಯ ಸಂಸ್ಕೃತಿಯ ನೆರಳನ್ನು ಗುರುತಿಸಲು ಹೊರಟವರೇ ನಮ್ಮಲ್ಲಿ ಅನೇಕ ಮಂದಿ. ಜನಪದರು ದೇವರ ಬಗೆಗೆ ಅಚಲವಾದ ಭಕ್ತಿಯುಳ್ಳವರು. ತಮ್ಮಿಂದಾಗುವ ಅಪರಾಧಗಳಿಗೆಲ್ಲ ಪೂರ್ವಜನ್ಮದ ಪಾಪವೇ ಕಾರಣ ಎಂದು ನಂಬಿದವರು. ತಮ್ಮ ಬದುಕಿಗೆ ಪೆಟ್ಟು ಬಿದ್ದರೂ ಪ್ರತಿಭಟಿಸಲಾರದ ಪ್ರವೃತ್ತಿಯವರು.

ಜಗತ್ತಿನಾದ್ಯಂತ ಜಾನಪದ ಜೀವಂತವಾಗಿದೆ. ಸಮೃದ್ಧವಾಗಿದೆ ಎಂಬ ಮಾತುಗಳು ಬಹಳ ಹಿಂದಿನಿಂದಲೂ ಕೇಳಿಬರುತ್ತಿವೆ. ಆದರೆ ಅದೊಂದು ವೈವಿಧ್ಯಪೂರ್ಣವಾದ ವಿಷಯ ಎಂದು

ತಿಳಿದುಬಂದದ್ದು ಮಾತ್ರ ಕಳೆದ ಶತಮಾನದಲ್ಲಿ, ಅದೂ ಪಾಶ್ಚಾತ್ಯ ವಿದ್ವಾಂಸರಿಂದ. ಕನ್ನಡ ಜಾನಪದವನ್ನು ಕನ್ನಡೇತರರಿಗೆ ಮೊಟ್ಟಮೊದಲ ಬಾರಿಗೆ ಪರಿಚಯ ಮಾಡಿಕೊಟ್ಟ ಕೀರ್ತಿಗೆ ಪಾಶ್ಚಾತ್ಯ ವಿದ್ವಾಂಸರು ಮುಖ್ಯ ಕಾರಣರೆಂದು ತಿಳಿದು ಬರುತ್ತದೆ.

ಜನಪದ ಧರ್ಮವು ಲಿಖಿತ ಪಠ್ಯ. ಆ ಮೂಲಕ ಏರ್ಪಟ್ಟ ತಾತ್ವಿಕ ಚಿಂತನದ ಮೂಲಕ ಆಕಾರ ಪಡೆದುದಲ್ಲ. ಅದು ಬಹುಮಟ್ಟಿಗೆ ಅನುಕರಣೆ ಆಚರಣೆಗಳಿಂದ ಹರಿದು ಬಂದಿದ್ದು ಅತಿಮಾನುಷ ಕಲ್ಪನೆ, ಅಲೌಕಿಕ ಜೀವಿಗಳ ಆರಾಧನೆ ಹಾಗೂ ಅನೇಕ ಧಾರ್ಮಿಕ ನಂಬಿಕೆಗಳಿಂದ ಕೂಡಿದೆ.

ಜಾಗತೀಕರಣದ ಕರಿನೆರಳಿನಲ್ಲಿ ಕೃಷಿಕರ ಬದುಕು ನಲುಗುತ್ತಿದೆ. ಅವನೊಬ್ಬ ಫೀನಿಕ್ಸ್ ಸತ್ತು ಸತ್ತು ಹುಟ್ಟುತ್ತಿರುತ್ತಾನೆ. ಅದೆಂಥ ವಿಚಿತ್ರವಾದ ಬದುಕು. ಆಳುವ ಮಂದಿಯ ಕಣ್ಣಿಗೆ ಅವನೊಂದು ಓಟು ಮಾತ್ರ. ಕೃಷಿಕರು ಸಾಲಬಾಧೆ ತಡೆಯಲಾರದೆ ಸಾವಿಗೆ ಶರಣಾಗುತ್ತಿದ್ದಾರೆಂಬುದನ್ನು ಓದಿದಾಗ, ಕೇಳಿದಾಗ, ನೋಡಿದಾಗ ಕರುಳುಕಿತ್ತು ಬರುತ್ತದೆ. ಇಂಥ ವಿಚಾರಗಳನ್ನು ನಾವು ಗಂಭೀರವಾಗಿ ಯೋಚಿಸಲು ಸಾಧ್ಯವಾದಾಗ ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಮುಂದಾದಾಗ ಮಾತ್ರ ನಾವು ಮನುಷ್ಯರಾಗುತ್ತೇವೆ. ಇಲ್ಲವಾದರೆ ಬುದ್ಧಿವಂತರು ಮಾತ್ರವಾಗುತ್ತೇವೆ. ಹೃದಯವಂತರಲ್ಲ.

ಹಸಿರು ಅವರ ಉಸಿರು. ಅದನ್ನು ಈಗಾಗಲೇ ಕಿತ್ತುಕೊಳ್ಳುವ ಜಾಗತೀಕರಣ ವ್ಯವಸ್ಥೆ ರೂಪುಗೊಂಡಿದೆ. ಅವರು ಬೆಳೆದ ಬೆಳೆಗೆ ಬೆಲೆ ನಿರ್ಧರಿಸುವವರು ಅವರಲ್ಲ. ಮಾರುಕಟ್ಟೆಯ ದಳ್ಳಾಳಿಗಳು. ಅದರಿಂದ ಮೆಣಸಿನಕಾಯಿ, ಟಮೋಟಾ, ಹತ್ತಿ ಮೊದಲಾದವನ್ನು ಬೀದಿಗೆ ಚೆಲ್ಲಿ ತಮ್ಮ ಕರುಳ ಆಕ್ರಂದನವನ್ನು ತೋರಿಸುತ್ತಿದ್ದಾರೆ. ಸರ್ಕಾರ ಆಗಾಗ ಪರಿಹಾರದ ಮಾತನ್ನಾಡುತ್ತಿದೆಯಾದರೂ ಅದು ಫಲಾನುಭವಿಗಳಿಗೆ ದಕ್ಕುತ್ತಿಲ್ಲ! 'ರೈತರಿಗೆ ಸಾಲ ಬಡ್ಡಿ ಮನ್ನ' ಎಂಬ ತಂತ್ರದ ಹಿಂದಿನ ಚಿತಾವಣೆ ಕೆಲವರದು. ಈಗಾಗಲೇ ಸಾಲ ಪಡೆದು ಬಡ್ಡಿ ಕಟ್ಟಲಾಗದ ಅಸಹಾಯಕರಿಗೆ ಮತ್ತೆ ಸಾಲ ಕೊಟ್ಟಂತೆ ಮಾಡಿ ಹಳೆಯ ಸಾಲವನ್ನು ಮುರಿದುಕೊಂಡು ಪುಡಿಗಾಸನ್ನು ಅವನಿಗಿತ್ತು ಹೊರಸಾಲದ ಸಂಪೂರ್ಣ ಮೊತ್ತಕ್ಕೆ ಅವನನ್ನು ಹೊಣೆಗಾರನನ್ನಾಗಿ ಮಾಡಲಾಗುತ್ತಿದೆ.

ಕರ್ನಾಟಕ ಜನಪದ ಆಚರಣೆಗಳ ಲೋಕ ದೊಡ್ಡದು. ಅವುಗಳನ್ನು ಹಿಡಿದಿಡಲು ಸುಮಾರು ನೂರಾರು ಸಂಪುಟಗಳೇ ಬೇಕಾಗುತ್ತದೆ. ದೀರ್ಘವಾದ ಸಮಯವು ಬೇಕು. ಒಂದೊಂದು ಆಚರಣೆಗಳು ವೈವಿಧ್ಯತೆಯಿಂದ ಕೂಡಿದೆ. ಅವುಗಳಲ್ಲಿ ಮಡುಗಟ್ಟಿದ ಪಾರಂಪರಿಕ ಜ್ಞಾನವಿದೆ. ಸಹಸ್ರಾರು ವರ್ಷಗಳ ಅನುಭವಗಳ ಪಾಕಗಳು ಇವು. ಸದಾ ಜೀವಮುಖಿಯಾಗಿರುವ ಅವು ಬಹುತ್ವವನ್ನು ಬೆಂಬಲಿಸುತ್ತದೆ. ಸಕ್ಕರೆ ಲೇಪನದ ಮಾತ್ರೆಗಳಿದ್ದಂತೆ. ಸಕಾಲದಲ್ಲಿ ಮನುಷ್ಯನನ್ನು ಎಚ್ಚರಿಸಿ ಅನುಕೂಲಗಳನ್ನು ಪಡೆದುಕೊಳ್ಳುವಂತೆ ನಂಬಿಕೆಗಳ ಮೂಲಕ ಒತ್ತಾಯಿಸುತ್ತವೆ.

ಅವುಗಳು ನೀಡುವ ದರ್ಶನ ಮತ್ತು ಜ್ಞಾನಗಳು ಆಧುನಿಕ ಜ್ಞಾನವನ್ನು ಮೀರಿಸುತ್ತವೆ. ನಿಸರ್ಗ ವ್ಯಾಪಾರಗಳಾದ ಸೂರ್ಯೋದಯ, ಚಂದ್ರೋದಯ, ವಿಕೋಪಗಳಾದ ಗುಡುಗು, ಸಿಡಿಲು, ಚಂಡಮಾರುತ ಇತ್ಯಾದಿಗಳ ಭಯವೇ ಅವುಗಳನ್ನು ದೈವೀಕರಿಸಿವೆ. ನಿಸರ್ಗದ ಶಕ್ತಿಯಿಂದ ಪಾರಾಗಲು ಹಾಗೂ ಶಮನ ಮಾಡುವ ಉದ್ದೇಶದಿಂದ ಆಚರಣೆಗಳು ಉದಿಸಿವೆ. ಮಾನವನ ಬದುಕನ್ನು ರೂಪಿಸುವಲ್ಲಿ, ಸಂಸ್ಕೃತಿಯ ಪೋಷಣೆಯಲ್ಲಿ, ನಾಗರಿಕತೆಯನ್ನು ಬೆಳೆಸುವಲ್ಲಿ, ಸಂಪ್ರದಾಯ ಆಚರಣೆಗಳು ಮಹತ್ವದ ಪಾತ್ರವಹಿಸಿವೆ.

ಅರ್ಥವುಳ್ಳ ಆಶಯಗಳಿಂದ ತುಂಬಿದ ಆಚರಣೆಗಳು ಉಳಿದು, ತಲೆಮಾರಿನಿಂದ ತಲೆಮಾರಿಗೆ ಹರಿಯಲಾರಂಭಿಸಿದವು. ಅವುಗಳಲ್ಲಿ ವಿಜ್ಞಾನವಿದೆ. ಮಾನವಿಕ ವಿಚಾರಗಳಿವೆ. ಈ ಜ್ಞಾನವನ್ನು ಪರಂಪರೆಯಿಂದ ಪರಂಪರೆಗೆ ಆಚರಣೆಗಳ ಮೂಲಕ ಸಾಗಿಸುತ್ತವೆ. ಒಟ್ಟಾರೆಯಾಗಿ ಅವು ಒಳಿತನ್ನು ತುಂಬಿಕೊಂಡು ಸದಾ ನಮ್ಮೊಂದಿಗೆ ಬರುತ್ತಿವೆ.

ಆಚರಣೆಗಳಲ್ಲಿ ಉಪಕಾರಿ ಪ್ರಾಣಿ, ಪಕ್ಷಿ, ಸಸ್ಯ ಹಾಗೂ ಪ್ರಾಕೃತಿಕ ವಸ್ತುಗಳನ್ನು ಪೂಜ್ಯನೀಯವಾಗಿ ಕಾಣಲಾಗಿದೆ. ಆಚರಣೆಗಳಲ್ಲಿ ಹುದುಗಿರುವ ಜೀವಮುಖಿ ಅಂಶಗಳನ್ನು ಗಮನಿಸಬೇಕು. ಅವುಗಳು ಸಾರುವ ಸಂದೇಶವನ್ನು ಅರಿಯಬೇಕು. ಅವುಗಳಲ್ಲಿರುವ ಆರೋಗ್ಯಪೂರ್ಣ ಜೀವನ, ಪ್ರಕೃತಿ ಸಂರಕ್ಷಣೆ ಮುಂತಾದವುಗಳ ಅರಿವಿನ ಸೂತ್ರಗಳನ್ನು, ನಂಬಿಕೆ, ನಿಷೇಧಗಳ ಮೂಲಕ ಅರ್ಥೈಸಿಕೊಳ್ಳಬೇಕು. ನೆಲ, ಜಲ, ಅಗ್ನಿ, ವಾಯು ಮತ್ತು ಆಕಾಶವನ್ನು ಪೂಜಿಸದ ಆಚರಣೆಗಳಿಲ್ಲ. ಮಣ್ಣು ಅಥವಾ ಸಗಣಿಯಿಂದ ಮಾಡಿದ ಗಣಪ ನೆಲವನ್ನು ಸಂಕೇತಿಸಿದರೆ, ಕಲಶದಲ್ಲಿರುವ ನೀರು ಜಲವನ್ನು ಸಂಕೇತಿಸುತ್ತದೆ. ದೀಪಗಳನ್ನು ಅಗ್ನಿಯನ್ನು, ಸರ್ವವ್ಯಾಪಿಯಾಗಿದ್ದು ಸ್ಪರ್ಶ ಗುಣವನ್ನು ಹೊಂದಿರುವ ಗಾಳಿ, ವಾಯುವನ್ನು, ಆಳ ಅಗಲಗಳಿಲ್ಲದ ನಿರ್ವಾತ ಪ್ರದೇಶವು ಆಕಾಶವನ್ನು ಸಾಂಕೇತಿಸಿವೆ.

ಕಲಶ ಒಂದು ರೀತಿಯಲ್ಲಿ ಪಂಚಭೂತಗಳ ಸಂಕೀರ್ಣದ ಸಂಕೇತವಾಗಿ ಕಾಣುವುದು. ಅದರಲ್ಲಿ ನೀರು ಜೀವಸೃಷ್ಟಿ ಮತ್ತು ಪುಷ್ಠಿಗಳಿಗೆ ಪ್ರಾಣಾಧಾರ. ಆ ಕಾರಣದಿಂದಾಗಿಯೇ ಎಲ್ಲಾ ಆಚರಣೆಗಳು ಜಲಕೇಂದ್ರಿತವೇ ಆಗಿವೆ. ಜೀವನಾವರ್ತನ ಹಾಗೂ ವಾರ್ಷಿಕ ವರ್ತನದ ಆಚರಣೆಗಳು ಜಲಕೇಂದ್ರಿತವಾಗಿರುವುದನ್ನು ಗಮನಿಸಬಹುದು.

ಜಾತ್ರೆ ಹಬ್ಬಗಳಲ್ಲಿ ದೇವರ ವಿಗ್ರಹಗಳನ್ನು ಮೆರವಣಿಗೆಯಲ್ಲಿ ಸಾಗಿ 'ಹೊಳೆಸ್ನಾನ' ಮಾಡಿಸಿ ನೀರಿಗೆ ಪೂಜೆ ಸಲ್ಲಿಸುವುದು, ಅಲ್ಲಿಯ ಕೊಡವೊಂದನ್ನು ತುಂಬಿಸಿಕೊಂಡು ಮೆರವಣಿಗೆಯಲ್ಲಿ ಒಂದು ಕಲಶ ಪ್ರತಿಷ್ಠಾಪನೆ ಮಾಡುವುದು. ಜಾತ್ರೆ ಮುಗಿದ ಬಳಿಕ ಕಲಶದ ನೀರನ್ನು ಅದೇ ಜಲಮೂಲಕ್ಕೆ ವಿಸರ್ಜಿಸುವುದು, ದೇವರುಗಳ 'ದೀಪೋತ್ಸವ' ಆಚರನೆ ಇನ್ನು ಮುಂತಾದ ಆಚರಣೆಗಳಲ್ಲಿ ನೀರಿನ ಮೂಲಗಳು ದೈವ ಸನ್ನಿಧಿಗಳಾಗಿ ಸ್ವೀಕಾರವಾಗಿರುವ ಅಂಶ ಕಂಡುಬರುತ್ತದೆ.

ಬೆಟ್ಟ-ಗುಡ್ಡ ಪರ್ವತಗಳ ಶೃಂಗದಲ್ಲಿರುವ ಗುಡಿ ದೇವಾಲಯಗಳು ನಿಸರ್ಗ ಸೌಂದರ್ಯವನ್ನು ಕೆಡಿಸದಂತೆ ರಕ್ಷಿಸಿವೆ. ಪ್ರಕೃತಿಯ ಜೊತೆ ಜೊತೆಗೆ ಹೆಜ್ಜೆ ಹಾಕುವುದು ಒಳಿತೆನ್ನುವ ಸಂದೇಶ ರವಾನಿಸುತ್ತವೆ.

ಕೆಲವು ಆಹಾರ ಪದಾರ್ಥಗಳನ್ನು ತಿನ್ನಬಾರದೆನ್ನುವ ನಿಷೇದವು ದೇಹಕ್ಕೆ ಆಗಬಹುದಾದ ಅನಾಹುತವನ್ನು ತಪ್ಪಿಸುತ್ತದೆ. ಹೀಗೆ ಆಚರಣೆಗಳಲ್ಲಿ ಹುದುಗಿರುವ ಅಂಶಗಳನ್ನು ಗುರುತಿಸಿ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿ ಆರೋಗ್ಯ ಪೂರ್ಣವಾದ ಅಂಶಗಳನ್ನು ಅನ್ವಯಿಕ ನೆಲೆಯಲ್ಲಿ ರೂಢಿಸಿಕೊಳ್ಳಬೇಕು.ಕೆಲವು ಕಾಲದಲ್ಲಿ ಕೆಲವು ಮರಗಳನ್ನು ಕತ್ತರಿಸುವಂತಿಲ್ಲ. ಇದರಲ್ಲಿ ವೃಕ್ಷ ರಕ್ಷಣಾ ತತ್ವವಿದೆ. ಬಹು ಉಪಯೋಗಿ ವಸ್ತು ಸಂಕುಲವನ್ನು ಕಾಲತೀತವಾಗಿ ಉಪಯೋಗಿಸುವುದರಿಂದ ನಾಶವಾಗುತ್ತದೆ. ಸಸ್ಯ ಸಂಕುಲದ ನಾಶವನ್ನು ತಪ್ಪಿಸಲು ಅದಕ್ಕೊಂದು ನಂಬಿಕೆಯಿಂದ ಕಾಲವನ್ನು ನಿಗದಿಗೊಳಿಸಿದೆ.

ದಿನಬಳಕೆಯ ವಸ್ತುಗಳು ಹಾಗೂ ಸಲಕರಣೆಗಳು ಪೂಜ್ಯನೀಯವಾಗಿದ್ದು, ಜನಪದರ ಬದುಕಿನ ಅಂಗವಾಗಿದೆ. ಕಾಯಕದಲ್ಲಿ ಬಳಸಲಾಗುವ ವಸ್ತುಗಳು ಕೈಗಳಷ್ಟೇ ಮುಖ್ಯ. ಅವು ಸದಾಕಾಲ ಸುಸ್ಥಿತಿಯಲ್ಲಿದ್ದು ಕೆಲಸಕ್ಕೆ ಅನುಕೂಲವಾಗಿರಬೇಕು ಎನ್ನುವ ಮಹತ್ವದ ಉದ್ದೇಶವಿದೆ.

ಆಚರಣೆಗಳನ್ನು ಸಮೃದ್ಧ ಬಾಳಿನ ಸೂತ್ರಗಳಂತೆ, ಪ್ರಮೇಯಗಳಂತೆ ಬಳಸಬೇಕು. ಅಲ್ಲಿ ಆರೋಗ್ಯವಿದೆ. ಸ್ವಚ್ಛತೆಯ ಸಹಬಾಳ್ವೆಯ ಪಾಠವಿದೆ. ಹಂಚಿಕೊಂಡು ಉಣ್ಣುವ ನೀತಿ ಇದೆ. ಸಂಬಂಧಗಳನ್ನು ಬೆಸೆಯುವ ಬೆಸುಗೆಯಿದೆ. ಚರ್ಚಿಸುವ ಗುಣವಿದೆ. ಕರುಣೆ ಇದೆ. ಸಹಾಯ ಇದೆ. ತರ್ಕ ಹಾಗೂ ವಿನೋದವಿದೆ. ಜಾಣ್ಮೆ ಹಾಗೂ ರಕ್ಷಣೆಯಿದೆ. ಪರಸ್ಪರ ವೃತ್ತಿ ಸಂಬಂಧವಿದೆ. ಹೀಗೆ ಸಾವಿರಾರು ಜೀವಮುಖಿ ಅಂಶಗಳು ಆಚರಣೆಯ ಗರ್ಭದಲ್ಲಿವೆ. ಅವುಗಳನ್ನು ಪ್ರಯೋಗಗಳಂತೆ ನಡೆಸಬೇಕು. ಎಲ್ಲವನ್ನು ಅರ್ಥವಿಲ್ಲ ಎನ್ನುವ ಅವಸರದ ಬುದ್ಧಿಯನ್ನು ಬಿಟ್ಟು ಸಮಾಧಾನದಿಂದ ನೋಡಬೇಕು. ಆಗ ಆಚರಣೆಗಳ ಉದ್ದೇಶ ಫಲಪ್ರದವಾಗುತ್ತದೆ.

ಉತ್ತರ ಕರ್ನಾಟಕದ ಭಕ್ತರು ಹರಕೆಯ ರೂಪದಲ್ಲಿ ತೊಟ್ಟಿಲನ್ನು ಸಂಬಂಧಿಸಿದ ದೈವಕ್ಕೆ ಅರ್ಪಿಸುವ ಆಚರಣೆ. ಸಂತಾನಹೀನ ವ್ಯಕ್ತಿಗಳು ಮಕ್ಕಳು ಬೇಕೆಂದು ದೈವದಲ್ಲಿ ಹರಕೆ ಕಟ್ಟಿಕೊಳ್ಳುತ್ತಾರೆ. ಹರಕೆ ಕಟ್ಟಿಕೊಂಡವರಿಗೆ ದೇವಿಯ ವರಪ್ರಸಾದದಿಂದ ಮಕ್ಕಳು ಜನಿಸಿದಾಗ ಸಂಬಂಧಿಸಿದ ದೇವಾಲಯಕ್ಕೆ ತೊಟ್ಟಿಲೊಂದನ್ನು ವಿಧಿವಿಧಾನಗಳೊಂದಿಗೆ ಅರ್ಪಿಸುತ್ತಾರೆ. ಚೆಂಡಿನಿಂದ ತಯಾರಿಸಿದ ತೊಟ್ಟಿಲಲ್ಲಿ ಹರಕೆಯಿಂದ ಜನಿಸಿದ ಮಗುವನ್ನು ಮಲಗಿಸಿ, ಬಾವಿಯಲ್ಲಿ ಬಿಡುತ್ತಾರೆ. ನಂತರ ಮಗುವನ್ನು ಮೂರು ಬಾರಿ ಮುಳುಗಿಸಿ ಎತ್ತಿಕೊಳ್ಳುತ್ತಾರೆ. ಮತ್ತೆ ದೇವಾಲಯದಲ್ಲಿ ಪೂಜಿಸಿ ತಾವು ಹರಕೆಗಾಗಿ ತಂದ ತೊಟ್ಟಿಲನ್ನು ಅರ್ಪಿಸುತ್ತಾರೆ. ತೊಟ್ಟಿಲನ್ನು ಬೆಳ್ಳಿ, ಬಂಗಾರದಿಂದ ಮಾಡಿರುತ್ತಾರೆ.[೨]

ಜಾನಪದವನ್ನು ಕೇವಲ ಸಾಮಗ್ರಿಯಾಗಿ ಗ್ರಹಿಸದೆ ವಿಚಾರವನ್ನಾಗಿ ಪರಿಗ್ರಹಿಸುವ ಪ್ರವೃತ್ತಿಯನ್ನು ಜೀಶಂಪ ಹುಟ್ಟು ಹಾಕಿದರು. ಮಾಹಿತಿ ಸಂಗ್ರಹಣೆ-ನಿರೂಪಕ-ಸಂಗ್ರಾಹಕರ ನಡುವೆ ತಾತ್ವಿಕವಾದ ಸಂಬಂಧಗಳು ಏರ್ಪಟ್ಟವು. ಜನಪದ ಸಾಹಿತ್ಯದ ಜೊತೆಜೊತೆಗೆ ಜನಪದರ ಬದುಕಿನ ಅಧ್ಯಯನ ವಿಧಾನಗಳನ್ನು ಜೀಶಂಪ ರೂಪಿಸಿದರು. ಜನಪದರ ವೃತ್ತಿಗಳು, ಉಡುಗೆ-ತೊಡುಗೆಗಳು, ಆಚಾರ-ವಿಚಾರಗಳು, ಊರು-ಕೇರಿ, ನಂಬಿಕೆ, ಸಂಪ್ರದಾಯಗಳು, ಹಬ್ಬ-ಹರಿದಿನಗಳು, ವೈವಿಧ್ಯಮಯ ಜನಪದ ಪ್ರದರ್ಶಕ ಕಲೆಗಳು, ಜನಪದ ಕಲಾವಿದರ ಬದುಕಿನ ಹಿತಾಸಕ್ತಿಗಳು ಇತ್ಯಾದಿಗಳನ್ನು ಕುರಿತಾದಂತೆ ಪ್ರಾದೇಶಿಕ ಚೌಕಟ್ಟಿನ ನೆಲೆಯಲ್ಲಿ ಅಧ್ಯಯನ-ಸಂಶೋಧನೆಗಳನ್ನು ನಡೆಸಲು ಪ್ರೇರಣೆ ನೀಡಿದರು. ಇದರಿಂದಾಗಿ ಜಾನಪದ ಜಗತ್ತು ವಿಸ್ತಾರಗೊಳ್ಳಲಾರಂಭಿಸಿತು.[೩]

ಮಂಗ ಮಾನವನಾದಾಗಲೇ ಜಾನಪದ ಸಂಪ್ರದಾಯ ಮೊಳೆಯಿತು. ಅವನ ಬುದ್ಧಿ ಮನಸ್ಸುಗಳು ವಿಕಾಸವಾದಂತೆಲ್ಲ ಜಾನಪದ ಕಲೆಗಳು ಹೊರಹೊಮ್ಮಿದವು. ಅವನ ನಾಲಗೆಯ ಮೇಲೆ ಮಾತು ಕುಣಿದಾಗಲೇ ಜಾನಪದ ಸಾಹಿತ್ಯ ಉದ್ಭವವಾಯಿತು. ಮಾನವನ ಸಕಲ ವಿದ್ಯೆಗಳಿಗೆ ಈ ಜಾನಪದ ಸಂಪ್ರದಾಯವೇ ತಲಕಾವೇರಿಯಾಯಿತು.

ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು. ಲಿಂಗಭೇದವಿಲ್ಲದೆ ನಾಡಿನ ಎಲ್ಲ ಜಾತಿಯ ವಿವಿಧಾಭಿರುಚಿಯ ನಾನಾ ಜನಾಂಗಗಳ ವಿವಿಧ ವಯೋಸಂಸ್ಕಾರಗಳ ಸಾಮಾನ್ಯಜನ ಜಾನಪದ ಸಂಪ್ರದಾಯದ ನಿರ್ಮಾಣಕಾರ್ಯದಲ್ಲಿ ತೊಡಗಿದ್ದರಿಂದ ಅದು ರಾಷ್ಟ್ರೀಯತೆಯ ಪಟ್ಟಕ್ಕೆ ಅರ್ಹವಾಗಿದೆ.

ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕುಳಿಸುತ್ತದೆ. ತನ್ನತನದ ನೆಲಗಟ್ಟಿನ ಮೇಲೆ ಹೊಸಬಾಳನ್ನು ರೂಪಿಸುವಂತಾಗುತ್ತದೆ. ಸಾಹಿತ್ಯವಾಗಲಿ, ಕಲೆಯಾಗಲಿ, ಯಾವ ಜೀವನ ವ್ಯಾಪಾರವೇ ಆಗಲಿ ದಿಕ್ಕು ತಪ್ಪಿದಾಗ ಜಾನಪದ ಸಂಪ್ರದಾಯ ಧ್ರುವತಾರೆಯಾಗುತ್ತದೆ. ಜನಪದ ಸಾಹಿತ್ಯದ ಸೌಂದರ್ಯಕ್ಕೆ, ಶ್ರೀಮಂತಿಕೆಗೆ ಬೆರಗಾಗಿ ಆ ಸಾಹಿತ್ಯ ಸಂಗ್ರಹದಲ್ಲಿ ಆಸಕ್ತರಾಗುವ ಯಾರೇ ಆದರು ತಮ್ಮ ಸಂಗ್ರಹ ಯಾತ್ರೆಯ ವಿಭಿನ್ನ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ಹಂಬಲಕ್ಕೊಳಗಾಗುವುದು ಸಹಜ.

ಗ್ರಂಥಸ್ಥ ಸಾಹಿತ್ಯದ ಸಂರಕ್ಷಣೆಯೇನೋ ಹಲವು ರೀತಿಯಲ್ಲಿ ನಡೆದು ನಮ್ಮ ಪ್ರಾಚೀನರು ಬಿಟ್ಟುಹೋದ ಅಮೂಲ್ಯ ಕೃತಿಗಳು ತಮ್ಮ ಸಾಹಿತ್ಯಮೌಲ್ಯದಿಂದ ಇಂದು 'ವಿಶ್ವಮಾನ್ಯತೆ'ಯನ್ನು ಪಡೆದಿವೆ. ಆಂಗ್ಲರ ಆಳ್ವಿಕೆಯಲ್ಲಿ ಆರಂಭವಾದ ಸಾಹಿತ್ಯ ಕೃತಿಗಳ ಈ ಸಂರಕ್ಷಣಾ ಕಾರ್ಯದಿಂದ ನಮ್ಮದೇ ಆದ ವಿಶಿಷ್ಟ ಸಾಹಿತ್ಯ ಚರಿತ್ರೆಯನ್ನು ರಚಿಸಿಕೊಳ್ಳಲು ಸಾಧ್ಯವಾಯಿತು. ನೂರಾರು ಓಲೆಯ ಗರಿಯ ಗ್ರಂಥಗಳನ್ನು ನೀರಿಗೆಸೆದ, ಬೆಂಕಿಯಲ್ಲಿ ಸುಟ್ಟ ವಿಷಾದ ಪ್ರಸಂಗಗಳು ಇಂದಿಗೂ

ವರದಿಯಾಗುತ್ತವೆ. ಇಂಥ ಅವಜ್ಞೆ ಮನೆ ಮಾಡಿಕೊಂಡಿರುವ ಜನತೆಯಲ್ಲಿ ಕಲೆಯ ಕಣ್ಣು ತೆರೆಸುವ ಬಿರುಸಿನ ಕ್ರಮಗಳನ್ನು ಕೈಗೊಳ್ಳದ ಹೊರತು ನಾಡಿನ ಕಲ್ಯಾಣ ಪೂರ್ಣವಾಗಿ ಸಾಧಿತವಾಗಲಾರದು. ಗ್ರಂಥಸ್ಥ ಸಾಹಿತ್ಯದ ಸ್ಥಿತಿ ಇದಾದ ಮೇಲೆ ಶತಶತಮಾನಗಳಿಂದ ಪಂಡಿತವರ್ಗದವರಿಂದ ನಿರ್ಲಕ್ಷಿಸಲ್ಪಟ್ಟು, ಆದರೂ ಎಲ್ಲ ಸಾಹಿತ್ಯ ಸೃಷ್ಟಿಗೂ ಮಾತೃಪ್ರಾಯವಾಗಿ ಉಳಿದು ಜನತೆಯ ಜೀವಾಳವಾಗಿ ಬೆಳೆದು ಬಂದ ಜನಪದ ಸಾಹಿತ್ಯ ಹಳ್ಳಿಗಳ ಇಂದಿನ ವಾತಾವರಣದಲ್ಲಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದೇ ದುರ್ಲಭವಾಗಿದೆ. ಒಂದು ನಾಡಿನ ಹಿರಿಯ ಸಂಸ್ಕೃತಿಯನ್ನು ಅಳೆಯಬೇಕಾದರೆ, ಆ ಬದುಕಿನ ಆದರ್ಶಗಳನ್ನು ತಿಳಿಯಬೇಕಾದರೆ ಇಲ್ಲಿನ ಜನಪದ ಸಾಹಿತ್ಯದ ಮೊರೆಹೋಗಬೇಕು.

ಜಾನಪದದ ಅತ್ಯಂತ ಉತ್ಕೃಷ್ಟವಾದ ಭಾಗವೇ ಜನಪದ ಸಾಹಿತ್ಯ. ಭಾರತದಲ್ಲಿ ಋಗ್ವೇದ ಕಾಲದಿಂದಲೂ ಜನಪದ ಮೂಲವನ್ನು ಅರಸಲಾಗುತ್ತಿದೆ. ಜನಪದ ಸಾಹಿತ್ಯ ಶಿಷ್ಟಸಾಹಿತ್ಯಕ್ಕೆ ಹಾಲೆರೆದು ಪೋಷಿಸಿಕೊಂಡು ಬಂದ ಕಾಮಧೇನು. ಎಲ್ಲ ಪ್ರೌಢ ಸಂಸ್ಕೃತಿಗಳಲ್ಲೂ ಈ ಕಾರ್ಯ ನಡೆದೇ ಇದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಜನಪದ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಅನೇಕ ಗಣ್ಯಕವಿಗಳನ್ನು ಕಾಣಬಹುದು. ಬೇಂದ್ರೆ, ಮಾಸ್ತಿ, ನರಸಿಂಹಸ್ವಾಮಿ, ಕಂಬಾರ ಮೊದಲಾದವರ ಕವಿತೆಗಳ ಮೇಲೆ ಜನಪದ ಗೀತೆಯ ಮಟ್ಟುಗಳೂ, ವಸ್ತುವಿನ್ಯಾಸವೂ, ಶೈಲಿಯೂ ಪ್ರಭಾವ ಬೀರಿವೆ. ಜನಪದ ಸಾಹಿತ್ಯದಿಂದ ಶಿಷ್ಟಸಾಹಿತ್ಯ ಅಪಾರ ಸಾಮಗ್ರಿಯನ್ನು ಸ್ವೀಕರಿಸಿ ಪುಷ್ಟಿಗೊಂಡಂತೆ ಶಿಷ್ಟ ಸಾಹಿತ್ಯ ಮೂಲದಿಂದಲೂ ಜನಪದ ಸಾಹಿತ್ಯಕ್ಕೆ ಕೊಡುಗೆಯನ್ನು ಕಾಣಬಹುದು. ಜನಪದ ಸಾಹಿತ್ಯ, ಶಿಷ್ಟ ಸಾಹಿತ್ಯದಂತೆಯೇ ಗದ್ಯಪದ್ಯಾತ್ಮಕವಾದುದು. ಇಲ್ಲಿನ ಗದ್ಯ ಪ್ರಮುಖವಾಗಿ ಜನಪದ ಕಥೆಗಳಲ್ಲಿ ಕಂಡು ಬರುತ್ತದೆ. ಜನಪದ ಕಥೆಗಳ ಭಾಷೆ ಒಬ್ಬೊಬ್ಬ ಕಥೆಗಾರನ ಬಾಯಲ್ಲಿ ಒಂದೊಂದು ಸ್ವರೂಪದಲ್ಲಿ ಅವತರಿಸುತ್ತದೆ. ಜನಪದ ನಂಬಿಕೆ, ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನಗಳು ನಡೆಯುತ್ತಿವೆ.

ಕನ್ನಡ ಜನಪದ ಸಾಹಿತ್ಯದ ವಿಸ್ತಾರ, ವ್ಯಾಪ್ತಿಗಳ ಸರಿಯಾದ ಪರಿಚಯವಾದುದು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮಾತ್ರ. ಸ್ವಾತಂತ್ರ್ಯ ಪೂರ್ವದಲ್ಲಿ ಸಾಹಿತ್ಯಿಕ ಕುತೂಹಲಕ್ಕಾಗಿ ಸಾಹಿತ್ಯ ಸಂಗ್ರಹ ಪ್ರಕಟಣೆಗಳು ಕಾಣಿಸಿಕೊಂಡರೆ, ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಪೂರ್ಣಕಾಲದ ಜಾನಪದ ಕಾರ್ಯಕರ್ತರು ಕಾಣಬರತೊಡಗಿದರು. ಇದರಿಂದ ಹೊಸಹೊಸ ಸಾಹಿತ್ಯ ಸಂಪ್ರದಾಯಗಳ ಪರಿಚಯಕ್ಕೆ ಹೆದ್ದಾರಿಯನ್ನು ಸವೆದಂತೆ ಆಯಿತು. ಗದ್ದೀಮಠ, ಜೀಶಂಪ, ಕರಾಕೃ, ತಿಪ್ಪೇಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿ ಮುಂತಾದವರ ಈ ನಿಟ್ಟಿನ ದುಡಿಮೆ ನಮ್ಮ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಹೊಸ ಪ್ರಕಾರಗಳನ್ನು ತೆರೆದು ತೋರಲು ನೆರವಾಯಿತು. ಮಹಾಭಾರತಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಅನೇಕ ಉತ್ಕೃಷ್ಟ ಜನಪದ ಕಾವ್ಯಗಳು ಲಭ್ಯವಾಗಿವೆ. ಕುಂತಿ ತನ್ನ ಪುತ್ರರೊಡನೆ ವನವಾಸ ಕಹಿಯನ್ನು ಅನುಭವಿಸಿದ ದಾರುಣ ಚಿತ್ರಗಳು ಲಭ್ಯವಾಗುತ್ತವೆ.

ಕೇರಳದ ಜನಪದ ಕಾವ್ಯದಲ್ಲಿ ಭೀಮನನ್ನು ಕುರಿತ ಕಾವ್ಯಗಳು ಸಾಕಷ್ಟು ಸಿಗುತ್ತವೆ. ಕನ್ನಡದ ಕಾವ್ಯಗಳಲ್ಲೂ ಭೀಮನಿಗೆ ವಿಶೇಷ ಸ್ಥಾನ ದೊರೆತಿದೆ. ಶಿವಗಿರಿಜೆಯರಿಗೆ ಸಂಬಂಧಿಸಿದ ಅನೇಕ ಆಕರ್ಷಕ ಜನಪದ ಕಾವ್ಯಗಳು ಕನ್ನಡದಲ್ಲಿ ಕಂಡುಬರುತ್ತವೆ.

ಜನಪದ ಸಂಪ್ರದಾಯಗಳ ಅಧ್ಯಯನ ಪ್ರಾಚೀನ ನಡಾವಳಿಗಳ ಮೇಲೆ ಅಪಾರವಾದ ಬೆಳಕನ್ನು ಚೆಲ್ಲುತ್ತದೆ. ಆದಿವಾಸಿ, ಅನಾಗರಿಕ ಯುಗಗಳ ಎಷ್ಟೋ ಪಳೆಯುಳಿಕೆಗಳು ಇಂದಿನ ಸಂಪ್ರದಾಯಗಳಲ್ಲಿ ಅಸ್ಪಷ್ಟವಾಗಿಯಾದರೂ ಉಳಿದುಕೊಂಡು ಬಂದಿರುತ್ತವೆ. ಜಾನಪದ ಅಧ್ಯಯನದಲ್ಲಿ ಸಂಪ್ರದಾಯಗಳ ಪರಿವೀಕ್ಷಣೆ, ವ್ಯಾಖ್ಯಾನಗಳಿಗೆ ಒಂದು ಗಣ್ಯಸ್ಥಾನವನ್ನು ವಿದ್ವಾಂಸರು ಮೊದಲಿನಿಂದಲೂ ನೀಡುತ್ತಾ ಬಂದಿದ್ದಾರೆ. 'ಸಂಪ್ರದಾಯ' ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ವಾಡಿಕೆ, ಪದ್ಧತಿ, ಆಚಾರ, ಸಂಸ್ಕಾರ, ವಿಧಿ, ಕುಲಾಚಾರ ಮುಂತಾದ ಶಬ್ದಗಳನ್ನು ಅಲ್ಲಲ್ಲಿ ಬಳಸಲಾಗುತ್ತದೆ.

ಸಂಪ್ರದಾಯ ಪರಂಪರೆಯಿಂದ ಬಂದ ಒಂದು ಗುಂಪಿನ ಆಚರಣೆಗಳ ಮೊತ್ತವಾಗಿದೆ. ಅದು ಒಬ್ಬ ವ್ಯಕ್ತಿ ಆಚರಿಸುವ ವ್ಯಕ್ತಿಗತ ನಡಾವಳಿಯಾಗಿರದೆ ಒಂದು ಗುಂಪು ಒಪ್ಪಿಕೊಂಡು ನಡೆಸಿಕೊಂಡು ಬಂದುದಾಗಿದೆ. ಆಚರಣೆಗಳು ಕೇವಲ ಗೊಡ್ಡು ಕಂದಾಚಾರಗಳಲ್ಲ. ಸಾಮಾಜಿಕ ಜೀವನದೊಡನೆ ಅವು ಜೀವಂತವಾದ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಒಂದು ಸಂಸ್ಕೃತಿ ಬೆಳೆದು ಬಂದ ರೀತಿಯನ್ನೂ, ಆಳ ಅಗಲಗಳನ್ನೂ, ರೀತಿ, ನೀತಿಗಳನ್ನೂ ಸಮರ್ಥವಾಗಿ ಪ್ರತಿಬಿಂಬಿಸುತ್ತವೆ. ಒಂದೊಂದು ಸಂಪ್ರದಾಯದ ಆಳಕ್ಕೆ ಇಳಿದಂತೆಲ್ಲ ಆಯಾ ಸಂಸ್ಕೃತಿಗೆ ಹೊಸ ಅರ್ಥವನ್ನು ತಂದು ಕೊಡುವಲ್ಲಿ ಸಂಪ್ರದಾಯಗಳು ಸಹಕಾರಿಯಾಗುತ್ತವೆ. ಸಂಪ್ರದಾಯ ಮತ್ತು ಆಚರಣೆಗಳು ಪರಸ್ಪರ ಸಂಬಂಧವುಳ್ಳ ಎರಡು ಜಾನಪದ ಬಗೆಗಳು. ಬಹುಮಟ್ಟಿಗೆ ಧಾರ್ಮಿಕ ಚೌಕಟ್ಟಿನಲ್ಲಿಯೇ ಬರುವ ಆಚರಣೆಗಳನ್ನು 'ಧಾರ್ಮಿಕ ವಿಧಿಗಳು' ಎಂದೂ ಕರೆಯಬಹುದು. ಸಂಪ್ರದಾಯಗಳಲ್ಲಿ ಈ ಆಚರಣೆಗಳು ಬೇರ್ಪಡಿಸಲು ಸಾಧ್ಯವಾಗದ ರೀತಿಯಲ್ಲಿ ಬೆಸೆದುಕೊಂಡಿರುತ್ತವೆ. ತೀರ ಲೌಕಿಕ ಸ್ವರೂಪದ ಸಂಪ್ರದಾಯಗಳನ್ನು ಉಳಿದರೆ ಉಳಿದೆಡೆಗಳೆಲ್ಲೆಲ್ಲ ಇವೆರಡೂ ಕೈ ಕೈ ಹಿಡಿದೇ ಸಾಗುತ್ತದೆ. ವ್ಯವಸಾಯ ಸಂಬಂಧಿಯಾದ ಮಳೆಗೆ ಸಂಬಂಧಿಸಿದ ಆಚರಣೆಗಳು ಸಂಪ್ರದಾಯಗಳೂ ಹೌದು. ಅಲೆಕ್ಸಾಂಡರ್ ಎಚ್. ಕ್ರಾಪೆಯವರು ಮೂರು ಪ್ರಮುಖ ವರ್ಗಗಳಲ್ಲಿ ಸಂಪ್ರದಾಯಗಳನ್ನು ವಿಭಜಿಸಿಕೊಂಡಿದ್ದಾರೆ.

೧. ವರ್ಷದಲ್ಲಿ ನಿರ್ದಿಷ್ಟ ದಿನ ಮತ್ತು ಕಾಲಕ್ಕೆ ಸಂಬಂಧಿಸಿದವು.

೨. ಹುಟ್ಟು, ವಿವಾಹ ಹಾಗೂ ಮರಣ ಮುಂತಾದ ಜೀವನವೃತ್ತಕ್ಕೆ ಸಂಬಂಧಿಸಿದವು.

೩. ಬೇಡದ್ದು ಮತ್ತು ದೂರವಿಡುವಿಕೆಗೆ ಸಂಬಂಧಿಸಿದವು.[೪]

ಆಚರಣೆಗಳು ಜಾನಪದ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತವೆ.

ಜನಪದರು ಮುಗ್ಧರು. ಇವರ ನಂಬಿಕೆಯಂತೆ ಜಗತ್ತಿನ ಸಕಲ ವಸ್ತುಗಳ ಮತ್ತು ಜೀವಿಗಳ ಮಾಲಿಕ, ಸಕಲ ಕಾರ್ಯಗಳ ನಿರ್ವಾಹಕ, ಸಕಲ ಸಂಕಟ, ಕಂಟಕ ಮತ್ತು ಅವುಗಳ ಸಂಪೂರ್ಣ ಪರಿಹಾರ ನೀಡುವವ ದೇವರು. ಇದಕ್ಕೆ ಬದಲಾಗಿ ಮಾನವನಿಂದ ದೇವರು ಅಪೇಕ್ಷಿಸುವುದು ಅವನ ಭಕ್ತಿ, ಭಯ, ಉತ್ತಮ ನಡವಳಿಕೆ ಮತ್ತು ಆಚಾರ ವಿಚಾರಗಳು. ಈ ನೇಮದಂತೆ ನಡೆದರೆ ಅವರ ಸಹಾಯಕ್ಕೆ ಬರಲು ದೇವರು ಸದಾ ಸಿದ್ಧ. ಜನಪದರ ತಿಳಿವಳಿಕೆಯಂತೆ ಎರಡು ಬಗೆಯ ಶಕ್ತಿಗಳಿವೆ. ಸಹಾಯಕ ಶಕ್ತಿಗಳಾದ ದೈವ ಅಥವಾ ದೇವರು ಮತ್ತು ದೇವರ ಕಿಂಕರರು ಹಾಗೂ ದುಷ್ಟಶಕ್ತಿಗಳು.

ಜನಪದ ಸಮಾಜದಲ್ಲಿ ಅನೇಕ ಬಗೆಯ ಹಬ್ಬಗಳನ್ನು, ಜಾತ್ರೆಗಳನ್ನು ಮತ್ತು ವಿಧಿಗಳನ್ನು ಆಚರಿಸುತ್ತಾರೆ. ಇವುಗಳೆಲ್ಲವೂ ಒಂದು ವಿಧದಲ್ಲಿ ತಮಗೆ ಬಂದಿರುವ ಅಥವಾ ಬರಬಹುದಾದ ತೊಂದರೆಗಳನ್ನು ನಿವಾರಿಸಲೆಂದು, ಫಲನೀಡಲೆಂದು ಕೇಳಿಕೊಂಡು ದೇವರನ್ನು, ಅವನ ಕಿಂಕರರನ್ನು ಆರಾಧಿಸಿ ಮಾಡುವ ಕಾರ್ಯಗಳು. ಹೀಗೆ ಆಚರಿಸಿದ ಹಬ್ಬಗಳು ಮತ್ತು ವಿಧಿಗಳು ಒಂದು ಕ್ರಮದಲ್ಲಿ ಬರುತ್ತವೆ. ಆದರೆ ಕೆಲವೊಂದು ತೊಂದರೆಗಳು ಆಕಸ್ಮಿಕವಾಗಿ ಬರುವುದರಿಂದ ಅವುಗಳನ್ನು ನಿವಾರಿಸಲು ಆಗ ಕೆಲವು ವಿಧಿಗಳನ್ನು ಆಚರಿಸಬೇಕಾಗುತ್ತದೆ. ಇವು ಕ್ರಮ ತಪ್ಪಿ ಅಥವಾ ಆಕಸ್ಮಿಕವಾಗಿ ಬರುವ ವಿಧಿಗಳೆಂದು ಕರೆಯಬಹುದು. ಇವೆಲ್ಲವುಗಳ ಜೊತೆಗೆ ಕಾಲ ಕಾಲಕ್ಕೆ, ಪರಿಸರದಲ್ಲಿ, ಕಾಲಮಾನದಲ್ಲಿ ಆಗುವ ಅಥವಾ ಋತು ಬದಲಾವಣೆಗಳನ್ನು ಗಮನಿಸಲು ಕೆಲವೊಂದು ಹಬ್ಬಗಳನ್ನು ಆಚರಿಸಲಾಗುವುದು. ಇದೇ ರೀತಿಯಲ್ಲಿ ಜನಪದ ವೃತ್ತಿಗೆ ಸಂಬಂಧಿಸಿದ ಆಚರಣೆಗಳೂ ಇವೆ.

ಈ ಎಲ್ಲಾ ಹಬ್ಬಗಳ ಮತ್ತು ಆಚರಣೆಗಳ ಮೂಲವೇ ಜನಪದ ಧರ್ಮದ ಹುಟ್ಟು. ಜನಪದರು ತಮ್ಮ ಯಾವುದೇ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮುನ್ನ ತಮ್ಮ ಕಾರ್ಯ ಸುಗಮವಾಗಲಿ, ಫಲದಾಯಕವಾಗಲಿ ಎಂಬ ನಂಬಿಕೆಯಿಂದ ಸೂಕ್ತ ಧರ್ಮಕಾರ್ಯಗಳನ್ನು ಮಾಡುತ್ತಾರೆ. ಉದಾಹರಣೆಗೆ ವ್ಯವಸಾಯವನ್ನೇ ತೆಗೆದುಕೊಳ್ಳಬಹುದು; ಇಲ್ಲಿ ಬಿತ್ತುವ ಕಾಲ ಫಲಕಾರಿಯಾಗಿರಬೇಕು. ಬಿತ್ತಲು ಸೂಕ್ತ ಮಳೆ ಮತ್ತು ಹವೆ ಬೇಕು, ಬಿತ್ತಲು ಶುದ್ಧವಾದ (ಫಲಭರಿತವಾದ) ನೆಲ ಮತ್ತು ಬೀಜಗಳೂ ಬೇಕು. ಬಿತ್ತನೆ ಬೀಜಗಳನ್ನು ಶುದ್ಧ ಮಾಡಲು, ಫಲಭರಿತ ಮಾಡಲು ಅವುಗಳನ್ನು ಮೊದಲು ದೇವರಿಗೆ ಅರ್ಪಿಸುತ್ತಾರೆ. ನಾವು ಬಿತ್ತನೆ ಕಾಲದಲ್ಲಿ ಯಾವುದಾದರೂ ಜನಪದ ಸಮಾಜದಲ್ಲಿಯ ಗುಡಿಗಳಿಗೆ ಹೋದಲ್ಲಿ ದೇವರ ವಿಗ್ರಹದ ಮುಂದೆ ಧಾನ್ಯಬೀಜಗಳ ಸಣ್ಣ ಸಣ್ಣ ಗುಂಪುಗಳಿರುವುದು ಕಂಡು ಬರುತ್ತದೆ. ಇದನ್ನು ಬಿತ್ತುವುದಕ್ಕೆ ಹೋಗುವ ಮುನ್ನ ರೈತರು ದೇವರಿಗೆ ಅರ್ಪಿಸಿ ಅದರಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಹೋಗಿ ಬಿತ್ತುವುದರಿಂದ ಬೆಳೆಯು ಉತ್ತಮವಾಗಿ ಬರುತ್ತದೆ. ಬೆಳೆಗೆ ಯಾವ ತರಹದ ರೋಗಗಳು ಬರುವುದಿಲ್ಲವೆಂಬ ನಂಬಿಕೆ ಇದೆ.

ಹಬ್ಬಗಳನ್ನು, ಆಚರಣೆಗಳನ್ನು ಆಚರಿಸುವ ಗುಂಪಿನ ಆಧಾರದಿಂದ ಗ್ರಾಮ, ಜಾತಿ ಮತ್ತು ಕುಟುಂಬ ಅಥವಾ ವಂಶ ಮಟ್ಟದ ಹಬ್ಬಗಳೆಂದು ವಿಂಗಡಿಸಬಹುದು. ಹಿಂದೆಯೇ ತಿಳಿದಿರುವಂತೆ ಪ್ರತಿ ಕುಟುಂಬ ಅಥವಾ ವಂಶವು ತನ್ನದೇ ಆದ ದೇವರನ್ನು ಹೊಂದಿದ್ದು ತನ್ನ ವೃತ್ತಿ, ಸಂಸ್ಕೃತಿ ಮುಂತಾದವುಗಳಿಗೆ ಅನುಗುಣವಾಗಿ ಹಬ್ಬಗಳನ್ನು ಆಚರಿಸಲಾಗುವುದು. ಈ ಹಬ್ಬಗಳಲ್ಲಿ ಭಾಗವಹಿಸುವವರು, ಹಬ್ಬದ ಖರ್ಚನ್ನು ವಹಿಸಿಕೊಳ್ಳುವರು ಮತ್ತು ಹಬ್ಬವನ್ನು ಆಚರಿಸುವುದರಿಂದ ಬರುವ ಪುಣ್ಯವನ್ನು ತಾವೇ ಹಂಚಿಕೊಳ್ಳುತ್ತಾರೆ.

ಜನಪದ ಆಚರಣೆಗಳಲ್ಲಿ ಫಲಶಕ್ತಿಯನ್ನು ಪಡೆಯಲು ಆಚರಿಸುವ ಹಬ್ಬಗಳೂ ಮುಖ್ಯವಾದವು. ಈ ಸಮಾಜದಲ್ಲಿ ಧರ್ಮ ಮತ್ತು ಫಲಕ್ಕೆ ನೇರ ಸಂಬಂಧವಿರುವುದರಿಂದ ಜನಪದ ಹಬ್ಬಗಳೆಲ್ಲವೂ ಒಂದು ವಿಧದಲ್ಲಿ ಫಲಶಕ್ತಿಗಾಗಿ ಆಚರಿಸುವ ಹಬ್ಬಗಳಾಗಿವೆ. ಉದಾಹರಣೆಗೆ ಮಾರಮ್ಮನ ಹಬ್ಬ, ಕಾರಹಬ್ಬ, ಕಾಳವ್ವನ ಹಬ್ಬ, ಲಕ್ಕವ್ವನ ಹಬ್ಬ, ಎಳೆಗೌರಿಹಬ್ಬ, ಮಹೇಶ್ವರನ ಹಬ್ಬ ಮುಂತಾದವುಗಳನ್ನು ತೆಗೆದುಕೊಳ್ಳಬಹುದು.

ಜನಪದ ನಂಬಿಕೆಗಳೇ ಜನಪದ ಧರ್ಮದ ಮೂಲ ಎನ್ನಬಹುದು. ಸಕಲ ಕ್ರಿಯೆ, ಕಾರ್ಯಗಳ ಹಿಂದೆ ಯಾವುದಾದರೊಂದು ಶಕ್ತಿಯ ಲೀಲೆ ಇರುವುದು ಕಂಡು ಬರುತ್ತದೆ. ತಾವು ಅರ್ಥ ಮಾಡಿಕೊಳ್ಳಲಾರದಂತಹ ವಿಷಯಗಳನ್ನು ಕೆದಕಿ ನೋಡದೆ ಅವುಗಳಿಗೆ ಹೆದರಿ, ನಂಬಿ, ನಮ್ರವಾಗಿ ನಡೆದುಕೊಳ್ಳುವರು. ಶಕುನಗಳನ್ನು ಗಮನಿಸುವುದೂ ಜನಪದಿಗಳ ಮತ್ತೊಂದು ರೂಢಿ. ಪ್ರವಾಸಕ್ಕೆ ಯಾವುದಾದರೂ ಮುಖ್ಯವಾದ ಕಾರ್ಯ ಕೈಗೊಳ್ಳುವುದಕ್ಕೆ ಮುನ್ನ ಶಕುನಗಳನ್ನು ಗಮನಿಸುತ್ತಾರೆ. ಇವು ಪ್ರದೇಶಕ್ಕೆ, ಜನಸಮುದಾಯಕ್ಕೆ ಅನುಗುಣವಾಗಿ ಬದಲಾಗುತ್ತವೆ. ದೇವರನ್ನು ಮೆಚ್ಚಿಸಲು ಮಾಡುವ ಅನೇಕ ಕಾರ್ಯಗಳಲ್ಲಿ ಪ್ರಾರ್ಥನೆಯೂ ಮುಖ್ಯವಾದದ್ದು. ಇದನ್ನು ಸ್ವಚ್ಛದೇಹ ಮತ್ತು ಮನಸ್ಸಿನಿಂದ, ಸದಾಕಾಲ ಮಾಡಿದರೆ ಒಳಿತಾಗುವುದೆಂಬ ನಂಬಿಕೆ ಇದೆ.

ತಮ್ಮ ದೈಹಿಕ ತೊಂದರೆಗಳ ನಿವಾರಣೆಗೆ ದೇವರನ್ನು ಕಾಣಲು ಬರುವಾಗ ಭಕ್ತರು ಇಡೀ ದೂರವನ್ನು ಉರುಳುತ್ತಾ, ಮಂಡಿಯ ಮೇಲೆ ತೆವಳುತ್ತಾ ಬರುತ್ತಾರೆ. ಅವರು ದೇವರಿಗೆ ಹೀಗೆ ಬರುತ್ತೇವೆಂದು ಹರಕೆ ತೆಗೆದುಕೊಂಡಿರುತ್ತಾರೆ. ಹೀಗೆ ಮಾಡುವುದರಿಂದ ತಮ್ಮ ದೇಹವನ್ನು ದಂಡಿಸಿದಂತಾಗುತ್ತದೆಯಲ್ಲದೆ ದೇವರಿಗೂ ತೃಪ್ತಿಯಾಗುತ್ತದೆ ಎನ್ನುವ ನಂಬಿಕೆ ಇದೆ. ಇನ್ನೊಂದು ನಂಬಿಕೆ ಎಂದರೆ ಬಾಯಿಬೀಗ, ಕತ್ತಿ, ಮೊಳೆ, ಹಾರಿ ಮುಂತಾದವನ್ನು ಬಾಯಿ, ಕೈ, ಹೊಟ್ಟೆ ಮುಂತಾದ ಕಡೆ ಚುಚ್ಚಿಕೊಳ್ಳುವುದು, ಇನ್ನೂ ಅನೇಕ ಕಡೆ ಸಿಡೆ ಆಡುವುದು, ತಲೆಯ ಮೇಲೆ ಕರ್ಪೂರ ಹಚ್ಚಿಕೊಳ್ಳುವುದು, ತೆಂಗಿನಕಾಯಿ ಹೊಡೆದುಕೊಳ್ಳುವುದು, ಮೈಗೆ ಚಾಟಿಯಿಂದ ಹೊಡೆದುಕೊಳ್ಳುವುದು, ಮುಳ್ಳಿನ ಪಾದುಕೆಗಳ ಮೇಲೆ ನಿಲ್ಲುವುದು, ಬೆಂಕಿಯಲ್ಲಿ ಹಾಯ್ದು ಬರುವುದು, ಮುಂತಾದ ಪದ್ಧತಿಗಳಿವೆ. ದೇವರನ್ನು ಕಾಣಲು ಹೋಗುವವರು ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾದ ಪರಿಶುದ್ಧತೆಯಿಂದಲೂ ಹೋಗಬೇಕಾಗುತ್ತದೆ. ಮನ–ಮೈಗಳು

ಶುದ್ಧವಾಗಿರದಿದ್ದರೆ ಮಾತ್ರ ನೋವು ಕಾಣುತ್ತದೆ. ಶುದ್ಧವಾಗಿದ್ದರೆ ಈ ಯಾವ ಕ್ರಿಯೆಯಿಂದಲೂ ನೋವಾಗುವುದಿಲ್ಲವೆಂದು ಅವರ ನಂಬಿಕೆ.

ಕಲೆಗಳು ಜನರಲ್ಲಿ ಧರ್ಮ, ಸಂಪ್ರದಾಯ, ಮೌಲ್ಯ ಮುಂತಾದವುಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಚೇತನಗೊಳಿಸಲು ಸಹಾಯವಾಗುತ್ತವೆ. ಯಾವುದಾದರೊಂದು ಸಂದರ್ಭದಲ್ಲಿ ಹಾಡುವ ಜಾನಪದ ಹಾಡುಗಳು, ಮಾಡುವ ನೃತ್ಯಗಳು ಮತ್ತು ಆಚರಿಸುವ ಕ್ರಿಯಾವಿಧಿಗಳು ನಿಜವಾದ ಚಟುವಟಿಕೆಯನ್ನು ಸಂಕ್ಷಿಪ್ತವಾಗಿ ಮಾಡಿತೋರಿಸುವ ಸಾಧನಗಳಾಗಿವೆ. ಕಲೆಯ ಮತ್ತೊಂದು ಉದ್ದೇಶವೆಂದರೆ, ಗುಂಪು ಜೀವನ ಮತ್ತು ಕಾರ್ಯಗಳು. ಸಾಂಪ್ರದಾಯಕವಾಗಿ ಬಂದ ರೀತಿಯಲ್ಲಿ ಇಡೀ ಗುಂಪೇ ಇಂತಹ ಕೆಲಸಗಳನ್ನು ಕೈಗೊಳ್ಳಬೇಕಾಗುತ್ತದೆ. ಉದಾಹರಣೆಗೆ, ಊರ ದೇವರ ತೇರುಹಬ್ಬ, ಹೀಗೆ ಊರೊಟ್ಟಿನ ಕಾರ್ಯವೆಂದರೆ ಇದರಲ್ಲಿ ಊರಲ್ಲಿಯ ಪ್ರತಿಯೊಬ್ಬನಿಗೂ, ಪ್ರತಿ ಕುಟುಂಬಕ್ಕೂ ಸಾಂಪ್ರದಾಯಿಕವಾಗಿ ಬಂದ ಕಾರ್ಯವಿರುತ್ತದೆ.

ಆಸೆಗೆ ಸತ್ತವರು ಕೋಟಿ
ಅಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಗೆ ಸತ್ತದು ಕೋಟಿ
ಗುಹೇಶ್ವರ
ನಿಮಗಾಗಿ ಸತ್ತವರನಾರನೂ ಕಾಣೆ[೫]

ಅಲ್ಲಮನ ಈ ಮಾತನ್ನ ಗಮನಿಸಿದರೆ ಮನುಷ್ಯನ ಸುಖಲೋಲುಪ ಬುದ್ಧಿ ಎಂಥ ಅತಿರೇಕಕ್ಕೆ ಹೋಗಿದೆ ಎಂಬುದು ತಿಳಿಯುತ್ತದೆ. ಅದಕ್ಕಾಗಿಯೇ ಅಂಥ ಅತಿರೇಕದಿಂದ ಬಿಡುಗಡೆ ಹೊಂದಲು ಮನುಷ್ಯ ಧರ್ಮವನ್ನ ದೇವರನ್ನ ಕಂಡುಕೊಂಡ. ತಾನು ತಿನ್ನುವ ಆಹಾರವನ್ನು ತನ್ನ ದೇವರಿಗೂ ನೈವೇದ್ಯವಾಗಿಸಿದ. ಅದರಲ್ಲೂ ಯಾವುದು ಶ್ರೇಷ್ಠವೆಂದು ಕಂಡುಕೊಂಡ (ಬಾಳೆಹಣ್ಣು, ತೆಂಗಿನಕಾಯಿ ಇತ್ಯಾದಿ). ಅದರ ಮೂಲಕ ದೇವರನ್ನ ಸಂತೃಪ್ತಿಪಡಿಸತೊಡಗಿದ. ಹೀಗಾಗಿ ತನ್ನ ರಕ್ಷಣೆಗಾಗಿಯೇ ಮನುಷ್ಯ ದೇವರು, ಧರ್ಮದ ಕಲ್ಪನೆಯನ್ನ ಕಂಡುಕೊಂಡಿದ್ದಿರಬಹುದೆಂದು ಊಹಿಸಬಹುದು.

ಬೆಂಗಳೂರು ನೂರಾರು ಹಳ್ಳಿಗಳನ್ನು ನುಂಗಿರುವ ಮಹಾನಗರ. ಎಲ್ಲ ಮಹಾನಗರಗಳ ಗರ್ಭದಲ್ಲಿ ಹಳ್ಳಿಗಳು ಹುದುಗಿ ಕುಳಿತಿರುತ್ತವೆ. ಆಧುನಿಕತೆ, ನಾಗರಿಕತೆಗಳನ್ನು ಮೇಲ್ನೋಟದಲ್ಲಿ ಬಿಂಬಿಸುತ್ತಿರುವ ಬೆಂಗಳೂರಿನ ಜನ ಭಾವನಾತ್ಮಕವಾಗಿ ಅವುಗಳನ್ನು ತಮ್ಮದಾಗಿಸಿಕೊಳ್ಳಲು ಸಾಧ್ಯವಿಲ್ಲ. ಅಂತರಂಗವನ್ನು ಆವರಿಸಿಕೊಂಡಿರುವ ಗ್ರಾಮೀಣತೆಯನ್ನು ಅವರೆಂದಿಗೂ ಇಡಿಯಾಗಿ ಮೀರಲಾರರು.

ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಬಂದಿರುವವರು ಅವರೊಂದಿಗೆ ಅವರ ಊರಿನ ದೇವರನ್ನು ಕರೆತಂದಿರುತ್ತಾರೆ. ಪಟ್ಲದಮ್ಮ, ಜಲಗೇರಮ್ಮ, ಮದ್ದೂರಮ್ಮ ಇತ್ಯಾದಿಗಳಾವುವೂ

ಬೆಂಗಳೂರಿನ ದೇವತೆಗಳಲ್ಲ. ಆದರೂ ಅವುಗಳ ಹಬ್ಬ ಆಚರಣೆಗಳು ಬೆಂಗಳೂರಿನ ಬೇರೆ ಬೇರೆ ಬಡಾವಣೆಗಳಲ್ಲಿ ಎರಡು ಮೂರು ದಿನಗಳ ಕಾಲ ಅದ್ದೂರಿಯಾಗಿ ನಡೆಯುತ್ತವೆ. ಅವುಗಳ ಆಚರಣೆಗಳಲ್ಲಿ ನಾಗರಿಕ ವಿಧಿ ವಿಧಾನಗಳಿರದೆ ಗ್ರಾಮೀಣ ಸಂಸ್ಕೃತಿಯೇ ಅಚ್ಚೊತ್ತಿದಂತಿರುತ್ತದೆ. ಬೆಂಗಳೂರಿನ ಕರಗ, ಕಡ್ಲೇಕಾಯಿ ಪರಿಷೆ ಇಂಥವುಗಳೂ ಮೂಲತಃ ಆ ಪ್ರದೇಶದ ಹಳ್ಳಿಗಳಲ್ಲಿ ನಡೆಯುತ್ತಿದ್ದ ಕೃಷಿಗೆ ಸಂಬಂಧಿಸಿದ ಆಚರಣೆಗಳ ಪಳೆಯುಳಿಕೆಗಳಾಗಿವೆ. ಗ್ರಾಮೀಣ ಪ್ರದೇಶದಲ್ಲೇ ಜೀವ ಮಿಡಿಯುತ್ತಿದ್ದ ಅನೇಕ ಬಗೆಯ ಕುಣಿತಗಳು, ಹಾಡುಗಳು, ನಾಟಕಗಳು, ಮನರಂಜನಾ ಕಲೆಗಳು, ಹಬ್ಬ ಉತ್ಸವಗಳು ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಬೆಂಗಳೂರಿನ ವೇದಿಕೆಗಳಲ್ಲಿ, ಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಿವೆ.

ನಗರಗಳಲ್ಲಿ ಸ್ಥಳೀಯ ಸಮುದಾಯ ಮತ್ತು ವಲಸೆ ಸಮುದಾಯಗಳು ಸಾಮಾನ್ಯ. ಸ್ಥಳೀಯ ಸಮುದಾಯಗಳು ಹೆಚ್ಚು ಹೆಚ್ಚು ಸ್ಥಳೀಯ ಜ್ಞಾನವುಳ್ಳವುಗಳಾದರೆ, ವಲಸೆ ಸಮುದಾಯಗಳಿಗೆ, ಭೌಗೋಳಿಕ ಪರಿಸರ ಬದಲಾದರೂ ತಂತಮ್ಮ ಮೂಲ ಪರಿಸರದ ನೆನಪುಗಳು ಮಾಸಿ ಹೋಗಿರುವುದಿಲ್ಲ. ವಲಸೆ ಸಮುದಾಯಗಳು ತಮ್ಮೊಡನೆ ತಂದ ಗ್ರಾಮೀಣ ಸಂಸ್ಕೃತಿಯನ್ನು ಕೈಬಿಡದೆ, ಅಷ್ಟಿಷ್ಟು ಪರಿಷ್ಕಾರಗಳೊಂದಿಗೆ ನಗರ ಸಾಂಸ್ಕೃತಿಕ ಸಂವೇದನೆಯನ್ನು ಮೈಗೂಡಿಸಿಕೊಂಡು ಹೋಗುತ್ತಾರೆ.

ಹತ್ತು ಹಲವು ಕಡೆಗಳಿಂದ ವಲಸೆ ಬಂದು ನಗರಗಳಲ್ಲಿ ನಾನಾ ಕಾರಣಗಳಲ್ಲಿ ನೆಲೆಯೂರುವ ಜನರು ತಾವು ನೆಲೆಸಿದ ಬಡಾವಣೆಗಳಲ್ಲೇ ತಮ್ಮದೇ ಆದ ಜಾನಪದೀಯ ಆಚರಣೆಗಳನ್ನು, ಆರಾಧನೆಗಳನ್ನು, ನಂಬಿಕೆ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಬರುತ್ತಾರೆ.

ಜಾಗತೀಕರಣದ ಬೆಳಕಿನಲ್ಲಿ ಬೆಂಗಳೂರು ಝಗಮಗಿಸುತ್ತಿದೆ. ಅತ್ಯುತ್ತಮ ಸಾರಿಗೆ ಸಂಪರ್ಕ ಜಾಲದಿಂದಾಗಿ ಜಗತ್ತಿನ ಪ್ರತಿಷ್ಠಿತ ನಗರಗಳಲ್ಲಿ ಒಂದೆಂದು ಹೆಸರಾಗಿದೆ. ವ್ಯಾಪಾರ ವಹಿವಾಟುಗಳ ಭರಾಟೆ ಜೋರಾಗಿ ನಡೆಯುತ್ತಿದೆ. ಬೆಳ್ಳಿ ಬಂಗಾರ, ವಜ್ರ ವೈಢೂರ್ಯಗಳಿಂದ ಮೊದಲುಗೊಂಡು ಬೆಂಕಿಕಡ್ಡಿ ಮಾರುವವರೆಗೂ ಯಾವ ವ್ಯಾಪಾರಿಗೂ ಪುರಸತ್ತು ಎಂಬುದಿಲ್ಲ.

ಯಲಹಂಕ ನಾಡಪ್ರಭುಗಳ ವಂಶಸ್ಥರಾದ ಒಂದನೆಯ ಕೆಂಪೇಗೌಡರು ಕ್ರಿ.ಶ. ೧೫೩೭ ರಲ್ಲಿ ಬೆಂಗಳೂರು ನಗರವನ್ನು ನಿರ್ಮಾಣ ಮಾಡಿದರೆಂಬುದು ಇತಿಹಾಸಕಾರರ ಅಭಿಪ್ರಾಯ. ಆದರೆ ಅದಕ್ಕೂ ಮೊದಲು, ಸೂಕ್ಷ್ಮ ಶಿಲಾಯುಗದಿಂದಲೂ ಅಂದರೆ ಕ್ರಿ.ಪೂ. ೪೦೦೦ ವರ್ಷಗಳಷ್ಟು ಹಿಂದೆಯೇ ಬೆಂಗಳೂರು ಜಿಲ್ಲೆಯು ಸಂಸ್ಕೃತಿಯ ನೆಲೆವೀಡಾಗಿದ್ದಿತು. ಫಾದರ್ ಹೆರಾಸ್ ಅವರು ಬೆಂಗಳೂರು ಜಿಲ್ಲೆಯ ಹಾಗೂ ಇಲ್ಲಿನ ನಿವಾಸಿಗಳ ಕಾಲವನ್ನು ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯ ಕಾಲಕ್ಕೆ ಕೊಂಡೊಯ್ಯುತ್ತಾರೆ.

ಭೌಗೋಳಿಕವಾಗಿ ಬೆಂಗಳೂರು ದೊಡ್ಡ ಪರ್ವತಗಳು, ಗಿರಿಕಂದರಗಳಿಂದ ಕೂಡಿಲ್ಲದ ವಿಶಾಲವಾದ ಬಯಲು ಪ್ರದೇಶ. ಅಲ್ಲಲ್ಲಿ ಚದುರಿದಂತಿರುವ ಬೆಟ್ಟ ಗುಡ್ಡಗಳಿದ್ದು ನಡುವಣ

ಪ್ರದೇಶ ಮಟ್ಟಸವಾಗಿದ್ದು ನೈಸರ್ಗಿಕವಾಗಿ ಏರಿಳಿತಗಳಿಂದ ಕೂಡಿದ ಪ್ರಸ್ಥಭೂಮಿ. ಚಾರಿತ್ರಿಕವಾಗಿ ಬೆಂಗಳೂರನ್ನು ಗಂಗರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮರಾಠರು, ಮೈಸೂರು ಅರಸರು, ಬಿಜಾಪುರದ ಮುಸಲ್ಮಾನ ದೊರೆಗಳು, ಇಂಗ್ಲೀಷರು ಆಳಿರುತ್ತಾರೆ. ನಂದರು ಮತ್ತು ಮೌರ್ಯರು ಸಹ ಆಳ್ವಿಕೆ ನಡೆಸಿದ್ದರೆಂಬ ಐತಿಹ್ಯಗಳಿವೆ. ವಿಜಯನಗರ ಸಾಮ್ರಾಜ್ಯದ ಅಧೀನ ಅರಸರಾದ ಯಲಹಂಕ ನಾಡಪ್ರಭುಗಳು ಬೆಂಗಳೂರಿನ ಬೆಳವಣಿಗೆಗೆ ನೀಡಿದ ಕೊಡುಗೆ ಅಸಾಧಾರಣವಾದುದು. ಬೆಂಗಳೂರಿನ ಇತಿಹಾಸದಲ್ಲಿ ಒಂದನೆಯ ಕೆಂಪೇಗೌಡನ ಹೆಸರು ಪ್ರಾತಃಸ್ಮರಣೀಯವಾದುದು. ಬೆಂಗಳೂರು ಕೋಟೆ ಕಟ್ಟುತ್ತಿರುವಾಗ ಕೋಟೆ ಬಾಗಿಲು ಬೀಳುತ್ತಿರಲು ಕೆಂಪೇಗೌಡರ ಗರ್ಭಿಣಿ ಸೊಸೆ ಲಕ್ಷ್ಮಮ್ಮನ ಆತ್ಮ ಬಲಿಯಿಂದ ಕೋಟೆ ಬಾಗಿಲು ಭದ್ರವಾಗಿ ನಿಂತುಕೊಂಡಿತೆಂಬ ಐತಿಹ್ಯವಿದೆ.[೬]

ಮಾದೇಶ್ವರ – ಮಂಟೇಸ್ವಾಮಿ ಗುಡ್ಡರು, ಪರ, ಹರಿಸೇವೆ, ಕೊಂಡ, ಸಿಡಿ ಬೆಂಗಳೂರಿನಲ್ಲೂ ಉಂಟು. ತಲಘಟ್ಟಪುರದ ಬಳಿಯ ಮನಿಹಬ್ಬ, ಗವೀಪುರದ ಬಂಡಿ ಮಾಂಕಾಳಮ್ಮ, ಪ್ರಳಯಕಾಲದ ವೀರಭದ್ರಸ್ವಾಮಿಯ ಅರ್ಚಕ ಬರಿಗೈಲಿ ಕೆಂಡ ಹಿಡಿದು ಕೊಂಡ ಹಾಯುವುದು ವರ್ಷ ವರ್ಷ ನಡೆಯುತ್ತಲೇ ಬಂದಿದೆ. ಶ್ರೀರಾಂಪುರದಲ್ಲಿರುವ ಅಂಬೇಡ್ಕರ್ ನಗರದ ಎಲ್ಲಮ್ಮ ದೇವತೆಯ ದೇವಸ್ಥಾನದಲ್ಲಿ 'ಎಲ್ಲಿ ಕಾಣ್ ಎಲ್ಲಿ ಕಾಣಿರೆ ಎಲ್ಲಮ್ಮನಂತಾಕಿನ ಎಲ್ಲಿ ಕಾಣ್ ಎಲ್ಲಿ ಕಾಣಿರೆ' ಎಂದು ಉಧೋ ಹಾಕುತ್ತಿದ್ದಾರೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರಗಳಂದು ನಡೆಯುವ ವಿಶಿಷ್ಟ ಪೂಜೆಗಳಲ್ಲಿ ದೇವಸ್ಥಾನದ ಸುತ್ತಲೂ ಮಹಿಳೆಯರು ಮೈದುಂಬಿ ಹಾಡುತ್ತ ಕುಣಿಯುವುದು ಬೆಳಗಾವಿಯ ಸವದತ್ತಿಯನ್ನು ನೆನಪಿಗೆ ತರುತ್ತದೆ.

ಬೆಂಗಳೂರು ನಗರ ದೇವತೆ ಅಣ್ಣಮ್ಮನಂತು ಇಡೀ ನಗರವನ್ನೆ ಅವರಿಸಿದ್ದಾಳೆ. ನಗರದ ಪ್ರತಿಯೊಂದು ಬಡಾವಣೆಗೂ ಅಣ್ಣಮ್ಮನ ಉತ್ಸವ ವಿಗ್ರಹವನ್ನು ಕೊಂಡೊಯ್ದು ದಾರಿ ಬದಿಯಲ್ಲಿ ಚಪ್ಪರ ಹಾಕಿ, ಗದ್ದಿಗೆ ಹೂಡಿ ಪ್ರತಿಷ್ಠಾಪಿಸುವುದು, ಕುರಿ, ಕೋಳಿ ಬಲಿ, ತಂಬಿಟ್ಟಿನ ಆರತಿ, ಗುರಗಂಜಿ ಆರತಿ, ಮೊಸರನ್ನ ತಂಪು ಮಾಡುವುದು ಈ ಹೊತ್ತಿಗೂ ತಪ್ಪಿಲ್ಲ.

ಬೆಂಗಳೂರಿನ ಜಯನಗರದ ಮೂರನೇ ಬಡಾವಣೆಯಲ್ಲಿರುವ ಆನೆಬಂಡೆಗೆ ಹೊಂದಿಕೊಂಡಂತೆ ಪಟಾಲಮ್ಮನ ಪುಟ್ಟ ದೇವಸ್ಥಾನವಿದೆ. ಹಿಂದೆ ಪಾತಾಳಭೈರವಿ ಎಂದೇ ಹೆಸರಾಗಿದ್ದ ಈ ದೇವತೆಯು ಟಿಪ್ಪುಸುಲ್ತಾನ್ ಆಳ್ವಿಕೆಯ ಕಾಲದಲ್ಲಿ ಪಟಾಲಮ್ಮನಾಗಿ ಪರಿಣಮಿಸಿತು. ವಾಸ್ತವವಾಗಿ ಪಟಾಲಮ್ಮ ನಾಡಿನ ದೇವತೆ. ಪಟಲದ ಅಮ್ಮ. ಇಲ್ಲಿ ವಿಗ್ರಹದ ಆರಾಧನೆಯಿಲ್ಲ. ಗುಂಡುಕಲ್ಲುಗಳನ್ನು ದೇವರೆಂದು ಪೂಜಿಸುವುದು ವಾಡಿಕೆ. ಹಿಂದಿನಿಂದಲೂ ಈ ದೇವತೆಗೆ ಕನಕನಪಾಳ್ಯ, ಭೈರಸಂದ್ರ, ಸಿದ್ಧಾಪುರ, ಯಡಿಯೂರು, ನಾಗಸಂದ್ರ, ತಾಯಪ್ಪನಹಳ್ಳಿ ಅಗ್ರಹಾರ, ಮಾರೇನಹಳ್ಳಿ ಮತ್ತು ಸಾರಕ್ಕಿ ಈ ಒಂಭತ್ತು ಊರುಗಳ ಜನ ಒಕ್ಕಲಾಗಿದ್ದವರು. ಹಬ್ಬ–ಉತ್ಸವಗಳನ್ನು ನಡೆಸುತ್ತಿದ್ದವರು. ನಗರೀಕರಣದಿಂದಾಗಿ ಈ ಊರುಗಳು ಬೆಂಗಳೂರಿನ ಬಡಾವಣೆಗಳಾಗಿ ಬದಲಾವಣೆ ಮತ್ತು

ಬೆಳವಣಿಗೆ ಹೊಂದಿದ ನಂತರ, ಮಾರೇನಹಳ್ಳಿ, ತಾಯಪ್ಪನಹಳ್ಳಿ ಅಗ್ರಹಾರಗಳ ಜನರು ಪ್ರತ್ಯೇಕವಾಗಿ ತಂತಮ್ಮ ಊರುಗಳಲ್ಲಿಯೇ ದೇವತಾರಾಧನೆಯನ್ನು ಕೈಗೊಂಡ ಪ್ರಯುಕ್ತ ಈಗ ಒಂಬತ್ತೂರುಗಳ ಪಟಾಲಮ್ಮ ಐದೂರುಗಳ ಪಟಾಲಮ್ಮನಗಿ ಪರಿವರ್ತನೆ ಹೊಂದಿ, ಐದು ವರ್ಷಕ್ಕೊಮ್ಮೆ ಮೂರು ದಿನಗಳ ಕಾಲ ಅತ್ಯಂತ ಅದ್ಧೂರಿಯ ಹಬ್ಬವಾಗಿ ಪರಿಣಮಿಸಿದೆ. ಪಟಾಲಮ್ಮನ ಆರಾಧನೆ ಎಂದರೆ ಶಕ್ತಿಯ ಆರಾಧನೆ. ಶ್ರಮಿಕ ವರ್ಗದ ಸಮುದಾಯಗಳ ಬದುಕಿಗೆ ಒಳಿತಿನ ದೇವತೆಯಾಗಿರುವ ಪಟಾಲಮ್ಮನನ್ನು ಆರಾಧಿಸುವ ಮೂಲಕ ಬೆಂಗಳೂರಿಗರು ಹಬ್ಬದ ಭಕ್ತಿಯನ್ನು, ಉತ್ಸವದ ವೈಭವವನ್ನು ಕಾಯ್ದುಕೊಂಡು ಬಂದಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ೨೦೦೬ ರ ಅಕ್ಟೋಬರ್‌ನಲ್ಲಿ ಬೆಂಗಳೂರು ನಗರದಲ್ಲಿ ಜಾನಪದ ಜಾತ್ರೆಯನ್ನು ಪ್ರಾರಂಭಿಸುವುದರ ಮೂಲಕ ಬೆಂಗಳೂರಿನ ನಾಗರೀಕರಲ್ಲಿ ಹೊಸ ಸಂಚಲನವನ್ನುಂಟು ಮಾಡಿತೆಂದರೆ ತಪ್ಪಿಲ್ಲ. ಜನಪದರ ಕಲೆ, ಸಾಹಿತ್ಯ, ಸಂಸ್ಕೃತಿಯಲ್ಲಿ ನಗರದ ಜನತೆಗೆ ಪರಿಚಯಿಸುವ ಕೆಲಸದಲ್ಲಿ ಪರಿಣಾಮಕಾರಿಯಾದ ಹೆಜ್ಜೆಯನ್ನಿರಿಸಿತು.

ಯಾವುದೇ ಸಂಸ್ಕೃತಿಯಲ್ಲಿ ನಾಶ ಎಂಬುದಿಲ್ಲ. ಅದು ನಗರ ಸಂಸ್ಕೃತಿಯಾಗಿರಬಹುದು, ಗ್ರಾಮ ಸಂಸ್ಕೃತಿಯಾಗಿರಬಹುದು. ಅಲ್ಲಿರುವುದೇನಿದ್ದರು ರೂಪಾಂತರ, ಸಂಕಲನ, ವ್ಯವಕಲನ, ಪ್ರಸರಣ, ಪರಿಷ್ಕರಣಗಳು ಸಾಂಸ್ಕೃತಿಕ ಪ್ರಕ್ರಿಯೆಯಲ್ಲಿ ತನ್ನಿಂದ ತಾನೇ ಜರುಗುತ್ತಿರುತ್ತವೆ. ಅದ್ದೂರಿ ಮದುವೆಗಳು ಸರಳ ಮದುವೆಗಳಾಗಿ ಪರಿವರ್ತನೆಯಾಗುವುದು, ಮದುವೆ ಶಾಸ್ತ್ರಗಳು ಕೈ ತಪ್ಪಿದರೂ, ಮಂಗಲ ಸೂತ್ರವು ಸಾಂಸ್ಕೃತಿಕ ಘಟಕವಾಗಿ ಉಳಿದಿರುವುದು, ಗ್ರಾಮದೇವತೆಗಳ ಪೂಜೆಗಳಲ್ಲಿ ಕ್ರೂರ ಆಚರಣೆಗಳನ್ನು ಕೈಬಿಟ್ಟು ಸೌಮ್ಯ ಪದ್ಧತಿಗಳನ್ನು ಅನುಸರಿಸುತ್ತಿರುವುದು ಇತ್ಯಾದಿ. ಬದಲಾವಣೆ, ಸೇರ್ಪಡೆ, ಸ್ವೀಕರಣೆ, ಪುನರುಜ್ಜೀವನಗಳಂತಹ ಪ್ರಕ್ರಿಯೆಗಳಿಂದ ಸಂಸ್ಕೃತಿಯು ಸದಾ ಸಮಕಾಲೀನವಾದುದಾಗಿರುತ್ತದೆ. ಜಾಗತೀಕರಣವು ಸಂಸ್ಕೃತಿಯ ಮೇಲೆ ನಡೆಸುವ ದಾಳಿಯನ್ನು ಬಲವಾಗಿ ಎದುರಿಸಿ ನಿಂತು ಗೆಲ್ಲಬೇಕಾದರೆ ಜಾನಪದದ ಗುರಾಣಿ ಅತ್ಯವಶ್ಯಕ. ಜಾನಪದವನ್ನು ಕಳೆದುಕೊಂಡರೆ ಬದುಕನ್ನುಕಳೆದುಕೊಂಡಂತೆ. ಜಾನಪದದ ಮೂಲ ಲಕ್ಷಣವೆಂದರೆ ಅದು ಸಮೂಹದ ಸಂವಹನ ಕ್ರಿಯೆಗಳ ಮಧ್ಯೆ ಜೀವಂತವಾಗಿರುವುದು. ಯಾವುದೇ ಜಾನಪದ ರೂಪ ಜೀವಂತವಾಗಿರಬೇಕಾದರೆ, ಆ ಮೂಲಕ ಚಲನಶೀಲತೆಯನ್ನು ರೂಢಿಸಿಕೊಳ್ಳಬೇಕಾದರೆ ತನ್ನ ಸ್ಥಳೀಯ ಪರಿಸರದ ಅವಶ್ಯಕತೆ, ಅನಿವಾರ್ಯತೆಗಳೊಡನೆ ಮುಖಾಮುಖಿಯಾಗಬೇಕಾಗುತ್ತದೆ. ಆ ಮೂಲಕ ಆಧುನಿಕ ಕಾಲದ ಸಾಂಸ್ಕೃತಿಕ ರೂಪಾಂತರಗಳನ್ನು ನಿರಾಕರಣೆ ಮಾಡದೆ ಪರಂಪರಾಗತ ಅರಿವಿನೊಡನೆ ಅದನ್ನು ಮೇಳೈಸುವ ಕೌಶಲ ತೋರಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಾನಪದ ಕ್ರಿಯೆಯೊಂದು ತಾನು ವರ್ತಮಾನ ಕಾಲಘಟ್ಟದಲ್ಲಿಯೇ ನಿಂತು ಭೂತ, ಭವಿಷ್ಯತ್ ಕಾಲದ ರೂಪಾಂತರಗಳನ್ನು ತನ್ನ ಮೇಲೆ ಆವಾಹಿಸಿಕೊಳ್ಳಬೇಕಾಗುತ್ತದೆ. ಹಾಗೆ ತನ್ನನ್ನು ತಾನು ಕ್ರಿಯಾಶೀಲಗೊಳಿಸಿಕೊಳ್ಳುವುದು ಒಂದು

ನೆಲೆಯಾದರೆ, ಬದಲಾದ ಪರಿಸರಕ್ಕೆ ತಕ್ಕಂತೆ ಹೊರಗಿನ ಪ್ರಚೋದನೆಯಿಂದ ಬದಲಾಗುವಂತೆ ಮಾಡುವುದು ಇನ್ನೊಂದು ನೆಲೆ. ಈ ಎರಡೂ ಸಾಧ್ಯತೆಗಳ ಹಿನ್ನೆಲೆಯಲ್ಲಿ ಜಾನಪದದ ಚಲನಶೀಲ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಯತ್ನ ಮಾಡಬೇಕಾಗಿದೆ.

ಯಾವುದೇ ಜಾನಪದ ರೂಪ ಬದಲಾಗುತ್ತಿರುವ ಬದುಕಿಗೆ ಸ್ಪಂದಿಸದೆ ಹೋದರೆ ಅದು ಚೈತನ್ಯಶೀಲತೆ ಹೊಂದುವುದು, ಬೆಳೆಯುವುದು ಕಷ್ಟ. ಬೆಳವಣಿಗೆಗೆ ಮನುಷ್ಯನ ಭಾವುಕ ಕಲ್ಪನೆಗಳು, ಸಂಬಂಧಗಳು, ಸಾಂಸ್ಕೃತಿಕ ಮನೋಭಾವಗಳು, ರಾಷ್ಟೀಯತೆಯತೆಯ ಈವರೆಗಿನ ಮನೋಭಾವಗಳು ಎಷ್ಟೋ ವೇಳೆ ಅಡ್ಡಿಯಾಗುವುದು ಉಂಟು. ತನ್ನ ಮೂಲ ಜೀವಧಾತುವಿಗೆ ಧಕ್ಕೆ ಬರದಂತೆ ಅಸ್ಮಿತೆಯನ್ನು ಉಳಿಸಿಕೊಂಡು ಬದಲಾವಣೆಯ ಅಗ್ನಿದಿವ್ಯದಲ್ಲಿ ಹಾಯುವುದು ಪ್ರತೀ ಕಾಲಘಟ್ಟದಲ್ಲಿಯೂ ಒಂದು ಸವಾಲಾಗಿಯೇ ಪರಿಣಮಿಸಿದೆ. ಹೀಗಾಗಿ ಜಾನಪದದ ಚೈತನ್ಯಶೀಲತೆಯ ಬಗೆಗೆ ಹಾಗೂ ಪಾರಂಪರಿಕ ಉಳಿವಿನ ಬಗೆಗೆ ಸಹಜವಾಗಿಯೇ 'ಬದಲಾದ ಪರಿಸರದಲ್ಲಿ ಜಾನಪದ ಸೃಷ್ಟಿಯಾಗುತ್ತದೆಯೇ' ಎಂಬ ಪ್ರಶ್ನೆ ಏಳುವುದುಂಟು. ಈ ಸೃಷ್ಟಿಕ್ರಿಯೆಯ ಬದಲಾದ ಇತಿಹಾಸ, ಸಾಮಾಜಿಕ ಧೋರಣೆ, ರಾಜಕೀಯ ಶ್ರದ್ದೆಗಳಿಗೆ ಅನುಗುಣವಾಗಿ ನಡೆಯುತ್ತದೆ. ಸತತವಾಗಿ ನಡೆಯುತ್ತಿರುವ ಈ ಚಲನಶೀಲತೆಯ ಪ್ರಕ್ರಿಯೆ ಇಂದು ಜಾನದವನ್ನು ಜೀವಂತಗೊಳಿಸಿರುವುದು. ಆಶ್ಚರ್ಯ, ಭಯಗಳನ್ನು ಉಂಟುಮಾಡುವ, ವಿಸ್ಮಯವೆಂದು ಅನುಭವಿಸುವ, ಅದ್ಭುತವೆಂದು ತೋರುವ, ಅತಿಮಾನುಷವಾಗಿ ಕಾಣುವ ಕುತೂಹಲ ಕೆರಳಿಸುವ ಯಾವ ಪ್ರಸಂಗವೇ ಆದರೂ ಜನರಿಂದ ಜನರಿಗೆ ಪ್ರಸರಣಗೊಳ್ಳುತ್ತದೆ. ಹೀಗಾಗಿ ಗ್ರಾಮೀಣದಂತೆ ನಗರವಲದ ಒಳಗೂ ಒಂದು ಅಂತರ್‌ಚಲನಶೀಲತೆ (Internal Dynamic) ಯೊಂದು ನಿರಂತರ ಬದಲಾವಣೆಯನ್ನುಂಟು ಮಾಡುತ್ತಿದ್ದು ಅದನ್ನು ಸಂಸ್ಕೃತೀಕರಣವೆಂದು ಸ್ವೀಕರಿಸಲಾಗುತ್ತದೆ. "ಸಾಮಾಜಿಕ ಬದಲಾವಣೆಯು ಬೆಳವಣಿಗೆ ಮತ್ತು ಆಧುನೀಕರಣ ಎರಡನ್ನು ಒಳಗೊಂಡ ಒಟ್ಟು ಪರಿಕಲ್ಪನೆಯಾಗಿದೆ. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಸಾಮಾಜಿಕ ರಚನೆ ಮತ್ತು ಕಾರ್ಯಗಳಲ್ಲಿ ಉಂಟಾಗುವ ಬದಲಾವಣೆ ಸಾಮಾಜಿಕ ಬದಲಾವಣೆ ಎನಿಸಿಕೊಳ್ಳುತ್ತದೆ". ಹೀಗಾಗಿ ಇಲ್ಲಿ ಜಾನಪದ ದರ್ಪಣದ ಮೂಲಕ ಸಂಸ್ಕೃತೀಕರಣದ ಪ್ರಕ್ರಿಯೆಯೊಂದು ಪ್ರತಿಫಲನವಾಗುತ್ತಿರುತ್ತದೆ. ಮಾನವ ತನ್ನನ್ನು ತಾನು ಹಾಗು ತನ್ನ ಬದುಕನ್ನು ಬಗೆಗಣ್ಣಿನಿಂದ ನೋಡಿಕೊಳ್ಳಬಹುದಾದ ಭಾವನಾ ದರ್ಪಣವೇ ಸಂಸ್ಕೃತಿ. ಆತ ಇರುವಂತೆ ಅವನ ಸಂಸ್ಕೃತಿ ಇರುತ್ತದೆ. ಎಷ್ಟೇ ಬದಲಾವಣೆಯ ಪ್ರಕ್ರಿಯೆಗೆ ಒಳಪಟ್ಟರೂ ಮೂಲ ಸಂಸ್ಕೃತಿಯ ಸಾಂಸ್ಕೃತಿಕ ಲಕ್ಷಣಗಳು ಅನ್ಯ ಸಂಸ್ಕೃತಿಯವರಿಗೆ ಒಡೆದು ಕಾಣಿಸುತ್ತದೆ. ಹೀಗಾಗಿ ಸ್ಥಿತ್ಯಂತರದ ಕಾಲದಲ್ಲಿ ವಲಸೆ ಬಂದ ಸಂಸ್ಕೃತಿಯ ಮಾದರಿಗಳು ಈಗಾಗಲೇ ಇರುವ ಸಿದ್ದ ಮಾದರಿಯ ಸಂಸ್ಕೃತಿಯೊಂದಿಗೆ ವಿಲೀನವಾಗಬೇಕಾದರೆ ತನ್ನ ಕಾಲ, ದೇಶ ಪರಿಸರ ಗಡಿಗಳನ್ನು ದಾಟಿ ಮುಕ್ತ ಮನಸ್ಸಿನಿಂದ ವಸ್ತುನಿಷ್ಠ ವಿವೇಚನೆಗೆ ತನ್ನನ್ನು ತಾನು ತೊಡಗಿಸಿಕೊಂಡಿರುತ್ತದೆ ಎಂಬುದನ್ನು ಗಣನೀಯವಾಗಿ

ಪರಿಗಣಿಸಬೇಕಿರುತ್ತದೆ. ಹೀಗೆ ವಿಲೀನಗೊಂಡ ಸಾಂಸ್ಕೃತಿಕ ಕಾಲಘಟ್ಟದಲ್ಲಿ ನಾವು ಸಂಸ್ಕೃತಿಯ ಸಮಗ್ರತೆಯನ್ನು ವಿವೇಚಿಸುವಾಗ ಒಂದು ಹಗುರವಾದ ಸಾಮಾನ್ಯ ಸೂತ್ರೀಕರಣಕ್ಕೆ ಒಳಪಡಿಸಿ ವಿವೇಚಿಸುವುದು ಎಂದಿಗೂ ಸಾಧ್ಯವಿಲ್ಲ. ಎರಡೂ ಸಂಸ್ಕೃತಿಗಳ ಸಿದ್ಧ ಮಾದರಿಯನ್ನು ಸ್ಥಿತ್ಯಂತರದ ನಿಕಶಕ್ಕೆ ಹಚ್ಚಿ ಹೊಸ ಪ್ರಮೇಯವೊಂದನ್ನು ಕಟ್ಟಬೇಕಾಗಿರುತ್ತದೆ ಮತ್ತು ಹಾಗೆ ಕಟ್ಟುವ ಪ್ರಮೇಯ ಸಾಂಸ್ಕೃತಿಕ ರೂಪಿಕೆಗಳಾಗಿ ವಿನ್ಯಾಸಗೊಳ್ಳುತ್ತದೆ ಎಂಬುದು ಮರೆಯಬಾರದ ಸಂಗತಿ.

ಪ್ರಪಂಚದ ಬಹುಪಾಲು ಸಂಸ್ಕೃತಿಗಳು ಅನೇಕ ಯುಗಾಂತರಗಳನ್ನು ಹಾದು ಇಂತಹ ಒಂದು ಸಾಂಸ್ಕೃತಿಕ ನೆಯ್ಗೆಯನ್ನು ಸಿದ್ದಗೊಳಿಸಿರುವುದನ್ನು ಕಾಣಬಹುದು. ಆಧುನೀಕರಣ, ನಗರೀಕರಣ, ಕೈಗಾರಿಕೀಕರಣ ವಸಾಹತೀಕರಣದಂತಹ ರೂಪಾಂತರ ವೇಷಾಂತರಗಳನ್ನು ಹಾದು ಬಂದಿರುವುದನ್ನು ಉದಾಹರಿಸಬಹುದು. ಸಾಮಾಜಿಕ ಮಾನ್ಯತೆ ಮತ್ತು ನಿರಾಕರಣಗಳ ನಡುವೆ ತನ್ನ ಚಹರೆಗಳನ್ನು ಉಳಿಸಿಕೊಳ್ಳುತ್ತ ಗಣನೆಗೆ ಪಾತ್ರವಾಗಿದೆ. ಹೀಗಾಗಿ ಈ ಪ್ರಕ್ರಿಯೆಗೆ ಒಳಪಟ್ಟ ನಗರಗಳ ಸಂಸ್ಕೃತಿಯ ವರ್ತನೆಯು ಒಂದಿಲ್ಲೊಂದು ರೀತಿಯಲ್ಲಿ ಕಾರ್ಯಕಾರಣಾವಲಂಬಿತ ಮೌಲ್ಯ ಮತ್ತು ಸೂತ್ರದ ಮೇಲೆ ನಿಂತಿರುತ್ತದೆ. ನಗರೀಕರಣದ ಪ್ರದೇಶಗಳಲ್ಲಿ ತೀವ್ರವಾದ ಸಂಸ್ಕೃತೀಕರಣದ ಪ್ರಕ್ರಿಯೆಯು ನಡೆಯುವುದರಿಂದ ಹಲವಾರು ಆಂಶಿಕ ಸಮಾಜ ಮತ್ತು ಆಂಶಿಕ ಸಂಸ್ಕೃತಿಗಳು ಸೇರ್ಪಡೆಯಾಗಿರುತ್ತವೆ.

ಸಂಖ್ಯಾ ಟಿಪ್ಪಣಿಗಳು

೧. ಲೇಖಕರು; ದೇಜಗೌ, ಜಾನಪದ ಮಹಾ ಸಂಪುಟ ಪು.ಸಂ. ೩೫೭)

೨. ಕರ್ನಾಟಕ ಜನಪದ ಆಚರಣೆಗಳು, ಲೇ: ಡಾ. ಸ.ಚಿ. ರಮೇಶ್, ಪು.ಸಂ. ೧೦೬

೩. ಜೀಶಂಪಾ ಜಾನಪದ ಬರಹಗಳು ಲೇ. ಜೀ.ಶಂ. ಪರಮಶಿವಯ್ಯ ಪು.ಸಂ: ೦೭

೪. ಜೀಶಂಪ ಜನಪದ ಬರಹುಗಳು ಲೇ: ಜೀ.ಶಂ ಪರಮಶಿವಯ್ಯ, ಪು.ಸಂ: ೩೬೯

೫. ಜಾಗತೀಕರಣ ಮತ್ತು ಜಾನಪದ, ಲೇ: ಡಾ॥ ಜಿ.ಆರ್. ತಿಪ್ಪೇಸ್ವಾಮಿ, ಪು.ಸಂ. ೧೦೪

೬. ಬೆಂಗಳೂರು ಜಾನಪದ, ಡಾ॥ ಚಕ್ಕೆರೆ ಶಿವಶಂಕರ್, ಪು.ಸಂ: ೧೯

ಅಧ್ಯಾಯ : ೩

ಬೆಂಗಳೂರು ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು

ಅಧ್ಯಾಯ : ಮೂರು

ಬೆಂಗಳೂರು ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು

೧. ಬೆಂಗಳೂರು- ಸ್ಥಳನಾಮ ನಿಷ್ಪತ್ತಿ ಹಾಗೂ ಪ್ರಾಚೀನತೆ :

ಬೆಂಗಳೂರು ಸಾವಿರಾರು ವರ್ಷಗಳಷ್ಟು ಪುರಾತನವಾದ ಊರು. ಈ ಊರಿನ ಪ್ರಾಚೀನತೆಯನ್ನು ವಿವೇಚಿಸುವಾಗ ಅನಿವಾರ್ಯವಾಗಿ ಈ ಪ್ರದೇಶದಲ್ಲಿನ ಜನವಸತಿಯ ಪ್ರಾಚೀನತೆಯನ್ನು ಗಮನಿಸಬೇಕಾಗುತ್ತದೆ. ಈ ಪ್ರದೇಶದಲ್ಲಿ ಕ್ರಿ. ಪೂ. ಹತ್ತು ಸಾವಿರ ವರ್ಷಗಳ ಕಾಲಘಟ್ಟದಿಂದ ಅಂದರೆ ಹನ್ನೆರಡು ಸಾವಿರ ವರ್ಷಗಳಷ್ಟು ಪ್ರಾಚೀನ ಕಾಲದಿಂದಲೂ ಜನವಸತಿಯು ಅಸ್ತಿತ್ವದಲ್ಲಿದ್ದುದಕ್ಕೆ ಆಧಾರಗಳಿವೆ.

ಸೂಕ್ಷ್ಮ ಶಿಲಾಯುಗಕ್ಕೆ (ಮೈಕ್ರೋಲಿಥಿಕ್ ಏಜ್)ಗೆ ಸೇರಿದ ಬೆಣಚು ಕಲ್ಲಿನ (ಕ್ವಾರ್ಟ್ಜ್) ಹಲವಾರು ಆಯುಧಗಳು ಬೆಂಗಳೂರಿನ ರೇಸ್ ಕೋರ್ಸ್ ಬಳಿ ೧೮೯೬ರಲ್ಲಿ ಪತ್ತೆಯಾದವು. ಜಾಲಹಳ್ಳಿಯಲ್ಲಿ ೧೯೩೮ರಲ್ಲಿ, ಹೆಚ್.ಎ.ಎಲ್ ಫ್ಯಾಕ್ಟರಿಯ ಬಳಿ ೧೯೪೫ರಲ್ಲಿ, ನಂತರ ಚೌಡಸಂದ್ರದಲ್ಲಿ ಪತ್ತೆಯಾದವು. ಈ ಪ್ರದೇಶದಲ್ಲಿ ಕ್ರಿ.ಪೂ. ೧೦ ಸಾವಿರ ವರ್ಷಗಳಷ್ಟು ಹಿಂದಿನ ಕಾಲಘಟ್ಟಕ್ಕೆ ಸೇರಿದ ಶಿಲಾಯುಗದ ಜನವಸತಿಯು ಇದ್ದುದು ಇದರಿಂದ ತಿಳಿದು ಬರುತ್ತದೆ. ನಂತರ ಕ್ರಿ.ಪೂ. ಎರಡು ಸಾವಿರದ ಐದುನೂರು ಅಂದರೆ, ೪೫೦೦ ವರ್ಷಗಳಷ್ಟು ಪ್ರಾಚೀನವಾದ ನವ ಶಿಲಾಯುಗಕ್ಕೆ (ನಿಯೋಲಿಥಿಕ್ ಏಜ್) ಸೇರಿದ ಕಲ್ಲಿನ ಕೊಡಲಿಗಳು ಬೆಂಗಳೂರು ನಗರಕ್ಕೆ ಅಂಟಿಕೊಂಡಂತಿರುವ ಕೆಂಗೇರಿಯಲ್ಲಿ, ಬನ್ನೇರುಘಟ್ಟ ಮುಂತಾದ ಸ್ಥಳಗಳಲ್ಲೂ ಇದ್ದುದರಿಂದ ಈ ಪ್ರದೇಶದಲ್ಲಿ ನವಶಿಲಾಯುಗದ ಜನರೂ ವಾಸಿಸುತ್ತಿದ್ದರೆಂದು ತಿಳಿದು ಬರುತ್ತದೆ.

ಕ್ರಿ. ಪೂ ೧೨೦೦ರ ಕಾಲಘಟ್ಟಕ್ಕೆ ಅಂದರೆ ಮೂರು ಸಾವಿರದ ಇನ್ನೂರು ವರ್ಷಗಳಷ್ಟು ಕಾಲಕ್ಕೆ ಸೇರಿದ್ದ ಬೃಹತ್ ಶಿಲಾಯುಗ ಅಥವಾ ಕಬ್ಬಿಣ ಯುಗಕ್ಕೆ ಸೇರಿದ್ದ ಬೃಹತ್ ಶಿಲಾ

ಸಮಾಧಿಗಳು ಬೆಂಗಳೂರಿನ ಜಡಿಗೇನಹಳ್ಳಿ, ಮಾಗೊಂಡನ ಹಳ್ಳಿ, ಬೆಳ್ಳಂದೂರು, ಕೋರಮಂಗಲ, ಬನ್ನೇರುಘಟ್ಟ, ಲಿಂಗರಾಜಪುರ ಹತ್ತಿರವಿರುವ ಕಣ್ಣೂರು, ಕೆಂಗೇರಿ ಹತ್ತಿರದ ಚಿನ್ನ ಕುರ್ಚಿ ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿದೆ.

ಬೆಂಗಳೂರಿನ ಯಶವಂತಪುರ ಹಾಗೂ ಎಚ್.ಎ.ಎಲ್ ಕಾರ್ಖಾನೆಯ ಹತ್ತಿರ ರೋಮನ್ ದೊರೆಗಳಾದ ಅಗಸ್ಟಸ್, ಟೈಬೇರಿಯಸ್, ಕಾಲಿಗುಲ ಮೊದಲಾದವರ ಬೆಳ್ಳಿ ನಾಣ್ಯಗಳು ಪತ್ತೆಯಾಗಿವೆ. ಈ ನಾಣ್ಯಗಳು ಕ್ರಿ.ಪೂ ೨೧ರಿಂದ ಕ್ರಿ.ಶ. ೫೧ರವರೆಗೆ ಮುದ್ರಿತವಾದ ನಾಣ್ಯಗಳಾಗಿದ್ದರಿಂದ ಕ್ರಿ.ಪೂ. ೧ನೆಯ ಶತಮಾನದ ಕಾಲಘಟ್ಟದಲ್ಲಿ ಅಂದಿನ ಬೆಂಗಳೂರಿನ ಪ್ರದೇಶದ ಜನರು ರೋಮನ್ನರೊಂದಿಗೆ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದರೆಂದು ತಿಳಿದುಬರುತ್ತದೆ.

ಕ್ರಿ.ಶ೨-೩ನೆಯ ಶತಮಾನಕ್ಕೆ ಸೇರಿದ ಶಾತವಾಹನರ ಕಾಲದ ಬೌದ್ದ ಚೈತ್ಯಾಲಯವೊಂದರ ಅವಶೇಷಗಳು ಹಾಗೂ ಮಣ್ಣಿನ ಮುದ್ರೆಯ ಮೇಲೆ ಬರಹವನ್ನು ಹೊಂದಿರುವ ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯ ಹರಕೆಯ ಸ್ತೂಪಗಳು, ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಘಟ್ಟದಲ್ಲಿ ಪತ್ತೆಯಾಗಿವೆ. ಈ ಹರಕೆಯ ಸ್ತೂಪಗಳ ಮೇಲೆ " ಯೇ ಧಮಾ ಹೇತು ಪ್ರಭವಾ ಹೇತು ತಥಾಗತೋ ಸಮಣೋ" ಎಂಬ ಬರಹವಿದೆ. ಈ ಎಲ್ಲ ಆಧಾರಗಳಿಂದ ಕ್ರಿ. ಪೂ ೧೦,೦೦೦ ವರ್ಷಗಳ ಅಂದರೆ ಸುಮಾರು ೧೨,೦೦೦ ವರ್ಷಗಳಷ್ಟು ಪ್ರಾಚೀನ ಕಾಲದಿಂದಲೂ ನಿರಂತರವಾಗಿ ಈ ಪ್ರದೇಶದಲ್ಲಿ ಜನವಸತಿ ಇತ್ತೆಂದು ಹೇಳಬಹುದು.

ಬೆಂಗಳೂರು ಎಂಬ ಊರು ಕ್ರಿ.ಶ. ೮೯೦ರ ಕಾಲಘಟ್ಟಕ್ಕಾಗಲೇ ಅಸ್ತಿತ್ವದಲ್ಲಿತ್ತು ಎಂಬ ವಿಷಯದಲ್ಲಿ ಯಾರ ಭಿನ್ನಾಭಿಪ್ರಾಯವೂ ಇಲ್ಲ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಶಾಸನದ ಆಧಾರದಿಂದ ಬೆಂಗಳೂರಿನ ಪ್ರಾಚೀನತೆಯು ಖಚಿತವಾಗಿ ತಿಳಿದುಬಂದಿದೆ. ಆದರೆ ಬೆಂಗಳೂರಿನ ಸ್ಥಳನಾಮ ನಿಷ್ಪತ್ತಿಯ ಬಗೆಗೆ ಹಲವಾರು ಬಗೆಯ ಅಭಿಪ್ರಾಯಗಳಿವೆ. ಬೆಂದಕಾಳೂರು ಬೆಂಗಳೂರು ಆಯಿತೆಂದು ಜನಪ್ರಿಯ ನಿಷ್ಪತ್ತಿಯಾಗಿದೆ. ಬೆಂದಕಾಡೂರು, ಬೆಂದಕಾಡೂರು, ಬೆಂಗಾಡೂರು ಆಗಿ ನಂತರ ಬೆಂಗಳೂರು ಆಯಿತೆಂದು ಕೆಲವರ ವಾದ. ಬೆಂಗಾವಲಿನ ಆಳಿಗೊಸ್ಕರ ಗಂಗರಸರು ಕಟ್ಟಿಸಿದ ಊರು ಬೆಂಗಾವಲೂರು ಕ್ರಮೇಣ ಬೆಂಗಳೂರು ಆಯಿತೆಂದು ಪ್ರೊ. ರಾಜೇಗೌಡ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ಅಭಿಪ್ರಾಯಗಳಿಗೆ ಯಾವುದೇ ಸಮರ್ಥ ಆಧಾರಗಳಿಲ್ಲ. ಪ್ರೊ. ಬಿ.ಜಿ.ಎಲ್ ಸ್ವಾಮಿ ಅವರು "ಬೆಂಗ"ದ ತಮಿಳು ರೂಪ "ವೆಂಗ" ಅದರಿಂದಲೇ "ವೆಂಗಿ" "ವೆಂಗಳ" ಎಂಬ ಪ್ರದೇಶ ನಾಮ ಬಂದಿರಬೇಕು. ಬೆಂಗಳೂರು ಎಂದರೆ ವೆಂಕಟರಮಣನಿಗೆ ಸಂಬಂಧಿಸಿ ಈ ಹೆಸರು ಬಂದಿರಬಹುದೇ ಎಂದು ತಮ್ಮ ಒಂದು ಲೇಖನದಲ್ಲಿ ಸಂದೇಹ ವ್ಯಕ್ತ ಪಡಿಸಿದ್ದರು. ಆದರೆ ಡಾ. ಸೂರ್ಯನಾಥ ಕಾಮತ್ ಅವರು ಕ್ರಿ.ಶ. ೯೦೦ರ ಬೇಗೂರು ಶಾಸನದಲ್ಲಿ ಬೆಂಗುಳೂರು (ಬೆಂಗಳೂರು) ಅಲ್ಲ ಎಂದು ಉಲ್ಲೇಖಿತವಾದ ನಂತರ ಎಲ್ಲಿಯೂ ವೆಂಗಳೂರು ಎಂಬ ರೂಪ ದಾಖಲೆಗಳಲ್ಲಿ ಬಂದಿಲ್ಲ ಮತ್ತು ಕ್ರಿ.ಶ. ೯೦೦ರ

ಸುಮಾರಿಗೆ ವೆಂಕಟರಮಣಪುರ ಈಗಿನಷ್ಟು ವ್ಯಾಪಕತೆ ಪಡೆದಿರಲೂ ಇಲ್ಲ. ಬೆಂಗ (ರಕ್ತ ಹೊನ್ನೆ ಮರ) ಎಂಬ ಮರದಿಂದ ಈ ಹೆಸರು ಬಂದಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧] ಆದರೆ ಅವರ ಈ ಅಭಿಪ್ರಾಯವನ್ನು ಇತಿಹಾಸದ ಸಂಶೋಧಕರು ಒಪ್ಪುವುದಿಲ್ಲ. ತೆಂಗಿನ ಮರದ ಮೂಲ ಹೆಸರೇ ತೆಂಗು ಎಂದು, ಬೆಂಗದ ಮರವನ್ನು ಬೆಂಗೆ ಮರ ಎಂದು ಕರೆಯುತ್ತಾರೆ. ಬೆಂಗೆಯನ್ನು ಯಾರೂ ಬೆಂಗು ಮರ ಎಂದು ಕರೆಯುವುದಿಲ್ಲ. ಬೆಂಗಳೂರಿನ ಪರಿಸರದಲ್ಲಿ ಬೆಂಗೆಮರ(ರಕ್ತ ಹೊನ್ನೆ) ಇಲ್ಲವೇ ಇಲ್ಲ ಅನಿಸುವಷ್ಟು ತೀರಾ ಅಪರೂಪ. ಆದರೆ ತಿರುಮಲ ತಿರುಪತಿ ಪ್ರದೇಶದಲ್ಲಿ ಸಂಪೂರ್ಣವಾಗಿ ಬೆಂಗೆ ಮರಗಳೇ ತುಂಬಿವೆ. ತಿರುಮಲೆಯ ವೆಂಕಟರಮಣನ ಮೂಲ ವಿಗ್ರಹವೂ ಸಹಾ ಬೆಂಗೆ ಮರದ್ದು (ರಕ್ತ ಚಂದನ ಅಥವಾ ಹೊನ್ನೆ ಮರದ್ದು) ಎನ್ನುವ ಅಂಶ ಗಮನಾರ್ಹ. ಈ ಪ್ರದೇಶದಲ್ಲಿ ಬೆಂಗದ ಮರಗಳು ಅಧಿಕವಾಗಿದ್ದರಿಂದಲೇ ಅಥವಾ ಆ ದೈವದ ಆ ವಾಸಸ್ಥಾನ ಅಮರ ಎಂಬ ನಂಬಿಕೆ ಇದ್ದದರಿಂದ ವೆಂಗಡನಾಥ ಅಥವಾ ವೆಂಗಳನಾಥ ಎಂಬ ಹೆಸರು ಆ ದೈವಕ್ಕೆ ಆರೋಪಿತವಾಗಿರಬೇಕು. ಬೆಂಗಳೂರಿನ ಮಡಿವಾಳದ ಸೋಮೇಶ್ವರ ದೇವಸ್ಥಾನದ ಅಧಿಷ್ಠಾನದಲ್ಲಿರುವ ಕ್ರಿ.ಶ. ೧೨೪೭ ರ ಒಂದು ತಮಿಳು ಶಾಸನದಲ್ಲಿ ಬೆಂಗಳೂರು ಎಂಬ ಉಲ್ಲೇಖ ದೊರೆಯುತ್ತದೆ. ಕ್ರಿ.ಶ ೯೦೦ ಕ್ಕಿಂತ ಮೊದಲೇ ಬೆಂಗಳೂರಿನ ಪ್ರದೇಶದಲ್ಲಿ ವೆಂಕಟರಮಣನ ಪರಿಚಯವೂ ಇತ್ತು, ವಿಗ್ರಹವೂ ಇತ್ತು. ಭಕ್ತರೂ ಇದ್ದರು ಎಂಬುದಕ್ಕೆ ಆಧಾರಗಳಿವೆ. ಕ್ರಿ.ಶ. ೮೯೦ರ ಬೇಗೂರು ಶಾಸನದಲ್ಲಿ "ಬೆಂಗಳೂರು" ಎಂಬ ರೂಪವಿದ್ದು ಕ್ರಿ.ಶ ೧೨೪೭ರ ಮಡಿವಾಳ ಶಾಸನದಲ್ಲಿ ವೆಂಗಳೂರು ಎಂಬ ರೂಪ ಕಂಡು ಬರುವುದಕ್ಕೂ ಕಾರಣಗಳಿವೆ. ತಮಿಳು ಭಾಷಿಕರು 'ಬ' ಕಾರವನ್ನು 'ವ' ಕಾರವಾಗಿ ಹೇಳುವುದು ತೀರಾ ಸಾಮಾನ್ಯ. ಬೇಗೂರಿನ ಶಾಸನಗಳಲ್ಲಿಯೇ ಇದಕ್ಕೆ ಪೂರಕ ಉದಾಹರಣೆ ದೊರೆಯುತ್ತವೆ. ಬೇಗೂರಿನ ಪ್ರಾಚೀನ ಶಾಸನಗಳಲ್ಲಿ ಆ ಊರಿನ ಹೆಸರು ಬೆಂಪೂರು ಎಂಬ ಉಲ್ಲೇಖ ದೊರೆಯುತ್ತದೆ. ಅನಂತರದ ಕಾಲಘಟ್ಟದ ತಮಿಳು ಶಾಸನಗಳಲ್ಲಿ 'ವೆಪ್ಪೂರು' ಎಂಬ ರೂಪ ಕಂಡುಬರುತ್ತದೆ. ತದನಂತರದ ಕನ್ನಡ ಶಾಸನಗಳಲ್ಲಿ ಬೇಗೂರು ಎಂಬ ರೂಪ ಕಂಡು ಬರುತ್ತದೆ.

ಈ ಎಲ್ಲಾ ಆಧಾರಗಳಿಂದ ಬೆಂಗಳೂರಿನ ಮೂಲ ಹೆಸರು ವೆಂಗಳನಾಥನ ಹೆಸರಿನಿಂದಲೇ ವೆಂಗಳೂರು ಎಂದು ರೂಪುಗೊಂಡು ತದನಂತರ ಬೆಂಗಳೂರು ಆಗಿದ್ದಿರಬಹುದೆಂದು ಹೇಳಬಹುದು. ವೆಂಗಳನನಾಥ ಎಂದರೆ ಮಂಗಳಕರ, ಕಲ್ಯಾಣಕರ, ಶುಭಕರ ಎಂಬ ಅರ್ಥಗಳನ್ನು ಜನಸಾಮಮಾನ್ಯರು ಹೇಳುತ್ತಾರೆ. ಆದ್ದರಿಂದಲೇ ಬೆಂಗಳೂರಿಗೆ ಕಲ್ಯಾಣನಗರ ಎಂಬ ಮತ್ತೊಂದು ಹೆಸರು ಇರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಪ್ರಾಚೀನ ಬೆಂಗಳೂರು ಎಲ್ಲಿತ್ತು ಎಂಬ ಬಗ್ಗೆ ಹಲವು ಮಂದಿ ವಿದ್ವಾಂಸರು ಹಲವಾರು ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. 'ಸಿ.ಹಯವದನರಾವ್' ಅವರು ಮೈಸೂರು

ಗೆಜೆಟಿಯರ್‌ನಲ್ಲಿ "old Bangalore situated to the north of kodigehhalli" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ ಬೇಗೂರು ಶಾಸನೋಕ್ತ ಹಳೆಯ ಬೆಂಗಳೂರು ಕೊಡಿಗೆಹಳ್ಳಿಯಿಂದ ಉತ್ತರಕ್ಕೆ ಇತ್ತು ಎಂದು 'ಹಯವದನರಾಯರ' ಅಭಿಪ್ರಾಯ.[೨]

ಡಾ. ಜೆ.ವಿ. ಗಾಯತ್ರಿ ಅವರು ತಮ್ಮ ಪಿಎಚ್.ಡಿ. ಮಹಾಪ್ರಬಂಧದಲ್ಲಿ "The old Bangaloru was situated to the south of yelahanka" ಅಂದರೆ ಹಳೆಯ ಬೆಂಗಳೂರು ಗ್ರಾಮವು ಯಲಹಂಕದ ದಕ್ಷಿಣ ದಿಕ್ಕಿನಲ್ಲಿತ್ತು ಎಂಬುದು ಅವರ ಅಭಿಪ್ರಾಯ. ಆದರೆ ಕೊಡಿಗೆ ಹಳ್ಳಿಯ ಸಮೀಪದಲ್ಲಿ, ಕೊಡಿಗೆ ಹಳ್ಳಿಯಿಂದ ಉತ್ತರಕ್ಕೆ ಅಥವಾ ಯಲಹಂಕದಿಂದ ದಕ್ಷಿಣಕ್ಕೆ ಹಳೆಯ ಬೆಂಗಳೂರು ಗ್ರಾಮ ಇದ್ದುದಕ್ಕೆ ಯಾವ ಆಧಾರಗಳೂ ಇಲ್ಲ. ಕ್ರಿ.ಶ. ೧೨೭೪ ರ ಮಡಿವಾಳ ಶಾಸನೋಕ್ತ ವೆಂಗಳೂರು ಇಂದಿನ ಮಡಿವಾಳ ಪ್ರದೇಶದಲ್ಲಿಯೇ ಇತ್ತು. ಆ ಬೆಂಗಳೂರು ಕ್ರಿ.ಶ. ೧೪೦೨ರ ವೇಳೆಗೆ ದೊಡ್ಡ ಊರಾಗಿ ಬೆಳೆದು ಇಂದಿನ ತಮಿಳುನಾಡಿನ ಡೆಂಕಣಿ ಕೋಟೆ ತಾಲ್ಲೂಕಿನ ಗುಮ್ಮಳಾಪುರವೂ ಸೇರಿದಂತೆ ದೊಡ್ಡ ಪ್ರದೇಶದ ಆಡಳಿತ ಕೇಂದ್ರವಾಗಿತ್ತು. ಹಾಗೆ ವಿಸ್ತಾರವಾಗಿ ಬೆಳೆದಿದ್ದ ದೊಡ್ಡ ಊರನ್ನು ಯಲಹಂಕ ನಾಡಪ್ರಭು ಕೆಂಪೆಗೌಡನ ತಂದೆ ಕೆಂಪನಂಜೇಗೌಡನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅನಂತರ ವಿಸ್ತಾರವಾಗಿ ಬೆಳೆಸಿ ದೊಡ್ಡ ಪಟ್ಟಣವಾಗಿಸಿದನು ಎಂದು ಹೇಳಬಹುದು.

೩.೨ : ಕೆಂಪೇಗೌಡರ ಬಗೆಗೆ ಕಂಡು ಬರುವ ಜನಪದ ಸಾಹಿತ್ಯದ ಕಥನ ರೂಪಗಳು :

೧. ಜನಪದ ಗದ್ಯ ಕತೆಗಳು

೨. ಜನಪದ ಕಾವ್ಯ ರೂಪಗಳು

ಗದ್ಯರೂಪದ ಸಾಹಿತ್ಯದಲ್ಲಿ– ಗದ್ಯಕಥಾನಕತೆಗಳು, ಐತಿಹ್ಯಗಳು, ಹಾಗೂ ಇತರೆ ಸಾಮಾನ್ಯ ಕತೆಗಳು, ಗಾದೆ ಇತ್ಯಾದಿಗಳು,

ಪದ್ಯರೂಪದ ಸಾಹಿತ್ಯದಲ್ಲಿ – ಜನಪದ ಕಥನ ಕಾವ್ಯಗಳು, ಬಿಡಿ ಗೀತೆಗಳು – ಸೇರುತ್ತವೆ.

ಯಲಹಂಕ ನಾಡಪ್ರಭುಗಳ ಬಗೆಗೆ ಇರುವ ಮೌಖಿಕ ಸಾಹಿತ್ಯದಲ್ಲಿನ ಒಂದು ಗಮನಾರ್ಹ ಅಂಶವೆಂದರೆ– ಮಾಗಡಿ ಕೆಂಪೇಗೌಡನಿಗೆ ಸಂಬಂಧಿಸಿದಂತೆ ಸಿಗುವಷ್ಟು ವಿವಿಧ ಬಗೆಯ ಸಾಹಿತ್ಯ ಬೆಂಗಳೂರು ಕೆಂಪೇಗೌಡನ ಬಗೆಗಾಗಲೀ, ಇತರ ಪ್ರಭುಗಳ ಬಗೆಗಾಗಲೀ ದಾಖಲಾದಂತಿಲ್ಲ. ಗಮನಿಸಬೇಕಾದ ಇನೂ ಒಂದು ಅಂಶವೆಂದರೆ, ಮಾಗಡಿ ಕೆಂಪೇಗೌಡ ಹಾಗೂ ಬೆಂಗಳೂರು ಕೆಂಪೇಗೌಡರ ಕತೆಗಳಲ್ಲಿನ ಕೆಲವು ಆಶಯಗಳು ಪರಸ್ಪರ ಒಂದೇ ಆದಂತಿವೆ. ಅಂದರೆ, ಒಂದರ ಪ್ರಭಾವದಿಂದ ಇನ್ನೊಂದೂ ಪ್ರಭಾವಿತವಾದಂತಿವೆ. ಉದಾ: ಬೆಂಗಳೂರು ಕೆಂಪೇಗೌಡ ಕಟ್ಟಿಸಿದ ಕೋಟೆಗೆ ಆತನ ಸೊಸೆ ಬಲಿಯಾದಳೆಂಬ ಪ್ರಸಿದ್ದ ಕತೆ ಇರುವಂತೆ, ಮಾಗಡಿ ಕೆಂಪೇಗೌಡ ಕಟ್ಟಿಸಿದ ದೊಡ್ಡ ಕೆರೆಯ ಏರಿ ನಿಲ್ಲಲು ಆತನ ಸೊಸೆ ಬಲಿಯಾದಳೆಂಬ ಐತಿಹ್ಯ ಕತೆಯೂ

ಇದೆ. ಮಹತ್ತರವಾದುದು ಏನೋ ಒಂದು ಆಗುವಾಗ, ಮಹತ್ವದ ಜೀವವೊಂದು ಬಲಿಯಾಗಲೇಬೇಕೆಂಬ ಆಶಯವೊಂದು ಜನಪದರಲ್ಲಿ ಎಂದಿನಿಂದಲೂ ವ್ಯಾಪಕವಾಗಿ ಬೆಳೆದು ಬಂದಿರುವಂತೆ ಕಾಣುತ್ತದೆ. ಆದ್ದರಿಂದ, ನಾಡಿನ ವಿವಿಧ ಮೂಲೆಗಳಲ್ಲಿನ ಕೆರೆ, ಕೋಟೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಇಂತಹ ಕತೆಗಳು ಕೇಳಿಬರುವುದು ಸಾಮಾನ್ಯವಾಗಿದೆ. ವಿಶೇಷವೆಂದರೆ, ಕೆರೆ, ಕೋಟೆಯಂತಹವು ಬಹುಜನರ ಹಿತಕ್ಕಾಗಿ ನಿರ್ಮಾಣ ಆಗುವಂತಹವು. ಅವುಗಳಿಗೆ ಇಂಥ ನರಬಲಿಯ ಕತೆಗಳು ಇವೆ. ಆದರೆ, ರಾಜರ ವೈಯಕ್ತಿಕ ಬದುಕಿಗೆ ಇರುವ ದೊಡ್ಡ ಅರಮನೆ, ದೇವಾಲಯದಂತ ಧಾರ್ಮಿಕ ನಿರ್ಮಾಣಗಳಿಗೆ ಸಂಬಂಧಿಸಿದ ಬಲಿಯ ಕತೆಗಳು ಇದ್ದಂತಿಲ್ಲ ಅಥವಾ ದಾಖಲಾಗಿಲ್ಲ. ದಾಖಲಿಸಬೇಕಾದ ಇನ್ನೂ ಒಂದು ಅಂಶವೆಂದರೆ ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ನಿರ್ಮಾಣಣವಾಗುವ ದೊಡ್ಡ ಕಟ್ಟಡಗಳ ವಿಘ್ನ ನಿವಾರಣೆಗಾಗಿ ಕೂಲಿಯಾಳುಗಳ ನರಬಲಿ ಉದ್ದೇಶಪೂರ್ವಕವಾಗಿಯೋ, ಆಕಸ್ಮಿಕವಾಗಿಯೋ ಆಗುವ ಪರಿಪಾಠ ಈಗಲೂ ಮುಂದುವರೆದಿದೆ ಆದರೆ, ಈ ಕಾಲಕ್ಕೆ ಅದು ನಿಷಿದ್ದವಾದ್ದರಿಂದ, ಅದಕ್ಕೆ ಹೆಚ್ಚು ಪ್ರಚಾರ ಕೊಡದೆ ಮುಚ್ಚಿಹಾಕಲಾಗುತ್ತದೆ ಎಂಬ ಪಿಸುಮಾತುಗಳು ಆಗೀಗ ಕೇಳಿಬರುತ್ತಿರುತ್ತವೆ.

ಕೆಂಪೇಗೌಡರಿಗೆ ಸಂಬಂಧಿಸಿದ ಕಾವ್ಯಗಳಲ್ಲಿ ನಿರೂಪಿತವಾದ ಕಥನಾಂಶಗಳಿಗೂ, ಗದ್ಯ ಕತೆಗಳಲ್ಲಿ ನಿರೂಪಿತವಾದ ಸಂಗತಿಗಳಿಗೂ ಇರುವ ಹೋಲಿಕೆ–ವ್ಯತ್ಯಾಸಗಳೇನು? ಎಂಬ ಒಂದು ಕುತೂಹಲದ ಪ್ರಶ್ನೆ ಮೂಡುವುದು ಸಹಜ. ಆ ದೃಷ್ಟಿಯಿಂದ ಪರಿಶೀಲಿಸಿದಾಗ ಕಂಡುಬರುವ ಮುಖ್ಯಾಂಶವೆಂದರೆ,

ಕೆಂಪೇಗೌಡನ ಬಗೆಗಿನ ಕಾವ್ಯಗಳು ಆತನ ಜೀವನದ ಸಂಕಷ್ಟಗಳು, ದೊರೆಯಾಗಿ ಏಳಿಗೆ ಹೊಂದಿದ್ದು, ಇತ್ಯಾದಿ ಅವನ ಬದುಕಿಗೆ ನೇರವಾಗಿ ಸಂಬಂಧಿಸಿದ ವಿವರ ನಿರೂಪಿಸಿದರೆ, ಐತಿಹ್ಯ ಮತ್ತಿತರ ಬಿಡಿ ಕತೆಗಳು ಆತನನ ಉದಾರತೆ, ಜನರ ಸುಖ ನೆಮ್ಮದಿಗಾಗಿ ಆತ ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳು, ಅವನ ಜನಾನುರಾಗ, ಆತನ ನಡತೆಯ ಕೆಲವೊಂದು ದೋಷಗಳು, ಇತ್ಯಾದಿಗಳನ್ನು ದಾಖಲಿಸುತ್ತವೆ. ಬಿಡಿಗೀತೆಗಳಂತೂ ಬಹುಮಟ್ಟಿಗೆ ಆತನ ಗುಣ–ಸಾಹಸಗಳನ್ನು ಕೊಂಡಾಡುತ್ತವೆ.

ನಮ್ಮಲ್ಲಿನ ಶಿವಕಥೆಗಳಲ್ಲಿ ಕಥಾನಾಯಕರು ಯಾವುದೋ ಶಾಪದಿಂದಾಗಿ ಕೈಲಾಸದಿಂದ ಇಳಿದು ಬಂದು, ಭೂಮಿಯಲ್ಲಿ ಹುಟ್ಟಿದವರಾದರೆ, ಕೆಲವೊಂದು ದೊರೆಗಳು ತಮ್ಮ ವಂಶ ಮೂಲವನ್ನು ಮರೆಸಿ, ಅಸಾಮಾನ್ಯ ಮೂಲಗಳಿಂದ ಬಂದವರೆಂಬಂತೆ ಕತೆ ಬರೆಸಿ ವೈಭವೀಕರಿಸಿಕೊಂಡಿರುವುದುಂಟು. ಆದರೆ, ಕೆಂಪೇಗೌಡನ ಕತೆ ಅವೆಲ್ಲಕ್ಕೂ ವಿಭಿನ್ನ ಚಾರಿತ್ರಿಕ ಸಂಗತಿಗಳನ್ನು ಗಮನಿಸಿ ಹೇಳುವುದಾದರೆ ಮಾಗಡಿ ಕೆಂಪೇಗೌಡನ ತಲೆಮಾರಿಗಾಗಲೇ, ಆ ವಂಶದವರು ಪಾಳೇಯಗಾರರಾಗಿ ಒಳ್ಳೇ ಬದುಕು ನಡೆಸುವಂತಿದ್ದರೂ, ಜನಪದ ಕಾವ್ಯ ಕತೆಗಳಲ್ಲಿ ಮಾತ್ರ ಆತ ಅತ್ಯಂತ ಬಡತನದಲ್ಲಿ, ಬ್ರಾಹ್ಮಣರ ಮನೆಯ ಜೀತದಾಳಾಗಿ ಕಡುಕಷ್ಟದಿಂದ

ಬದುಕಿ, ತನ್ನ ಒಳ್ಳೆಯುತನಕ್ಕೆ ಪ್ರಾಪ್ತವಾದ ಅದೃಷ್ಟ ಬಲದಿಂದ ದೊರೆಯಾಗಿ, ವೈಭವಶಾಲಿಯಾದವನೆಂಬಂತೆ ಚಿತ್ರಿತನನಾಗಿದ್ದಾನೆ. ಸಾಮಾನ್ಯ ಕೃಷಿಕ ಬದುಕಿನನಿಂದ ಕಷ್ಟಪಟ್ಟು ಮೇಲೆ ಬಂದು, ತಮ್ಮ ಬಲ ಹಾಗೂ ಸಾಂಧರ್ಭಿಕ ಅವಕಾಶಗಳಿಂದ ದೊರೆಗಳಾದವರೆಂಬಂತೆಯೇ ಅವತಿ ನಾಡ ಪ್ರಭುಗಳೂ ಚಿತ್ರಿತರಾಗಿದ್ದಾರೆ.

ಚಾರಿತ್ರಿಕ ದಾಖಲೆಗಳನ್ನು ಆಧರಿಸಿ ಇತಿಹಾಸಕಾರರು ಕಟ್ಟಿಕೊಡುವ ಕೆಂಪೇಗೌಡರ ವ್ಯಕ್ತಿಚಿತ್ರಕ್ಕೂ, ಜನಪದರು ಕಲ್ಪಿಸಿಕೊಂಡಿರುವ ಕೆಂಪೇಗೌಡರ ಬದುಕಿಗೂ ಅಜಗಜಾಂತರ ವ್ಯತ್ಯಾಸಗಳೇ ಇವೆ. ಅದನ್ನು ಹೊರತುಪಡಿಸಿ, ಕೇವಲ ಕಥೆಯಾಗಿ ಮಾತ್ರ ನೋಡಿದರೆ, ಈ ಕತೆಗಳು ಬಹು ಆಕರ್ಷಕವಾಗಿ ರೂಪುಗೊಂಡಿರುವುದಂತೂ ನಿಜ. ಮಾಗಡಿ ಕೆಂಪೇಗೌಡನ ಕಥಾನಕವನ್ನೇ ನೋಡಿದರೂ ಆತನದು ಅದೆಷ್ಟು ವರ್ಣರಂಜಿತ ವ್ಯಕ್ತಿತ್ವ ಎಂಬುದು ವೇದ್ಯವಾಗುತ್ತದೆ. ಹಾಗೆಯೇ ಕತೆಗಾರರ ಕಥನ ಕೌಶಲ ಸಹ.

ಇನ್ನು, ಬೆಂಗಳೂರು ಕೆಂಪೇಗೌಡ ಕಟ್ಟಿಸಿದ ಕೋಟೆಗೆ ಆತನ ಸೊಸೆ ಲಕ್ಷ್ಮಿಯು ಬಲಿದಾನವಾದ ಐತಿಹ್ಯದ ಬಗೆಗೂ ವಿದ್ವಾಂಸರಲ್ಲಿ ಒಮ್ಮತವಿದ್ದಂತಿಲ್ಲ. ಈತ ತನ್ನ ಕುಲದೇವತೆ ಕೆಂಪಮ್ಮನ ಹೆಸರಲ್ಲಿ ಕೆಂಪಾಂಬುದಿ ಕೆರೆ ಕಟ್ಟಿಸುವಾಗ ಕನಸಿನಲ್ಲಿ ಕಾಣಿಸಿಕೊಂಡ ದೇವತೆ ಏರಿ ಮೇಲೆ ತನಗೊಂದು ಗುಡಿಕಟ್ಟಿಸುವಂತೆ ಕೇಳಿದ್ದು, ಬೆಳಗ್ಗೆ ಹೊತ್ತಿಗೆ ಬಂಡೆ ಮೆಲೆ ದೇವತೆ ಒಡಮೂಡಿದ್ದು, ಅದರಿಂದಾಗಿ ಬಂಡೆ ಮಾಂಕಾಳಿ/ಬಂಡಿಮಾಂಕಾಳಿ ಎಂಬ ಹೆಸರು ಬಂದಿತೆಂಬ ಐತಿಹ್ಯವೂ ಹೀಗೆಯೇ.[೩] ಅದು ನಿಜವಿದ್ದಲ್ಲಿ, ಮಾಂಕಾಳಿಗೆ ಬದಲು ಬಂಡೆ ಕೆಂಪಮ್ಮ ಎಂಬಂತಹ ಹೆಸರು ಇರಬೇಕಾಗಿತ್ತಲ್ಲವೇ ?

೩.೩. ಕೆಂಪೇಗೌಡ ಹಾಗೂ ಬೆಂಗಳೂರು ಉಗಮದ ಬಗೆಗಿನ ಐತಿಹ್ಯಗಳು :

ಕರ್ನಾಟಕದ ನಾಡ ಪ್ರಭುಗಳಲ್ಲಿ ಅತ್ಯಂತ ಜನಪ್ರಿಯನಾದ ಕೆಂಪೇಗೌಡನ ಬಗೆಗೆ ಅನೇಕ ಐತಿಹ್ಯಗಳು ಹುಟ್ಟಿಕೊಂಡಿವೆ. ಕೆಲವು ಹಿಂದಿನವು, ಜನಪ್ರಿಯತೆಯ ಕಾರಣದಿಂದ ಇವನ ಹೆಸರಿಗೆ ಅಂಟಿಕೊಂಡಿದೆ. ಕೆಲವು ಇವನ ಕಾಲಕ್ಕೆ ಸಂಬಂಧಿಸಿದವು, ಇವುಗಳಲ್ಲಿ ಚಾರಿತ್ರಿಕ ಅಂಶಗಳಿವೆ ಕೆಲವು ಇವನ ಕಾಲಾನಂತರ ಹುಟ್ಟಿಕೊಂಡಿರುವಂಥವು.

೧. ಕೆಂಪೇಗೌಡ ಬೆಂಗಳೂರು ನಗರವನ್ನು ನಿರ್ಮಾಣ ಮಾಡಬೇಕೆಂದು ಸಂಕಲ್ಪಿಸಿ ಸ್ಥಳ ಪರೀಕ್ಷೆಗೆ ಬಂದಾಗ ಕುಲದೇವತೆ ಕೆಂಪಮ್ಮ ಮುದುಕಿಯ ವೇಷದಲ್ಲಿ ಕಾಣಿಸಿಕೊಂಡು ಈ ಸ್ಥಳದಲ್ಲಿ ನಗರ ನಿರ್ಮಾಣ ಮಾಡಿದರೆ ಯಶಸ್ಸಾಗುವುದೆಂದು ಸೂಚಿಸಿದಳು.

೨. ಕೆಂಪೇಗೌಡ ನಗರ ನಿರ್ಮಾಣದ ಸ್ಥಳ ವೀಕ್ಷಣೆಗೆ ಬಂದಾಗ ಹಸಿವಾಗಿದ್ದರಿಂದ ಮುದುಕಿ ಬೆಂದಕಾಳನ್ನು ಕೊಟ್ಟು ಸತ್ಕರಿಸಿದಳು, ಇದು ನಂಬಿಕೆಗೆ ಅರ್ಹವಲ್ಲ.

೩. ಹಿರಿಯ ಕೆಂಪೇಗೌಡ ಬೆಂಗಳೂರಿನ ನಾಲ್ಕೂ ಮೂಲೆಗಳಲ್ಲಿ ಗುರುತಿಸಿದುದು ಗುಡಿಗೋಪುರಗಳು ಎಂದು ಬರೆಯಲಾಗಿದೆ. ಅವು ಇರುವ ರೀತಿಯನ್ನು ನೋಡಿದರೆ ಕಾವಲು ಗೋಪುರಗಳೆಂದು ಸ್ಪಷ್ಟವಾಗುತ್ತದೆ.

೪. ಹಿರಿಯ ಕೆಂಪೇಗೌಡ ಬೆಂಗಳೂರು ಕೋಟೆಯನ್ನು ಕಟ್ಟಿಸುವಾಗ ಕೋಟೆಯ ಮುಖ್ಯ ಬಾಗಿಲು ನಿಲ್ಲುತ್ತಿರಲಿಲ್ಲ, ಬೆಳಿಗ್ಗೆಯಿಂದ ಕಟ್ಟಿದ್ದು ಸಂಜೆವೇಳೆಗೆ ಬಿದ್ದು ಹೋಗುತ್ತಿತ್ತು. ಗರ್ಭಿಣಿ ಸ್ತ್ರೀಯನ್ನು ಬಲಿಕೊಟ್ಟರೆ ಬಾಗಿಲು ನಿಲ್ಲುವುದೆಂದು ಶಾಸ್ತ್ರ ಕೇಳಿಬಂತು. ನಾಡಪ್ರಭು ಕೆಂಪೇಗೌಡನಿಗೆ ಚಿಂತೆಯಾಯಿತು. ಇದನ್ನು ಅರಿತ ಕೆಂಪೇಗೌಡನ ಸೊಸೆ (ಸೋಮಯ್ಯನ ಹೆಂಡತಿ) ಲಕ್ಷ್ಮೀದೇವಿ ಸ್ವಇಚ್ಛೆಯಿಂದ ರಾಜ್ಯದ ಸಲುವಾಗಿ ಕೋಟೆಯ ಬಾಗಿಲ ಬಳಿ ಆತ್ಮಾರ್ಪಣೆ ಮಾಡಿಕೊಂಡಳು. ಕೋರಮಂಗಲದಲ್ಲಿ ಅವಳ ಸಮಾಧಿಯನ್ನು ಮಾಡಲಾಯಿತು. ಆಕೆ ಕುಲದೇವತೆಯಂತೆ ಪೂಜೆಗೆ ಅರ್ಹಳಾದಳು.

೫. ಕರ್ನಾಟಕದಲ್ಲಿ ಕೋಟೆ, ಕೆರೆ ಮೊದಲಾದುವುಗಳಿಗೆ ಗರ್ಭಿಣಿ ಸ್ತ್ರೀಯರನ್ನು ಬಲಿ ಕೊಡುವುದು ಅಪರೂಪವೇನೆ. ಇಂದು ಈ ಅಮಾನುಷ, ಅವೈಜ್ಞಾನಿಕ ಆಚರಣೆ ರೂಢಿಗೆ ಬಂದಿದೆ. ಆವೇಷದಲ್ಲಿ ಆದರ್ಶದ ಅನುಕರಣೆಯಲ್ಲಿ ಕೆಂಪೇಗೌಡನ ಸೊಸೆ ಬಲಿಯಾಗುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಇದಕ್ಕೆ ಬಲವಾದ ಆಧಾರವಿಲ್ಲ. ಮೌಖಿಕ ಪರಂಪರೆಯಲ್ಲಂತೂ ಈ ಕಥೆ ದಟ್ಟವಾಗಿದೆ.

೬. ಹಿರಿಯ ಕೆಂಪೇಗೌಡ ವಿಜಯನಗರದ ಬಂಧನದಿಂದ ಬಿಡುಗಡೆಯಾದ ಮೇಲೆ ಪರಿವೀಕ್ಷಣೆಗಾಗಿ ಬಸವನ ಗುಡಿ ಪ್ರದೇಶಕ್ಕೆ ಬಂದನಂತೆ ಅಲ್ಲೊಂದು ಬಂಡೆ ಸಾಕ್ಷಾತ್ ಬಸವನಂತೆ ಕಂಡಿತಂತೆ, ಅದರಲ್ಲಿ ಬಸವಣ್ಣನ ವಿಗ್ರಹವನ್ನು ಕೆತ್ತಿಸಿ ಪೂಜೆಗೆ ಅವಕಾಶ ಕಲ್ಪಿಸಿದನಂತೆ. ಆ ಬೃಹತ್ ನಂದಿ ವಿಗ್ರಹ ಸುಪ್ರಸಿದ್ಧವಾಗಿದೆ. ಅದಕ್ಕೆ ಸಂಬಂಧಿಸಿದಂತೆ ಕೆಲವು ಜನಪದ ಕಥೆಗಳು ಹುಟ್ಟಿಕೊಂಡಿವೆ.[೪]

೭. ಹಿಂದೆ ಅದು ಕಡಲೆಕಾಯಿ ಬೆಳೆಯುವ ಪ್ರದೇಶವಾಗಿತ್ತು. ಪ್ರತಿರಾತ್ರಿ ಒಂದು ಬಸವ ಬಂದು ರೈತರು ಬೆಳೆದ ಫಸಲನ್ನು ತಿಂದು ನಷ್ಟ ಮಾಡುತ್ತಿತ್ತು. ರೈತರು ರಾಜ ಕೆಂಪೇಗೌಡನಿಗೆ ದೂರುಕೊಟ್ಟು, ತಮ್ಮ ಕಷ್ಟವನ್ನು ಪರಿಹರಿಸಬೇಕೆಂದು ಪ್ರಾರ್ಥಿಸಿಕೊಂಡರು. ಆಗ ಕೆಂಪೇಗೌಡ ಬಸವನ ವಿಗ್ರಹವನ್ನು ಕೆತ್ತಿಸಿ ಕಡಲೆಕಾಯಿಯನ್ನು ನೈವೇದ್ಯಕ್ಕೆ ಇಟ್ಟು ಪೂಜೆ ಸಲ್ಲಿಸಿದ. ಆನಂತರ ಬಸವ ಬಂದು ಬೆಳೆ ತಿಂದು ನಷ್ಟ ಮಾಡುವುದು ತಪ್ಪಿತು ಎಂಬುದೊಂದು ಕಥೆ.

೮. ಬೃಹತ್ ನಂದಿವಿಗ್ರಹ ದಿನದಿನಕ್ಕೆ ಬೆಳೆಯುತ್ತಂತೆ, ಇದರಿಂದ ಗಾಬರಿಗೊಂಡ ಅರ್ಚಕರು ಕೆಂಪೇಗೌಡನಲ್ಲಿ ವಿಷಯ ಪ್ರಸ್ತಾಪಿಸಿದರು. ಕೆಂಪೇಗೌಡ ಬಂದು ವಿಶೇಷ ಪೂಜೆ ಸಲ್ಲಿಸಿ ಇನ್ನು ಮುಂದೆ ಬೆಳೆಯಬಾರದು ಎಂದು ಪ್ರಾರ್ಥಿಸಿಕೊಂಡ. ಬಸವನ ಬೆಳವಣಿಗೆ ನಿಂತಿತು ಅದು ಮತ್ತೊಂದು ಕಥೆ.

೯. ದೊಡ್ಡ ಬಸವಣ್ಣನ ತೃಪ್ತಿಗಾಗಿ ಪ್ರತಿವರ್ಷವೂ ಕಡಲೆಕಾಯಿ ಪರಿಷೆ ನಡೆಯಲು ಕೆಂಪೇಗೌಡ ಏರ್ಪಾಡು ಮಾಡಿದ. ಹಬ್ಬದಂತೆ ಅದು ಈಗಲೂ ನಡೆಯುತ್ತಿದೆ. ಕಡಲೆಕಾಯಿ ಬೆಳೆಯುವ ರೈತರಿಗೆ, ಮಾರಾಟಗಾರರಿಗೆ ಮಾರುಕಟ್ಟೆಯೂ ಲಭ್ಯವಾಗಿದೆ.

೧೦. ದೊಡ್ಡ ಬಸವಣ್ಣನ ದೇವಾಲಯದ ಮುಂದೆ ಎತ್ತರವಾದ ಕಲ್ಲಿನ ಕಂಬವಿದೆ. ಆ ಕಂಬದ ಮೇಲೆ ಗಡ್ಡದ ವ್ಯಕ್ತಿಯ ಚಿತ್ರವಿದೆ. ಅದು ಹಿರಿಯ ಕೆಂಪೇಗೌಡನ ಚಿತ್ರವೆಂದು ಸ್ಥಳದ ಹಿರಿಯರು ಹೇಳುತ್ತಾರೆ.

೧೧. ಹಿರಿಯ ಕೆಂಪೇಗೌಡ ದೀರ್ಘ ಕಾಲ ರಾಜ್ಯಭಾರ ಮಾಡಿ, ದೀರ್ಘ ಕಾಲ ಬದುಕಿ ಸಹಜವಾಗಿ ಮರಣ ಹೊಂದಿದ ಮೇಲೆ ಶಿವಗಂಗೆ ಬೆಟ್ಟದ ತಪ್ಪಲಿನಲ್ಲಿ ಸಮಾಧಿ ಮಾಡಲಾಯಿತಂತೆ. ಅಲ್ಲಿ ಸಮಾಧಿ ಉಂಟೆಂದು ಜನಪದರು ಹೇಳುವುದಿದೆ. ಆದರೆ ಅಲ್ಲಿ ಅಧಿಕೃತವಾದ ಯಾವುದೇ ಗುರುತಿಲ್ಲ. ಇದಕ್ಕೇನು ಕಾರಣವೋ ಗೊತ್ತಿಲ್ಲ.

೧೨. ದೊಡ್ಡ ಬಸವಣ್ಣನ ದೇವಾಲಯ ಹಾಗೂ ಗವಿ ಗಂಗಾಧರೇಶ್ವರ ದೇವಾಲಯದ ನಡುವೆ ಕಾಡಿತ್ತಂತೆ. ಅಲ್ಲಿ ಎಷ್ಟೋ ಶೈವ ಸನ್ಯಾಸಿಗಳು, ಋಷಿಗಳು ತಪಸ್ಸು ಮಾಡುತ್ತಿದ್ದರಂತೆ. ಮಧ್ಯರಾತ್ರಿಯ ಹೊತ್ತು ಋಷಿಗಳು ವೇದಮಂತ್ರಗಳನ್ನು ಹೇಳಿಕೊಂಡು ಚಲಿಸುತ್ತಿದ್ದರಂತೆ. ಪರಸ್ಥಳದಿಂದ ಬಂದವರು ಈ ಮಂತ್ರಘೋಷವನ್ನು ಕೇಳಿರುವುದಾಗಿ ಹೇಳುವುದುಂಟು. ಆದರೆ ಋಷಿಗಳನ್ನು ಸುಲಭವಾಗಿ ನೋಡಲು ಸಾಧ್ಯವಾಗುತ್ತಿರಲಿಲ್ಲ ಧ್ವನಿ ಮಾತ್ರ ಕೇಳುತ್ತಿತ್ತಂತೆ ವ್ಯಕ್ತಿಗಳು ಕಾಣುತ್ತಿರಲಿಲ್ಲವಂತೆ, ಮಧ್ಯರಾತ್ರಿಯಲ್ಲಿ ಧೈರ್ಯದಿಂದ ಪರೀಕ್ಷಿಸಲು ಜನ ಹೆದರುತ್ತಿದ್ದರಂತೆ.

೧೩. ಬೆಂಗಳೂರು ದೊಡ್ಡ ಬಸವಣ್ಣನ ದೇವಾಲಯಕ್ಕೂ ಗವಿಗಂಗಾಧರ ದೇವಾಲಯಕ್ಕೂ ನಡುವೆ ಸುರಂಗ ಮಾರ್ಗವಿತ್ತೆಂದೂ ಅದನ್ನು ಬೆಂಗಳೂರು ಕೆಂಪೇಗೌಡ ನಿರ್ಮಿಸಿದನೆಂದೂ ಹೇಳುತ್ತಾರೆ.

೧೪. ದೊಡ್ಡ ಬಸವಣ್ಣನ ದೇವಾಲಯದ ಹಿಂಬದಿಯಲ್ಲಿ ಒಂದು ಕಲ್ಲಿನ ಚಿತ್ರದ ಗುರುತಿದೆ. ಇಲ್ಲಿ ಕೆಂಪೇಗೌಡ ಬಚ್ಚಿಟ್ಟಿರುವ ನಿಧಿಯಿದೆಯೆಂದು ಸ್ಥಳೀಯರು ಹೇಳುತ್ತಾರೆ.

೧೫. ಕೆಂಪೇಗೌಡ ಜನಪದ ವೈದ್ಯಕ್ಕೆ ಗಮನ ಕೊಟ್ಟಿದ್ದ ಅವನ ಆಸಕ್ತಿಯಿಂದ ಹಲಸೂರು ಪ್ರದೇಶದಲ್ಲಿ ಸಂಜೀವಿನಿ ದಿಬ್ಬವೊಂದು ರೂಪುಗೊಂಡಿತ್ತು. ಅಲ್ಲಿ ಔಷಧಿ ಸಸ್ಯಗಳು ಗಿಡ ಮೂಲಿಕೆಗಳನ್ನು ಬೆಳೆಯಲಾಗಿತ್ತು. ನಾಟಿ ವೈದ್ಯರು ಅವುಗಳನ್ನು ಬಳಸಿಕೊಂಡು ಜನಸಾಮಾನ್ಯರಿಗೆ ಸುಲಭ ಚಿಕಿತ್ಸೆ ನೀಡುತ್ತಿದ್ದರು.

೩.೩. ಪೇಟೆಗಳಾಗಿ ರೂಪಾಂತರಗೊಂಡ ಬೆಂಗಳೂರಿನ ಹಳ್ಳಿಗಳು :

ಇತ್ತೀಚೆಗೆ ಸಿಕ್ಕಿರುವ ಹಳೆಯ ಬೆಂಗಳೂರು ನಕಾಶೆಯ ಪ್ರಕಾರ ಸುಮಾರು ೧೮ನೇ ಶತಮಾನದ ಆದಿ ಬೆಂಗಳೂರನ್ನು ಕೇವಲ ಪೇಟೆ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಹಳೆಯ ಎಲ್ಲ ಪೇಟೆಗಳೂ ಸೇರಿವೆ. ಒಂದು ಕಡೆ (ಪಶ್ಚಿಮದಿಂದ ಪೂರ್ವದವರೆಗೆ) ಧರ್ಮಾಂಬುಧಿ ಕೆರೆಯಿಂದ – ಸಂಪಂಗಿ ಕೆರೆಯವರೆಗೆ ಹಾಗೂ (ಉತ್ತರದಿಂದ ದಕ್ಷಿಣದವರೆಗೆ) ಈಗಿನ ಮೈಸೂರು ಬ್ಯಾಂಕ್ ಇರುವ ಸ್ಥಳದಿಂದ ಕೆಂಪಾಂಬುದಿ ಕೆರೆಯವರೆಗೆ ವಿಸ್ತರಿಸಿತ್ತು. ಇವುಗಳೆಲ್ಲದರ

ಪದಕದಂತೆ ಬೆಂಗಳೂರು ಕೋಟೆ ಇರುವುದು ತಿಳಿದು ಬರುತ್ತದೆ. ಇದೇ ರೀತಿ ಬೆಂಗಳೂರು ಸಣ್ಣ ಪ್ರಮಾಣದ ಪಟ್ಟಣದ ಆಕಾರದಲ್ಲಿ ಸುಮಾರು ಒಂದು ನೂರು ವರ್ಷ ಇತ್ತು. ಇದೇ ವೇಳೆ ಬ್ರಿಟೀಷ್ ಸೈನ್ಯದವರು, ತಮ್ಮ ನೆಲೆಗಳನ್ನು ಈಗಿನ ದಂಡುಪ್ರದೇಶ ಹಾಗೂ ಬ್ಲಾಕ್‌ನಲ್ಲಿ ಮುಂತಾದ ಅಕ್ಕ ಪಕ್ಕ ಹಳ್ಳಿಗಳಲ್ಲಿ ಸ್ಥಾಪಿಸಿ ವೃದ್ಧಿಪಡಿಸಿದರು.

ಇನ್ನೊಂದು ಹಳ್ಳಿ knox ಪೇಟೆಯಲ್ಲಿ ಬಹುತೇಕ ಮಂದಿ ಕಡುಬಡವರು, ಮಣ್ಣಿನ ಗೋಡೆಗಳಲ್ಲಿ ಮನೆಗಳನ್ನು ಕಟ್ಟಿ, ತೆಂಗಿನ ಗರಿಗಳ ಹೊದಿಕೆಯಲ್ಲಿ ವಾಸವಾಗಿದ್ದವರು. ೧೮೯೮ ರ ಪ್ಲೇಗ್ ವೇಳೆಯಲ್ಲಿ ಸರ್ಕಾರದವರು ಮನೆಗಳನ್ನು ಬಿಡಲು ಬಹಳ ಒತ್ತಾಯಿಸಿದರು. ಆದರೆ ೧೯೨೩ ರ ಹೊತ್ತಿಗೆ ಇದೇ ಜಾಗವನ್ನು "Murphy Town" ಎಂದು ನಾಮಕರಣ ಮಾಡಿ ಬಹುತೇಕ ಕಾರ್ಮಿಕವರ್ಗದವರು ಉಳಿದ ಕೆಳದರ್ಜೆಯವರು ಸ್ವಾಭಿಮಾನದಿಂದ ವಾಸಿಸತೊಡಗಿದರು.

ಪ್ಲೇಗ್ ನಂತರ ಈ ಕಾಲದಲ್ಲಿ ದಕ್ಷಿಣ ಭಾರತವನ್ನು ಸತತ ಎರಡು ವರ್ಷ ಕಾಡಿದ ಧಾತು ಈಶ್ವರ ಸಂವತ್ಸರ (೧೮೭೬-೭೮೦)ಗಳ ಕ್ಷಾಮ. ಮೈಸೂರು ರಾಜ್ಯದಲ್ಲಿ ೯ ಲಕ್ಷ ಜನರ ಸಾವಿಗೆ ಕಾರಣವಾಯಿತು. ಸಾವಿರಾರು ಜನ ಕೋಲಾರ, ತುಮಕೂರುಗಳಿಂದ ವಲಸೆ ಬಂದರು. ಕೃಷ್ಣರಾಜಪುರದಲ್ಲಿ ಮೂರು ಸಾವಿರ ಜನರಿಗೆ ಗಂಜಿ ಕೇಂದ್ರ ತೆರೆದರು. ನೇಕಾರರು, ಕುಶಲಕರ್ಮಿಗಳು, ಕಸೂತಿ ಪರಿಣಿತರು ತಮ್ಮ ಸಲಕರಣೆಗಳನ್ನು ಮಾರಿ ಅಭಾವ ಕಾಮಗಾರಿಗಳಲ್ಲಿ ಕೂಲಿ ಕೆಲಸಕ್ಕೆ ಹೋದರು.

ಬೆಂಗಳೂರು ದಕ್ಷಿಣದಲ್ಲಿ ಆಳಿದ ಮೈಸೂರು ದೊರೆ ಶ್ರೀ ಚಾಮರಾಜ ಒಡೆಯರ್ ಹೆಸರಿನಲ್ಲಿ ಚಾಮರಾಜ ಪೇಟೆ, ಉತ್ತರದಲ್ಲಿ ಹೆಸರಾಂತ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಹೆಸರಿನಲ್ಲಿ ಶೇಷಾದ್ರಿಪುರ ಎಂದು ನಾಮಕರಣ ಮಾಡಿದರು. ಈ ಬಡಾವಣೆಗಳು ಉತ್ತರದ ಮಲ್ಲೇಶ್ವರದಿಂದ ಹಿಡಿದು ದಕ್ಷಿಣದಲ್ಲಿ ಬಸವನ ಗುಡಿಯಲ್ಲಿ ಸಮಗ್ರ ಬೆಂಗಳೂರಾಗಿ ಹೊರಹೊಮ್ಮಿದವು. ದಂಡಿನ ಸ್ಥಳದಲ್ಲಿ ತಂಗಲು ಬ್ರಿಟೀಷ್ ಅಧಿಕಾರಿಗಳು ಸಣ್ಣ ಮಾದರಿಯ ಕಾಟೇಜುಗಳನ್ನು ಅಪೇಕ್ಷಿಸಿ ಅದರಂತೆ " ಫ್ರೇಜರ್ ಟೌನ್, ಕಾಕ್ಸ್ ಟೌನ್, ರಿಚರ್ಡ್ಸ್ ಟೌನ್" ಗಳು ರೂಪುಗೊಂಡವು. ಈ ಪ್ರದೇಶದ ಬಗ್ಗೆ ಬೌರಿಂಗ್ ಹೀಗೆ ವರ್ಣನೆ ನೀಡಿದ್ದಾನೆ. "ಭಾರತದ ಇತರೆಲ್ಲಾ ಕಂಟೋನ್ಮೆಂಟ್ ಗಳಂತೆ ಬೆಂಗಳೂರಿನ ಕಂಟೋನ್ಮೆಂಟ್ ಕೂಡಾ ವಿವಿಧ ಭಾಷೆ ಮತ್ತು ರಾಷ್ಟ್ರಗಳ ಜನರಿಂದ ತುಂಬಿದ ಒಂದು ವೈವಿಧ್ಯಮಯ ಸಮುದಾಯವನ್ನು ಹೊಂದಿದೆ. ಬಜಾರ್ ಮತ್ತು ಬೀದಿಗಳಲ್ಲಿ ಉದ್ಯಮಶೀಲ ತಮಿಳು ವ್ಯಾಪಾರಿಗಳು ನೌಕರರು ಸೇವಕರು ಇದ್ದಾರೆ. ತೆಲುಗು ಭಾಷಿಕ ಬ್ರಾಹ್ಮಣರೂ, ತೋಟಗಾರರೂ, ಸಿಪಾಯಿಗಳೂ ಕಾಣಿಸುತ್ತಾರೆ. ಕನ್ನಡ ಕೃಷಿಕರೂ. ಕುರುಬರೂ, ದನಗಾಹಿಗಳೂ ನೋಡಸಿಗುತ್ತಾರೆ. ಇದೇ ರೀತಿ ಬೆಂಗಳೂರು ಪೇಟೆಯ ವರ್ಣನೆ ಮಾಡುತ್ತಾ" ಇಲ್ಲಿನ ಜನ ಸಮುದಾಯದ ತಿರುಳೆಂದರೆ ಕನ್ನಡ ಜನರೇ, ಭಾರತದ ಅಸ್ತಿತ್ವವನ್ನು ಸಾವಿರಾರು ವರ್ಷಗಳಿಂದ ಬದಲಾಗದೇ ಉಳಿಸಿಕೊಂಡು, ಪೌರಾತ್ಯ ಜೀವನದ ಎಲ್ಲಾ ಲಕ್ಷಣಗಳನ್ನೂ ಬಳಸಿಕೊಂಡ ಸರಳ ಸ್ಥಳೀಯ ಹಿಂದೂ ಜೀವನದ ಚಿತ್ರ ಇಲ್ಲಿ ಕಾಣಬರುತ್ತದೆ"."

ಈ ಹಿನ್ನೆಲೆಯಲ್ಲಿ ನೈಸರ್ಗಿಕ ವಿಕೋಪಗಳು ಹಾಗೂ ಕೈಗಾರಿಕೀಕರಣದಂತಹ ಎರಡು ವೈರುಧ್ಯಗಳಿಗೆ ಏಕಕಾಲಕ್ಕೆ ಬೆಂಗಳೂರಿನ ಸಂಸ್ಕೃತಿ ತನ್ನನ್ನು ಒಡ್ಡಿಕೊಳ್ಳುವುದು ಅನಿವಾರ್ಯವಾಯಿತು. ಹೀಗಾಗಿ ಈ ಕಾಲದ ಬೆಂಗಳೂರಿನ ಸಂಸ್ಕೃತಿಯನ್ನು ಸಾಂಸ್ಕೃತಿಕ ಅನನ್ಯತೆಗೆ ಒಳಪಡಿಸುವಾಗ ಅಂತರ ಸಾಂಸ್ಕೃತಿಕ (cross culture) ಮತ್ತು ಸಾಮುದಾಯಿಕ ಸಾಂಸ್ಕೃತಿಕ (Mass culture) ನೆಲೆಯಲ್ಲಿ ಅಭ್ಯಾಸ ಮಾಡಬೇಕಾಗುತ್ತದೆ.

ಈ ನಿಟ್ಟಿನನಲ್ಲಿ ೨೦ನೇ ಶತಮಾನದ ಮಾನವಶಾಸ್ತ್ರಜ್ಞರು ಸಂಸ್ಕೃತಿ ಕೇಂದ್ರಿತ ಸಿದ್ಧಾಂತಗಳನ್ನು ಮರು ಚಿಂತನೆಗೆ ಒಳಪಡಿಸಿದರು. ಸಮಾನ ಸಾಂಸ್ಕೃತಿಕ ವಿಕಾಸವಾದ ಯೋಜನೆಗೆ ಬದಲು ಬಹು ಸಾಂಸ್ಕೃತಿಕತ್ವವನ್ನು ಒಪ್ಪಿಕೊಂಡರು ಅದರಲ್ಲಿ ಪ್ರತಿಯೊಂದು ಸಮಾಜವೂ ತನಗೆ ಅಪೂರ್ವವಾದ ಇತಿಹಾಸ ಮತ್ತು ಮೌಲ್ಯಗಳನ್ನು ಹೊಂದಿರುತ್ತದೆ ಎಂಬುದನ್ನು ಪ್ರತಿಪಾದಿಸಿದರು. ಈ ಸ್ಥಿತ್ಯಂತರಗಳ ಕಾಲದಲ್ಲಿ ಬೆಂಗಳೂರಿನಲ್ಲಿ ರೂಪು ತಳೆದ ಪ್ರಮುಖ ಬಡಾವಣೆಗಳು ಮತ್ತು ಅಲ್ಲಿ ನಡೆಯುತ್ತಿರುವ ಆಚರಣೆಗಳನ್ನು ಗಮನಿಸಿದಾಗ, ಆಗ ವಲಸೆ ಬಂದ ಎಪ್ನೋ ಸಮುದಾಯಗಳು ಹಾಗೂ ಸ್ಥಳೀಯ ಸಮುದಾಯಗಳು ತಮ್ಮ ಗುಂಪು ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳಲು ಹೆಣಗಾಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಸಂದರ್ಭದಲ್ಲಿ ಮ್ಯಾಕ್ ಐವರ್‌ನ "civilization is what we have, culture is what we are". ಎಂಬ ವ್ಯಾಖ್ಯೆ ಗಮನಾರ್ಹ. ಹೀಗಾಗಿ ನಗರೀಕರಣದ ಹಿಂದೆ ಮೂಲ ಜಾನಪದ ಪ್ರಭಾವ ಎಷ್ಟರ ಮಟ್ಟಿನದು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ವಿಶ್ವದ ಎಲ್ಲ ಬಹು ಜನಾಂಗಿಕ ನಗರ (cosmopolitan city) ಗಳಲ್ಲಿ ಕಂಡುಬರುವಂತೆ ಬೆಂಗಳೂರಿನಲ್ಲೂ ಅನೇಕ ಭಾಷೆ, ಸಂಸ್ಕೃತಿಗಳುಳ್ಳ ಜನರಿದ್ದು, ತಮ್ಮದೇ ಆದ ದೇವಸ್ಥಾನ ನಿರ್ಮಿಸಿ ಹಬ್ಬ ಹರಿದಿನಾದಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಿರುವುದನ್ನು ಕಾಣಬಹುದು. ಒಂದೆರಡು ತಲೆಮಾರುಗಳು ಕಳೆದ ಮೇಲೆ ಒಂದು ಗೊತ್ತಾದ ಬಡಾವಣೆಗಳಲ್ಲಿ ಒಗ್ಗಟ್ಟಿನಿಂದ ವಾಸಿಸುತ್ತಾ ಬಂದಿದ್ದವರು, ಸಂಸ್ಕೃತೀಕರಣದ ಪ್ರಕ್ರಿಯೆಗೆ ಬಹಳಷ್ಟು ನಗರಸ್ಥ ಗ್ರಾಮ ಸಮಾಜ (Urban village society) ಗಳಾಗಿ ಮಾರ್ಪಟ್ಟು ತಮ್ಮ ಸಾಂಪ್ರದಾಯಿಕ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುತ್ತಲೇ ತಮ್ಮ ಸಾಂಸ್ಕೃತಿಕ ಅಂಶಗಳನ್ನು ರಕ್ಷಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಇದೇ ರೀತಿ ನಿದರ್ಶನಕ್ಕೆ ಅಮೆರಿಕಾದ ಅಪಾಲಾಚಿಯನ್ ಜನತೆಯಯನ್ನು ಉದಾಹರಿಸಬಹುದು. ಚಿಕಾಗೋದ ಒಂದು ಭಾಗದಲ್ಲಿ ನೆಲೆಸಿರುವ ಈ ಜನ ಅರ್ಧ ದಶಲಕ್ಷ ಜನಸಂಖ್ಯೆ ಹೊಂದಿದ್ದು ತಮ್ಮ ಸಾಂಸ್ಕೃತಿಕ ಏಕತೆಯನ್ನು ಕಾಪಾಡಿಕೊಂಡು ಬಂದಿರುವುದನ್ನು ಮಾನವ ಶಾಸ್ತ್ರಜ್ಞರು ಗುರುತಿಸಿದ್ದಾರೆ. ಅಪಲಾಚಿಯನ್ನರು ಆಧುನಿಕವಾದ ಅನೇಕ ಪರಕೀಯ ಪ್ರಭಾವಗಳನ್ನು ಹಿಮ್ಮೆಟ್ಟಿಸಿ ಬದುಕುತ್ತಿದ್ದಾರೆ. ಅವರ ಜನಪದ ಸಂಸ್ಕೃತಿಬದ್ಧ ಜೀವನ ಜಗತ್ತಿನ ಇತರ ನಗರಸ್ಥ ಜನಪದರಿಗೆ ಒಂದು ಮಾದರಿಯಾಗುವಷ್ಟು ವಿಶಿಷ್ಟವಾಗಿದೆ. ". . . . Even in the united states

today rural migrants to cities have been known to resist the pressures of urbanization and maintain many folk traditions. For example, in the past two decades there has been a massive migrations of Appalachians to urban areas in the mid west, prompted by the decline in the two basic economic activities of the region subsistence agriculture and coal mining. In continous studies of Appalachian migrants to the city it has been found that they maintain very strong ties with their families back home"[೬]

ಸಂಸ್ಕೃತಿಯ ಬಹುಮುಖತ್ವ ಮತ್ತು ಅದರ ಸ್ವರೂಪವನ್ನು ಚರ್ಚಿಸಬಯಸುವ ಪ್ರತಿಯೊಬ್ಬ ಮಾನವ ಶಾಸ್ತ್ರಜ್ಞನೂ ಎದುರಿಸುವ ಸವಾಲು ಆಧುನಿಕತೆ ಮತ್ತು ಸಂಸ್ಕೃತೀಕರಣದ ಪ್ರಭಾವಗಳ ನಡುವೆ ಮೂಲ ಸಂಸ್ಕೃತಿಯ ಹುಡುಕಾಟದ್ದು. ಜಗತ್ತಿನ ಅನೇಕ ಭಾಗಗಳಲ್ಲಿ ನಡೆಯುವ, ನಡೆಯುತ್ತಿರುವ ಪುರಾತತ್ವ ಸಂಶೋಧನೆಗಳು ಪ್ರಾಚೀನ ಸಂಸ್ಕೃತಿಗಳ ಮೇಲೆ ಎಷ್ಟೇ ಬೆಳಕು ಚೆಲ್ಲಿದರೂ, ಸಂಸ್ಕೃತಿಯ ಅಧ್ಯಯನ ಇನ್ನೂ ಮುಂದುವರೆಯುತ್ತಲೇ ಇದೆ, ಹಾಗೂ ಜಗತ್ತಿನ ಪ್ರತೀ ಸಂಸ್ಕೃತಿಯೂ ತನ್ನದೇ ವ್ಯಕ್ತಿತ್ವ, ಇತಿಹಾಸ, ಅರ್ಥ ಔಚಿತ್ಯಗಳೊಂದಿಗೆ, ಬದಲಾವಣೆಯ ಸ್ವೀಕರಣೆ ಮತ್ತು ನಿರಾಕರಣೆಗೆ ಒಳಪಡುತ್ತಲೇ ಇದೆ. ಭಾರತ, ಚೀನಾದಂತಹ ಜಾನಪದೀಯ ದೇಶಗಳಲ್ಲಿ ನಗರಗಳಲ್ಲಿಯೂ ಅನೇಕಾನೇಕ ಸಂಪ್ರದಾಯ, ಆಚರಣೆಗಳು ರೂಢಿಯಲ್ಲಿರುತ್ತವೆ ಎಂಬ ಕ್ರೋಬರ್‌ನ ಈ ಹೇಳಿಕೆ– ಪ್ರಸ್ತುತ ಸಂಧರ್ಭದಲ್ಲಿ ಗಮನಾರ್ಹ"In a country like india differentiations are so intensive and so firmly intrenched…… it is the less extreme interveining castes, plus intercaste community of regional speech which succeed in holding the top and bottom level within the frames of one society and one culture in india"[೭]

ವಿಶ್ವದ ಎಲ್ಲ ಸಂಸ್ಕೃತಿಯ ಕಥನ ಪರಂಪರೆಯನ್ನು ಅವಲೋಕನ ಮಾಡಿದಾಗ ಪ್ರತಿರೋಧಕ್ಕೆ ಅವಕಾಶವೇ ಇಲ್ಲದ ಒಂದು ಯಾಜಮಾನ್ಯ ಸಂಸ್ಕೃತಿ ಮತ್ತು ಸಮಾಜದ ಮುಖ್ಯ ವಾಹಿನಿಯಲ್ಲಿ ವರ್ತಮಾನದ ಜ್ಞಾನ ಶಿಸ್ತುಗಳ ಕಣ್ಣಿಗೆ ಬೀಳದೆ ಅಗೋಚರವಾಗಿ ಉಳಿದಿರುವ ಆದರೆ ಅಖಂಡವಾದ ಮಾನವ ಪ್ರಜ್ಞೆಯನ್ನು ತನ್ನೊಳಗೆ ಅಡಗಿಸಿಕೊಂಡಿರುವ ದೇಸಿ ಸಂಸ್ಕೃತಿಯ ನಡುವಿನ ಸಂಘರ್ಷ ಎಲ್ಲ ಕಾಲಮಾನದ ವ್ಯಾಪ್ತಿಯಲ್ಲೂ ಕಂಡುಬರುತ್ತದೆ. ಹೀಗಾಗಿ ಇವುಗಳ ಅಧ್ಯಯನವೆಂದರೆ ಕೇವಲ "ವರ್ತಮಾನದ ದನಿಯ ಜೊತೆಗೆ ಗತಕಾಲದ ಅನುಸಂಧಾನ ಮಾತ್ರವಾಗದೆ ಮನುಷ್ಯ ಪ್ರಜ್ಞೆಯ ಹುಡುಕಾಟದ ಅನುಸಂಧಾನವಾಗಬೇಕಾಗುತ್ತದೆ. ಈ ನಿಟ್ಟಿನನಲ್ಲಿ ಬೆಂಗಳೂರಿನ ಬಹುತೇಕ ಹಳ್ಳಿಗಳು ಪೇಟೆಗಳಾಗಿ ರೂಪಾಂತರಗೊಂಡರೂ ಇಂದಿಗೂ ಮೂಲಸೊಗಡನ್ನು ಉಳಿಸಿಕೊಂಡು ತಮ್ಮ ಆಂಶಿಕ ಸಂಸ್ಕೃತಿಯನ್ನು ಆಚರಣೆಗಳ ಮೂಲಕ ಪ್ರತಿನಿಧಿಸುತ್ತಿರುವುದೇ ಇದಕ್ಕೆ ಸಾಕ್ಷಿ.

೩.೪. ವಲಸೆ ಸಂಸ್ಕೃತಿ ಮತ್ತು ಬೆಂಗಳೂರು ನಗರದ ಮಾರಾಟ :

ಬೆಂಗಳೂರಿನ ಯಾವ ಭಾಗವನ್ನು ತೆಗೆದುಕೊಂಡರೂ ಅಲ್ಲೊಂದು ವಲಸೆ ಭಾಷೆ ಅಥವಾ ಸಂಸ್ಕೃತಿ ಸ್ಥಳೀಯ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರುವುದು ವ್ಯಕ್ತವಾಗಿತ್ತದೆ. ಇದಕ್ಕೆ ಪೂರಕವಾಗಿ ಬೆಂಗಳೂರಿನ ಐತಿಹಾಸಿಕ ಕಾಲಮಾನದಲ್ಲಿಯೂ ಅನೇಕ ವರ್ಗದವರು ಹಲವಾರು ಕಾರಣಕ್ಕೆ ವಲಸೆ ಬಂದು ತನ್ನ ಮಾಯೆಯಂತಹ ಪ್ರಭಾವವನ್ನು ಬೆಂಗಳೂರಿನ ಸಂಸ್ಕೃತಿಯ ಮೇಲೆ ಬೀರಿದೆ. ಬೆಂಗಳೂರಿನ ಚಾರಿತ್ರಿಕ ಘಟ್ಟಗಳ ಕಾಲದ ಸ್ಥಿತ್ಯಂತರಗಳು ನೇರವಾಗಿಯೇ ಬೆಂಗಳೂರಿನ ಸ್ಥಳೀಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರ, ವಿವಿಧ ಆಚರಣೆ, ಭಾಷೆ, ಸಂಸ್ಕೃತಿಯ ಜನ್ಯಕ್ಕೆ ಕಾರಣವಾಗಿದೆ. ಹಿಂದೆ ಕೆಂಪೇಗೌಡ ನಗರ ಬೆಳವಣಿಗೆಯಾಗಲಿ ಎಂಬ ಉದ್ದೇಶದಿಂದ ವಿವಿಧ ವೃತ್ತಿಯವರನ್ನು ಆಹ್ವಾನಿಸಿ ಅವರವರ ವೃತ್ತಿಗೆ ಪೇಟೆ ನಿರ್ಮಿಸಿಕೊಟ್ಟ ಪರಿಣಾಮ– ಹೈದರಾಲಿ ಯುದ್ದ ಪ್ರೀತಿಯ ಪರಿಣಾಮವಾಗಿ ಬೆಂಗಳೂರಿನ ಕಲಾಸಿಪಾಳ್ಯದ ಸಾಂಸ್ಕೃತಿಕ ಬೆಳವಣಿಗೆಯನ್ನು ಗಮನಿಸಬಹುದು. ನೋಡಲು ಕೇವಲ ಸೈನ್ಯ ತಂಗಿದಲ್ಲಿ ಅದಕ್ಕೆ ಡೇರೆ ಹಾದುವ ಕೆಲಸಕ್ಕಾಗಿ ಸೈನ್ಯದೊಂದಿಗೆ ಇರುತ್ತಿದ್ದ ಕಲಾಸಿಗಳು ಬೆಂಗಳೂರಿನಲ್ಲಿ ಬೀಡುಬಿಟ್ಟ ಹೈದರಾಲಿಯ ಸೈನ್ಯದೊಂದಿಗೂ ಬಂದಿದ್ದರು. ಯುದ್ದ ಸಂದರ್ಭ ಮುಗಿದು ಸೈನಿಕ ಕೇಂದ್ರಕ್ಕೆ ಶಾಶ್ವತ ವ್ಯವಸ್ಥೆ ಆಗಿ ಕೆಲ ಕಲಾಸಿಗಳು (ಯುದ್ದದ ಸಾಮಗ್ರಿಗಳ ಕುಲುಮೆ ಕೆಲಸ ಮಾಡುವವರು) ಹಿಂದಿರುಗಿ ಸೈನ್ಯದೊಂದಿಗೆ ವಾಪಸಾದರು ಅವರ ಕುಟುಂಬ ಅಲ್ಲೇ ಉಳಿಯಿತು. ಆ ಪ್ರದೇಶವೇ ಕಲಾಸಿ ಪಾಳ್ಯ ಎಂದು ಹೆಸರಾಯಿತು. ಇಲ್ಲೇ ಉಳಿದ ಕಲಾಸಿಗಳ ಕುಟುಂಬದ ಸದಸ್ಯರು ತಮ್ಮ ಜೀವನೋಪಾಯಕ್ಕಾಗಿ ಬೇರೆ ವೃತ್ತಿಗಳನ್ನು ಹಿಡಿದರು. ಆನರಿಗೆ ಅವಶ್ಯವಾಗಿದ್ದ ವಸ್ತುಗಳನ್ನು ತಯಾರಿಸಲು ಆರಂಭಿಸಿ ಮುಂದೇ ಅದೇ ಅವರಿಗೆ ಜೀವನಕ್ಕೆ ಮಾರ್ಗವಾದವು. ಕಲಾಸಿಪಾಳ್ಯವು ರೂಪುಗೊಂಡ ಬಗೆಯಿಂದ ರಾಜಕೀಯ ಕ್ರಮವೊಂದು ಸಾಮಾಜಿಕ ಆರ್ಥಿಕ ಬೆಳವಣಿಗೆಡಗೆ ಪೂರಕವಾಗಿ ಕಡೆಗೆ ಅದೊಂದು ಸಾಂಸ್ಕೃತಿಕ ವಿನ್ಯಾಸವೂ ಆಗಿರುವುದನ್ನು ಗುರುತಿಸಬಹುದು. ಭಾಷೆ ಮತ್ತು ಸಂಸ್ಕೃತಿಗೆ ಬೇರೆಯದ್ದೇ ಆಯಾಮ ದೊರೆತು ಕನ್ನಡ ಭಾಷೆ ಸಮಸ್ಕೃತಿಯು ಕಲಾಸಿಪಾಳ್ಯ ಭಾಷೆ, ಸಂಸ್ಕೃತಿಯಾಗಿ ರೂಪಾಂತರ ಹೊಂದಿರುವುದನ್ನು ಗಮನಿಸಬಹುದು. ಹಲವಾರು ಸಂಸ್ಕೃತಿಗಳ ಸಂಪರ್ಕದ ಪರಿಣಾಮವಾಗಿ ಕಲಾಸಿಪಾಳ್ಯ ನಗರೀಕರಣದ ಬಹು ಮುಖ್ಯ ಆಯಾಮವಾಗಿಯೂ ವಿಶಿಷ್ಟ ಸಾಂಸ್ಕೃತಿಕ ಘಟಕವಾಗಿಯೂ ರೂಪು ತಳೆದಿರುವುದನ್ನು ಇಲ್ಲಿ ಗಮನಿಸಬಹುದು.

ಕ್ರಿ.ಶ ೧೬ನೇ ಶತಮಾನದಲ್ಲಿ ಕರ್ನಾಟಕದ ಅನೇಕ ಪ್ರಾಂತಗಳಿಗೆ ಶೀರ್ಯ (ಸಿರಾ) ಮುಖ್ಯ ಪಟ್ಟಣವಾಗಿತ್ತಲ್ಲದೆ ಮೊಗಲರ ದಕ್ಷಿಣದ ರಾಜಧಾನಿಯೂ ಆಗಿತ್ತು. ಬಸವಾಪಟ್ಟಣ, ಪೆನುಗೊಂಡ, ಬೂದಿಹಾಳ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ಕೋಲಾರಗಳೂ ಶೀರ್ಯ ನಾಡಿಗೆ ಸೇರಿತ್ತು. ಅಲ್ಲದೆ ಉತ್ತರದಲ್ಲಿ ಕಂದರ್ಪಿ, ಆನೆಗೊಂದಿ, ಹರಪ್ಪನಹಳ್ಳಿ, ಬಿದನೂರು, ಚಿತ್ರದುರ್ಗ ಮೊದಲಾದ ಪ್ರದೇಶಗಳೂ ಸೇರಿದ್ದುವು. ಹೀಗೆ ಹೊಸ ಸೀಮೆಯೊಂದು ನಿರ್ಮಾಣವಾಯಿತು. ಈ ನೂತನ

ಪ್ರಾಂತಕ್ಕೆ ಖಾಸಿಂಖಾನನು ಆಡಳಿತಾಧಿಕಾರಿ (ರಾಜ್ಯಪಾಲ) ಯಾದನು. ಈ ನೂತನ ಪ್ರಾಂತ ನಿರ್ಮಾಣದಿಂದ ಬೆಂಗಳೂರಿನ ಪ್ರಾಬಲ್ಯ ಕುಂದಿತು. ಶೀರ್ಯವು ಆಡಳಿತ ಕೇಂದ್ರವಾದುದರಿಂದ ಬೆಂಗಳೂರಿನಲ್ಲಿದ್ದ ದೊಡ್ಡ ದೊಡ್ಡ ವರ್ತಕರೂ, ಸೇನಾಧಿಕಾರಿಗಳೂ ಶೀರ್ಯಕ್ಕೆ ವಲಸೆ ಹೊರಟರು, ಖಾಸಿಂಖಾನನ ಗಮನವೆಲ್ಲ ಶೀರ್ಯದ ಮೇಲೆ ಕೇಂದ್ರೀಕೃತವಾಗಿತ್ತಾದ್ದರಿಂದ ಬೆಂಗಳೂರು ಅವನಿಗೆ ಒಂದು ಹೊರೆಯಾಗಿ ಪರಿಣಮಿಸಿತು. ಹೀಗಿರುವಲ್ಲಿ ಒಡೆಯರು ಬೆಂಗಳೂರಿನ ವ್ಯಾಪಾರದ ಕಡೆ ಗಮನ ಹರಿಸಿ, ತಮ್ಮ ಪ್ರತಿನಿಧಿಗಳನ್ನು ಬೆಂಗಳೂರಿಗೆ ಕಳುಹಿಸಿದರು. ಖಾಸಿಂಖಾನನ ಕಡೆಯವರು ಅವರೊಡನೆ ಮಾತನಾಡಿ, ಹಿಂದೆ ವೆಂಕಾಜಿಯ ಬಳಿ ಒಪ್ಪಿಕೊಂಡಿದ್ದಂತೆ ಮೂರು ಲಕ್ಷ ರೂಗಳನ್ನು ತಮಗೇ ಕೊಡುವುದಾದರೆ ಬೆಂಗಳೂರನ್ನು ಬಿಟ್ಟು ಕೊಡುವುದಾಗಿ ತಿಳಿಸಿದರು. ಈ ವ್ಯಾಪಾರಕ್ಕೆ ಆತ್ತ ಔರಂಗಜೇಬನ ಅನುಮತಿಯೂ ದೊರೆಯಿತು. ಚಿಕ್ಕ ದೇವರಾಜ ಪಡೆಯರ ಅನುಮತಿಯೂ ಅಗತ್ಯವಾಗಿದ್ದಿತು. ಏಕೆಂದರೆ ಮಾತುಕತೆಗಳನ್ನು ನಡೆಸಿದವರು ಅಧೀನರಾಗಿದ್ದ ಅಧಿಕಾರಿಗಳೇ ಹೊರತು ತೀರ್ಮಾನ ಕೈಗೊಳ್ಳುವ ಅಧಿಕಾರಿಗಳಾಗಿರಲಿಲ್ಲ. ಕಾರಣವೇನೆಂದರೆ ಅವನಿಗೆ ಫಲವತ್ತಾದ ತಂಜಾವೂರು ಸಿಕ್ಕಿತ್ತು. ಈಗ ಖಾಸಿಂಖಾನನಿಗೂ ಬೇಡವಾಯಿತು. ಕಾರಣ ಶೀರ್ಯದಲ್ಲಿ ಅವನಿಗೆ ದೊಡ್ಡ ಪದವಿ ಸಿಕ್ಕಿತ್ತು. ಹೀಗಾಗಿ ಬೆಂಗಳೂರಿನ ಮಾರಾಟ ಅನಿವಾರ್ಯವಾಯಿತು.

ಬೆಂಗಳೂರನ್ನು ಖರೀದಿಗೆ ತೆಗೆದುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನವುಂಟೆಂಬುದನ್ನು ಚಿಕ್ಕದೇವರಾಜ ಒಡೆಯರು ಮನಗಂಡಿದ್ದರು. ಯುದ್ಧವಿಲ್ಲದೆ ಸಾವು–ನೋವುಗಳಿಲ್ಲದೆ ಅನಾಯಾಸವಾಗಿ ಒಂದು ಹೊಸ ಪ್ರದೇಶ ತಮ್ಮ ರಾಜ್ಯಕ್ಕೆ ಸೇರುವುದಾದರೆ ಅಂತಹ ಅವಕಾಶವನ್ನೇಕೆ ಕಳೆದು ಕೊಳ್ಳಬೇಕು– ಎಂಬುದೇ ಚಿಕ್ಕದೇವರಾಜರ ತರ್ಕವಾಗಿತ್ತು. ಅಲ್ಲದೆ ಬೆಂಗಳೂರು ಎತ್ತರವಾದ ಪ್ರದೇಶದಲ್ಲಿದ್ದು, ಉತ್ತಮ ಹವಾಗುಣದಿಂದ ಕೂಡಿದ್ದಿತು. ಸೈನ್ಯದ ಠಾಣೆಗೆ ಪ್ರಶಸ್ಥ ಸ್ಥಳವಾಗಿದ್ದಿತು ಈ ಅಂಶಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದ ಅಂದಿನ ಶ್ರೇಷ್ಠ ರಾಜಕಾರಣಿಗಳಾಗಿದ್ದ ಚಿಕ್ಕ ದೇವರಾಜರು ಈ ವ್ಯಾಪಾರದ ನೆಪದಲ್ಲಿ ಔರಂಗಜೇಬನ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡರು.

ಬೆಂಗಳೂರಿನ ಮಾರಾಟದ ಸಂದರ್ಭದಲ್ಲಿ ಔರಂಗಜೇಬನು ಕೆಲವು ಷರತ್ತುಗಳನ್ನು ಚಿಕ್ಕದೇವರಾಜರಿಗೆ ವಿಧಿಸಿದನು. "ಬೆಂಗಳೂರು ನಿಮ್ಮ ವಶವಾದ ಮೇಲೆ ಪುನಃ ಮರಾಠರಿಗೆ ಆಶ್ರಯ ಕೊಡಕೂಡದು. ಹಾಗೇ ನಮ್ಮ ಶತ್ರುಗಳು ಯಾರೇ ಇರಲಿ, ಅವರಿಗೆ ನಿಮ್ಮ ರಾಜ್ಯದಲ್ಲಿ ಆಶ್ರಯ ಕೊಡಕೂಡದು. ಇದಕ್ಕೆ ಒಪ್ಪುವುದಾದರೆ ನಾವು ನಿಮಗೆ ಕೊಡಲು ಸಿದ್ದ" ಎಂಬ ಔರಂಗಜೇಬನ ಷರತ್ತುಗಳಿಗೆ ಚಿಕ್ಕದೇವರಾಜರು ಒಪ್ಪಿದರು.

ವೆಂಕೋಜಿಗೆ ಕೊಡಲೊಪ್ಪಿದ ಮೂರು ಲಕ್ಷ ರೂಗಳನ್ನು ಚಿಕ್ಕದೇವರಾಜರು ಖಾಸಿಂಖಾನನಿಗೆ ಕೊಟ್ಟು ಬೆಂಗಳೂರನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಬೆಂಗಳೂರು ಇದುವರೆಗೆ ಖಾಸಿಂಖಾನನ ವಶದಲ್ಲಿತ್ತು ಯಾರ ವಶದಲ್ಲಿ ವಸ್ತುವಿದೆಯೋ ಅವರೇ ಮಾಲೀಕರು ಎಂಬ ತತ್ವದಂತೆ (Possession is nine points of Law) ಈಗ ಖಾಸಿಂಖಾನನೇ ಬೆಂಗಳೂರಿನ

ಯಜಮಾನನಾಗಿದ್ದ. ಮೂರು ಲಕ್ಷ ರೂಗಳು ಸಂದಾಯವಾಗಿದ್ದರೂ ಖಾಸಿಂಖಾನನು ಬೆಂಗಳೂರು ಪ್ರಾಂತವನ್ನು ಚಿಕ್ಕದೇವರಾಜಿಗೆ ಬಿಟ್ಟು ಕೊಡಲು ಇಂದು_ನಾಳೆ ಎನ್ನುತ್ತಲೇ ಕಾಲಹರಣ ಮಾಡಿಸ ಖಾಸಿಂಖಾನನು ಹಾಗೂ – ಹೀಗೂ ಮೂರು ವರ್ಷಗಳು ಬೆಂಗಳೂರಿನಲ್ಲಿದ್ದು, ಅನಂತರ ಚಿಕ್ಕದೇವರಾಜನಗರ ಬಿಟ್ಟುಕೊಟ್ಟನೆಂದು ಇತಿಹಾಸಗಳಿಂದ ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ಭಿನ್ನ ಭಿನ್ನ ಐತಿಹಾಸಿಕ ವರದಿಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

ಉಲ್ಲೇಖ : ೧

ಮೊದಲನೆಯದಾಗಿ ಶ್ರೀಮನ್ಮಹಾರಾಜರ ವಂಶಾವಳಿ ಎಂಬ ಗ್ರಂಥದಲ್ಲಿ ಹೀಗೆ ವರ್ಣಿಸಲ್ಪಟ್ಟಿದೆ.

ಬೆಂಗಳೂರನ್ನು ಸಾಧಿಸಿದ ಕ್ರಮ: ಪೂರ್ವದಲ್ಲಿ ಸಾತಾರೆಯ ಅರಸನಾದ ಮಹಾ ಪರಾಕ್ರಮಶಾಲಿ ಶಂಬಾಜಿಯು ದಿಳ್ಳಿಯ ಪರ್ಯ್ಯಾಂತಕ್ಕೂ ಬಹು ಸೀಮೆಗಳನ್ನು ಕಟ್ಟಿಕೊಂಡು ಸಾತಾರೆಯಲ್ಲಿ ಇರಲು ದಿಳ್ಳಿಯ ಪಾದಾಷಹರು ವಂಚನೆಯಿಂದ ಆ ಸಾಂಬಾಜಿಯನ್ನು ಹಿಡಿದುಕೊಂಡು ಹೋದರು, ಬಳಿಕ ಅವನ ತಮ್ಮ ಶಿವಾಜಿಯು ಬಾದಾಷಾಹರ ಭಯದಿಂದ ತಪ್ಪಿಸಿಕೊಂಡು, ಕೆಲವು ದ್ರವ್ಯವನ್ನೂ ಸೇನೆಯನ್ನೂ ತೆಗೆದುಕೊಂಡು ಓಡಿಬರುತ್ತಾ ಬೆಂಗಳೂರಿನಲ್ಲಿದ್ದ ಮಾಗಡಿ ಕೆಂಪೇಗೌಡನನ್ನು ಓಡಿಸಿ ಅದನ್ನು ಸ್ವಾಧೀನ ಮಾಡಿಕೊಂಡಿರುವ ಸಮಯದಲ್ಲಿ ಶ್ರೀರಂಗಪಟ್ಟಣದ ರಣಧೀರ.

In 1687 A.D when the then Maharaja of Mysore. Chik Davaraja Wodeyar, in consideration of the valuable military help me rendered to the Moghal General, Khasim Khan, to capture Bangalore after a successful siege, from Venkoji, the Maharatta Chief of Tanjore, was able to secure it together with 12 Hoblis attached to it. For almost a nominal value n money, Dalvoi Doddaiah who was appointed for the management of this country selected one by name Thimmaiah of hale Karnataka Sect for the office of Shanbog as he was an expect accounts and gave him charge of the Kadeem dafter there. This Shanbog soon organized a suitable revenue system and laid the foundation of the future prosperity of Bangalore under the Mysore Sovereigns.

From the Palace Records – Collected by Late.B.Puttaiah.[೮]

ಕಂಠೀರವ ನರಸರಾಜ ಒಡೆಯರ ಸಾಹಸ ಪರಾಕ್ರಮವನ್ನು ತಿಳಿದು, ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಬೆಂಗಳೂರನ್ನು ಬಿಟ್ಟು ದೂರವಾದ ಇನ್ನೊಂದು ಸ್ಥಳವನ್ನು ಮಾಡಬೇಕೆಂದಿದ್ದನು.

ಆಗ ತಂಜಾವೂರು ಸಂಸ್ಥಾನದ ವಿಜಯರಾಘವ ನಾಯಕನೆಂಬುವನು ಒಬ್ಬ ತಂಗಲೆಯ ಅಚಾರ್ಯ ಪುರುಷರನ್ನು ಗುರುಗಳಾಗಿ ಮಾಡಿಕೊಂಡು, ದೇಶಕೋಶಗಳ ವಿಚಾರಣೆಗಳನ್ನು ಬಿಟ್ಟು, ದಂಡಿನ ಜನಗಳೀಗೆ ಸಂಬಳವನ್ನು ಕೊಡದೆ, ಆ ಆಚಾರ್ಯಪುರುಷರು ಹೇಳಿದಂತೆ ಚಕ್ರಾಂಕವನ್ನು ಕಾಡಿಕೊಂಡ ಮಾಡಿಕೊಂಡ ಊರ್ಧ್ವಪುಂಡ್ರವನ್ನು ಧರಿಸುತ್ತಾ, ಮೂಲಮಂತ್ರೋಪಾಸನೆ ಮಾಡಿ, ಪ್ರತಿ ದಿನದಲ್ಲಿಯೂ ಅಚಾರ್ಯಪುರುಷರ ಶ್ರೀಪಾದದ ತೀರ್ಥವನ್ನೇ ಮುಖ್ಯವಾಗಿ ತೆಗೆದುಕೊಳ್ಳುವುದಲ್ಲದೆ, ಅನ್ಯದೇವತಾ ಭಜನೆ ಇಲ್ಲದೆ ನಡೆದುಕೊಳ್ಳುತ್ತಿರುವನು ಎಂಬ ವರ್ತಮಾನವನ್ನು ಕೇಳಿ, ಈ ಶಿವಾಜಿಯು ಆಪ್ತನಾದ ತನ್ನ ಸಂಬಂಧಿಯೂ ಕೆಲವು ಸೇನೆಯನ್ನೂ ಬೆಂಗಳೂರಲ್ಲಿ ಇರಿಸಿ, ತಂಜಾವೂರಿಗೆ ಹೋಗಿ, ವಿಜಯರಾಘವ ನಾಯಕನನ್ನು ಹೊಡೆದು ಓಡಿಸಿ, ಅದನ್ನು ಕಟ್ಟಿಕೊಂಡು ಅಲ್ಲಿ ದೊರೆತನವನ್ನು ಮಾಡಿಕೊಂಡಿದ್ದನು. ಅನಂತರ ಇವನ ತಮ್ಮ ವೆಂಕೋಜಿ ಇವನ ಮಗ ಶಹಜಿ ಇವರು ತಾಂಜಾವೂರಿನಲ್ಲಿ ಇರುವ ಸಮಯದಲ್ಲಿ ಚಿಕ್ಕದೇವರಾಜ ಒಡೆಯರ ಸೇನೆಯವರು ಈ ಕಣಿವೆಯ ಕೆಳಗಿರುವ ತಿರುಚನಾಪಳ್ಳಿ, ಮಧುರೆ ಮುಂತಾದ ಸ್ಥಳಗಳ ಪಾಳೆಯಗಾರರನ್ನೂ ನಿಗ್ರಹಿಸಿ ಖಂಡನೆಯನ್ನು ನಿಗದಿ ಮಾಡಿಕೊಂಡು ಹೋಗಿದ್ದಾರೆ. ಶ್ರೀರಂಗಪಟ್ಟಣದ ದೊರೆಗಳು ಮಹಾಪರಾಕ್ರಮಶಾಲಿಗಳು. ಇವರು ನಮ್ಮ ತಾಂಜಾವೂರನ್ನು ಇವರ ಸಂಸ್ಥಾನದ ಸಮೀಪದಲ್ಲಿರುವ ಬೆಂಗಳೂರನ್ನೂ ಸಹ ಏನು ಮಾಡುವರೋ ಇವರ ಸಂಗಡ ನಾವು ಸ್ನೇಹವಂ ಬೆಳೆಸದಿದ್ದರೆ ನಮಗೆ ಎಂದೂ ಕ್ಷೇಮವಾಗಲಾರದು ಎಂದು ಆಲೋಚಿಸಿ, ತಮಗೆ ವೆಚ್ಚಕ್ಕೆ ೩ ಲಕ್ಷ ರೂಪಾಯಿಗಳನ್ನು ಕಳುಹಿಸಿಕೊಟ್ಟರೆ ಆ ಹಣಕ್ಕೆ ಬೆಂಗಳೂರನ್ನೇ ಕ್ರಯಕ್ಕೆ ಕೊಡುತ್ತೇವೆಂದು ಒಬ್ಬ ವಕೀಲನ ಸಂಗಡ ಪತ್ರವನ್ನು ಬರೆಸಿ ಚಿಕ್ಕದೇವರಾಜ ಒಡೆಯರ ಸನ್ನಿಧಾನಕ್ಕೆ ಕಳುಹಿಸಿಕೊಟ್ಟರು. ಚಿಕ್ಕದೇವರಾಜ ಒಡೆಯರವರು ಅವರು ಕೇಳಿಕೊಂಡಂತೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಬೆಂಗಳೂರನ್ನು ಸ್ವಾಧೀನಪಡಿಸಿಕೊಳ್ಳುವಷ್ಟರಲ್ಲಿಯೇ ಪನಗೊಂಢೆ ಕಾಶಿಂಖಾನನೆಂಬವನು ಶಾ.ಶಕ ೧೬೧೦ನೇ (೦.ಆ ೧೬೮೭) ಪ್ರಭವ ಸಂವತ್ಸರದ ನಿಜಾಷಾಢ ಶುದ್ದ ೧೧ರಲ್ಲಿ ಬೆಂಗಳೂರಿಗೆ ಠಾಣೆ ಹಾಕಿಕೊಂಡನೆಂಬ ವರ್ತಮಾನವನ್ನು ಕೇಳೀ, ಆ ಕಾಶಿಂಖಾನನ್ನು ಹೊಡೆದೋಡಿಸಿ, ನಿಜಾಷಾಢ ಶುದ್ದ ೧೫ರಲ್ಲಿ ತಮ್ಮ ಠಾಣ್ಯವನ್ನು ಹಾಕಿಕೊಂಡು ಕ್ರಯಕ್ಕೆ ತೆಗೆದುಕೊಂಡು ಬೆಂಗಳೂರಿಗೆ ಬುದ್ದಿವಂತರಾದ ಅಧಿಕಾರಿಗಳನ್ನು ನೇಮಕ ಮಾಡಿ, ವಿಸ್ತಾರವಾಗಿ ಪೇಟೆ ಕೋಟೆಗಳನ್ನು ಕಟ್ಟಿಸಿ, ವಾರ್ಣೀವರ್ತಕರನ್ನೂ ೧೨ ಸಾವಿರ ಮಗ್ಗದ ಜನಗಳನ್ನೂ ತಂದಿರಿಸಿ, ಇವರಿಗೆಲ್ಲಾ ಕೌಲಿಕರಾರು ಮಾಡಿಕೊಟ್ಟು ಇಲ್ಲಿ ಆದ ಜವಳಿ ಎಲ್ಲಾ ಸೀಮೆಗಳಿಗೆ ಹೋಗುವಂತೆಯೂ ಶ್ರೀರಂಗಪಟ್ಟಣದ ಅರಮನೆಗೂ ಬರುವಂತೆಯೂ ನಿಬಂಧನೆ ಮಾಡಿ ಪೇಟೆಯನ್ನು ವಸತಿ ಮಾಡಿಸಿದರು.

ಉಲ್ಲೇಖ : ೨

ಎರಡನೆಯದಾಗಿ ಸಿ.ಹಯವದನರಾಯರು ಹೀಗೆ ಹೇಳಿರುತ್ತಾರೆ.

In 1687 Bangalore also passed into the hands of the Mysore kings in the following manner:- Shivaji was dead, and Venkoji established on the throne of Tanjore, found his distant dominion of Bangalore to be an expensive and precarious posasession, insulated in a great degree by the contending armies which constantly ranged over the intermediate country. He thereof determined to sell it to the highest bidder, and chikka deva raj, who taking advantage of the general anarchy had been gradually extending his possessions, finally agreed to purchase it for three lakhs of ruppes. He accordingly sent a detachment to occupy the new purchase and to pay the money. But the negotiation having been long protracted had become a matter of notoriety, and attached the attention of Hari Raja, the Mahratta Commander-in- chief at Senji (ginjee) and of Aurangzib who had just raised the siege of Golkonda. These powers, entertaining a high opinion of the importance of Bangalore, sent each a detachment from their distant and opposite sta ions to anticipate the Raja of Mysore. Khasim Khan, the general of Aurangzib, by forced marches along the west of the Ghtas, arrived first and place being in a dismantled state preparatory to its sale, fell into his hands almost without opposition. The detachment of Hari Raja, finding themselves forestalled, marched back as they came. The imperial colours, however, were hoisted for onky four days on the ramparts of Bangalore. For Khasim Khan who had more important objects in view, resolved to accept the terms still offered by the Mysore Raja, as he would thereby obtain a large sum of money and escape the necessity of leaving a detachment to occupy the place. At the same time, its use as a point of communication would still be preserved. Thus in July 1687, this important town became part of the Mysore Kingdom.

ಉಲ್ಲೇಖ : ೩

ಮೂರನೇಯದಾಗಿ – ಎಂ.ಶಾಮರಾಯರು 'ಮಾಡರ್ನ್ ಮೈಸೂರು' ಎಂಬ ತಮ್ಮ ಗ್ರಂಥದಲ್ಲಿ ಹೀಗೆ ಹೇಳಿರುತ್ತಾರೆ.

In 1687 A.D Chikka Devaraja Wodeyar Managed to obtain possession of Bangalore which belonged to Venkoji of Tanjore. Venkoji finding himself unable to safety maintain possession of this town negotiated with Chikka Devaraja to sell the place for three lakhs of ruppes. But before the transaction could be completed, Khasim Khan, the Mughal general of Auranghzeb proceeded towards Bangalore and captured the place. He found it prudent, however, on account of the danger he had to encounter from the Maharatta armies , to transfer Bangalore to Chikka Devaraja Wodeyar on the same terms as those of Venkoji Chikka Devaraja from this time forward sedulsouly.

Cultivated the Freidnship of Khasi8m Khan who had now become established as the Mughal Viceroy of the Province of Sira which formerly belonged to the Bijapur king. Chikka Devaraja Thus Guarding himself against danger from the Mughals began extending his territories in Directions that did not interfere with the Mughal operations. Tumkur was taken the same year, then turing east by way of Hosakote, the Mysore army descended the Ghatas and subdued a great part of Salem and a large extent of terrorists all around.[೯]

ಉಲ್ಲೇಖ : ೪

ನಾಲ್ಕನೆಯದಾಗಿ ಶ್ರೀ.ಎಂ.ಫಜ್ಲುಲ್ ಹಸನ್ ಅವರು ತಮ್ಮ Bangalore Through Centuries ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ

Venkaji, now made Tanjore his capital amd shifted his residence from Bangalore to his new capital. And he soon discovered that to hold his far flung ancestral jahgir from Tanjore was a difficult task. It therefore, occurred to him that the best thing, in the circumstances in which he was placed was to sell away Bangalore to a fair bidder instead of losing it to an enemy who might attack it taking advantage of his absence. And happily for Venkaji, there was a bidder in the person of Chikka Deva Raj Wodeyar of Mysore. Hence his negotiations for sale of Bangalore with the Mysore ruler.[೧೦]

ಔರಂಗಜೇಬನು ಚಿಕ್ಕದೇವರಾಜ ಒಡೆಯರನ್ನು ಮಿತ್ರರನ್ನಾಗಿ ಮಾಡಿಕೊಂಡಿರುವುದೇ ಕ್ಷೇಮವೆಂದು ಭಾವಿಸಿ, ಚಿಕ್ಕದೇವರಾಜ ಒಡೆಯರಿಗೆ ಅನೇಕ ವಸ್ತ್ರಾಭರಣಗಳನ್ನೂ, ಖಿಲ್ಲತ್ತುಗಳನ್ನೂ ಕೊಟ್ಟು, ರಾಜಾಜಗದೇವ ಎಂಬ ಬಿರುದನ್ನೂ ನೀಡಿ ಗೌರವಿಸಿದನು. ಇದೇ ಸುಮಾರಿನಲ್ಲಿ ಚಿಕ್ಕದೇವರಾಜ ಒಡೆಯರು ತುಮಕೂರನ್ನೂ ತಮ್ಮ ವಶಕ್ಕೆ ತೆಗೆದುಕೊಂಡರು.

ಖಾಸಿಂಖಾನನ ಮೂರು ವರ್ಷದ ಆಳ್ವಿಕೆಯಲ್ಲಿ ಬೆಂಗಳೂರಿನಲ್ಲಿ ಕೆಲವು ಬದಲಾವಣೆಗಳಾದವು. ಅವುಗಳಲ್ಲಿ ಮುಖ್ಯವಾದುದೆಂದರೆ ಇಲ್ಲಿ ಆಡಳಿತಭಾಷೆಯಾಗಿದ್ದ ಮರಾಠಿ ಭಾಷೆಗೆ ಬದಲಾಗು ಉರ್ದು ಆಡಳೀತ ಭಾಷೆಯಾಯಿತು. ತಾರಾಮಂಡಲ ಪೇಟೆಯಲ್ಲಿ ಜಮ್ಮಾ ಮಸೀದಿಯನ್ನು ಕಟ್ಟಲಾಯಿತು. ದೇವಾಲಯಗಳಿಗಿದ್ದ ಪ್ರಾಶಸ್ತ್ಯ ಮಸೀದಿಗಳಿಗೂ ಲಭಿಸಿತು. ಮಸೀದಿಗಳಿಗೂ, ದರ್ಗಾಗಳಿಗೂ ಜಮೀನುಗಳು ದಾನವಾಗಿ ಕೊಡಲ್ಪಟ್ಟವು.

ಮುಂದೆ ಚಿಕ್ಕದೇವರಾಜರ ಕಾಲದಲ್ಲಿ ಬೆಂಗಳೂರು ನಾನಾ ವಿಧಗಳಲ್ಲಿ ಅಭಿವೃದ್ಧಿ ಪಡೆಯಿತು ಮರಾಠ ಸೈನಿಕರೂ ಮಾಯವಾಗಿ ಮೈಸೂರು ಸೈನಿಕರೂ ರಾರಾಜಿಸಿದರು. ಆದರೆ ವ್ಯವಹಾರದಲ್ಲಿ ಮರಾಠಿ ಮತ್ತು ಉರ್ದು ಭಾಷೆಗಳು ಉಳಿದುಕೊಂಡವು. ಆಡಳೀತದಲ್ಲಿ ಕನ್ನಡ, ಮರಾಠಿ ಮತ್ತು ಉರ್ದು ಭಾಷೆಗಳು ಮಿಶ್ರವಾದವು. ಷಾಹಜಿಕಾಲದ ಅರಮನೆ "ಗೌರಿವಿಲಾಸ" ಹೊಸ ರೂಪ ಪಡೆಯಿತು.

ಈ ಎಲ್ಲ ಐತಿಹಾಸಿಕ ಕಾರಣಗಳಿಂದ ಬೆಂಗಳೂರಿಗೆ ಒಂದು ನಿರ್ದಿಷ್ಟ ಸಾಂಸ್ಕೃತಿಕ ವಿನ್ಯಾಸ ಇರಲು ಸಾಧ್ಯವಿಲ್ಲ. ಹಲವಾರು ಸಂಸ್ಕೃತಿಗಳು ವಲಸೆ ಬಂದ ಕಾರಣವಾಗಿ ಅನೇಕ ಅವಸ್ಥಾಂತರಗಳಿಗೆ ಬೆಂಗಳೂರು ಒಳಗಾಗಿ ಸ್ಥಿತ್ಯಂತರ ಸಂಸ್ಕೃತಿಯೊಂದು ರೂಪುಗೊಂಡಿತು. ಕೆಲವು ಕಾಲಘಟ್ಟದಲ್ಲಿ ಆರ್ಥಿಕವಾಗಿ ಬಲವಾಗಿರುವ ಸಾಮ್ರಾಜ್ಯದ ಸಂಸ್ಕೃತಿಯು ಪ್ರಧಾನ ಸಂಸ್ಕೃತಿಯ ಪಾತ್ರ ವಹಿಸಿದರೆ ಇನ್ನು ಹಲವು ಕಾಲಘಟ್ಟಗಳಲ್ಲಿ ವಸಾಹತುಶಾಹಿ ಸಾಮ್ರಾಜ್ಯವು ಸಂಸ್ಕೃತಿಯು ಯಾಜಮಾನಿಕೆಯ ಪಟ್ಟವನ್ನು ತಳೆದಿರುವುದನ್ನು ಕಾಣಬಹುದು.

ಬಹಳ ಆಸ್ಥೆಯಿಂದ ಸ್ಥಾಪಿಸಿಕೊಂಡು ಬಂದಿದ್ದ ಬೆಂಗಳೂರು ಗೌಡ ಮನೆತನದಿಂದ ಜಾರಿ ಎರಡೇ ತಲೆಮಾರುಗಳ ನಂತರ ಪರಭಾರೆಯಾಯಿತು. ಬಿಜಾಪುರದ ಸುಲ್ತಾನನ ಅಪ್ಪಣೆಯಂತೆ ಷಾಹಜಿ ಕೈಗೆ ಬೆಂಗಳೂರು ಬಂದ ಮೇಲೆ ಈ ಸ್ಥಿತ್ಯಂತರದ ಕಾಲದಲ್ಲಿ ಮರಾಠಿ ಭಾಷೆ ಪ್ರಬಲವಾಯಿತು. ಸರಾಗವಾದ ಆಡಳಿತಕ್ಕೆ ರಾಜ ಮತ್ತು ಅವನ ಅಧೀನರ ನಡುವೆ ಸಂಪರ್ಕವಿರಬೇಕು. ಅಂಥ ಸಂಪರ್ಕ ಸಾಧ್ಯವಾಗುವುದು ಇಬ್ಬರ ನಡುವೆ ಒಂದೇ ಭಾಷೆ ಇದ್ದಾಗ. ಹೀಗಾಗಿ ಷಾಹಜಜಿಯ ಮಾತೃಭಾಷೆ ಮರಾಠಿ ಪ್ರಬಲವಾಗಿ ಅಧೀನರ ಮೇಲೆ ಹೇರಿಕೊಳ್ಳಲು ಅನುಕೂಲ ದೃಷ್ಟಿ ಮತ್ತು ಅವಶ್ಯಕತೆ ಒಂದು ಕಾರಣವಾದರೆ ರಾಜನ ಧೋರಣೆಗಳು ತನ್ನ ಭಾಷೆಯ ಮೇಲಿನ ವ್ಯಾಮೋಹ, ಅಭಿಮಾನಗಳೂ ಕಾರಣವಾಗುತ್ತವೆ. ಜನರ ಮೇಲೆ ಅಧಿಕಾರದ ಮೇಲೆ ಆ ಭಾಷೆ ಹೇರಲ್ಪಡುತ್ತದೆ. ಹೀಗಾಗಿ ದಿನನಿತ್ಯದ ಆಡಳಿತದ ಬಳಕೆಯಲ್ಲಿ ಮರಾಠಿ ಸ್ಥಾನಗಳಿಸಿತು.

ಲೆಕ್ಕಗಳು ಮಾತ್ರ ಪರ್ಷಿಯನ್ ಭಾಷೆಯಲ್ಲಿರುತ್ತಿದ್ದವು. ಸುಲ್ತಾನರ ಕಡೆಯಿಂದ ಬರುವ ಲೆಕ್ಕಗಳೂ ಪರ್ಷಿಯನ್ ಭಾಷೆಯಲ್ಲಿರುತ್ತಿದ್ದವು. ಈ ಎರಡೂ ಭಾಷೆಗಳ ನಡುವೆ ಕನ್ನಡಕ್ಕೆ ಸ್ಥಾನ ಇದ್ದದ್ದು ಶಿಲಾಶಸನಗಳ ಮೇಲೆ ಮಾತ್ರ. ಷಾಹಜಿಯ ಜೊತೆ ಬೆಂಗಳೂರಿಗೆ ಬಂದ ಅವರ ವಂಶಸ್ಥರು ಗಿವಿಪುಗ ಪ್ರದೇಶದಲ್ಲಿ ಈಗಲೂ ಇದ್ದಾರೆ. ಆ ಕಾಲದಲ್ಲಿ ಆರಂಭವಾದ ಗೋಸಾಯಿ ಮಠ ಈಗಲೂ ಗವಿಗಂಗಾಧರ ದೇವಾಲಯದ ಪಕ್ಕದಲ್ಲಿ ಇದೆ. ಷಾಹಜಿ ೧೬೬೩ರಲ್ಲಿ ಮರಣಿಸಿ ಅವನ ಆಡಳಿತವು ಕೊನೆಗೊಂಡಿತು. ಇವನ ಮಗ ವೆಂಕಾಜಿಯ ಕೈಗೆ ಬೆಂಗಳೂರು ಬಂದಿತು. ನಂತರದ ಕೆಲವೇ ದಿನಗಳಲ್ಲಿ ಅವನು ಆದಿಲ್‌ಷಾಹಿಯ ಆಜ್ಞೆಯ ಪ್ರಕಾರ ತಂಜಾವೂರಿನ ಹಕ್ಕುದಾರಿಕೆಯ ಗಲಭೆಯನ್ನು ಸರಿಪಡಿಸಲು ಅಲ್ಲಿಗೆ ಹೋಗಬೇಕಾಯಿತು. ಬೆಂಗಳೂರಿನಲ್ಲಿ ಅರಾಜಕ ಪರಿಸ್ಥಿತಿ ಉಂಟಾಗಿ ವೆಂಕೋಜಿ ಅದನ್ನು ಮಾರಲು ನೋಡಿದನು. ಅದನ್ನು ಅಡ್ಡಿಪಡಿಸಿ ಶಿವಾಜಿ ಅದನ್ನು ಗೆದ್ದುಕೊಂಡು ತನ್ನ ಅತ್ತಿಗೆ ವೆಂಕೋಜಿಯ ಪತ್ನಿ ದೀಪಾಬಾಯಿಗೆ ಉಡುಗೊರೆಯಾಗಿ ಕೊಟ್ಟನು. ಅಧಿಕಾರ ಶಿವಾಜಿಯದ್ದೇ ಆಗಿತ್ತು. ಆದರೆ ಆಡಳಿತ ಮಾತ್ರ ವೆಂಕಾಜಿಯ ಪಾಲಿಗೆ ಬಂತು. ಆಡಳಿತ ಹಾಗೆಯೇ ಉಳಿದು ಅಧಿಕಾರ ಸ್ಥಿತ್ಯಂತರವಾಯಿತು. ಶಿವಾಜಿ ೧೬೮೦ ರಲ್ಲಿ ಮರಣ ಹೊಂದಿದನು. ವ್ಯವಸ್ಥೆಯಲ್ಲಿ ಅಲ್ಲೋಲ ಕಲ್ಲೋಲವುಂಟಾಗಿ ಆಡಳಿತ ಏರುಪೇರಾಯಿತು. ಈ ಗಲಭೆಯನ್ನು ಮಟ್ಟ ಹಾಕಲು ಹೊರಟ ಸಾಂಬಾಜಿಯ ಕಣ್ಣಿಗೆ ಬೆಂಗಳೂರು ಕಂಡಿತು. ಇದರ ಸುಳಿವನ್ನರಿತ ಔರಂಗಜೇಬನು ತನ್ನ ಸೇನಾಪತಿ ಖಾಸಿಂ ಖಾನನನ್ನು ಕಳುಹಿಸಿದನು. ಯಾವ ರಕ್ಷಣೆಯೂ ಇಲ್ಲದ ಬೆಂಗಳೂರು ಸುಲಭವಾಗಿ ಅವನ ವಶವಾಯಿತು.

ಬೆಂಗಳೂರಿನ ಇತಿಹಾಸದಲ್ಲಿ ಈ ಅಧಿಕಾರದ ಸ್ಥಿತ್ಯಂತರ ಮಹತ್ವದ್ದು. ಇದುವರೆಗೆ ಹಿಂದೂ ಮತ್ತು ಮರಾಠರ ಆಳ್ವಿಕೆಯಲ್ಲಿದ್ದ ಬೆಂಗಳೂರು ಈಗ ನೇರವಾಗಿ ಮುಸ್ಲಿಂ ಆಡಳಿತಕ್ಕೆ ಒಳಗಾಯಿತು.

ಖಾಸಿಂ ಖಾನನು ಬೆಂಗಳೂರನ್ನು ಮೂರು ವರ್ಷಗಳವರೆಗೆ ಆಳಿದನು. ಉರ್ದು ಆಡಳಿತ ಭಾಷೆಯಾಯಿತು.

ಅಧಿಕಾರ, ಆಡಳಿತ, ಯುದ್ಧ- ಕಾರಣಗಳೇನೇ ಇರಲಿ ಸ್ಥಿತ್ಯಂತರದ ಪ್ರಕ್ರಿಯೆಯೊಂದು ಆ ಕಾಲದ ಜನರ ಭಾಷೆ, ಧರ್ಮ ಇವುಗಳ ಮೇಲೆ ಮಹತ್ತರವಾದ ಪರಿಣಾಮ ಬೀರುತ್ತದೆ ಎಂಬುದಕ್ಕೆ ಬೆಂಗಳೂರಿನ ಈ ಸ್ಥಿತ್ಯಂತರದ ಕಾಲಘಟ್ಟ ಸಮರ್ಥ ಉದಾಹರಣೆ.

೩.೫ : ಬೆಂಗಳೂರಿನ ಪ್ರಾದೇಶಿಕ ವಿಭಾಗಗಳು ಮತ್ತು ಆಚರಣೆಗಳು :

ಬೆಂಗಳೂರನ್ನು ನಿರ್ಮಿಸಿದ ಒಂದನೇ ಕೆಂಪೆಗೌಡ ಯಲಹಂಕ ನಾಡ ಪ್ರಭುಗಳ ರಾಜವಂಶಸ್ಥ. ಕೆಂಪೇಗೌಡನ ವಂಶಸ್ಥರು ಮತ್ತು ಬೆಂಗಳೂರು ನಿರ್ಮಾಣದ ಬಗ್ಗೆ ದೊರೆಯುವ ಎಲ್ಲಾ ಚಾರಿತ್ರಿಕ ಮೂಲಗಳನ್ನು ಇಟ್ಟುಕೊಂಡು ಅಧ್ಯಯನ ನಡೆಸಿದ ಕೃತಿಗಳು ತೀರಾಕಡಿಮೆ. ಕೆಂಪೇಗೌಡನ ವಂಶಸ್ಥರನ್ನು ಪಾಳೇಗಾರರೆಂದು, ನಂತರದಲ್ಲಿ ವಿಜಯನಗರದ ಸಾಮಂತರೆಂದು ಗುರುತಿಸಿದ್ದು

ಇದಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳನ್ನು ಸಮಗ್ರವಾಗಿ ಪರಿಶೀಲಿಸುವ ಅಗತ್ಯ ಇದೆ. ಬೆಂಗಳೂರು ಸಂಸ್ಥಾಪಕ ಕೆಂಪೇಗೌಡನ ವಂಶಸ್ಥರ ಬಗ್ಗೆ ಹಾಗೂ ಯಲಹಂಕ ನಾಡ ಪ್ರಭುಗಳ ಉಗಮದ ಬಗ್ಗೆ ಭಿನ್ನವಾದ ಮಾಹಿತಿ ಇದ್ದು, ಜೊತೆಗೆ ಬೆಂಗಳೂರು ಸ್ಥಳ ನಿಷ್ಪತ್ತಿಗೆ ಮತ್ತು ಪಾಳೇಗಾರರ ಬಗೆಗಿನ ಉಗಮ ಮತ್ತು ಮೂಲಗಳ ಬಗ್ಗೆ ವಿಪುಲವಾದ ವಿವರಗಳಿವೆ. ಹೀಗಾಗಿ ವಿಭಿನ್ನ ಸಾಹಿತ್ಯಕ ಮೂಲಗಳನ್ನು ಪರಿಶೀಲಿಸಿದಾಗ ತಿಳಿದುಬರುವುದೇನೆಂದರೆ ಅವತಿಯ ರಣಭೈರೇಗೌಡ, ಯಣಮಂಜಿ, ಬಯಿರದೇವ, ಜಯಪ್ಪಗೌಡ, ಕೆಂಪಪ್ಪ, ತೊಟ್ಟಿಲು ಕೂಸು ಮತ್ತು ಹಾವಿನ ಕತೆ ಇತ್ಯಾದಿ ವಿವರಗಳು ಹೆಣೆದುಕೊಂಡಿದ್ದು ಇವೆಲ್ಲವೂ ಬಹುತೇಕ ಸ್ಥಳೀಯ ಹಿನ್ನೆಲೆಯಲ್ಲಿ ಗುರುತಿಸಿಕೊಂಡಿರುವುದರಿಂದ ಕೆಂಪೇಗೌಡ ವಂಶಸ್ಥರನ್ನು ಸ್ಥಳೀಯ ಹಿನ್ನೆಲೆಯಲ್ಲಿಯೇ ಗುರುತಿಸಿಕೊಳ್ಳಬಹುದು. ಡಾ.ಎಂ.ಜಿ.ಮಂಜುನಾಥ್‌ರವರು ಸಂಪಾದಿಸಿರುವ ಬೆಂಗಳೂರಿನ ಬಖೈರುಗಳಲ್ಲಿ ಯಲಹಂಕ ತಾಲೂಕನ್ನು ಪೆನುಗೊಂಡ ಅರಸರು ಜೀಯಗೌಡನಿಗೆ ದಯಪಾಲಿಸಿದ್ದು ಅವನ ವಂಶಾನುಕ್ರಮಣಿಕೆ ಮಂಜುನಾಥ್ ಅವರು ಉಲ್ಲೇಖಿಸಿದಂತೆ ಜಯಗೌಡ ಅವತಿಯ ರಣಭೈರೇಗೌಡನ ಸಹೋದರನಾಗಿದ್ದು ಅವನ ಮಗ ಗಿಡ್ಡೇಗೌಡ ಅವನ ಮಗ ಕೆಂಪನಾಚಗೌಡ, ಅವನ ಮಗನೇ ಬೆಂಗಳೂರು ಸ್ಥಾಪಕನಾದ ಕೆಂಪೇಗೌಡ.

ಯಲಹಂಕ ಭೂಪಾಲ ಜಯಗೌಡನ ಮಕ್ಕಳು ಗಿಡ್ಡಪ್ಪಗೌಡ ಮತ್ತು ಮಾಚಯ್ಯಗೌಡ. ಜಯಗೌಡ ತನ್ನ ತಂದೆಯಂತೆ ಅಸಾಧಾರಣ ದೈವಭಕ್ತ ಅವನ ಕನಸಿನಲ್ಲಿ ಸೋಮೇಶ್ವರ ದರ್ಶನವಿತ್ತನಂತೆ. ಅದರ ಕುರುಹಾಗಿ ಹಲಸೂರಿನಲ್ಲಿ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿದ ಎಂದು ಹೇಳುತ್ತಾರೆ. ಮಾನಸಿಕವಾದ ಸ್ವಪ್ನ ಕಲ್ಪನೆ ಅವನಿಗೆ ಹಾಗೂ ಅವನ ವಂಶಸ್ಥರಿಗೆ ಸಹಜವಾದ ಶೈವ ಭಕ್ತಿಯ ಸಂಕೇತವಾಗಿದೆ. ಯಲಹಂಕ ನಾಡ ಪ್ರಭುಗಳ ಚರಿತ್ರೆಯಲ್ಲಿ ಸೋಮೇಶ್ವರ ದೇವಾಲಯದ ಚರಿತ್ರೆಯೂ ಸೇರಿಕೊಂಡಿದೆ. ಗಿಡ್ಡಪ್ಪ ಗೌಡನಿಗೆ ಬಹಳ ಕಾಲ ಮಕ್ಕಳಾಗಲಿಲ್ಲ. ಮನೆ ದೇವತೆ ಕೆಂಪಮ್ಮನನ್ನು ವಿಶೇಷವಾಗಿ ಆರಾಧಿಸಿದ ಮೇಲೆ ಅವಳ ಅನುಗ್ರಹದಿಂದ ಒಬ್ಬ ಗಂಡು ಮಗ ಹುಟ್ಟಿನೆಂದು ಅವನಿಗೆ ನಾಚಪ್ಪ ಅಥವಾ ನಂಜೇಗೌಡ ಎಂಬ ಹೆಸರಿಟ್ಟರೆಂದು ಪ್ರತೀತಿ ಇದೆ. ಇವನ ಹೆಸರಿನಲ್ಲಿ ಶಾಸನವಿಲ್ಲ, ಸಾಹಿತ್ಯವೂ ಇದ್ದಂತಿಲ್ಲ, ಕೆಂಪನಾಚಪ್ಪ ಗೌಡ ಕೆಂಪನಾಚೇಗೌಡ ಎಂದೇ ಹೆಸರಾಗಿದ್ದಾನೆ. ಯಲಹಂಕ ನಾಡ ಪ್ರಭುಗಳಲ್ಲಿ ಇವನಿಂದಲೇ "ಕೆಂಪ" ಎನ್ನುವ ಹೆಸರು ಮೊದಲಾಯಿತು. ಕೆಂಪ ಎನ್ನುವ ಹೆಸರು ಶಿವನಿಗೆ ಅನ್ವಯಿಸುತ್ತದೆ. "ಶಿವರಹಸ್ಯ" ಗ್ರಂಥದಲ್ಲಿ ರುದ್ರ, ಅಥವಾ ಶಿವಕೆಂಪು ಎಂದಿದೆ. ಶಿವ, ಪಾರ್ವತಿಯ ತದ್ರೂಪು ಕೆಂಪಮ್ಮ ಅರ್ಧನಾರೀಶ್ವರನಾದುದರಿಂದ ಪಾರ್ವತಿಗೂ ಸಮೀಕರಿಸಬಹುದು. ಕೆಂಪಮ್ಮನ ಪೂಜೆ ಎಂದರೆ ಪಾರ್ವತಿಯ ಪೂಜೆ ಎಂದೇ ಅರ್ಥ. ಮನೆತನದ ಶೈವಾರಾಧಕ ಅಂಶವನ್ನು ಹೆಸರಿನಲ್ಲಿ ಉಳಿಸಿಕೊಂಡಿದ್ದಾನೆ. ವಿಜಯನಗರ ಅರಸರ ಅತ್ಯಂತ ನೆಚ್ಚಿನ ಪಾಳೇಗಾರರಲ್ಲಿ ಕೆಂಪನಂಜೇಗೌಡ ಪ್ರಮುಖನಾಗಿದ್ದನು. ಇವನ ಮಗನೇ ಬೆಂಗಳೂರು ಕೆಂಪೇಗೌಡ. ವಿಜಯನಗರ

ದರ್ಶನದ ಸ್ಫೂರ್ತಿಯಿಂದ ನವ ಬೆಂಗಳೂರು ರಾಜಧಾನಿ ನಿರ್ಮಿಸಲು ನಿರ್ಧರಿಸಿದ ಪ್ರಧಾನ ಬೆಂಗಳೂರನ್ನು ೪ ಕಡೆ ಕಾವಲು ಸ್ಥಳಗಳಾಗಿ ಗುರುತು ಮಾಡಿಸಿದ. ಅದು ಪೂರ್ವಕ್ಕೆ ಅಲಸೂರು ಕೆರೆ ಏರಿಯ ಮೇಲೆ, ಪಶ್ಚಿಮಕ್ಕೆ ಕೆಂಪಾಂಬುಧಿ ಕೆರೆ ಏರಿಯ ಮೇಲೆ, ಉತ್ತರಕ್ಕೆ ಹೆಬ್ಬಾಳದ ರಸ್ತೆಯ ಕಡೆ, ದಕ್ಷಿಣಕ್ಕೆ ಲಾಲ್‌ಬಾಗಿನ ತೋಟದ ಬಂಡೆಯ ಮೇಲೆ ಗುರುತಾದವು.

ಇವಿಷ್ಟು ಗುರುತುಗಳು ನಮಗೆ ಸಿಗುವುದು ಲಿಖಿತ ದಾಖಲೆಗಳಾದ ಶಾಸನಗಳಲ್ಲಿ. ಲಿಖಿತ ಪರಂಪರೆಯ ಜಡ ಶಿಷ್ಟ ದಾಖಲೆಗಳಲ್ಲಿ ಜಾನಪದದ ಚಲನಶೀಲ ಅವ್ಯಕ್ತ ಪರಂಪರೆಯೊಂದನ್ನು ಹುಡುಕುವ ಪ್ರಯತ್ನ ಎಲ್ಲ ಕಾಲದಲ್ಲೂ ನಡೆದಿದೆ. ವ್ಯವಸ್ಥೆಯ ಪರವಾಗಿದ್ದ ಮತ್ತು ಅರಿವಿನ ಸಂಪ್ರದಾಯಕ ಆತರಗಳಿಂದ ಶಾಸನಗಳಲ್ಲಿ ಜಾನಪದವನ್ನು ಶೋಧಿಸುವಾಗ ಎದುರಾಗುವ ಸಮಸ್ಯೆ ವೈರುಧ್ಯದ್ದು. ಕಾಲದೇಶಗಳ ಮತ್ತು ವರ್ಣವರ್ಗಗಳ ಸಂಕುಚಿತ ವಲಯಕ್ಕೆ ಪರಿಮಿತಿಗೊಳ್ಳುತ್ತಿದ್ದ ಕಾರಣದಿಂದ ಇಡೀ ವ್ಯವಸ್ಥೆಯ ಅಖಂಡ ವೈರುಧ್ಯಗಳನ್ನು ಹಿಡಿದಿಡಲು ಅಸಾಧ್ಯ. ಯಾಕೆಂದರೆ ನಮ್ಮ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯ ಸಿದ್ದ ಮಾದರಿಗಳು ವಿದ್ಯಾವಂತ ಸಮೂಹದ ದಿಕ್ಕು ತಪ್ಪಿಸಿದವು. ನಿರ್ಜೀವ ಒಡಲೊಳಗೆ ಮಿಡಿಯುತ್ತ ಬಂದ ಚಲನಶೀಲ ಪ್ರವಾಹದ ಜೀವದ್ರವ್ಯ ಹುಡುಕಾಟ. ಆದರೆ ಊಳಿಗಮಾನ್ಯ ಕಾಲದ ವರ್ಗ ವರ್ಣ ಧೋರಣೆಗಳು ಕೆಲವು ಆಚರಣೆಗಳ ನಿಲುವನ್ನು ಬದಲಾಯಿಸಿದವು. ಉದಾಹರಣೆಗೆ ಪರಿಮಿತ ವ್ಯಾಪ್ತಿಯ ಶಾಸನಗಳ ಮೂಲಕ ಅಪರಿಮಿತ ವ್ಯಾಪ್ತಿಯ ಜಾನಪದ ಪ್ರವೇಶಿಸುವಲ್ಲಿನ ಕಷ್ಟವನ್ನು 'ಪಗರಣ'ದ ಚರ್ಚೆಯ ಸಂದರ್ಭದಲ್ಲಿ ನೋಡುತ್ತೇವೆ. ಶಿಷ್ಟಪರಂಪರೆ ಒದಗಿಸಬಹುದಾದ ಅತೃಪ್ತರ ಮಾಹಿತಿಗಿಂತ ವಸ್ತುನಿಷ್ಠವಾದ, ಸಮಗ್ರವಾದ ಅಪೂರ್ವ ಮಾಹಿತಿಯನ್ನು ಜಾನಪದ ಒದಗಿಸಿದ್ದುಂಟು. ಇದಕ್ಕೆ ನಿದರ್ಶನ ಎಂದರೆ ಬುಡಕಟ್ಟಿನ ಸಾಮೂಹಿದ ಒಡೆತನದ ನಾಶವಾಗಿ, ವರ್ಗ ವರ್ಣ ಸ್ಥಿತಿಯ ಸಂರಚನೆಯ ಮಾದರಿಗಳು, ಕನ್ನಡ ನಾಡಿನಲ್ಲಿಯೂ ಸಹಾ ಈ ಪ್ರಕ್ರಿಯೆ ಉತ್ತರದ ಸಾಮ್ರಾಜ್ಯಗಳ ಆಕ್ರಮಣ ನೀತಿ, ವಿದೇಶೀ ವ್ಯಾಪಾರಗಳ ಫಲವಾಗಿ ಉದ್ಭವಿಸಿತು. ಇಲ್ಲಿ ಮೊಟ್ಟಮೊದಲು ಸಿಗುವ ಅಶೋಕನ ಶಾಸನಗಳ ಹಿನ್ನೆಲೆ ಮತ್ತು ಅರ್ಥ ಇದೇ. ಮಾತೃ ಆರಾಧಕ ಆದಿಮ ಕೃಷಿಕರು ಮತ್ತು ಇವರನ್ನು ಒತ್ತಿಕೊಂಡು ಬಂದು ನಿಂತ ವಲಸೆಗಾರ ಪಶುಪಾಲಕರ ದ್ರಾವಿಡರ ಮಧ್ಯೆ ಸಂಘರ್ಷಕ್ಕಿಂತ, ಸಮನ್ವಯಗುಣವೇ ದ್ರಾವಿಡ ಸಂಸ್ಕೃತಿಗೆ ತಳಹದಿಯಾಯಿತು. ಇವರನ್ನು ತುಳಿಯುತ್ತಾ ಬಂದ ವೈದಿಕ ಸಂಪ್ರದಾಯ ಸಮೃದ್ದ ವ್ಯಾಪಾರ, ವ್ಯವಸಾಯ ಕ್ರಮಗಳು ಮತ್ತು ಉತ್ತರದ ಸಾಮ್ರಾಜ್ಯದ ಉಗಮಕ್ಕೆ ಕಾರಣವಾದವು. ಕನ್ನಡ ಮೂಲದ್ದೇ ಆದ ಪ್ರಥಮ ರಾಜವಂಶಗಳು ಸ್ಥಳೀಯ ಸಣ್ಣಪುಟ್ಟ ರಾಜ್ಯಗಳನ್ನು ಅಥವಾ ಬುಡಕಟ್ಟು ಸಂಸ್ಥೆಗಳನ್ನು ನಾಶಮಾಡಿ ನಾಡಿನ ದಕ್ಷಿಣ ಮತ್ತು ಪಶ್ಚಿಮದ ಭಾಗದಲ್ಲಿ ಮೂಡಿ ಬಂದವು. ದಕ್ಷಿಣದ ರಾಜ್ಯಕ್ಕೆ ತಮಿಳುನಾಡಿನ, ಪಶ್ಚಿಮದ ರಾಜ್ಯಕ್ಕೆ ಆಂಧ್ರದ ಪ್ರಭಾವವಾದದ್ದು ಹೀಗೆಯೇ. ಮೂಲ ದಕ್ಷಿಣ ದ್ರಾವಿಡದಿಂದ ತಮಿಳು, ಕನ್ನಡಗಳು ಕ್ರಿ.ಪೂ. ೩೦೦ಕ್ಕೂ ಹಿಂದೆಯೇ ಬೇರ್ಪಟ್ಟವೆಂದು

ವಿದ್ವಾಂಸರ ಊಹೆ. ಕನ್ನಡ ನಾಡಿನಲ್ಲಿ ಮೊದಲು ಸಿಗುವ ಅಶೋಕನ ಶಾಸನಗಳು ಈಗ ಪ್ರಾಕೃತದಲ್ಲಿವೆ. ಬೌದ್ದ ಧರ್ಮೀಯರು ವ್ಯಾಪಾರಿ ವರ್ಗ ಮತ್ತು ಆಡಳಿತಗಾರರಿಗೆ ಒಳಪಟ್ಟಿದ್ದ ಕನ್ನಡ ಪ್ರದೇಶಗಳಲ್ಲಿ ಈ ಶಾಸನಗಳು ದೊರತಿರುವುದು ಸಹಜ. ಕನ್ನಡ ಜನಪದರನ್ನು ವಿರೋಧಿಸುವ ಇವುಗಳ ಸ್ವಭಾವಕ್ಕೆ ಇದು ಪರೋಕ್ಷ ನಿದರ್ಶನ.

ಬೌದ್ದ-ಜೈನ ಮತಗಳು ಹುಟ್ಟಿದ್ದು ಉತ್ತರ ವಾಯುವ್ಯ ಭಾರತದಲ್ಲಿ, ಅವು ಜನಪರ ಮತ್ತು ವೈದಿಕ ವಿರೋಧಿ ಆಶಯಗಳಿಂದ ಕೂಡಿದ್ದರೂ ಕನ್ನಡ ನಾಡಿಗೆ ಕಾಲಿಡುವ ಹೊತ್ತಿಗೆ ತಮ್ಮ ಸತ್ವವನ್ನು ಕಳೆದುಕೊಂಡು ರಾಜ, ವ್ಯಾಪಾರಿ ಮತ್ತು ಆಡಳಿತಗಾರರ ಮಧ್ಯೆ ಜೀವ ಹಿಡಿದಿಡುವ ಮಟ್ಟಕ್ಕಿಳಿದವು. ಕನ್ನಡ ನೆಲದ್ದೇ ಆದ ಗಂಗ, ಕದಂಬರ ಶಾಸನಗಳು ಸಂಸ್ಕೃತದಲ್ಲಿ ಹುಟ್ಟಿದ್ದಕ್ಕೆ ಕಾರಣ, ಕನ್ನಡ ಮಾತನಾಡುತ್ತಿದ್ದ ಅಂದಿನ ಕುರುಬರು, ಬೇಡ, ಗೊಲ್ಲ, ಒಕ್ಕಲಿಗ, ಮೊದಲಾದ ಸಾಮಾನ್ಯ ಜನವರ್ಗಗಳ ಹಳ್ಳಿ ಹಟ್ಟಿಗಳಲ್ಲಿ ಮೂಲ ಸಂಸ್ಕೃತಿಯ ಜನ ಜೀವನದ ವಿಧಾನಗಳನ್ನು ವರ್ಗಹಿತಕ್ಕನುಗುಣವಾಗಿ ತಿರುಚುವ ದೇವ ಭಾಷಿಕ ವೈದಿಕರನ್ನು ಪ್ರತಿಷ್ಠಾಪಿಸಿ ಅಗ್ರಹಾರಗಳನ್ನು ಮಾಡತೊಡಗಿದ್ದು. ಜಾನಪದವು ಶ್ರಮ ಜೀವಿಗಳ ವಿಧಾನವೇ ಆಗಿರುವುದರಿಂದ ಒಂದಿಲ್ಲೊಂದು ವಿಧದಿಂದ ಜಾನಪದ ಆಚರಣೆಗಳು ಏನೆಲ್ಲಾ ಪ್ರಾದೇಶಿಕ ಬದಲಾವಣೆಗಳಾದರೂ ತಮ್ಮ ಮೂಲ ಮಾತೃಕೆಗಳನ್ನು, ಅಸ್ಮಿತೆಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತಲೇ ಬಂದವು.

ಒಂದು ಊರನ್ನು ಅಗ್ರಹಾರವಾಗಿ ಮಾಡಬೇಕಾದಾಗ ಅದರ ಪರಂಪರಾಗತ ಜನಪದ ಹೆಸರನ್ನು ಕಿತ್ತು ಹಾಕಿ ಸಂಸ್ಕೃತ ಹೆಸರನ್ನಿಡಲಾಗುತ್ತಿತ್ತು. ಇದು ಬರಿ ಹೆಸರಿನ ಬದಲಾವಣೆ ಅಷ್ಟೇ ಅಲ್ಲ, ವೈದಿಕ ಸಂಸ್ಕೃತಿಯನ್ನು ಜಾನಪದದ ಮೇಲೆ ಹೇರುವ ಕ್ರಮದ ಸೂಚನೆಯಾಗುತ್ತಿತ್ತು. ಹೀಗೆ ಅಗ್ರಹಾರಗಳಾಗಿ ಮೆರೆದ ಫ್ಯೂಡಲ್ ಊರುಗಳು ಇಂದು ಹೇಳ ಹೆಸರಿಲ್ಲದಂತೆ ಹಿಂದೆ ಸರಿದಿವೆ. ಅಗ್ರಹಾರಗಳಾಗಿ ಪುನರ್ ನಾಮಕರಣಗೊಂಡ ಎಷ್ಟೋ ಊರುಗಳು ಹೊಸ ಹೆಸರುಗಳನ್ನು ಶಾಶ್ವತವಾಗಿ ಉಳಿಸಿಕೊಳ್ಳಲಿಕ್ಕಾಗದೇ ತಮ್ಮ ಮೂಲ ಹೆಸರುಗಳಿಂದಲೇ ಉಳಿದು ಬಂದಿರುವುದು ಶೋಷಕ ವರ್ಗದ ವಿರುದ್ದ ಜನಪದರ ವಿಜಯವೆಂದೇ ಹೇಳಬೇಕಾಗುತ್ತದೆ. ಆದರೆ ವೈದಿಕ ಸಂಸ್ಕೃತಿ ಶಕ್ಯವಾಗಲೇ ಇಲ್ಲ.

ಯಾವುದೇ ಒಂದು ಸ್ಥಳದಲ್ಲಿ ಹುಟ್ಟಿಕೊಂಡ ಐತಿಹಾಸಿಕ ಕೃತಿ ಪ್ರಾದೇಶಿಕ, ಭೌಗೋಳಿಕ ಗುಣಗಳನ್ನು ಸಮಕಾಲೀನ ವಸ್ತು ರೂಪದ ಸಾಮಗ್ರಿಗಳನ್ನೂ ತನ್ನ ಒಡಲಲ್ಲಿ ತುಂಬಿಕೊಂಡು ಹೊರ ಬಂದಿರುತ್ತದೆ. ಘಟಿಸಿದ ಘಟನೆಯು ಐತಿಹಾಸಿಕ ಕೃತಿಯಾಗಿ ಹೊರಬಂದಾಗ ಅದರಲ್ಲಿ ಸಾಕಷ್ಟು ಇತಿಹಾಸ, ಸತ್ಯಾಂಶ ಮತ್ತು ಇತರ ಗುಣಗಳು ಹುದುಗಿರುತ್ತದೆ. ಘಟನೆ ಅಥವಾ ಕೃತಿ ಪ್ರಸರಣ ಹೊಂದುತ್ತಾ ಹೋದಂತೆ ಅದರ ಐತಿಹಾಸಿಕ ಗುಣಗಳೂ ಗೌಣವಾಗುತ್ತದೆ. ಕೆಲವೊಮ್ಮೆ ಘಟನೆ ಘಟಿಸಿದ ಸ್ಥಳದಲ್ಲೂ ಇತಿಹಾಸ ತನ್ನ ಮೂಲ ಗುಣಗಳನ್ನು ಕಳೆದುಕೊಳ್ಳುವ ಸಾಧ್ಯತೆಗಳಿದ್ದು, ಪಾಠಾಂತರಗಳೂ ಹೆಚ್ಚಿಗೆ ಲಭ್ಯವಾಗುವ ಸಾಧ್ಯತೆಗಳಿರುತ್ತವೆ. ಉದಾಹರಣೆಗೆ

ಕರ್ನಾಟಕದ ಆದಿಮ ಸಮಾಜದ ಕೆಲವು ಆಚರಣೆ ನಂಬಿಕೆ, ತತ್ವಗಳು ಇತಿಹಾಸದ ಕಾಲದಲ್ಲಿ ಪರಿಷ್ಕಾರಗೊಂಡು ವೈದಿಕ ಆಚರಣೆಗಳಾಗಿ ಪರಿವರ್ತಿತಗೊಂಡವು. ಜನಪದ ಸಂಸ್ಕೃತಿಯ ಹಲವಾರು ಪರಿಭಾಷೆಗಳು ತಮ್ಮ ಮೂಲ ಮಾತೃಕೆಯನ್ನು ಉಳಿಸಿಕೊಂಡಿದ್ದರೂ ಅವುಗಳಲ್ಲಿ ವೈದಿಕ ಸಂಸ್ಕೃತಿಯ ಛಾಯೆಗಳು ಕಾಣುವುದು ಈ ಕಾರಣಕ್ಕಾಗಿಯೇ. ಹೀಗಾಗಿ ಈ ಸಂದರ್ಭದ ಕಂಠಸ್ಥ ಮತ್ತು ಲಿಖಿತ ದಾಖಲೆಗಳನ್ನು ಪರಿಶೀಲಿಸಿದಾಗ ವಿರೋಧಾಭಾಸಗಳಿರುವುದು ಕಂಡು ಬರುತ್ತದೆ. ಉದಾಹರಣೆಗೆ ಬೆಂಗಳೂರಿನ ಉಗಮದ ಬಗ್ಗೆ ಇರುವ ಐತಿಹ್ಯ ಲಿಖಿತ ದಾಖಲೆಗಳಲ್ಲಿ ಕೋರಮಂಗಲದ ಕೆಂಪೇಗೌಡನ ದೇವಾಲಯದ ಪ್ರಸ್ತಾಪವಿಲ್ಲ. ಅದನ್ನು ಅವರು ಒಪ್ಪುವುದೂ ಇಲ್ಲ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಪ್ರಾದೇಶಿಕ ವಿಭಾಗಗಳ ಅಧ್ಯಯನಗಳನ್ನು ಆಚರಣೆಗಳ ಅಧ್ಯಯನ ಮಾಡುವಾಗ ಪ್ರಮುಖವಾಗಿ ಮಾಡಲೇಬೇಕಾಗುತ್ತದೆ.

ಈ ಜಿಲ್ಲೆಯಲ್ಲಿ ಸಿಕ್ಕುವ ಪ್ರಾರಂಭಕಾಲದ ಶಾಸನಗಳೆಂದರೆ ಗಂಗರವು, ನಂತರದಲ್ಲಿ ಚೋಳ ಮತ್ತು ಹೊಯ್ಸಳ ಶಾಸನಗಳು ದೊರೆಯುತ್ತವೆ. ಸುಮಾರು ಕ್ರಿ.ಶ. ೧೩೪೦ರ ನಂತರ ವಿಜಯನಗರ ಅರಸರ ಶಾಸನಗಳು ಕಾಣಿಸಿಕೊಳ್ಳುತ್ತವೆ. ಈ ಪ್ರದೇಶದ ವಿಭಾಗಗಳನ್ನು ಚೋಳರು ಪ್ರವೇಶಗೊಳ್ಳುವ ಮೊದಲು ಇದ್ದ ಪ್ರಾದೇಶಿಕ ವಿಭಾಗಗಳು ಮತ್ತು ಚೋಳ ಮತ್ತು ಹೊಯ್ಸಳರ ಕಾಲದ ಪ್ರಾದೇಶಿಕ ವಿಭಾಗಗಳು ಎಂಬ ಎರಡು ಮುಖ್ಯವಾದ ಹಂತಗಳಲ್ಲಿ ಗುರುತಿಸಬಹುದಾಗಿದೆ.

ಕ್ರಿ.ಶ ೧೧ರ ಸುಮಾರಿಗೆ ಈ ಪ್ರದೇಶವು ಚೋಳರ ವಶವಾಯಿತು. ಅವರ ಪ್ರವೇಶದೊಂದಿಗೆ 'ಮಂಡಲ' ವಳನಾಡು, ನಾಡು ಮತ್ತು ಗ್ರಾಮ ಎಂಬ ಕ್ರಮವಾದ ಆಡಳಿತ ವಿಭಾಗಗಳು ಕಾಣಿಸಿಕೊಳ್ಳತೊಡಗಿದವು. ಅವುಗಳಲ್ಲಿ ಮೊದಲಿಗೆ ಮುಡಿಗೊಂಡ ಚೋಳ ಮಂಡಲ (ಕ್ರಿ.ಶ.೧೦೦೦) ವಿಕ್ರಮ ಚೋಳ ಮಂಡಲ (ಕ್ರಿ.ಶ ಸುಮಾರು ೧೦೪೬) ಕರಿಕಾಲ ಚೋಳ ವಳನಾಡು (ಕ್ರಿ.ಶ.೧೦೩೪) ಮುಂತಾದವು ಕಾಣಿಸಿಕೊಳ್ಳುತ್ತದೆ. ನಂತರದಲ್ಲಿ ನಿಗರಿಲಿ ಚೋಳಮಂಡಲ ರಾಜೇಂದ್ರ ಚೋಳವಳನಾಡು ಮೊದಲಾದ ನಾಡು ಒಳನಾಡುಗಳ ಉಲ್ಲೇಖಗಳು ಕಂಡು ಬರುತ್ತವೆ. ಇವರ ಪ್ರಾರಂಭದ ಶಾಸನಗಳು ಕನ್ನಡದಲ್ಲೂ ನಂತರ ತಮಿಳಿನಲ್ಲೂ ಇವೆ.

ಮುಡಿಕೊಂಡ ಚೋಳ ವಳನಾಡುಗಳು ಅಂತರ್ಗತವಾಗಿದ್ದವು. ವಿಕ್ರಮ ಚೋಳ ಮಂಡಲದಲ್ಲಿ ಸಣ್ಣೆ ನಾಡು, ಕುಕ್ಕನೂರು ನಾಡು, ಮಣ್ಣೆ ನಾಡು, ಮುಂತಾದವು ಸಮಾವೇಶಗೊಂಡಿದ್ದವು. ನಿಗರಿಲಿ ಚೋಳಮಂಡಲವು ಮಣ್ಣೆನಾಡು, ರಾಜೇಂದ್ರ ಚೋಳ ವಳನಾಡು, ಪುಲ್ಲಿಯೂರು ನಾಡು, ಇಲೈಪಾಕ್ಕ ನಾಡು (ಯಲಹಂಕ) ವೆಪ್ಪೂರು ನಾಡು (ಬೇಗೂರು ನಾಡು)ಗಳನ್ನು ಒಳಗೊಂಡಿತ್ತು.

ಕ್ರಿ.ಶ ಸುಮಾರು ೧೧೧೦ರ ನಂತರ ಕ್ರಮಕ್ರಮವಾಗಿ ಈ ಪ್ರದೇಶ ಹೊಯ್ಸಳರ ವಶವಾಯಿತು. ಮಂದಳ ನಾಡು, ವಳನಾಡು ಎಂಬ ವಿಭಾಗ ಕ್ರಮದಲ್ಲಿ ಗಮನಾರ್ಹ ಬದಲಾವಣೆಗಳೇನೂ ಆಗಲಿಲ್ಲ. ಅಷ್ಟೇ ಅಲ್ಲದೆ ಅಪ್ಪಟ ಕನ್ನಡ ಅರಸು ಮನೆತನದವರಾದ ಇವರು ತಮ್ಮ ಅನೇಕ ಶಾಸನಗಳನ್ನು ಈ ಪ್ರದೇಶದಲ್ಲಿ ತಮಿಳು ಭಾಷೆಯಲ್ಲಿ ಹಾಕಿಸಿರುವುದು ವಿಶಿಷ್ಟವಾದ ಅಂಶಗಳಾಗಿವೆ.

ಚೋಳರ ಕಾಲದಲ್ಲಿ ಅನೇಕ ಗ್ರಾಮಗಳನ್ನು ಚತುರ್ವೇದಿ ಮಂಗಲಗಳಾಗಿ ಅಂದರೆ ಅಗ್ರಹಾರಗಳನ್ನಾಗಿ ಬ್ರಾಹ್ಮಣರಿಗೆ ದಾನವಾಗಿ ನೀಡಿರುವ ಉಲ್ಲೇಖಗಳು ವಿಪುಲವಾಗಿದೆ. ಇದೇ ಪದ್ದತಿ ಹೊಯ್ಸಳರ ಕಾಲದಲ್ಲಿ ಮುಂದುವರೆದಿರುವುದೂ ಕಂಡು ಬರುತ್ತದೆ. ಹಳೇ ಬೆಂಗಳೂರಿನ ಪ್ರಾದೇಶಿಕ ವಿಭಾಗಗಳಿಗನುಗುಣವಾಗಿ ಅಲ್ಲಿನ ದೇವತೆಗಳು ನೆಲೆಗೊಂಡಿರುವುದು ಕಾಣಸಿಗುತ್ತದೆ. ಗ್ರಾಮ ದೇವತೆಗಳು ನಿರ್ದಿಷ್ಟ ಗ್ರಾಮಗಳಲ್ಲಿ ನೆಲೆಗೊಳ್ಳುವ ವಿಧಾನ ಕುತೂಹಲಕಾರಿಯಾಗಿದೆ. ಇದರ ಪೂರ್ವ ಸ್ಥಿತಿ ಜನತೆಯ ಸಂಕಷ್ಟದ ಕಾಲ ಎನ್ನಬಹುದು ಅಥವಾ ಅವರು ದೇವರನ್ನು ಉಪೇಕ್ಷೆ ಮಾಡಿದ ಸಂಧರ್ಭ ಇರಬಹುದು. ಇಲ್ಲವೇ ಬದುಕಲು ದೈವದ ಅಗತ್ಯವನ್ನು ಮನಗಾಣುವ ಮಾನಸಿಕ ಹಂತ ಎನ್ನಬಹುದು. ಇಂಥ ಸಂದರ್ಭದಲ್ಲಿ ಯಾವುದೋ ಒಂದು ಗ್ರಾಮಕ್ಕೆ ದೇವತೆಯ ಪ್ರವೇಶವಾಗುತ್ತದೆ. ಬಹಳ ಸಂದರ್ಭದಲ್ಲಿ ಭಕ್ತರನ್ನು ನೆರವಾಗುವ ಬಯಕೆಯನ್ನು ವ್ಯಕ್ತಪಡಿಸುತ್ತದೆ. ಕೆಲವು ದೇವತೆಗಳು ನೆಲೆಗೊಂಡ ಕತೆಗಳು ತೀರಾ ಸರಳವೂ ಆಕಸ್ಮಿಕವೆನ್ನುವಂತೆಯೂ ಇದೆ. ಉದಾಹರಣೆಗೆ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲೂಕಿನ ನಂದಗುಡಿ ಗ್ರಾಮದ ಮುತ್ಯಾಲಮ್ಮ ಅಲ್ಲಿ ನೆಲೆಗೊಂಡದ್ದು ಸ್ವ ಇಚ್ಚೆಯಿಂದ. ಪಕ್ಕದ ಹಳ್ಳಿಗೆ ಹೋಗಿದ್ದ ಈ ದೇವತೆ ನಂದಗುಡಿಯ ಮಾರ್ಗವಾಗಿ ಹಿಂತಿರುಗಬೇಕಾಯಿತು. ಆಗ ಆ ಊರಿನ ಬಡವನ ಮನೆಗೆ ಹೋಗಿ ಒಬ್ಬರ ಮೈದುಂಬಿ "ಮುಂದಿನ ಉತ್ಸವಕ್ಕೆ ನನಗೆ ನೀನು ದೀಪವನ್ನು ಮಾಡಿಕೊಂಡು ಬಂದರೆ ನಿನ್ನ ಕಷ್ಟ ಪರಿಹಾರವಾಗುತ್ತದೆ" ಎಂದು ಹೇಳಿತು ಈ ಷರತ್ತಿಗೆ ಒಪ್ಪಲಾಗಿ ದೇವತೆ ಅಲ್ಲೇ ನೆಲೆಗೊಂಡಿತು.

ಬೆಂಗಳೂರು ಜಿಲ್ಲೆಯ ಕರಗದಮ್ಮ, ಕನಕಪುರದ ಕೊಲ್ಲಾಪುರದಮ್ಮ, ಅದ್ರಿಪುರದ ಮರಿಯಮ್ಮ, ನಾಗಸಂದ್ರ ಗ್ರಾಮದ ಕರಡುಗುಚ್ಚಮ್ಮ ಇತ್ಯಾದಿ ಎಲ್ಲ ದೇವತೆಗಳು ನೆಲೆಸಿದ ಬಗೆಯೂ ಸಹಾ ಹೆಚ್ಚೂ ಕಡಿಮೆ ಒಂದೇ ಬಗೆಯದೇ, ಇದರ ಜೊತೆಗೆ ರಾಜ್ಯದಿಂದ ರಾಜ್ಯಕ್ಕೆ ವಲಸೆ ಬಂದ ದೇವತೆಗಳೂ ಇಲ್ಲದಿಲ್ಲ. ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದ ಕಬ್ಬಾಳಮ್ಮ, ಆಂಧ್ರದ ಕಡೆಯಿಂದ ಕರ್ನಾಟಕದ ಕಡೆಗೆ ದೊಡ್ಡಬಳ್ಳಾಪುರದ ಮಾರ್ಗದಮ್ಮ ದೇವತೆಯೂ ಸಹಾ ಹೀಗೆ ಸ್ಥಳಾಂತರಗೊಂಡ ದೇವತೆಯೇ ಆಗಿದ್ದಾಳೆ. ಬೆಂಗಳೂರು ಜಿಲ್ಲೆಯ ಚಕ್ಕೆರೆ ಚೌಡಮ್ಮನಿಗೆ ಸಂಬಂಧಿಸಿದಂತೆ ಪ್ರಚಲಿತವಿರುವ ಐತಿಹ್ಯ ಮತ್ತೊಂದು ಉದಾಹರಣೆ. ಚೌಡಮ್ಮ ಮೊದಲಿಗೆ ಇದ್ದದು ತಿರುವಾಂಕೂರಿನಲ್ಲಿ ಅಲ್ಲಿಯ ಕ್ಷತ್ರಿಯ ಕುಲದ ರಾಜ ಅವಳಿಂದ ಮೋಹಿತನಾಗಿ ಬಲವಂತ ಮಾಡುತ್ತಾನೆ. ಅವನನ್ನು ಕೊಂದು ಉಪಾಯವಾಗಿ ತಪ್ಪಿಸಿಕೊಂಡು ಬಹುದೂರ ಪ್ರಯಾಣ ಮಾಡಿ ಚಕ್ಕೆರೆಗೆ ಬಂದು ನೆಲೆಸುತ್ತಾಳೆ.

ಹೀಗಾಗಿ ಐತಿಹ್ಯಗಳು ಕೆಲವೊಮ್ಮೆ ಆಚರಣೆಗಳ ಮೂಲಕ ಅಭಿವ್ಯಕ್ತಿಗೊಳ್ಳುವುದನ್ನು ನೋಡಬಹುದು. ಕೆಲವು ಗ್ರಾಮದೇವತೆಗಳ ಉಲ್ಲೇಖಗಳೂ ಸಹಾ ಶಾಸನ, ಐತಿಹ್ಯದಂತಹ ದಾಖಲೆಗಳಲ್ಲಿ ಬೆರೆಗು ಹೋಗಿರುವುದೇ ಇದಕ್ಕೆ ನಿದರ್ಶನ. ಹೀಗಾಗಿ ಒಂದು ಗ್ರಾಮದ ಪ್ರದೇಶದ ಗ್ರಾಮದೇವತೆ

ನೆಲೆಗೊಂಡ ಬಗೆ, ವಿಧಾನಗಳನ್ನು ಪುನರವಲೋಕನ ಮಾಡುವಾಗ ಇತಿಹಾಸವನ್ನು ಪೋಷಕ ಆಕರಗಳಾಗಿ ಪರಿಗಣಿಸಬೇಕಾಗುತ್ತದೆ.

ಸಂಖ್ಯಾ ಟಿಪ್ಪಣಿಗಳು

೧. ಬೆಂಗಳೂರು ದರ್ಶನ-೧, (ಸಂ), ಎಂ.ಎಚ್.ಕೃಷ್ಣಯ್ಯ, ಪು. ೧೬

೨. ಮೈಸೂರು ಗೆಜೆಟಿಯರ್, ಸಿ. ಹಯವದನರಾವ್, ಪು ೯೩

೩. ಕೆಂಪೇಗೌಡ ನಗರದರ್ಶನ ಪು. ೧೪-೧೫

೪. ಯಲಹಂಕ ನಾಡ ಪ್ರಭುಗಳು- ಪ್ರಸಾರಾಂಗ ಬೆಂ.ವಿ.ವಿ, ಪ್ರ. ಸಂ: ಡಾ.ಎಂ.ಜಮುನ, ಸು.ಸಂ. ಪ್ರೊ.ಡಿ.ಲಿಂಗಯ್ಯ ಪು. ೨೯-೩೦

೫. ಬೆಂಗಳೂರು ದರ್ಶನ-೧, (ಸಂ), ಎಂ.ಎಚ್.ಕೃಷ್ಣಯ್ಯ, ಪು. ೩೬

೬. John Friedl, cultural anthropology page no. 376

೭. Anthropology, krober – p-275

೮. ಶ್ರೀಮನ್ಮಹಾರಾಜರ ವಂಶಾವಳಿ, ಭಾಗ.೧, ಪುಟ ೧೦೯

೯. Mysore Gazzetter, Bangalore District, Page-49, Part V, C Hayavadana Rao. Modern Mysore – By M.Shama Rao Page-7

೧೦. Bangalore through the Centuries, Fazlul Hassan,Page 38

ಅಧ್ಯಾಯ : ೪

ಬೆಂಗಳೂರಿನ ಆಚರಣೆಗಳಲ್ಲಿ ಮಾತೃ ಪ್ರಧಾನ ಸಂಸ್ಕೃತಿ

ಅಧ್ಯಾಯ : ನಾಲ್ಕು

ಬೆಂಗಳೂರಿನ ಆಚರಣೆಗಳಲ್ಲಿ ಮಾತೃಪ್ರಧಾನ ಸಂಸ್ಕೃತಿ

೪.೧ : ಆಚರಣೆಗಳ ಉಗಮ ಮತ್ತು ವಿಕಾಸ

ಜಗತ್ಪ್ರಸಿದ್ಧ ಮಾನವ ಶಾಸ್ತ್ರಜ್ಞೆ ಮಾರ್ಗರೇಟ್ ಮೀಡ್ "ಒಬ್ಬ ವ್ಯಕ್ತಿಯ ಜೀವನದಲ್ಲಿ ಉಂಟಾಗುವ ಅನೇಕ ಸ್ಥಿತ್ಯಂತರದ ಘಟ್ಟಗಳು ಆಯಾ ಸಂಸ್ಕೃತಿಯ ನಮೂನೆಗಳನ್ನು ಸೂಚಿಸುತ್ತವೆ" ಎಂದಿದ್ದಾಳೆ. ಇದರರ್ಥ ಸಂಸ್ಕೃತಿ ಹಾಗೂ ಸಮಾಜಗಳು ಯಾವುದೇ ರೂಪಿಕೆಯಲ್ಲಿರಲಿ, ನಿರ್ದಿಷ್ಟ ಕಲ್ಪನೆ ಹಾಗೂ ಆಚರಣೆಗಳನ್ನು ಎಲ್ಲ ವಯೋಧರ್ಮದಲ್ಲೂ, ಕಾಲದಲ್ಲೂ ಪರಂಪರಾನುಗತವಾಗಿ ಎಲ್ಲ ಸಂಸ್ಕೃತಿಗಳೂ ಒಳಗೊಂಡು ಪರಿಪಾಲಿಸುತ್ತಾ ಬಂದಿದೆ ಎಂಬುದು. ಈ ಸಾಂಸ್ಕೃತಿಕ ನಮೂನೆಗಳ ಅಧ್ಯಯನವು ನಿರಂತರವಾಗಿ ನಡೆದುಕೊಂಡು ಬಂದಿದ್ದು, ಬದಲಾಗುತ್ತಿರುವ ಸಮಾಜೋ-ಸಾಂಸ್ಕೃತಿಕ ತಲ್ಲಣಗಳಿಗೆ ಒಂದು ಸವಾಲಾಗಿಯೇ ಉಳಿದುಕೊಂಡು ಬಂದಿದೆ. ಪ್ರತಿಯೊಂದು ಸಂಸ್ಕೃತಿಯ ರೀತಿ ನೀತಿಗೂ ಒಂದು ಇತಿಹಾಸ, ಪ್ರಬಲ ಕಾರ್ಯಕಾರಣ ಸಂಬಂಧ ಇರುತ್ತದೆ. ಅದನ್ನು ಮೊದಲು ಗುರುತಿಸಬೇಕು ಮತ್ತು ಮನಗಾಣಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಆಚರಣೆಗಳ ಉಗಮ ಮತ್ತು ವಿಕಾಸವನ್ನು ಅಧ್ಯಯನ ಮಾಡಿದಾಗ ನಮಗೆ ಅನೇಕ ಸಾಮ್ಯತೆ ಮತ್ತು ವೈದೃಶ್ಯಗಳು ಕಾಣಿಸಿಕೊಳ್ಳುತ್ತವೆ. ಇಂಗ್ಲೀಷಿನ Ritual ಎಂಬ ಪದಕ್ಕೆ ಸಂವಾದಿಯಾಗಿ ಬಳಸುವ "ಆಚರಣೆ" ಪದ ಹೆಚ್ಚು ಕ್ರಿಯಾತ್ಮಕ ರೂಪವನ್ನು ಒಳಗೊಂಡಿರುವಂಥದ್ದು, ಮನುಷ್ಯ ಅಗೋಚರವಾದ ದೈವಶಕ್ತಿಗಳ ಪ್ರೀತ್ಯರ್ಥವಾಗಿ ನಡೆಸುವ ಮತಾಚಾರಗಳು ಮತ್ತು ಕರ್ಮವಿಧಾನಗಳನ್ನು ಆಚರಣೆಗಳೆಂದು ಕರೆಯಲಾಗಿದೆ. ಆಚರಣೆಗಳ ಒಂದು ಪ್ರಮುಖ ಲಕ್ಷಣ ಎಂದರೆ ಅವು ಬಹುತೇಕವಾಗಿ ಧಾರ್ಮಿಕ ಹಾಗೂ ದೈವಿಕ ಸಂಸ್ಪರ್ಶವನ್ನು ಪಡೆದಿರುತ್ತದೆ. ಅವು ಯಾವುದೋ ಒಂದು ನಂಬಿಕೆಯನ್ನು ಆಧರಿಸಿ

ರೂಪುಗೊಂಡಿರುತ್ತದೆ. ಆಚರಣೆಗೆ ಒಂದು ನಿರ್ದಿಷ್ಟ ಉದ್ದೇಶ ಹಾಗೂ ಫಲಾಪೇಕ್ಷೆ ಇರುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಆಚರಣೆಗೆ ಒಂದು ವಿಶಿಷ್ಟ ರಚನಾ ವಿನ್ಯಾಸವಿದ್ದು, ಈ ಅಂಶವು ಅವುಗಳನ್ನು ಸಂಪ್ರದಾಯಗಳಿಂದ ಸ್ಪಷ್ಟವಾಗಿ ಬೇರ್ಪಡಿಸುತ್ತದೆ. ಬಹುತೇಕ ಆಚರಣೆಗಳು ವ್ಯಕ್ತಿಯ ಜೀವನಚಕ್ರದಲ್ಲಿ ಅಥವಾ ಇಡೀ ಸಮುದಾಯದ ಕಾಲಮಾನದ ಚಕ್ರದಲ್ಲಿ ಎದುರಾಗುವ ಆತಂಕದ ಸಂದರ್ಭಗಳಿಗೆ ಸಂಬಂಧಿಸಿವೆ. ವ್ಯಕ್ತಿಯ ಬದುಕಿನಲ್ಲಾಗಲೀ, ಸಾಮಾಜಿಕ ಬದುಕಿನಲ್ಲಾಗಲೀ ಅನೇಕ ರೀತಿಯ ಪರಿಕ್ರಮಣಗಳು ನಡೆಯುತ್ತವೆ. ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಬದಲಾಗುವುದು ಈ ಸಂಕ್ರಮಣದ ಲಕ್ಷಣ. ಇದೊಂದು ಮಹತ್ವದ ಬದಲಾವಣೆಯಾದ್ದರಿಂದ ಅದು ಸುಸೂತ್ರವಾಗಿ ಜರುಗಬೇಕು, ಅದಕ್ಕೆ ಯಾವುದೇ ವಿಘ್ನವಾಗಬಾರದು ಎಂದು ಮನುಷ್ಯ ಕಾಳಜಿವಹಿಸುತ್ತಾನೆ. ಈ ಎಚ್ಚರ ಮತ್ತು ಕಾಳಜಿಗಳೇ ವಿವಿಧ ರೂಪಗಳ ಆಚರಣೆಗಳ ಹುಟ್ಟಿಗೆ ಕಾರಣ. ಫ್ರೇಜರನ ಅಭಿಪ್ರಾಯದಂತೆ " ಪುರಾಣಗಳು ಆಚರಣೆಗಳನ್ನು ಕುರಿತ ಕಥೆಗಳು– ಒಬ್ಬ ಪುರೋಹಿತ ಅಥವಾ ವೈದ್ಯ ಮಳೆ ತರಿಸಲು ಅಥವಾ ಧಾನ್ಯ ಬೆಳೆಸಲು ಮಾಡಿದ ಮಾಂತ್ರಿಕ ಆಚರಣೆಗಳನ್ನು ಕುರಿತ ಕಥೆಯೇ ಪುರಾಣವಾಗುತ್ತದೆ". ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಲಕ್ಷಾಂತರ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಜಗತ್ತಿನಾದ್ಯಂತ ಸಾಮ್ಯತೆ ಇರುವ ಅದೆಷ್ಟೋ ಆಚರಣೆಗಳು ಕಾಣಸಿಗುತ್ತದೆ. ಈ ಆಚರಣೆಗಳ ಭಾಷೆ, ಸಂಕೇತ, ಅವುಗಳ ಉಗಮಕ್ಕೆ ಕಾರಣವಾದ ಸಾಮಾಜಿಕ, ಆರ್ಥಿಕ ಧಾರ್ಮಿಕ ಸ್ಥಿತಿಗಳೂ ಸದಾ ಮಾನವಶಾಸ್ತ್ರೀಯ ನೆಲೆಯಲ್ಲಿ ಆಚರಣೆಗಳ ಜೊತೆ ಅಧ್ಯಯನಕ್ಕೊಳಪಡುತ್ತದೆ ಎಂಬುದು ಗಮನಾರ್ಹ ಅಂಶ. ಹೀಗಾಗಿ ಸಂಸ್ಕೃತಿಯನ್ನು ಪೋಷಿಸಿ ನಾಗರಿಕತೆಯನ್ನು ಬೆಳೆಸುವಲ್ಲಿ ಈ ಆಚರಣೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮಾನವನ ಬೌದ್ಧಿಕ, ಮಾನಸಿಕ ಹಾಗೂ ಶಾರೀರಿಕ ಗುಣಲಕ್ಷಣ ಕ್ರಿಯೆಗಳು ಸಾರ್ವತ್ರಿಕವಾಗಿ ಏಕರೂಪವಾದ್ದರಿಂದ ಒಂದೇ ಬಗೆಯ ಸಂಪ್ರದಾಯ ಆಚರಣೆಗಳು ಭಿನ್ನ ಭಿನ್ನ ಪ್ರದೇಶಗಳಲ್ಲಿ ಬೇರೆ ಬೇರೆ ಆಯಾಮಗಳನ್ನು ಪಡೆದು ರೂಪುಗೊಳ್ಳಲು ಸಾಧ್ಯವಾಯಿತು. ಹೀಗಾಗಿ ಪುರಾಣ ಮತ್ತು ಆಚರಣೆಗಳಲ್ಲಿ ನಮ್ಮ ಜನಪದರು ತಮ್ಮ ಮನಸ್ಸಿನ ದುಃಖ ದುಮ್ಮಾನಗಳನ್ನು, ಉಲ್ಲಾಸ ಸಂಭ್ರಮಗಳನ್ನೂ ಸಹಾ ತೋಡಿಕೊಳ್ಳಲು ಕಾರಣವಾಯಿತು. ಪ್ರಪಂಚದಾದ್ಯಂತ ಕಾಣ ಬರುವ ಈ ಆಚರಣೆಗಳಲ್ಲಿ ಜೀವ ಕೇಂದ್ರಿತ ಅಂಶಗಳಿವೆ, ತತ್ವ ಮತ್ತು ಸಿದ್ಧಾಂತಗಳಿವೆ. ಸಾಮೂಹಿಕ ನೀತಿಯ ಜೊತೆಗೆ ಆಧುನಿಕ ವೈಜ್ಞಾನಿಕ ತಂತ್ರಗಾರಿಕೆಯೂ ಇದೆ. ಬದಲಾಗುತ್ತಿರುವ ಜೀವನ ಕ್ರಮಗಳಿಂದ ಸ್ಥಿತ್ಯಂತರಗೊಳ್ಳುತ್ತಿದ್ದರೂ, ಆಚರಣೆಗಳು ಕೆಲವೆಡೆ ಮೂಲವನ್ನು ಕಳೆದುಕೊಂಡು, ಕೆಲವೆಡೆ ಹೊಸ ಸ್ವರೂಪವನ್ನು ಪಡೆಯುತ್ತಿವೆ. ಕೃಷಿ, ಮದುವೆ, ಮರಣ ಇಂತಹ ಪ್ರಮುಖ ಘಟ್ಟಗಳಲ್ಲಿ ನಡೆಸಲಾಗುವ ಆಚರಣೆಗಳು ಇಂದು ಹಲವಾರು ರೂಪಾಂತರಗಳಿಗೆ ಒಳಗಾಗುತ್ತಿರುವುದು ಗಮನಾರ್ಹ ಸಂಗತಿ. ಇವುಗಳ ಕ್ರಿಯಾ ವಿಧಿಗಳಲ್ಲಿ ಸೇರಿಕೊಂಡಿರುವ ನಿಷಿದ್ಧ ಮತ್ತು ಕಟ್ಟುಗಳನ್ನು ಕಾಲಕ್ಕೆ ಮತ್ತು ಅಗತ್ಯಕ್ಕೆ ತಕ್ಕ ಹಾಗೆ ಮಾರ್ಪಡಿಸಿಕೊಂಡರೂ ವಿಧಿ ವಿಧಾನಗಳಂತೂ ನಡೆದೇ ತೀರುತ್ತವೆ.

ಜನಪದರ ಮಾನಸಿಕ ಅಗತ್ಯವಾಗಿ ದೈವಗಳು ರೂಪುಗೊಂಡಿರುವುದರಿಂದ, ಅವುಗಳ ಹಿಂದಿನ ಶ್ರದ್ಧೆ, ಭಯ ಹಾಗೂ ನಂಬಿಕೆಗಳು ಮತ್ತು ಅವುಗಳ ಪ್ರೀತ್ಯರ್ಥವಾಗಿ ನಡೆಸುವ ಹಬ್ಬ, ಜಾತ್ರೆ, ಉತ್ಸವಗಳು ಮುಂದೆ ಆಚರಣೆಯ ಒಂದು ಭಾಗವಾಗಿ ವಿಸ್ತರಣೆಯಾಗಿರಬಹುದೆಂದು ಊಹಿಸಬಹುದು. ವಿದ್ವಾಂಸರಾದ ಬಾಗ್ಸ್ ಹೇಳುವಂತೆ "ಸಾಮಾನ್ಯವಾಗಿ ಪ್ರತಿ ವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯಗಳ ಸಮ್ಮಿಶ್ರ ಜಟಿಲ ಘಟಕವೇ ಹಬ್ಬ". ಮಾನವನಿಗೆ ದೈವದ ಕಲ್ಪನೆ ಬಂದಾಗಿನಿಂದ ಅದಕ್ಕೆ ಸಂಬಂಧಪಟ್ಟ ಅನೇಕ ಆಚರಣೆಗಳನ್ನೂ ರೂಢಿಸಿಕೊಂಡಿದ್ದಾನೆ. ತಮ್ಮ ದೇವರುಗಳಿಗೆ ಪ್ರಾಧಾನ್ಯತೆಯನ್ನು ಕೊಡುವ ಹಿನ್ನೆಲೆಯಲ್ಲಿ ಹಬ್ಬ ಹರಿದಿನಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ವಿಶಿಷ್ಟ ಬಗೆಗಳಿಂದ ಆಚರಿಸುತ್ತಾ ಮುನ್ನಡೆದಿದ್ದಾನೆ. ಹೀಗಾಗಿ ಗ್ರಾಮದೇವತೆಯ ಆಚರಣೆ, ಕೇವಲ ಹಬ್ಬ ಮಾತ್ರ ಆಗಿರದೆ, ಸಂಸ್ಕೃತಿಯ ಹತ್ತು ಹಲವು ಮುಖಗಳನ್ನು ತೆರೆದು ತೋರಿಸುವ ಸಾಧನ ಎಂದು ಹೇಳುವುದೇ ಸೂಕ್ತ. "ಶಿವ ಅಥವಾ ವಿಷ್ಣುವಿನಂಥ ಶಿಷ್ಟ ದೇವತೆಗಳು ಎಷ್ಟೇ ಮಾನ್ಯರಾಗಿದ್ದರೂ ಜನರ ಕಷ್ಟ ಕಾಲದಲ್ಲಿ ನೆರವಿಗೆ ಬಂದು ಆತ್ಮೀಯಯರಾಗುವುದು ಗ್ರಾಮ ದೇವತೆ" ಎಂಬುದು ಗ್ರಾಮೀಣರ ಗಾಢ ನಂಬಿಕೆ. ಸಾಮಾನ್ಯವಾಗಿ ತಮ್ಮ ಮನೆದೇವರು, ಕುಲದೇವರು, ಊರುದೇವರು, ಪೂರ್ವಜರು, ಪಿತೃ ದೇವತೆಗಳು, ನಾಡ ದೇವತೆಗಳು, ಕಾಡು ದೇವತೆ, ಹೀಗೆ ಹೆಜ್ಜೆಗೊಂದು ದೈವ, ದೇವರು ಇವರಿಗೆ ಬೇಕೇ ಬೇಕು. ಜಗತ್ತಿನ ಎಲ್ಲ ಸಂಸ್ಕೃತಿ, ಉಪಸಂಸ್ಕೃತಿಗಳಲ್ಲೂ ಈ ಬಗೆಯ ಆರಾಧನೆ, ಆಚರಣೆಗಳು ನಮಗೆ ಕಂಡುಬರುತ್ತದೆ. ಪ್ರತಿಯೊಂದು ಸಮುದಾಯವೂ ಒಂದು ನಿರ್ದಿಷ್ಟ ದೈವವನ್ನು ನಂಬಿಕೊಂಡು ಅವುಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಪರಂಪರಾಗತವಾಗಿ ಸ್ಥಾಪಿಸಿ, ಪೂಜಿಸಿ, ಅವುಗಳನ್ನು ಕುರಿತಾದ ನಂಬಿಕೆಯನ್ನು ವಿವಿಧ ಹಂತಗಳಲ್ಲಿ ವಿಸ್ತರಿಸಿಕೊಂಡು ಬಂದಿರುವುದನ್ನು ಕಾಣಬಹುದು. ಪ್ರಕೃತಿಯ ಚರಾಚರ ವಸ್ತುಗಳಾದ ನೀರು, ಮರಗಿಡ, ಭೂಮಿ, ಪ್ರಾಣಿ, ಆಕಾಶ, ಸೂರ್ಯ, ಚಂದ್ರ, ಕಲ್ಲು, ಮಣ್ಣು, ಇವುಗಳೆಲ್ಲ ದೈವತ್ವವನ್ನು ಆರೋಪಿಸಿ, ಅದರ ಫಲಿತವಾಗಿ ಶಿಲಾರಾಧನೆ, ಜಲಾರಾಧನೆ, ಮರಗಳ ಆರಾಧನೆ, ನಾಗಾರಾಧನೆ, ಶಕ್ತಿ, ಭೂತ, ಪ್ರೇತ, ಪಿತೃಗಳ ಆರಾಧನೆಯನ್ನು ಆರಂಭಿಸಿದ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಸಂಸ್ಕೃತಿ, ಧರ್ಮಗಳಲ್ಲೂ ಆರಾಧನಾವಿಧಿ, ಆಚರಣೆಗಳು ಸಿದ್ಧಗೊಂಡವು, ಅವುಗಳನ್ನು ಸಂತೃಪ್ತಿಗೊಳಿಸುವುದರ ಮೂಲಕ ತನ್ನ ಮನಸ್ಸಿನ ಭಯ, ಆತಂಕ, ದುಗುಡಗಳನ್ನು ಕಳೆದುಕೊಳ್ಳುತ್ತಾ ಆ ಎಲ್ಲ ಸ್ವರೂಪಗಳಲ್ಲೂ ಶಕ್ತಿಯ ಚೇತನವನ್ನು ಕಂಡ ಅವುಗಳಿಗೆ ದೈವತ್ವದ ಸ್ಥಾನ ನೀಡಿ ಪಾರಂಪರಿಕವಾಗಿ ಆ ನಂಬಿಕೆಯನ್ನು ಬೆಳೆಸುತ್ತಾ ಬಂದ ಮತ್ತು ಅವುಗಳನ್ನು ಒಲಿಸಿಕೊಂಡರೆ ಜೀವನ ಸುಖಕರವಾಗಿರುತ್ತದೆ ಎಂಬ ಸತ್ಯವನ್ನು ಮನಗಾಣುವುದರ ಮೂಲದ ಅವುಗಳಿಗೆ ಜೀವನದಲ್ಲಿ ವಿಶೇಷ ಆದ್ಯತೆಗಳನ್ನು ನೀಡಲಾರಂಬಿಸಿದ. ಕಾಲಾನುಕ್ರಮೇಣ ಅವುಗಳ ಇಷ್ಟಾರ್ಥ ಸಿದ್ದಿಗಾಗಿ ಸಾಮೂಹಿಕವಾಗಿ ಹಾಗೂ ವೈಯಕ್ತಿಕವಾಗಿ ಅವುಗಳ ಆಚರಣಾ ವಿಧಾನಗಳನ್ನು

ಕಟ್ಟುನಿಟ್ಟಾಗಿ ಅನುಸರಿಸತೊಡಗಿದ. ಅಗತ್ಯ ಮತ್ತು ಅನಿವಾರ್ಯತೆಗಳು ಒಂದೇ ಆದರೂ, ಅವುಗಳ ಆಚರಣಾವಿಧಾನದಲ್ಲಿ ಪ್ರಪಂಚದಾದ್ಯಂತ ಈ ಸಂಪ್ರದಾಯಾಚರಣೆಗಳಲ್ಲಿ ಸಾಮ್ಯತೆ ಮತ್ತು ಭಿನ್ನತೆಗಳಿರುವುದು ಕಂಡುಬರುತ್ತದೆ. ಉದಾಹರಣೆಗೆ ಜಗತ್ತಿನಾದ್ಯಂತ ಪಿತೃಗಳ ಆತ್ಮ ಸಂಪ್ರೀತಿಗಾಗಿ ಕೈಗೊಳ್ಳು ಒಂದು ಪೂಜೆ 'ಪಿತೃ ಪೂಜೆ' ಅಥವಾ ಂಟಿಛಿಜಣಠಡಿಚಿಟ ತಿಂಡ್ಖುರಿ. ವ್ಯಕ್ತಿಯ ಮರಣದಿಂದಾಗಿ ಅವನಿಗೂ ಸಮಾಜಕ್ಕೂ ಇದ್ದ ಬಾಂಧವ್ಯ ಮುಗಿಯಿತೆಂದು ಭಾವಿಸದೇ, ಸತ್ತವನನ್ನು ಸ್ನೇಹಿತನಂತೆಯೇ ಅತಿಮಾನುಷ ಶಕ್ತಿಯೆಂದೋ ತಿಳಿದು ಜನ ಪೂಜಿಸುವುದಿದೆ. ಪಿತೃಗಳು ಕೋಪಗೊಂಡರೆ ಸಮಾಜ ಅಥವಾ ವ್ಯಕ್ತಿಯನ್ನು ಕುಟುಂಬದ ಐಕ್ಯವನ್ನು ನಾಶ ಮಾಡಬಲ್ಲರು ಎಂಬ ಭಾವನೆ ಆಳವಾಗಿದ್ದು. ಅವುಗಳನ್ನು ಒಲಿಸಿಕೊಂಡು ಅನುಗ್ರಹದಿಂದ ವಂಶ ಉದ್ಧಾರವಾಗುತ್ತದೆ ಎಂಬ ನಂಬಿಕೆಯ ಭಾವನೆಗಳೂ ಪಿತೃಪೂಜೆಗೆ ಪ್ರೇರಕವಾಗಿದೆ. ಜಗತ್ತಿನ ಎಲ್ಲ ಧರ್ಮ, ಸಂಸ್ಕೃತಿಯವರೂ ಇದನ್ನು ಅವಿಭಾಜ್ಯ ಅಂಗವಾಗಿ ಪರಿಭಾವಿಸಿ, ನಾಗರಿಕ ಸಮಾಜದಲ್ಲೂ ಒಂದಲ್ಲ ಒಂದು ರೀತಿ ಅದರ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದಾರೆ.

ಜಗತ್ತಿನ ಬಹುಪಾಲು ಜನತೆಯಲ್ಲಿ ರೂಢಿಯಲ್ಲಿರುವ ಮತ್ತೊಂದು ಮುಖ್ಯ ಪದ್ಧತಿ ಕುಲಸಂಕೇತಾರಾಧನೆ (Totemism) ಹಾಗೆಂದರೆ ತಮ್ಮ ತಮ್ಮ ಕುಲ, ಗುಂಪುಗಳಿಗೆ ನಿರ್ದಿಷ್ಟವಾಗಿರುವ ಒಂದು ಸಾಂಕೇತಿಕ ವಸ್ತು ಅಥವಾ ಪ್ರಾಣಿ ಹಾಗೂ ಅದರ ಬಗೆಗಿನ ನಂಬಿಕೆ, ವಿಧಿ ನಿಷೇಧಗಳನ್ನು ಅನುಸರಿಸುವ ಕ್ರಮ. ಕುಲ ಸಂಕೇತಾರಾಧನೆಯನ್ನು ಒಂದು ರೀತಿಯ ಪ್ರಕೃತಿಯಾರಾಧನೆ ಎಂಬಂತೆ ತಲತಲಾಂತರದಿಂದ ತಮ್ಮ ಹಿರೀಕರು ಹೇಗೆ ಆಚರಿಸಿಕೊಂಡು ಬಂದಿದ್ದಾರೋ ಹಾಗೆಯೇ ಇಂದಿನ ಪೀಳಿಗೆಯವರು ಆಚರಿಸಿಕೊಂಡು ಬರುತಿದ್ದಾರೆ. ಇದರಲ್ಲಿ ಆಯಾ ಗುಂಪಿನ ಜನರ ತತ್ಸಂಬಂಧಿತ ವಸ್ತು ಅಥವಾ ಪ್ರಾಣಿಯ ಬಾಂಧವ್ಯ ಕುಲ ಸಂಕೇತದ ಮೂಲದ ಹೊಸ ಅರ್ಥ, ಪುಷ್ಟಿ, ಚೈತನ್ಯಗಳನ್ನು ಪಡೆದು ಅದರೊಂದಿಗೆ ಏಕೀಭವಿಸಿರುತ್ತದೆ. ಸಾಮಾನ್ಯವಾಗಿ ಕುಲ ಸಂಕೇತಾರಾಧನೆಯಲ್ಲಿ ಬಹುಬಗೆಯ ವಿಧಿ ನಿಷೇಧಗಳಿರುತ್ತದೆ. ಇಡೀ ಗುಂಪಿನ ಅಥವಾ ಒಂದು ಬುಡಕಟ್ಟಿನ ಸಮಷ್ಟಿ ಹಿತ ದೃಷ್ಟಿಯಿಂದ ಏಕಾಭಿಪ್ರಾಯ ಹೊಂದದ ಹೊರತು ಆಯಾ ಕುಲ ಸಂಕೇತಕ್ಕೆ ಸೇರುವಂಥ ಪ್ರಾಣಿ ಅಥವಾ ವಸ್ತುಗಳನ್ನು ಅಥವಾ ಅವುಗಳ ಉತ್ಪನ್ನವನ್ನು ನಾಶಪಡಿಸುವುದಾಗಲೀ, ಬಳಸುವುದಾಗಲೀ ಅಪರಾಧ, ಸಂಪೂರ್ಣ ನಿಷಿದ್ಧ ಕ್ರಿಯೆ. ನಿದರ್ಶನಕ್ಕೆ ಸಂಪಿಗೆಯ ಹೂವನ್ನು ಕುಲ ಸಂಕೇತವಾಗಿ ಉಳ್ಳಂತಹ ಹಿಂದೂಗಳಲ್ಲಿ ಸಂಪಿಗೆಯ ಮರವನ್ನು ಕಡಿಯುವುದಾಗಲೀ ಅದರ ಸೌದೆಯನ್ನು ಬಳಸುವುದಾಗಲೀ ನಿಷಿದ್ದ, ಏಕೆಂದರೆ ಆ ಮರ, ಆ ಕುಟುಂಬದ, ಆ ವಂಶಸ್ಥರ ಆರಾಧ್ಯ ವೃಕ್ಷ, ಅದಕ್ಕೆ ಅಪಚಾರ ಮಾಡುವುದು ಅನಿಷ್ಟಕಾರಕ ಎಂದು ಭಾವಿಸುತ್ತಾನೆ.

ಒಬ್ಬ ವ್ಯಕ್ತಿ ತನ್ನ ಕುಲಸಾಂಕೇತಿಕ ಗುಂಪಿನ ಸದಸ್ಯತ್ವವನ್ನು ತನ್ನ ತಾಯಿ ಅಥವಾ ತಂದೆಯಿಂದ ಪಡೆಯುತ್ತಾನೆ. ಆ ಗುಂಪಿನವರ ಆಚರಣೆಗಳಿಗೂ ಬೇರೆ ಗುಂಪಿನವರ ಆಚರಣೆಗೂ ಸ್ಪಷ್ಟ ವ್ಯತ್ಯಾಸಗಳಿರುವುದನ್ನು ಆಸ್ಟ್ರೇಲಿಯಾದ ಆದಿವಾಸಿಗಳಲ್ಲಿ ಕಾಣಬಹುದು. ಹರ್ಸ್ಕೋವಿಟ್ಸ್ ಪ್ರಕಾರ "Totemism is the belief that a mystical relationsip exists between a group of human beings who make up a kinship unit and a species of plant or animal or less commonly some natural Phenomenon"[೧] ಅಂದರೆ ಒಂದು ಬುಡಕಟ್ಟಿಗೆ ಸೇರಿದ ವ್ಯಕ್ತಿಗಳನ್ನೂ, ಕೆಲವು ವೃಕ್ಷ ಪ್ರಾಣಿ ವರ್ಗಗಳನ್ನೂ ವಿರಳವಾಗಿ ಪ್ರಾಕೃತಿಕ ವಸ್ತುಗಳನ್ನೂ ಅನುಭಾವಿಕ (Mystical) ಸಂಬಂಧಗಳ ಮುಖಾಂತರ ಆಯಾ ವ್ಯಕ್ತಿಗಳ ಬದುಕಿನೊಂದಿಗೆ ಬೆಸೆಯುವಂಥ ನಂಬಿಕೆ ಸಂಪ್ರದಾಯವೇ ಕುಲ ಸಂಕೇತಾರಾಧನೆ. ಇನ್ನೊಂದು ಕಡೆ ಅವನು ಕುಲ ಸಂಕೇತಗಳ ಬಗ್ಗೆ ವಿವರಿಸುತ್ತಾ, ಅಮೆರಿಕೆಯ ಫೆಸಿಫಿಕ್ ನಾರ್ತ್ ವೆಸ್ಟ್ ಪ್ರಾಂತದ ಇಂಡಿಯನ್ನರು ೧೯ನೇ ಶತಮಾನದಲ್ಲಿ ತಮ್ಮೊಂದಿಗಾದ ಐರೋಪ್ಯರ ಪ್ರಭಾವದಿಂದ ತಮ್ಮ ಕುಲ ಸಾಂಕೇತಿಕವಾದ ಅತ್ಯುತ್ತಮ ಕೆತ್ತನೆಯುಳ್ಳ ಎತ್ತರವಾದ ಕಂಬಗಳನ್ನು ತಮ್ಮ ಗ್ರಾಮಗಳಲ್ಲಿ ಹೊಸದಾಗಿ ನೆಟ್ಟು ತಮ್ಮ ಸಂಪ್ರದಾಯ ನಂಬಿಕೆಗಳನ್ನು ನವೀಕರಿಸಿಕೊಂಡು ಹೊರಜಗತ್ತಿಗೆ ಪ್ರದರ್ಶಿಸಿದ ಘಟನೆಯನ್ನು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ. ಹೀಗಾಗಿ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳ ವಿಷಯದಲ್ಲಿ ಒಂದು ಸಮಾಜಕ್ಕೂ ಇನ್ನೊಂದಕ್ಕೂ ವ್ಯತ್ಯಾಸವಿರುವುದು ಸಹಜವೇ ಆಗಿದೆ.

ಆಚರಣೆಯ ಬಗೆಗಿನ ಕುತೂಹಲವೊಂದು ಸಂಶೋಧನೆಯ ಸ್ವರೂಪವೊಂದನ್ನು ತಾಳಿ ಇಡೀ ಜಗತ್ತಿನ ಜಾನಪದ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲಾಗಿ ನಿಂತದ್ದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಸರ್ ಜೇಮ್ಸ್ ಫ್ರೇಜರ್ ನ ಗೋಲ್ಡನ್ ಬೋ.

ಆದಿಮ ಜನರ ನಂಬಿಕೆ ಮತ್ತು ಧರ್ಮದ ಕುರಿತು ಜೆ.ಜೆ. ಫ್ರೇಜರ್ ಮಾನವ ಶಾಸ್ತ್ರದ ವಿದ್ವಾಂಸನಾಗಿ ಕೆಲವು ವಿಚಾರಗಳನ್ನು ಸಂಗ್ರಹಿಸತೊಡಗಿದ. ಈ ವಿಚಾರಗಳಲ್ಲಿ ಅನೇಕ ಸಮಸ್ಯೆಗಳ ಸುತ್ತ ಹೆಣೆದುಕೊಂಡಿದ್ದವು. ಈ ಸಮಸ್ಯೆಗಳಲ್ಲಿ ಫ್ರೇಜರನನ್ನು ಆಕರ್ಷಿಸಿದ ಸಮಸ್ಯೆಯೆಂದರೆ ಆರಿಸಿಯನ್ ಅರ್ಚಕನ ವೃತ್ತಿಯ ಹಿನ್ನೆಲೆಯಲ್ಲಿದ್ದ ಒಂದು ಅವರ್ಣನೀಯ ಕಟ್ಟಳೆ. ಈ ಕಟ್ಟಳೆಯ ನಿಯಮದ ಒಂದು ಎಳೆ ಹಿಡಿದು ಅದರ ಬೆನ್ನು ಹತ್ತಿ ಫ್ರೇಜರ್ ನಡೆಸಿದ ಅಧ್ಯಯನದ ಫಲವೇ 'ಗೋಲ್ಡನ್ ಬೋ' ಪ್ರಾಚೀನ ಇಟಲಿಯನ್ ಅರ್ಚಕತನದ ಮೂಲ ಮತ್ತು ಅವುಗಳ ಹುಡುಕಾಟಕ್ಕಾಗಿ ಹಾಗೂ ಆಧುನಿಕ ಯೂರೋಪಿನ ಒಂದು ಜನಪ್ರಿಯ ಆಚರಣೆ ಮತ್ತು ನಂಬಿಕೆ. ಇವನ್ನು ಶೋಧಿಸಲು ಆತ ಬಹು ಕಾಲ ಕಳೆಯಯಬೇಕಾಯಿತು.

'ಗೋಲ್ಡನ್ ಬೋ' ಎಂದರೆ ಚಿನ್ನದ ಕೊಂಬೆ ಎಂದರ್ಥ. ಇಟಲಿ ದೇಶದಲ್ಲಿನ ನಮಿ ಎಂಬ ಹಳ್ಳಿ, ಅಲ್ಲಿಯ ಸರೋವರದ ಉತ್ತರ ದಂಡೆಯ ಆಲ್ಬನ್ ಪರ್ವತದಲ್ಲಿನ ತೋಪು ಡಯಾನಾ

ದೇವತೆಯ ಆರಾಧನಾ ಕೇಂದ್ರ ಅಲ್ಲಿ ಅರ್ಚಕನಾಗುವವನು ಒಂದು ವಿಚಿತ್ರ ಪದ್ದತಿಯನ್ನು ಅನುಸರಿಸಬೇಕಿತ್ತು. ಮುಂದೆ ಅರ್ಚಕ ಅಥವಾ ಪೂಜಾರಿಯ ಸ್ಥಾನ ಪಡೆಯುವವನು ಆದಾಗಲೇ ಅಧಿಕಾರದಲ್ಲಿದ್ದ ಪೂಜಾರಿಯನ್ನು ಕೊಲ್ಲುವ ಮೂಲಕ ಆ ಸ್ಥಳಕ್ಕೆ ಬರಬೇಕಾಗಿತ್ತು. ಅವನನ್ನು ಮತ್ತೊಮ್ಮೆ ಯಾರಾದರೂ ಕೊಲ್ಲುವವರೆಗೆ ಡಯಾನಾಳ ಗುಡಿಯ ಪೂಜಾರಿಯ ಅವಕಾಶ ಅವನಿಗಿತ್ತು. ಇದೊಂದು ವಿಲಕ್ಷಣ ಪದ್ದತಿಯಾಗಿದ್ದು, ಆ ಪ್ರದೇಶವೇ ಭಯಾನಕವಾಗಿರುತ್ತಿತ್ತು. ಅರ್ಚಕ, ಆತನ ಸಾವು ಮತ್ತೊಬ್ಬ ಅರ್ಚಕನ ಆಗಮನ ಈ ಆವರ್ತನ ಪ್ರಕ್ರಿಯೆ ಎನ್ನುವುದು ಇನ್ನೊಂದು ಸಾಂಕೇತಿಕ ಆಚರಣೆಯ ನೇರ ಸಂಬಂಧದಲ್ಲಿ ನಡೆದು ಬರುತ್ತಿತ್ತು. ಪೂಜಾರಿ ಪಟ್ಟದಲ್ಲಿರುವವನು ಮುಂದೆ ಪೂಜಾರಿಯಾಗುವಾಗ ಕೊಲ್ಲುವ ಮೊದಲು ವಿಧಿಯೊಂದನ್ನು ಆಚರಿಸಬೇಕಾಗಿತ್ತು. ಅದೇ ತೋಪಿನಲ್ಲಿ ಮರವೊಂದರಲ್ಲಿ ಮೂಡಿ ಬೆಳೆದು ಬರುತ್ತಿದ್ದ ಕೊಂಬೆಯನ್ನು ಆತ ನಿರೀಕ್ಷಿಸಬೇಕಾಗಿದ್ದುದು ಬಂದನಿಕೆಯಂತಹ ಆ ಕೊಂಬೆಯನ್ನು ಕತ್ತರಿಸಿ ತೆಗಿಯುವುದೇ ಆತ ಪೂರೈಸಬೇಕಾಗಿದ್ದ ವಿಧಿ ಆಚರಣೆ. ಈ ಕೊಂಬೆ ವರ್ಜಿಲನ ಈನಿಯಡ್ ಮಹಾಕಾವ್ಯದಲ್ಲಿ ಬರುವ ಗೋಲ್ಡನ್ ಬೋ ಅಥವಾ ಚಿನ್ನದ ಕೊಂಬೆಯನ್ನು ನೆನಪಿಗೆ ತರುತ್ತಿತ್ತು. ಇದು ಫ್ರೇಜರ್‌ನಿಗೆ ಕುತೂಹಲ ಕೆರಳಿಸಿತು. ಈ ಕುತೂಹಲ ಹಂಬಲಗಳೇ ಮುಂದೆ ಚಿನ್ನದ ಕೊಂಬೆಯನ್ನು ಬೆಳೆಸಿದವು. ಚಿನ್ನದ ಕೊಂಬೆಯ ಮೂಲವನ್ನು ಹುಡುಕ ಹೊರಟವನಿಗೆ ಪ್ರಾಚೀನ ನಾಗರಿಕತೆಗಳ ಧರ್ಮ. ಮಾಂತ್ರಿಕತೆಗಳ ಪರಂಪರೆಗಳ ದರ್ಶನವಾಯಿತು. ಆಚರಣೆಯೊಂದರ ಮೂಲಕ ಧರ್ಮ ಮತ್ತು ಪ್ರಾಚೀನ ನಾಗರಿಕತೆಗಳ ಧರ್ಮ, ಮಾಂತ್ರಿಕತೆಗಳ ಪರಂಪರೆಗಳ ದರ್ಶನನವಾಯಿತು. ಆಚರಣೆಯೊಂದರ ಮೂಲಕ ಧರ್ಮ ಮತ್ತು ಪ್ರಾಚೀನ ನಾಗರಿಕತೆಗಳ ಮಾಂತ್ರಿಕತೆಗಳ ಪರಂಪರೆಗಳ ದರ್ಶನವಾದದದ್ದು ನಮಗೆ ಇಲ್ಲಿ ಮಹತ್ವವೆನಿಸುತ್ತದೆ.

ಹೀಗಾಗಿ ಆಚರಣೆಗಳು ಅನೇಕ ಕಾಲ ಖಂಡಗಳ ಜನ ಸಮುದಾಯದ ಅನುಭವಗಳನ್ನು ಚಿತ್ತದ ಆಳದಲ್ಲಿ ಹೊತ್ತು ತಂದಿರುತ್ತದೆ. ಆಯಾ ಕಾಲದ ಸಂವೇದನೆ, ಶ್ರದ್ಧೆಗಳ ಉಳಿಕೆ ಜನಮನದ ಆಳದಲ್ಲಿ ಜೀವಂತವಾಗಿ ಪರಿಚಲನಗೊಂಡು ಒಂದು ತರ್ಕಾತೀತ ಪರಂಪರೆಯನ್ನು ನಿರ್ಮಿಸುವ ಸಾಮರ್ಥ್ಯ ಹೊಂದಿರುತ್ತದೆ. ಅನೇಕ ವೇಳೆ ನಮ್ಮ ಕಲಿಕೆ ಹಾಗೂ ಗ್ರಹಿಕೆಗಳನ್ನು ಮೀರಿದ, ಲೋಕಸತ್ಯದ ಊಹೆಗೂ ಸಿಗದ ಭಾವ ಸತ್ಯವೊಂದು ಈ ಆಚರಣೆಗಳ ಮಹಾ ಸೆಳೆವಿನಲ್ಲಿ ಅಡಗಿರುತ್ತದೆ. ಬಹುಶಃ ಅದನ್ನು ಹುದುಗಿ ತೆಗೆಯಬಾರದೆಂದೇ ಎಷ್ಟೋ ಕಡೆ ಕೆಲವು ರಹಸ್ಯ ಆಚರಣೆಗಳನ್ನು ಸಹಾ ಕೆಲವು ಜನಾಂಗಗಳಲ್ಲಿ ಉಳಿಸಿಕೊಂಡು ಬಂದಿರುತ್ತಾರೆ. ಇಂತಹ ಆಚರಣೆಗಳಿಗೆ ಜನ ಸಮುದಾಯದ ಚಿತ್ತದಲ್ಲಿ ಆಳವಾಗಿ ಬೇರೂರಿ ಅವರ ವ್ಯಕ್ತಿತ್ವದ ಅನುಭಾವಾತೀತ ಸ್ಥರಗಳಲ್ಲಿ ಪ್ರವಹಿಸುತ್ತಾ ಬಂದ ನಿಗೂಡ ನಂಬಿಕೆಯೇ ಮೂಲ. ಹೀಗಾಗಿ ಪ್ರಾಚೀನ ಆದಿವಾಸಿ, ಆದಿಮ ಜನಪದ ಸಮುದಾಯಗಳಿಗೆ ನಿಸರ್ಗದ ಶಕ್ತಿಯೊಂದಿಗೆ ನಿಕಟ ಸಂಬಂಧ ಹೊಂದಿರುವುದು ಬೌದ್ಧಿಕ ವಸ್ತುವಲ್ಲ, ಅದು ಅವರ ಈ ಕ್ಷಣದ ಇಲ್ಲಿಯವರೆಗಿನ ಬದುಕಿನ ಅನೇಕ ಪ್ರಶ್ನೆಗಳಿಗೆ

ಸಮಸ್ಯೆಗಳಿಗೆ ಉತ್ತರ ದೈವೀ ಶಕ್ತಿಯೊಂದಿಗೆ ಅವರು ಬೆಸೆದುಕೊಂಡಿರುವ ಈ ಆರಾಧನೆ, ಆಚರಣೆಗಳು ಮತ್ತು ಅವರ ಅಸ್ಮಿತೆಯ ರೂಪಕಗಳೂ ಹೌದು.

"In Lord Herbert's treaties five religious ideas were recognized as god given and unite in the mind of man from the beginning of the time. The belief in a supreme being in the need for his worship in the pursuit of a pious and virtuous life as the most desirable form of worship in the need of repentance for sins and in rewards and punishments in the next world".[೨]

ಹೀಗಾಗಿ ಧಾರ್ಮಿಕ ನಂಬಿಕೆಗಳು ತಮ್ಮದೇ ಆದ ರೂಪುರೇಷೆಗಳನ್ನು ಹೊಂದಿ ಕ್ರಿಯಾತ್ಮಕ ರೂಪವನ್ನು ತಾಳಿ ಆಚರಣೆಗಳಾಗಿ ಪರಿವರ್ತಿತವಾಗುತ್ತದೆ. ಇದು ಒಂದು ಪೀಳೀಗೆಯಿಂದ ಇನ್ನೊಂದು ಪೀಳಿಗೆಗೆ ಹೋದಾಗ ಒಂದು ಪರಂಪರೆಯಾಗುತ್ತದೆ. ಮತ್ತು ಸಂವಿಧಾನಾತ್ಮಕವಲ್ಲದ ಕಾನೂನುಗಳಾಗಿ ಒಂದು ಸಮಾಜವನ್ನು ಕಾಪಾಡುವಲ್ಲಿ ಯಶಸ್ವಿಯಾಗುತ್ತದೆ.

ಒಟ್ಟಿನಲ್ಲಿ ಬೇರೆ ಬೇರೆ ಸ್ವರೂಪಗಳಲ್ಲಿ ಜಗತ್ತಿನಾದ್ಯಂತ ಹರಡಿಕೊಂಡಿರುವ ಈ ಆಚರಣೆಗಳ ವಿಕಾಸ ಹಾಗೂ ಸ್ಥಿತ್ಯಂತರಗಳನ್ನು ಮರುಪರಿಶೀಲನೆಗೆ ಒಳಪಡಿಸುವುದರ ತುರ್ತು ಇಂದು ಇದೆ. ಸ್ಥಳೀಯ ಪಾರಂಪರಿಕ ಜ್ಞಾನ ತಿಳುವಳಿಕೆಗಳು ವಿಸ್ಮೃತಿಗೊಳಗಾಗುವ ಮುನ್ನ ಅವುಗಳ ಹಿಂದಿನ ಜ್ಞಾನ, ತರ್ಕ ಹಾಗೂ ಸೃಜನಾತ್ಮಕ ನೆಲೆಗಳನ್ನು ವರ್ತಮಾನದ ಲೋಕದ ತಿಳುವಳಿಕೆಯ ಜೊತೆಗೆ ಪರಿಪ್ರೇಕ್ಷವನ್ನು ಕಟ್ಟುವ ಅನಿವಾರ್ಯತೆ ಇಂದು ಇದೆ. ಆಧುನಿಕ ಬಂಡವಾಳಶಾಹಿ ನಾಗರಿಕತೆ ತನಗಿಂತ ಭಿನ್ನವಾದ ಲೋಕಗ್ರಹಿಕೆ, ನಂಬಿಕೆ ಆಚರಣಾ ಕ್ರಮಗಳನ್ನು ನಿರ್ದಯವಾಗಿ ಹೊಸಕಿಹಾಕುತ್ತಿರುವುದನ್ನು ತಪ್ಪಿಸಬೇಕಾಗಿದೆ. ಡಾ. ಡಿ. ಆರ್. ನಾಗರಾಜ್ ಹೇಳುವಂತೆ "ಆಧುನಿಕ ನಾಗರಿಕತೆಯ ತರ್ಕ ಒಂದು ಏಕ ರೂಪೀ ಜೀವನ ಕ್ರಮವನ್ನು ರೂಪಿಸಬಹುದಾಗಿದೆ. ಹಳೆಯ ಜ್ಞಾನ ವ್ಯವಸ್ಥೆಗಳು ಭಾವನಾಲಯಗಳು ತೀವ್ರ ರೀತಿಯ ಹಿಂಸೆಯನ್ನು ಅನುಭವಿಸಿ ಕಣ್ಮರೆಯಾಗುತ್ತಿವೆ".[೩] ಅಂದರೆ ಕಟ್ಟು ನಿಟ್ಟಾಗಿ ಪರಿಪಾಲಿಸುತ್ತಿದ್ದ ಆಚರಣೆಗಳು ಇಂದು ಮಸುಕಾಗುತ್ತಿವೆ. ಹಿಂದಿನ ಕಾಲದಲ್ಲಿ ಸ್ತ್ರೀ ಶಿಕ್ಷಣ ನಿಷಿದ್ದವಾಗಿತ್ತು. ಆದರೆ ಈಗ ಅದು ಸಡಿಲವಾಗಿ ಸ್ತ್ರೀಶಕ್ಷಣ ಅವಶ್ಯಕ ಎನಿಸಿದೆ. ವಿಧವೆಯರ ಮುಖ ನೋಡುವುದು ಅವರು ಶುಭ ಕಾರ್ಯಗಳಿಗೆ ಅಮಂಗಲಯೆನಿಸಿದ್ದರು. ಆದರೆ ಕಾಲಕ್ರಮೇಣ ಆಧುನಿಕವಾಗಿ ವಿಧವಾ ಪುನರ್ ವಿವಾಹ ನೆಡೆಯುತ್ತಿವೆ.ಹೀಗೆ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಒಳಗಾಗಿ ಹಲವಾರು ಬದಲಾವಣೆಗೆ ಒಳಗಾಗುತ್ತಿರುವ ಆಚರಣೆಗಳನ್ನು ಅಧ್ಯಯನ ಮಾಡುವ ನಮ್ಮ ಸಂವೇದನೆಯನ್ನು ಬದಲಾಯಿಸಿಕೊಳ್ಳಬೇಕಾಗಿದೆ. ದೇಸೀ ಜೀವನ ಪರಿಕಲ್ಪನೆ, ಜ್ಞಾನ ಪರಂಪರೆ ದರ್ಶನಗಳನ್ನು ಪುನರ್ ಶೋಧಿಸಿಕೊಳ್ಳುವ ಹಾಗೂ ಪುನರ್ ಮೌಲ್ಯೀಕರಣಗೊಳಿಸಿಕೊಳ್ಳುವ ಪ್ರಕ್ರಿಯೆ ನಿರಂತರವಾಗಿ ಸಾಗಬೇಕಾಗಿದೆ.

೪.೯. ಜನಪದರಲ್ಲಿ ಸ್ತ್ರೀ ದೇವತೆಯ ಬಗ್ಗೆ ಇರುವ ನಂಬಿಕೆ :

ಜನಪದರ ಮನಸ್ಸಿನ ಮೇಲೆ ಶಾಕ್ತ ಸಂಪ್ರದಾಯದ ಪ್ರಭಾವ ಹೇರಳವಾಗಿದೆ. ಲಕ್ಷ್ಮೀ ಸರಸ್ವತಿ, ಪಾರ್ವತಿಯರಂತೆ ಎಲ್ಲಮ್ಮ, ಮಾರಮ್ಮ ಬನಶಂಕರಿ, ಕಾಳವ್ವ, ದ್ಯಾಮವ್ವ, ಜಕ್ಕವ್ವ ಇತ್ಯಾದಿ ದೇವತೆಗಳನ್ನು ಪೂಜಿಸುವ ಕೊಂಡಾಡುವ ಸಂಗತಿಗಳನ್ನು ಕತೆ, ಅವರ ಹಾಡುಗಳಲ್ಲಿ ಕಾಣಬಹುದು. ಈ ಪುರಾತನವಾದ ಶಕ್ತಿ ವಾದವು ಜನಪದ ಪ್ರಿಯವಾಗಿದ್ದು ಇದರಲ್ಲಿ ಶಕ್ತಿ ಒಬ್ಬಳೇ ಎಂಬ ನಂಬಿಕೆ ಇಲ್ಲ.

ಶಾಕ್ತದ ಸಂಬಿಕೆಯ ಪ್ರಕಾರ ಎಲ್ಲ ಸ್ತ್ರೀಯರೂ ದೇವತಾ ಸ್ವರೂಪರು. ಇದು ನೂರಾರು ಮಾತೃ ದೇವತೆಯರ ಕಲ್ಪನೆಗೆ ಎಡೆ ಮಾಡಿಕೊಟ್ಟಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ತಮಗೊದಗುವ ಕಷ್ಟ ಕಾರ್ಪಣ್ಯ. ರೋಗ ರುಜಿನ, ದುಃಖಿ ದುಮ್ಮಾನಗಳಿಗೆ ಯಾವುದದೋ ಶಕ್ತಿ ಕಾರಣ ಎಂಬುದರ ಜತೆಗೆ ಇಡೀ ಸಮುದಾಯದ ಹಿತಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡ ಹಲವು ಹೆಂಗಳೆಯರು ಹಳ್ಳಿಯ ಮುಗ್ಧ ಮನಸ್ಸುಗಳಲ್ಲಿ ಪುಣ್ಯಸ್ಮೃತಿಗಳಾಗಿ ಗ್ರಾಮದೇವತೆಗಾಗಿ ಮೈ ತಳೆದಿವೆ. ಈ ಎಲ್ಲ ದೇವತೆಗಳ ಹಿನ್ನೆಲೆ, ಪೂಜಾವಿಧಾನ ಇತ್ಯಾದಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಬಹುಪಾಲು ಒಂದೇ ಆಗಿರುತ್ತದೆ.

ಕರ್ನಾಟಕದ ಎಲ್ಲ ಕಡೆಯೂ ಒಂದಲ್ಲ ಒಂದು ಹೆಸರಿನಿಂದ ಪೂಜೆಗೊಳ್ಳುತ್ತಾಳೆ. ಆಂಧ್ರದಲ್ಲಿ ಆದಿಜಾಂಬವ ಮುನಿಯಿಂದ ಹುಟ್ಟಿದವಳು ಎಂದಿದ್ದರೆ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಜಮದಗ್ನಿ ಹೆಂಡತಿ ಪರಶುರಾಮನ ತಾಯಿಯಾದ ರೇಣುಕೆಯಾಗಿದ್ದಾಳೆ. ಶಿರಸಿಯ ಮಾರಿಕಾಂಬೆ, ಕೊಲ್ಲೂರಿನ ಮೂಕಾಂಬೆ, ಸವದತ್ತಿಯ ಎಲ್ಲಮ್ಮ, ಚಂದ್ರಗುತ್ತಿಯ ರೇಣುಕೆ ಹೀಗೆ ಶಕ್ತಿದೇವತೆಯ ಸಾನಿಧ್ಯಗಳು ಅನೇಕ. ಮೈಸೂರಿನ ಚಾಮುಂಡಿ ಪ್ರಸಿದ್ಧವಾದ ಶಕ್ತದೇವತೆಯ ರೂಪ. ಚಾಮುಂಡಿ, ದುರ್ಗಿ, ಮಾರಮ್ಮ, ಕಾಳಿ, ಎಲ್ಲಮ್ಮ ಎಲ್ಲರೂ ಜನಸಾಮಾನ್ಯರ ಮನಸ್ಸಿನಲ್ಲಿ ಆದಿ ಶಕ್ತಿಯ, ಸರ್ವಶಕ್ತಿಯ ಸಂಕೇತವಾಗಿ ಪೂಜಿಸಲ್ಪಡುತ್ತಿದ್ದಾರೆ.

ನವರಾತ್ರಿಯೆನ್ನುವದು ಜನಪದರಿಗೆ ತಾಯಿಯ ಹಬ್ಬ. ಅನ್ಯಾಯ ಅಧರ್ಮಗಳ ವಿರುದ್ಧ ತನ್ನ ಕಿಡಿಗಣ್ಣನ್ನು ಬೀರುವ ದುಷ್ಟ ಸಂಹಾರ ಮಾಡುವ ಶಕ್ತಿದೇವಿ ತಾಯಿ. ಭಕ್ತರು ಮಕ್ಕಳಂತೆ ಕರಗಿ ಕೂಗಿದಾಗ ಹಾಲುಣಿಸಿ ಕಾಪಾಡುವ ಮಾತೃದೇವತೆ ಸಂಹಾರ ಗರ್ಭದಲ್ಲಿಯೇ ಸೃಷ್ಟಿಯ ಬೀಜವೂ ಅಡಗಿದೆಯನ್ನುವ ಪರಮಾರ್ಥವನ್ನು ಸಂಕೇತಿಸುವ ಪರ್ವಕಾಲ. ಶಕ್ತಿದೇವಿಗೆ ಜಾತಿ ಮತಗಳ ಭೇದವಿಲ್ಲದೆ ಎಲ್ಲ ವರ್ಗದ ಜನತೆಯ ಭಕ್ತಿಗೂ ಪಾತ್ರಳಾಗಿದ್ದಾಳೆ. ಈಕೆಯ ಮುಂದೆ ಸಕಲರೂ ತಲೆ ಬಾಗುತ್ತಾರೆ. ಬಹಳ ದೊಡ್ಡ ಸಂಖ್ಯೆಯಲ್ಲಿ ಈಕೆಯ ಭಕ್ತವರ್ಗವಿದೆ. ತಾಯಿಗೆ ತನ್ನ ಮಕ್ಕಳಲ್ಲಿ ತಾರತಮ್ಯವೆಂಬುದುಂಟೆ? ನಂಬಿ ಬಂದವರನ್ನೆಲ್ಲ ಕರುಣೆಯಿಂದ ತಬ್ಬಿಕೊಳ್ಳುವುದು ತಾಯಿಯ ದೊಡ್ಡಸ್ತಿಕೆ, ತಾಯಿಯ ಹೃದಯ ಅಂಥದು. ಕೆಟ್ಟ ಮಕ್ಕಳಾದರೂ ಶರಣು ಎಂದು ತಾಯಿಯ ಬಳಿ ಬಂದಾಗ ಆಕೆಯು ಮಮತೆಯಿಂದ ಮೈದಡವುತ್ತಾಳೆ. ಇನ್ನು ಅಂಥ ಕೆಟ್ಟ

ಕೆಲಸ ಮಾಡಬೇಡ ಎನ್ನುವ ಆಜ್ಞೆ ಆ ಮಮತೆಯಿಂದ ಮೈದಡವುತ್ತಾಳೆ. ಇನ್ನು ಅಂಥ ಕೆಟ್ಟ ಕೆಲಸ ಮಾಡಬೇಡ ಎನ್ನುವ ಆಜ್ಞೆ ಆ ಮಮತೆಯಲ್ಲಿರುತ್ತದೆ. ಆದುದರಿಂದಲೇ ಈ ತಾಯಿಯ ಬಳಿಗೆ ಎಲ್ಲ ಬಗೆಯ ಮಕ್ಕಳೂ ಬರುತ್ತಾರೆ. ತಾವು ಪಾಪ ಮಾಡುವದಕ್ಕಾಗಿಯೇ ಬಮದಿದ್ದೇವೆ. ಅವಳು ಪಾಪ ತೊಳೆಯುವುದಕ್ಕಾಗಿ ನಿಂತಿದ್ದಾಳೆ. ಒಲಿದರೆ ನಾರಿ, ಮುನಿದರೆ ಮಾರಿ ಎಂಬುದನ್ನು ಸಾರಿದ್ದಾಳೆ.

ಮಾನವನಿಗೆ ದೇವರ ಕಲ್ಪನೆ ಬಂದಂದಿನಿಂದಲೂ ಒಮದಲ್ಲ ಒಂದು ಕಾರಣದಿಂದ ಅಂತರ್ಗತ ಭಾವನೆಗಳಿಗೆ ಸ್ಪಂದಿಸುತ್ತಾ ಬಂದಿದ್ದಾನೆ. ಅಮೂರ್ತ ಶಕ್ತಿಯನ್ನು ಕುರಿತ ಭಯ ಮೂಲವಾದ ಭಕ್ತಿ, ತನಗರಿವಾದದ್ದನ್ನು ತಿಳಿಯುವ ಕುತೂಹಲ ಪ್ರೇರಿತ ಮನಸ್ಸು ನೆಮ್ಮದಿಯ ಬಯಕೆ, ಭಕ್ತಿಪೂಜೆಗಳ ಹಿನ್ನೆಯಲ್ಲಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಮಿತ ವ್ಯಾಪ್ತಿಗಳ ತಿಳುವಳಿಕೆಯಲ್ಲಿಯೆ ಶಕ್ತಿದೇವಿಗೆ ಶರಣಾಗತಿ ಭಾವದಿಂದ ತಲೆ ಬಾಗುವುದನ್ನು ಕಾಣುತ್ತೇವೆ.

೪.೨. ಸಾಂಸ್ಕೃತಿಕ ಸಾಮ್ಯತೆ ಮತ್ತು ಮಾತೃ ಪ್ರಧಾನ ಆಚರಣೆಗಳು :

ಮಾನವನ ಪ್ರಾಗೈತಿಹಾಸಿಕ ಅವಲೋಕನದಿಂದ ಅವನು ತನ್ನ ಉತ್ಪತ್ತಿಯ ಆರಂಭದ ಹಂತದಲ್ಲಿ ಕಾಡು ಮಾನವನಾಗಿ ಪ್ರಾಣಿ ಜೀವನ ನಡೆಸಿದ್ದು ತಿಳಿದು ಬರುತ್ತದೆ. ಕಾಡಿನಲ್ಲಿ ಏಕಾಂಗಿಯಾಗಿ ಅಲೆದಾಡುತ್ತಾ ಉದರ ಪೋಷಣೆಗಾಗಿ ಕೈಗೆ ದೊರಕಿದ ಹಣ್ಣು, ಹಂಪಲು, ಗಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದು, ಆತನ ಜೀವನಕ್ರಮದಲ್ಲಿ ಬೆಳವಣಿಗೆಯಾದಂತೆ ಬೇಟೆಯಾಡುವುದನ್ನು ಒಂದು ಪ್ರಮುಖ ಕಸುಬನ್ನಾಗಿ ಮಾಡಿಕೊಂಡು, ಪ್ರಾಣಿಗಳ ಮಾಂಸವನ್ನು ತಿನ್ನುತ್ತಾ ತನ್ನ ಹಸಿವನ್ನು ಹಿಂಗಿಸಿಕೊಳ್ಳತೊಡಗಿದನು. ಕ್ರಮೇಣ ಬೆಂಕಿಯ ಬಳಕೆ ಹೊಳೆದಾಗಿನಿಂದ ಹಸಿ ಮಾಂಸವನ್ನು ಬೇಯಿಸಿಕೊಂಡು ತಿನ್ನಲು ಪ್ರಾರಂಭಿಸಿದನು. ಇವುಗಳ ಹಿನ್ನಲೆಯಲ್ಲಿ ಮಾನವನಿಗೆ ಬರು ಬರುತ್ತಾ ಉದ್ಯೋಗದ ಕಲ್ಪನೆ ಮೂಡಿ ಒಂದು ವಿಶಾಲವಾದ ಬಯಲು ಪ್ರದೇಶದಲ್ಲಿ ನೆಲೆ ನಿಂತು ಪ್ರಾಣಿಗಳನ್ನು ಸಾಕಿ ಬೇಸಾಯ ಪ್ರಾರಂಭಿಸಿದನು. ಇದು ಮಾನವನ ವಿಕಾಸದ ಪ್ರಥಮ ಹಂತ.

ಮಾನವ ತನ್ನ ದೈನಂದಿನ ಬದುಕನ್ನು ಸುಗಮವಾಗಿ ಸಾಗಿಸಲು ಮತ್ತು ದೈಹಿಕ ಅಗತ್ಯಗಳನ್ನು ಈಡೇರಿಸಲು ಆರ್ಥಿಕ ವೈವಾಹಿಕ ಕುಟುಂಬ ವ್ಯವಸ್ಥೆಗಳನ್ನು ರೂಪಿಸಿಕೊಂಡಂತೆಯೇ ಮಾನಸಿಕ ಸ್ವಾಸ್ಥ್ಯ, ನೆಮ್ಮದಿಯನ್ನು ಪಡೆಯಲು ಪೂಜ್ಯವೆನಿಸತಕ್ಕದ್ದು ಅತಿಮಾನುಷ ಶಕ್ತಿಯೇ ಆಗಿರಬೇಕೆಂಬ ನಿಯಮವಿಲ್ಲ. ಧಾರ್ಮಿಕ ವ್ಯವಸ್ಥೆಯನ್ನೂ ರೂಪಿಸಿಕೊಂಡಂತೆ ತೋರುತ್ತದೆ. ಸ್ಥೂಲವಾಗಿ ಹೇಳಬೇಕೆಂದರೆ ಆದಿಮಾನವ ಅತಿಮಾನುಷ ಶಕ್ತಿಯೊಂದಿಗೆ ಏರ್ಪಡಿಸಿಕೊಂಡ ಹೊಂದಾಣಿಕೆಯ ಫಲವೇ ಧರ್ಮ ಎನ್ನಬಹುದು ಅಥವಾ ಅಗೋಚರವಾದ ಅಲೌಕಿಕ ಶಕ್ತಿಯೊಂದಿಗೆ ಮಾಡಿಕೊಂಡ ಏರ್ಪಾಡಿನ ಫಲವೇ ಧರ್ಮ ಎನ್ನಬಹುದು. ಮಾನವ ಯಾವುದನ್ನು ಭಾವನೆಯಿಂದ

ನೋಡುವನೋ ಅದರೊಡನೆ ಇರಿಸಿಕೊಳ್ಳುವ ಸಂಬಂಧವೇ ಧರ್ಮವೆಂಬ ಪದದ ವಿಶಾಲಾರ್ಥ. ಮಾನವ ರೂಪದಲ್ಲಿಯೇ ಇರಬೇಕೆಂದೂ ಇಲ್ಲ; ವೈಯಕ್ತಿಕ ಭಾವನೆ ಮಾತ್ರವೆಂದೂ ಅದರರ್ಥವಲ್ಲ. ದೇವತೆ, ದೇವರು, ದೈವ ಎಂಬ ಶಬ್ದವನ್ನು ವೈಯಕ್ತಿಕ ಇಲ್ಲವೇ ಅತಿಮಾನುಷ ಅಭಿಪ್ರಾಯದಲ್ಲಿ ಬಳಸುವುದಾದರೆ. ಅಥವಾ ದೇವತಾ ಸ್ವರೂಪಗಳೊಡನೆ ಇರುವ ಮಾಬವ ಸಂಬಂಧ ಧರ್ಮವೆನಿಸುವಂತೆ ಅಂಥವುಗಳಲ್ಲದ ಪೂಜ್ಯ ವಸ್ತುಗಳೊಡನೆ ಅವನ ಸಂಬಂಧಕ್ಕೂ ಅನ್ವಯಿಸುವಷ್ಟು ಅದು ವಿಶಾಲವಾಗಿದೆ. ಅಂತೆಯೇ ಪೂಜ್ಯವಾದುದರೊಂದಿಗೆ ಸಂಬಂಧವೆಂಬುದು ಕೂಡಾ ಬೇರೆ ಬೇರೆ ಪ್ರಕಾರದಲ್ಲಿರಬಹುದು. ಅವುಗಳ ಪೈಕಿ ಪ್ರಮುಖವಾದುದು ಪೂಜೆ ಅಥವಾ ಆರಾಧನೆ. ಆದರೆ ಸದಾಚಾರ ಸಮ್ಯದ್ಭಾವನೆ ಅಥವಾ ಸದ್ಭಕ್ತಿ, ನೀತಿ ನಿಷ್ಠ, ಧಾರ್ಮಿಕ ಸಂಸ್ಥೆಗಳ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ, ಇವನ್ನೆಲ್ಲ ಧಾರ್ಮಿಕ ಭಾವನೆಗೆ ಒಳಗೊಳ್ಳುತ್ತದೆ.

ಧಾರ್ಮಿಕ ಕಲ್ಪನೆ :

ನಂಬಿಕೆ ಮತ್ತು ಆಚರಣೆಗಳು ಧಾರ್ಮಿಕ ಕಲ್ಪನೆಗಳ ಹಿನ್ನೆಲೆಯಲ್ಲಿಯೇ ಬೆಳೆದುಬಂದವು. ಪ್ರಾಚೀನ ಶಿಲಾಯುಗದ ಆದಿಭಾಗದಲ್ಲಿಯೇ ಎಂದರೆ ಸುಮಾರು ೩೫,೦೦,೦೦೦ ವರ್ಷಗಳ ಹಿಂದೆಯೇ ಧಾರ್ಮಿಕ ಪ್ರವೃತ್ತಿ ಬೆಳೆಯಿತು. ಕಾಡು ಜನಾಂಗಗಳಲ್ಲಿ ಮನುಷ್ಯನು ಸತ್ತಮೇಲೆ ಅವನ ಮೆದುಳನ್ನು ತೆಗೆದು ಅದಕ್ಕೆ ವಿಧಿವಿಧಾನನಗಳನ್ನು ನೆರವೇರಿಸಿ ಪ್ರೇತ ಭೋಜನದಲ್ಲಿ ತಿನ್ನುವ ಪದ್ಧತಿಯನ್ನು ಆದಿವಾಸಿ ಜನಾಂಗಗಳಲ್ಲಿ ಕಂಡು ಬರುತ್ತದೆ. ಅಲ್ಲದೆ ಬೋರ್ನಿಯಾ ಮಲೇಶಿಯಾಗಳಲ್ಲಿ ಸತ್ತ ಮನುಷ್ಯನ ಮೆದುಳನ್ನು ತೆಗೆದು ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿ ನಂತರ ಪ್ರೇತಭೋಜನದಲ್ಲಿ ತಿನ್ನುವ ಪದ್ದತಿಯನ್ನು ಆದಿವಾಸಿ ಜನಾಂಗದಲ್ಲಿ ಕಂಡುಬರುತ್ತದೆ. ಹೀಗೆ ಮೆದುಳನ್ನು ತಿನ್ನುವುದು ಧಾರ್ಮಿಕ ಕಲ್ಪನೆಯ ಅಂಗವಾಗಿಯೇ ಇದ್ದಿತೆನ್ನುವುದು ಗಮನಾರ್ಹ ಅಂಶ; ಈ ಪದ್ದತಿಯೇ ನಮಗೆ ತಿಳಿದಿರುವ ಮಟ್ಟಿಗೆ ಅತ್ಯಂತ ಪುರಾತನವಾದ ಧಾರ್ಮಿಕ ಕಲ್ಪನೆ.

ಹೀಗೆ ಕ್ರಮವಾಗಿ ಧಾರ್ಮಿಕ ಕಲ್ಪನೆಗಳು ಅನೇಕ ಪರಿಸರದಲ್ಲಿ ಬೆಳೆದುಕೊಂಡು ಬಂದು ಈ ಕಲ್ಪನೆಗಳು ಮುಂದೆ ಧರ್ಮಗಳಿಗೆ ದಾರಿ ಮಾಡಿದವು. ಇಂಥ ಧಾರ್ಮಿಕ ಕಲ್ಪನೆಯ ಪ್ರಭಾವದಲ್ಲಿ ಸಿಲುಕಿದ ಮಾನವನಲ್ಲಿ ಹೊಸ ಕಲ್ಪನೆ ಮಾಡಿ ಮುಂದೆ ಅವನು ಮೂರ್ತಿಪೂಜೆಯನ್ನು ರೂಢಿಯಲ್ಲಿ ತಂದನು. ತನ್ನ ಕಲ್ಪನೆಗೆ ತೋಚಿದಂತೆ ಮೂರ್ತಿಯನ್ನು ಸೃಷ್ಟಿಸಿಕೊಂಡು ಅದರ ಮೇಲೆ ದೇವತಾ ಭಾವನೆಯನ್ನಿರಿಸಿ ಆರಾಧಿಸತೊಡಗಿದನು. ಅವನ ಜ್ಞಾನ ಕ್ಷಿತಿಜವು ವಿಸ್ತಾರವಾದಂತೆ ಮೂರ್ತಿ ಶಿಲ್ಪದ ಜೊತೆ ದೇವಾಲಯ ನಿರ್ಮಾಣದ ಕಲ್ಪನೆಯೂ ಬೆಳೆಯುತ್ತಾ ಬಂತು. ಹೀಗೆ ಕಾಲ ಕ್ರಮೇಣ ಮಾನವನಲ್ಲಿ ಉಂಟಾದ ಭಾವನೆಗಳ ಬೆಳವಣಿಗೆ ಆಯಾ ಪರಿಸರಕ್ಕೆ ಕಾರಣವಾಗಿರಬಹುದು. ದೇವತೆಗಳ ಉಗಮವಾದ ನಂತರ ಅವನ ಮನಸ್ಸಿನಲ್ಲಿ ಪೂಜಾ ವಿಧಿವಿಧಾನಗಳ ಕಲ್ಪನೆಗಳು ಮೂಡಿಕೊಂಡು ಬಂದವು.

ಮಾನವ ಸಾಂಘಿಕ ಜೀವನದ ಫಲವಾಗಿ ಕ್ರಮೇಣ ಒಂದೊಂದು ಗುಂಪುಗಳೇ ಒಂದೊಂದು ಬುಡಕಟ್ಟುಗಳಾಗಿ ಪರಿಣಮಿಸಿದವು. ಒಂದೊಂದು ಬುಡಕಟ್ಟಿನ ಜನರಲ್ಲಿ ಒಂದೊಂದು ನಂಬಿಕೆ, ಒಂದೊಂದು ಬಗೆಯ ಪದ್ಧತಿ ಆಚರಣೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಕಾಣಿಸಿಕೊಳ್ಳತೊಡಗಿದವು. ಇವು ಸಾಮಾಜಿಕ ಸಂಬಂಧವನ್ನು ಕಲ್ಪಿಸುವುದರ ಜೊತೆಗೆ ದೇವರು ಮತ್ತು ಧರ್ಮದ ಸುತ್ತ ಅನೇಕ ಆಚರಣೆಗಳನ್ನು ಹೆಣೆದವು. ಹಬ್ಬ, ಹುಣ್ಣಿಮೆ, ಜಾತ್ರೆ, ಹೀಗೆ ಅನೇಕ ಕಟ್ಟಳೆಗಳು ಮೂಡಿ ಬಂದವು. ದೇವಾಲಯಗಳ ಕಲ್ಪನೆ ಮೂಡಿ ಬರುವ ಮೊದಲು ಬಯಲಿನಲ್ಲಿ ಗಿಡಗಂಟೆಗಳ ಪೊದರಿನಲ್ಲಿ ಆರಾಧನೆ ಕಂಡುಬರುತ್ತಿತ್ತು. ಇವು ಅವರ ಆರಾಧನಾ ಕೇಂದ್ರಗಳಾಗಿದ್ದವೆಂದು ಹೇಳಬಹುದು.

ಗುಪ್ತರ ಕಾಲಕ್ಕೆ ಗುಡಿಗಳು ಇದ್ದ ಬಗ್ಗೆ ಇತಿಹಾಸದಲ್ಲಿ ಓದಿ ತಿಳಿದುಕೊಂಡಿದ್ದೇವೆ. ಅವರ ಕಾಲದ ಗುಡಿಗಳು ಮರದಿಂದ, ಮಣ್ಣಿನಿಂದ ಮಾಡಲ್ಪಟ್ಟ ಕಟ್ಟಡಗಳು ಬಹುಕಾಲ ಉಳಿಯಲಿಲ್ಲ. ಕ್ರಿಸ್ತಾಬ್ಧ ೭ನೇ ಶತಮಾನದ ಸುಮಾರಿಗೆ ನಾಗರಶೈಲಿಯ ದೇವಾಲಯಗಳಾಗಿ ಮೈದೋರಿದ್ದವು. ಆದರೆ ಕ್ರಿಸ್ತಾಬ್ದ ೪೩೭ರಲ್ಲಿ ಗುಜರಾತಿನ ರೇಷ್ಮೆ ನೇಕಾರರು ಮಂದಸೂರಿನಲ್ಲಿ ಸೂರ್ಯ ದೇವಾಲಯವನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಆದರೆ ಮೊದಲಿಗೆ ಕಂಡುಬರುವ ಗುಡಿಗಳೆಲ್ಲವೂ ಸ್ತೂಪದ ಮಾದರಿಯಲ್ಲಿ ಕಂಂಡುಬರುತ್ತವೆ. ಇವು ಜನರ ಹರಕೆಗೆ ಪೂಜೆಗೆ ಅನುಕೂಲವೂ ಆಗಿದ್ದವು. ಮಥುರಾದ ಬಳಿಯಲ್ಲಿ ಜಮಲಾಪುರದಲ್ಲಿ ದೊರೆತ ಅವಶೇಷಗಳಿಂದ ಮಣಿಭದ್ರ, ದಧಿಕರ್ಣ ಹೀಗೆ ಅನೇಕ ಯಕ್ಷರ ಗುಡಿಗಳು ಇದ್ದ ಬಗ್ಗೆ ಸ್ಪಷ್ಟವಾದ ಉಲ್ಲೇಖಗಳೂ ದೊರೆಯುತ್ತವೆ. ಅಲ್ಲದೆ ಕಿಸ್ತಯುಗದ ಆರಂಭದ ಕಾಲದಲ್ಲಿ ದಕ್ಷಿಣ ದೇಶದಲ್ಲಿ ಕೆರೆಗಳ, ನದಿಗಳ ಬಂಡೆಯ ಮೇಲೆ ಕಾರ್ತಿಕೆಯ ಗುಡಿಗಳು ಇದ್ದ ಬಗ್ಗೆ ಹಲವಾರು ಶಾಸನಗಳು ಹೇಳುತ್ತವೆ. ಕಾಲಕ್ರಮೇಣ ಚೋಳ ಅರಸರ ಕಾಲದಲ್ಲಿ ಗುಡಿಗಳ ಬೆಳವಣಿಗೆಯ ಹಂತವನ್ನು ಕಾಣುತ್ತೇವೆ. ಈ ಅರಸರ ಕಾಲಕ್ಕೆ ಪ್ರತಿಯೊಂದು ಊರಿಗೆ ಗುಡಿಗಳ ಬೆಳವಣಿಗೆ ಹೊಂದಿರುವುದು ಸ್ಪಷ್ಟವಾಗುತ್ತದೆ.

ಗ್ರಾಮ ದೇವತೆಗಳ ಕಲ್ಪನೆಯೂ ಬಹು ಪ್ರಾಚೀನವಾದುದು. ವೇದ, ಉಪನಿಷತ್ತು, ಮತ್ತು ಪುರಾಣಗಳಿಗಿಂತಲೂ ಹಿಂದಿನದೆಂದು ಹೇಳಬಹುದು. ಹರಪ್ಪಾ ಮೊಹೆಂಜದಾರೋ ಸಂಸ್ಕೃತಿಯಲ್ಲಿ ಕ್ರಿ.ಪೂ ೪ ರಿಂದ ೭ ನೇ ಶತಮಾನದ ನಾಗರಿಕತೆಯಲ್ಲಿ ದೇವತಾ ವಿಗ್ರಹಗಳು ದೊರೆತ ಬಗೆಗೆ ಉಲ್ಲೇಖಗಳು ಕಾಣುತ್ತದೆ. ಪ್ರೊ. ಎಚ್.ವಿ. ನಾಗೇಶ್ ಅವರು " ಗ್ರಾಮಗಳು ನೆಲೆಗೊಂಡಂದಿನಿಂದ ಅಂದರೆ ವೇದ ಪೂರ್ವ ಕಾಲದಿಂದಲೂ ಗ್ರಾಮದೇವತೆಯ ಸಂಪ್ರದಾಯ ಇದ್ದಿರಬೇಕೆಂದು" ಅಭಿಪ್ರಾಯ ಪಡುವರು.

ಜಗತ್ತಿನಲ್ಲಿ ನಡೆಯುವ ಎಲ್ಲ ಘಟನೆಗಳಿಗೆ ಯಾವುದೋ ಒಂದು ಅವ್ಯಕ್ತ ಶಕ್ತಿಯೇ ಕಾರಣವಿರಬೇಕೆಂದು ನಂಬಿದ ಮನುಷ್ಯ ಆ ಶಕ್ತಿಯನ್ನು ದೇವತೆಯೆಂದು ತಿಳಿದು ಪೂಜಿಸತೊಡಗಿದ. ಹೀಗೆ ವ್ಯಕ್ತಿಯಿಂದ ವ್ಯಕ್ತಿಗೆ ಸಮುದಾಯದಿಂದ ಸಮುದಾಯಕ್ಕೆ ದೇವತೆಗಳ ಗ್ರಹಿಕೆಯಯಲ್ಲಿ

ಭಿನ್ನತೆ ಕಾಣಿಸಿದ್ದರಿಂದ ಭಿನ್ನ ಭಿನ್ನ ಹೆಸರಿನ ದೇವತೆಗಳು ಹುಟ್ಟಲು ಕಾರಣವಾಯಿತು. ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮ ದೇವತೆಗಳು. ಅನೇಕ ಗ್ರಾಮ ದೇವತೆಗಳು ಅತೀ ಪ್ರಾಚೀನವಾದ ಭೂಮಿ ಪೂಜೆ ಅಥವಾ ಮಾತೃ ಪೂಜೆಯ ಕುರುಹುಗಳಿಲ್ಲದೆ ಬೇರೆಯವಲ್ಲ. ಮಾತೃದೇವತೆಯ ಪರಿಭಾವನೆ ಜಗತ್ತಿನಾದ್ಯಂತ ಅನೇಕ ಪರಂಪರೆಗಳಲ್ಲಿ ಕಂಡು ಬರುತ್ತದೆ. ಆಕೆ ಫಲ ಸಮೃದ್ದಿ ದೇವತೆ, ಶಿಲಾಯುಗದಲ್ಲಿದ್ದ ಏಕ ದೈವ ವಾದದಲ್ಲಿ ಫಲ ಸಮೃದ್ದಿ ದೇವತೆಯಾದ ಮಾತೃ ದೇವತೆಯೇ ಏಕೈಕ ದೈವವಾಗಿದ್ದಳೆಂದೂ ಎಲ್ಲ ಪೂಜೆಯೂ ಆಕೆಗೇ ಸಲ್ಲುತ್ತಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಜಗತ್ತಿನ ಅತೀ ಪ್ರಾಚೀನ ಉಳಿಕೆಗಳಲ್ಲಿ ಮಾತೃದೇವತೆಯ ವಿಗ್ರಹಗಳು ದೊರಕಿವೆ. ಉದಾಹರಣೆಗೆ : ಪೂರ್ವ ಮೆಡಿಟರೇನಿಯನ್ ಪ್ರದೇಶದ ಉತ್ತರ ಹಾಗೂ ದಕ್ಷಿಣ ದೇಶಗಳು ಮಹಾಮಾತೆಯ ಆರಾಧನಾ ಪಂಥದ ಮೂಲ ನೆಲೆಗಳಾಗಿದ್ದವು. ಈಜಿಪ್ಪಿನ ಬಲು ಪ್ರಾಚೀನ ದೈವವಾದ ಏಡಿಸ್ ಒಬ್ಬ ಸಮೃದ್ದಿ ದೇವತೆಯಾಗಿದ್ದವಳು. ಮಾತೃ ದೇವತೆಗಳ ಆರಾಧನೆಯು ಚರಿತ್ರೆಯ ಪೂರ್ವ ಕಾಲದಲ್ಲಿ ಬಳಕೆಯಲ್ಲಿತ್ತೆಂಬುದಕ್ಕೆ ವಿಪುಲವಾದ ಸಾಕ್ಷಾಧಾರಗಳು ದೊರಕುತ್ತವೆ. ಸಿಂಧೂ ಕಣಿವೆಯಲ್ಲಿ ದೊರೆತಿರುವ ಅನೇಕ ಸ್ತ್ರೀ ವಿಗ್ರಹಗಳು ಮಾತೃದೇವತಾ ಪಂಥಕ್ಕೆ ಸಂಬಂಧಿಸಿದೆ. ಭಾರತದಲ್ಲಿ ಕೃಷಿ ಆರ್ಥಿಕ ಚಟುವಟಿಕೆಯಾಗಿ ರೂಪುಗೊಳ್ಳುವುದರ ಜೊತೆಗೆ ಶಕ್ತ ಪಂಥವು ತಲೆ ಎತ್ತಿತ್ತು. ಸೆಮಿಟಿರ್ ಜನಾಂಗದಲ್ಲಿ ಬೆಳೆದ ಅಡ್ವಾರ್ಟ್ ದೇವತೆಯ ಕಲ್ಪನೆ, ಈಜಿಪ್ಟಿನನ ಇಸಿಸ್, ಫ್ರಿಜಿಯಾದ ಸಿಬಿಲೆ ದೇವತೆಯ ಕಲ್ಪನೆ ಭಾರತದ ಶಕ್ತಿ ದೇವತೆಯ ಕಲ್ಪನೆಗೆ ಸಮಾನವಾದ ಪರಿಕಲ್ಪನೆಗಳಾಗಿವೆ. ಶಾಕ್ತ ಧರ್ಮವು ದೇವತೆಯನ್ನು ಪ್ರಪಂಚದ ಮೂಲ ಶಕ್ತಿಯ ಸಾಕಾರ ರೂಪವಾಗಿ ಲೋಕದ ದೈವಿಕ ಮತ್ತು ಜೈವಿಕ ಬೆಳವಣಿಗೆಯ ಮೂಲ ಶಕ್ತಿಯಾಗಿ ಪರಿಗಣಿಸುತ್ತದೆ.

ಹರಪ್ಪಾ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆಯು ಸಿಕ್ಕಿದ್ದು ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇರದ ಇನ್ನೊಂದು ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಉಳುಮೆ ಮಾಡುವ ರೈತನಾಗಿದ್ದಾನೆ. ಗರ್ಭದಿಂದ ಸಸ್ಯವು ಹೊರಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯೆಂದು ಗುರುತಿಸಲಾಗಿದೆ. ಶಾಕ್ತ ಪರಂಪರೆಯ ಅರಿವನ್ನು ಗಮನಿಸಿದರೆ ಮಾತೃ ಮೂಲ ದೈವಗಳಲ್ಲಿ ಸೃಷ್ಟಿಯ ಪ್ರತಿಮೆ, ರೂಪಕ, ಸಂಕೇತಗಳೇ ಆಗಿ ಕಂಡು ಬಂದು ಮಾನವನ ನೈಸರ್ಗಿಕ ಜ್ಞಾನ ವಿಕಾಸದ ಜೊತೆಗೆ ದೈವ ಪ್ರಜ್ಞೆಯ ವಿಕಾಸವಾಗಿದೆ ಎಂಬುದು ತಿಳಿಯುತ್ತದೆ. ಶಕ್ತಿಯ ಅಪಾರತೆಯು ಭೂಮಿ ಸಂಬಂಧದಿಂದಲೂ ಹೆಣ್ಣಿನ ಸೃಷ್ಟಿಶೀಲತೆಯು ಮನವನ ಅತಿಮಾನುಷ ಕಲ್ಪನೆಯಿಂದಲೂ ಸಾಧ್ಯವಾಗಿದೆ. ಪರಿಸರದ ಒಳಗೇ ಇನ್ನೊಂದು ಕಾಣದ ಜಗತ್ತು ಮತ್ತು ಅದರ ಶಕ್ತಿ ವ್ಯವಸ್ಥೆ ಇದೆ ಎಂದು ಭಾವಿಸಿದ್ದರಿಂದಲೇ ಮಾನವ ಏಕಕಾಲಕ್ಕೆ ಎರಡು ವಿಭಿನ್ನ ಜಗತ್ತುಗಳ ಮಧ್ಯೆ ನಿಂತು ನಿಸರ್ಗವನ್ನೂ ಸ್ತ್ರೀಯನ್ನೂ

ಒಟ್ಟು ತನ್ನ ಅಸ್ತಿತ್ವದ ನೆಲೆಯನ್ನು ಒಂದರೊಳಗೊಂದು ಐಕ್ಯಗೊಳಿಸಿಕೊಂಡ. ಇದು ಮಾನವರ ದೈವ ಪ್ರಜ್ಞೆಯಲ್ಲಿ ಮುಂದೆ ಬೇರೆ ಬೇರೆ ದೈವಗಳ ಜನನಕ್ಕೆ ಕಾರಣವಾಯಿತು.

ದ್ರಾವಿಡ ಸಂಸ್ಕೃತಿಯಲ್ಲಿ ಸ್ತ್ರೀ ದೇವತೆಗಳು ಪ್ರಧಾನವಾದರೆ, ಆರ್ಯ ಸಂಸ್ಕೃತಿಯಲ್ಲಿ ಪುರುಷ ದೇವತೆಗಳೇ ಪ್ರಧಾನವಾಗಿದೆ. ಮನುಷ್ಯರಲ್ಲಿ ವರ್ಗೀಕರಣವಿರುವಂತೆ ದೇವತೆಗಳಲ್ಲಿಯೂ ಸಹಾ ವರ್ಗೀಕರಣವಿದೆ. ಈ ವರ್ಗೀಕರಣವನ್ನು ವಿವಿಧ ನೆಲೆಗಳ ಹಿನ್ನೆಲೆಯಿಟ್ಟುಕೊಂಡು ಮಾಡಲಾಗಿದೆ. ಚಾರ್ಲ್ ವಿನಿರ್ ಅವರು ಪ್ರಪಂಚದ ದೇವತೆಗಳನ್ನು ಆರು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ.

೧. ಪ್ರಕೃತಿ ದೇವತೆಗಳು

೨. ಸಮೃದ್ಧಿಯ ದೇವತೆಗಳು

೩. ಚಟುವಟಿಕೆಯ ದೇವತೆಗಳು

೪. ಮಧ್ಯಸ್ಥಿಕೆಯ ದೇವತೆಗಳು

೫. ಉನ್ನತ ದೇವತೆಗಳು ಮತ್ತು

೬. ಜಗದಾಧಿಕಾರ ದೇವತೆಗಳು

ಎಂಬ ವರ್ಗೀಕರಣದೊಂದಿಗೆ ಇನ್ನೂ ಕೆಲವು ಉಪ ವಿಭಾಗಗಳನ್ನೂ ಸಹ ಹೇಳಿದ್ದಾರೆ.

ಆಫ್ರಿಕಾದ ದೇವತೆಗಳನ್ನು

೧. ದೇವರುಗಳು

೨. ಶಕ್ತಿಗಳು ಹಾಗೂ

೩. ಪ್ರೇತಗಳು ಎಂದು ಮೂರು ರೀತಿಯಾಗಿ ವಿಂಗಡಿಸಲಾಗಿದೆ.

ಉಗಾಂಡಾ ಸಂಸ್ಕೃತಿಯಲ್ಲಿ

೪. ಕುಲದೇವತೆಗಳು

೫. ರಾಜರ ಪ್ರೇತಗಳು

೬. ರಾಷ್ಟ್ರೀಯ ದೇವತೆಗಳು ಎಂದು ವಿಭಾಗೀಕರಿಸಿದ್ದಾರೆ.

ಭಾರತದಂತಹ ದೇಶಗಳಲ್ಲಿ ದೇವತೆಗಳ ವರ್ಗೀಕರಣವನ್ನು ಬೇರೆ ಬೇರೆ ಹಿನ್ನೆಲೆಯಲ್ಲಿ ಮಾಡಲಾಗಿದೆ. ದ್ರಾವಿಡ ಸಂಸ್ಕೃತಿಯ ಮೂಲದಿಂದ ಬಂದ ದೇವತೆಗಳನ್ನು ಜನಪದ ದೇವತೆಗಳೆಂದು, ಆರ್ಯ ಸಂಸ್ಕೃತಿಯ ಮೂಲದಿಂದ ಬಂದ ದೇವತೆಗಳನ್ನು ಶಿಷ್ಟ ದೇವತೆಗಳೆಂದು ವಗೀಕರಿಸಬಹುದಾಗಿದೆ. ದ್ರಾವಿಡ ಆರ್ಯರ ನಡುವೆ ಉಂಟಾದ ಸ್ವೀಕರಣೆ ಹಾಗೂ ನಿರಾಕರಣೆಗಳಿಂದಲೂ ಹಾಗೂ ಇವೆರಡರ ಸಂಯೋಗದಿಂದಲೂ ದೈವಗಳು ವಿಸ್ತಾರಗೊಂಡಿವೆ. ಆರ್ಯರು ದ್ರಾವಿಡರು, ಪರಸ್ಪರ ಮುಖಾಮುಖಿಯಾಗಿ, ಒಮ್ಮೊಮ್ಮೆ ಸಿಟ್ಟಿನಿಂದ, ಮತ್ತೊಮ್ಮೆ ಸೌಹಾರ್ದತೆಯಿಂದ ಕೂಡಿ ಬಾಳಿರುವಂತೆ ಅವರವರ ದೇವತೆಗಳು ಕೂಡಾ ಹಾಗೆಯೇ ನಡೆದುಕೊಂಡಿವೆ. ಎರಡೂ ಸಂಸ್ಕೃತಿಯಲ್ಲಿರುವ ನಿಯಮಾಚರಣೆಯನ್ನು ಆಯಾ ದೇವತೆಗಳ

ಪೂಜಾ ವಿಧಾನದಲ್ಲಿ ಜಾತ್ರೆ, ಉತ್ಸವಗಳಲ್ಲಿ ಕಾಣಬಹುದಾಗಿದೆ. ದ್ರಾವಿಡರ ಮಾತೃತ್ವ ಶಕ್ತಿಯೂ, ವೈದಿಕರ ಪಿತೃತ್ವ ಶಕ್ತಿಯೂ ವಿಚಿತ್ರವಾಗಿ ಇವೆರಡೂ ಸಂಸ್ಕೃತಿಯಲ್ಲಿ ಮಿಶ್ರಣವಾಗಿದ್ದು ಒಂದು ಸಾಂಸ್ಕೃತಿಕ ಗೊಂದಲವನ್ನು ಸೃಷ್ಟಿಸಿದೆ. ಹೀಗಾಗಿ ಶಿಷ್ಟ ದೇವತೆಗಳು ಹಾಗೂ ಜನಪದ ದೇವತೆಗಳ ಅಧ್ಯಯನವು ಕೆಲವೊಮ್ಮೆ ಒಟ್ಟಿಗೇ, ಕೆಲವೊಮ್ಮೆ ಬೇರೆ ಬೇರೆಯಾಗಿ ಹಾಗೂ ಕೆಲವೊಮ್ಮೆ ಸಮಾನಾಂತರವಾಗಿ ನಡೆಯಬೇಕಿದೆ. ಡಾ.ಚಿದಾನಂದ ಮೂರ್ತಿ ಯವರು ಕರ್ನಾಟಕದ ಜನಪದ ದೇವತೆಗಳನ್ನು

೧. ಗ್ರಾಮ ದೇವತೆಗಳು

೨. ಗ್ರಾಮ್ಯ ದೇವತೆಗಳು

ಎಂದು ವರ್ಗೀಕರಣಕ್ಕೆ ಒಳಪಡಿಸಿರುತ್ತಾರೆ. ಗ್ರಾಮದ ಎಲ್ಲ ಕೆಳವರ್ಗದ ಅಪೌರಾಣಿಕ ದೇವತೆಗಳೆಲ್ಲವೂ ಗ್ರಾಮ್ಯ ದೇವತೆಗಳೆಂದೂ ಇಡೀ ಗ್ರಾಮಕ್ಕೆ ಗ್ರಾಮವೇ ಪೂಜೆ ಮಾಡುವ ದೇವತೆಯನ್ನು ಗ್ರಾಮ ದೇವತೆಯೆಂದೂ ಅವರು ಗುರುತಿಸಿದ್ದಾರೆ. ಅಂದರೆ ಒಂದು ಗ್ರಾಮದಲ್ಲಿ ಅನೇಕ ದೇವತೆಗಳಿರಬಹುದು, ಆದರೆ ಗ್ರಾಮ ದೇವತೆ ಮಾತ್ರ ಒಂದೇ ಇರುತ್ತದೆ. ಈ ಗ್ರಾಮ ದೇವತೆಯೇ ಆ ಗ್ರಾಮದ ಅಧಿ ದೇವತೆಯಾಗಿರುತ್ತದೆ. ಆರ್ಯ ಸಂಸ್ಕೃತಿಯ ಪ್ರಭಾವ ಕಡಿಮೆ ಇರುವ ದಕ್ಷಿಣ ಭಾರತದಲ್ಲಿ ಈ ಬಗೆಯ ಅನೇಕ ಮಾತೃದೇವತೆಗಳನ್ನು ಪ್ರತೀ ಗ್ರಾಮದಲ್ಲಿಯೂ ನೋಡಬಹುದು. ದೊಡ್ಡ ನಗರಗಳಲ್ಲಿ ಶಿವ ಮತ್ತು ವಿಷ್ಣುವಿನ ದೇವಾಲಯಗಳಿದ್ದರೂ ಕೂಡಾ ಅವಕ್ಕೆ ಅಷ್ಟು ಪ್ರಾಮುಖ್ಯತೆ ಇಲ್ಲ. ಹೀಗೆ ಶಿಷ್ಟ ದೇವತೆಗಳು ಮತ್ತು ಜನಪದ ದೇವತೆಗಳ ಈ ಪ್ರಧಾನ ವರ್ಗೀಕರಣದಲ್ಲಿ ಇನ್ನೂ ಅನೇಕ ಉಪ ಗುಂಪುಗಳಲ್ಲಿ ಭಾರತದ ದೇವತೆಗಳನ್ನು ವಿಂಗಡಿಸಬಹುದಾಗಿದೆ.

ಬಿಳಿಯ ಬಣ್ಣದವರಾದ ಆರ್ಯರು ಭಾರತಕ್ಕೆ ಬರುವ ಪೂರ್ವದಲ್ಲಿದ್ದವರು ದ್ರಾವಿಡರು, ಆದರೆ ದ್ರಾವಿಡರು ಆಸ್ಟ್ರೇಲಿಯಾದಿಂದ ಬಂದು ಇಲ್ಲಿಯ ದೇಶಿಯ ಆದಿವಾಸಿಗಳನ್ನು ಓಡಿಸಿದ್ದರಿಂದ ಇವರು ಆರ್ಯರಂತೆ ಹೊರಗಿನವರೇ ಆಗಿದ್ದಾರೆ. ಈ ಹಿಂದೆ ಆಸ್ಟ್ರೇಲಿಯಾ ಖಂಡಕ್ಕೂ ಭಾರತಕ್ಕೂ ಮಧ್ಯ ಹೋಗಿ ಬರಲು ಭೂಮಿಯಿತ್ತು. ಇಂದಿನಂತೆ ಸಮುದ್ರ ತುಂಬಿರಲಿಲ್ಲ.

ರಾಹುಲ ಸಾಂಕೃತಾನಯರ ವೋಲ್ಗಾ ಗಂಗಾದಲ್ಲಿ ಕ್ರಿ.ಪೂ ೩೦೦೦ ಕಾಲಕ್ಕೆ ಸಂದು ಹೋಗುವ ಮಧ್ಯ ಏಶಿಯಾದಲ್ಲಿರುವ ಶಮಿರಕುಲದ ಅಮೃತಾಶ್ವ ತನ್ನ ನಲ್ಲೆ ಮಧುರೆಗೆ ಹೇಳುವ ಮಾತುಗಳಲ್ಲಿ ನಾವು ದ್ರಾವಿಡರ ಸುಳಿವನ್ನು ಗುರುತಿಸಬಹುದು.

ಮೂಡಲಿಗೆ ಬಲುದೂರದಲ್ಲಿರುವ ಜನಪದ ತುಂಬಾ ವಿಶಿಷ್ಟವಾದುದು. ಅಲ್ಲಿ ಹೆಣ್ಣನ್ನು ಯಾರೂ ಕೊಂಡೊಯ್ಯಲಾರರು. ಅಲ್ಲಿ ಹೆಣ್ಣೆಂದರೆ ಗಂಡಿಗೆ ಸಮಾನ. ಆ ಜನಕ್ಕೆ ಪಶುಪಾಲನೆ ಗೊತ್ತಿಲ್ಲ. ಬೇಟೆಯಾಡುವುದು ಗೊತ್ತು. ಮೀನು ಹಿಡಿಯುವುದು ಗೊತ್ತು. ಹಣ್ಣು ಹಂಪಲು

ತರುವುದು ಗೊತ್ತು. ಹೆಣ್ಣು ಗಂಡಿನಂತೆ ಹಣ್ಣು ಹಂಪಲು ಕೂಡಿಸುವಳು. ಬೇಟೆಯಾಡುವಳು. ಕಾಳಗದೆಡೆ ಕಲ್ಲು ಕೊಡಲಿ ಬೀಸುವಳು. ಬಾಣ ಹೊಡೆಯುವಳು. ಒಂದು ಪರಿವಾರಕ್ಕೆ ಬೇಕಾಗುವಷ್ಟು ಹೆಣ್ಣು ಗಂಡುಗಳೆಲ್ಲ ಅವರೊಳಗೆ ಇರುವರು. ಹೆಣ್ಣನ್ನು ಹೊರಕೊಡುವುದೂ ಇಲ್ಲ, ಒಳಗೆ ತರುವುದು ಇಲ್ಲ.

ಋಗ್ವೇದದಲ್ಲಿ ದ್ರಾವಿಡರ ವಿಚಾರ ಬರುವುದನ್ನು ಎಲ್ಮೋರ ಅವರು ತಮ್ಮ ಪುಸ್ತಕದಲ್ಲಿ ವಿವೇಚಿಸಿದ್ದಾರೆ.

"The hymns of the Rigveda give us much light on the great struggle of the Aryans inconquering the Dravidians. The Aryans were not lacking in epithets with which to describe these people. They called enemies, slavers. Abject tribes void of sense, in human, keeping alien rites, malignant, wicked, riteless, prayyerless, bestowing no gifts (to the of milk) non worshippers priestless, not keeping sacred fires, worshippers of mad gods, and then even accused them of eating human flesh".[೪] ಆರ್ಯರು ಭಾರತಕ್ಕೆ ಬರುವ ಮೊದಲೇ ದ್ರಾವಿಡರಿದ್ದುದಕ್ಕಾಗಿಯೇ ಆರ್ಯರಿಂದ ರಚಿತವಾದ ಋಗ್ವೇದಲ್ಲಿ ವೈರಿಗಳಾದ ದ್ರಾವಿಡರ ಕುರಿತು ವಿರೋಧದ ಮಾತುಗಳು ಬಂದದ್ದು ಕಾಣುತ್ತೇವೆ. ಉತ್ತರ ಭಾರತವನ್ನು ಆರ್ಯರು ಆಕ್ರಮಿಸಿಕೊಂಡಮೇಲೆ ದ್ರಾವಿಡರು ದಕ್ಷಿಣ ಭಾರತ ಸೇರಬೇಕಾಯಿತು. ಆದ್ದರಿಂದ ಇಂದಿಗೂ ಪಿತೃ ಪ್ರಧಾನ ಕುಟುಂಬದ ಆರ್ಯ ಲಕ್ಷಣವನ್ನು ಉತ್ತರ ಭಾರತದಲ್ಲಿ, ಮಾತೃ ಪ್ರಧಾನ ಕುಟುಂದ ಲಕ್ಷ ಣವನ್ನು ಉತ್ತರ ಭಾರತದಲ್ಲಿ, ಮಾತೃ ಪ್ರಧಾನ ಕುಟುಂಬದ ಲಕ್ಷಣವನ್ನು ದಕ್ಷಿಣ ಭಾರತದಲ್ಲಿ ಕಾಣುತ್ತೇವೆ.

ದ್ರಾವಿಡರದು ಮಾತೃ ಪ್ರಧಾನ ಕುಟುಂಬ ಎನ್ನಲು ಸಾಕ್ಷಿಯಾಗಿ ಇಂದಿಗೂ ಕೇರಳದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಈ ಪದ್ಧತಿಯಿದೆ. ಅಳಿಯ ಸಂತಾನವಾಗಿ ಹೆಂಡತಿಯ ಮನೆಯಲ್ಲಿ ಹೋಗಿ ಇರುವವರನ್ನು ಕಾಣುತ್ತೇವೆ. ಅಷ್ಟೇಕೆ ಕರ್ನಾಟಕದ ಹಲವಾರು ಮನೆತನಗಳಲ್ಲಿ ಗಂಡು ಸಂತಾನವಿಲ್ಲದಾಗ ಹೆಣ್ಣಿದ್ದರೆ, ಹೊರಗಿನಿಂದ ಅಳಿಯನನ್ನು ತೆಗೆದುಕೊಂಡು ಸಂತಾನ ಮುಂದುವರೆಸುವ ಪರಂಪರೆಯನ್ನು ಇಂದೂ ಕಾಣುತ್ತೇವೆ. ಕರ್ನಾಟಕವನ್ನಾಳಿದ ಶಾತಕರ್ಣಿ ದೊರೆಗೆ ತಂದೆಯ ಹೆಸರು ಹೇಳದೆ ಗೌತಮಿಪುತ್ರ ಶಾತಕರ್ಣಿ ಎಂದು ಹೇಳವುದು ಮಾತೃ ಪ್ರಧಾನ ಕುಟುಂಬದ ಲಕ್ಷಣ ಹೇಳುವುದು.

ದ್ರಾವಿಡರು ಮಾತೃ ಪ್ರಧಾನ ಕುಟುಂಬದವರಾಗಿದ್ದರೆನ್ನಲಿಕ್ಕೆ ಅವರು ವಾಸಿಸಿದ್ದ ದಕ್ಷಿಣ ಭಾರತದ ತುಂಬ ಹೆಣ್ಣು ದೇವತೆಗಳ ಪೂಜೆ ಅಧಿಕವಾಗಿ ನಡೆಯುವುದೆ ಕಾರಣವೆಂದು ಸೂಚಿಸಬಹುದು. ಅಲ್ಲಲ್ಲಿ ಗಂಡು ದೇವತೆಗಳ ಪೂಜೆ ನಡೆಯುವದು ಆರ್ಯ ಜನಾಂಗ,

ದ್ರಾವಿಡರ ಜೊತೆ ರಕ್ತ ಸಂಬಂದ ಮಾಡಿ, ಒಂದಾದ ಬಳಿಕ. ನಮ್ಮ ಹಳ್ಳಿಗಳಲ್ಲಿ ಇಂದಿಗೂ ಸಾಮಾನ್ಯ ನಿರಕ್ಷರಿ ಜನ ನೆನೆಯುವುದು ಹೆಣ್ಣು ದೇವತೆಗಳನ್ನು, ಹಬ್ಬ ಹುಣ್ಣಿಮೆಗಳಲ್ಲಿ ತಪ್ಪದೇ ನೈವೇದ್ಯ ಕೊಟ್ಟು ತೆಂಗು ಒಡೆದು, ಎಣ್ಣೆ ಬತ್ತಿ ಹಚ್ಚಿ ಬರುವುದನ್ನು ನೋಡುತ್ತೇವೆ. ಹೈದ್ರಾಬಾದ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಬರುವ ದೇವತೆಗಳ ಹೆಸರುಗಳು ಭಿನ್ನಭಿನ್ನವಾಗಿದ್ದರೂ ಅವೆಲ್ಲ ಮಾತೃದೇವತಾ ಉಪಾಸನಾ ಮೂಲದಿಂದ ಹುಟ್ಟಿದ ಹೆಣ್ಣು ದೇವತೆಗಳೆ ಆಗಿವೆ. ಅಲ್ಲದೆ ಒಬ್ಬೊಬ್ಬ ದೇವತೆಗೆ ಒಂದೊಂದು ವಿಶಿಷ್ಟಶಕ್ತಿಯನ್ನು ಅಂಟಿಸಲಾಗಿದೆ.[೫]

ಗ್ರಾಮ್ಯ ದೇವತೆ, ಗ್ರಾಮ ದೇವತೆ, ಅಧಿ ದೇವತೆ, ಕುಲ ದೇವತೆ, ಮನೆ ದೇವತೆ ಈ ಮುಂತಾದ ಹೆಸರುಗಳನ್ನು ಹೊಂದಿರುವ ಜನಪದ ದೇವತೆಗಳ ಅಧ್ಯಯನ ಮಾಡುವಾಗ ಸೂಕ್ಷ್ಮ ಅಧ್ಯಯನ, ಖಚಿತ ಅರ್ಥ, ಸ್ಪಷ್ಟತೆ ಹಾಗೂ ಸಾಂಸ್ಕೃತಿಕ ಒಳನೋಟಗಳೊಂದಿಗೆ ಮಾಡುವುದು ಬಹಳ ಮುಖ್ಯವಾಗಿರುತ್ತದೆ. ಒಂದು ಗ್ರಾಮದಲ್ಲಿ ಅನೇಕ ಗ್ರಾಮ್ಯ ದೇವತೆಗಳು ಮತ್ತು ಕುಲದೇವತೆಗಳು ಇರಬಹುದು. ಆದರೆ ಆ ಗ್ರಾಮಕ್ಕೆ ಗ್ರಾಮದೇವತೆ ಒಬ್ಬಳೇ ಆಗಿರುತ್ತಾಳೆ. ಆ ಗ್ರಾಮ ದೇವತೆ ಹೆಣ್ಣು ದೇವತೆಯೇ ಆಗಿರುತ್ತಾಳೆ. ಗ್ರಾಮದ ಅಧಿ ದೇವತೆಯೂ, ಗ್ರಾಮವನ್ನು ರಕ್ಷಿಸುವವಳು ಮಾತ್ರ ಗ್ರಾಮ ದೇವತೆ ಎನಿಸಿಕೊಳ್ಳುತ್ತಾಳೆ. ಗಂಡು ದೇವತೆ ಗ್ರಾಮ ದೇವತೆ ಆಗಿರುವ ಪ್ರಸಂಗ ಎಲ್ಲೂ ಇಲ್ಲ. ಆದರೆ ಅನೇಕ ಗಂಡು ದೇವತೆಗಳು ಆಯಾ ಗ್ರಾಮದ ಬೇರೆ ಬೇರೆ ಜನರ ಮನೆ ದೇವತೆ ಮತ್ತು ಕುಲದೇವತೆಗಳಾಗಿರುತ್ತದೆ. ಅದುದರಿಂದ ಗಂಡು ದೇವತೆಗಳನ್ನು ಗ್ರಾಮ ದೇವತೆಗಳೆಂದು ಕರೆಯದೆ, ಮನೆ ದೇವತೆ ಅಥವಾ ಕುಲದೇವತೆಗಳೆಂದು ಕರೆಯುವುದು ಸೂಕ್ತ. ಇಂದು ಕೆಲವು ಪುರುಷ ಗ್ರಾಮ ದೇವತೆಗಳು ಕಂಡು ಬಂದರೂ ಅವು ಮೂಲತಃ ಪ್ರತಿಷ್ಠಿತರ ಮನೆ ದೇವತೆ, ಕುಲದೇವತೆ ಆಗಿದ್ದು, ಮುಂದೆ ಈ ಜನವರ್ಗಕ್ಕೆ ಸಮಾಜದ ಮೇಲೆ ಇದ್ದ ನಿಯಂತ್ರಭದ ಫಲವಾಗಿ ಈ ದೇವತೆಗಳು ಗ್ರಾಮದೇವತೆಗಳಾಗಿ ಮಾರ್ಪಟ್ಟಿರಬೇಕು. ಭಾರತೀಯ ಮೂಲ ನಿವಾಸಿ ಮಾತೃ ದೇವತೆಗಳು ಮೂಲತಃ ಆದಿವಾಸಿ ಮೂಲದ ಪೂರ್ವಕಾಲದ ಸ್ತ್ರೀಯರೆಂದು ಸಾಮಾನ್ಯವಾದ ನಂಬಿಕೆ ಮತ್ತು ಹಲವಾರು ಸಂಧರ್ಭದಲ್ಲಿ ಇದನ್ನು ಒಪ್ಪಿಕೊಳ್ಳಲಾಗಿದೆ. ಸಿಂಧೂ ಕಣಿವೆ ನಾಗರಿಕತೆಯಲ್ಲಿ ಮಾತೃ ದೇವತೆ ಆರಾಧನೆ ವಿಪುಲವಾಗಿ ನಡೆಯುತ್ತಿದ್ದುದನ್ನು ಈಗ ಸಿಕ್ಕಿರುವ ಅನೇಕ ಸ್ತ್ರೀ ವಿಗ್ರಹಗಳು ಸೂಚಿಸುತ್ತದೆ. ಈ ಪ್ರತಿಮೆಗಳನ್ನು ಮುರ್ರೆ ಎಂಬ ವಿದ್ವಾಂಸರು ಮೂರು ಭಾಗ ಮಾಡಿದ್ದಾರೆ.

೧. ಇಷ್ಟಾರ್ ದೇವತೆ ರೀತಿಯಲ್ಲಿರುವ ದಿವ್ಯಸ್ತ್ರೀ

೨. ಇಸಿಸ್ ದೇವತೆಯ ರೀತಿಯಲ್ಲಿರುವ ದಿವ್ಯಮಾತೆ

೩. ಮಾನವೀಕೃತಗೊಂಡ ಯೋನಿ,

ಸಿಂಧೂ ನದಿ ಸಂಸ್ಕೃತಿಯಲ್ಲಿ ಮಾತೃ ದೇವತೆಯನ್ನು ಭೂಮಿಯ ತಾಯಿ ಎಂದೂ, ಮಾನವರ ಮಾತೆಯೆಂದೂ, ದೇವತೆಗಳ ತಾಯಿ ಎಂದೂ, ಅರಣ್ಯ, ಪ್ರಾಣಿ, ಧಾನ್ಯ ಪಕ್ಷಿ

ಇವುಗಲ ಮಾತೃತ್ವವೆಂದೂ ಪೂಜಿಸಲಾಗಿದೆ. ಸ್ತನ, ಗರ್ಭ, ಯೋನಿ ಇವುಗಳನ್ನು ಮಾತೃ ದೇವತೆಯ ಸಂಕೇತಗಳೆಂದು ಸೃಷ್ಟಿ. ಸಿಂಧು ಸಂಸ್ಕೃತಿಯಲ್ಲಿ ದೊರೆತಿರುವ ಉಗ್ರಾಕಾರದ ಕಲ್ಲುಗಳನ್ನು ಮಾತೃದೇವತೆಯ ಸೃಷ್ಟಿಯ ಅಂಗವಾಗಿ ಯೋನಿ ಎಂದು ಪರಿಭಾವಿಸಲಾಗಿದೆ. ಪಶ್ಚಿಮ ಏಷಿಯಾ ಮತ್ತು ಯೂರೋಪು ಖಂಡಗಳ ಧರ್ಮಗಳಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿರುವ ಮಹಾನ್ ದೇವತೆಗಳ ಪ್ರಾಮುಖ್ಯತೆಗೆ ಕಾರಣ ಕೃಷಿ ಆಚರಣೆಗಳೊಂದಿಗೆ ಅವುಗಳನ್ನು ಸೇರಿಸಿರುವುದೇ ಆಗಿದೆ. ಭಾರತದ ಮಟ್ಟಿಗೆ ಕೊಸಾಂಬಿ ಹೇಳುವಂತೆ ' ದೇಶದ ಯಾವ ಭಾಗದಲ್ಲಿ ನೇಗಿಲು ಆರ್ಥಿಕತೆ ಕಡೆಯಲ್ಲಿ ಜಾರಿಕೊಂಡರೂ ಅಲ್ಲಿ ಮಾತೃ ಪ್ರಧಾನ ಸಂಸ್ಥೆಗಳು ಇಂದಿಗೂ ಇವೆ. ಉದಾಹರಣೆಗೆ ತಿರುವಾಂಕೂರು ಕೊಚ್ಚಿ ಮತ್ತು ಕೆಲವು ಬುಡಕಟ್ಟುಗಳು" ಹೀಗಾಗಿ ಸ್ತ್ರೀತ್ವಕ್ಕೆ ಭೌತಿಕ ಆಧಾರವೆಂದರೆ ಆದಿ ಕಾಲದ ಕೃಷಿ ಆರ್ಥಿಕತೆ, ಸಿಂಧೂ ಕಣಿವೆಯ ಸ್ತ್ರೀ ಪ್ರತಿಮೆಗಳು ಮಾತೃ ದೇವತೆಯ ಪ್ರತಿಮೆಗಳಾಗಿದ್ದು ಅವೆಲ್ಲವೂ ಒಂದೇ ವಿವಿಧ ಭೌತಿಕ ಹಿನ್ನೆಲೆಯಲ್ಲಿ ಉಗಮಗೊಂಡಿರಬಹುದೆಂದೆಉ ಸರಿಯಾದ ತೀರ್ಮಾನವೇ ಆಗುತ್ತದೆ. ಅದನ್ನೆಲ್ಲಾ ಆದಿಮ ಕೃಷಿ ಮಾತೃ ಪ್ರಧಾನದ ಹಿನ್ನೆಲೆಯಲ್ಲಿಯೇ ಗ್ರಹಿಸಬೇಕು.

Before the Aryan invasion which probably took place in the second millennium B C. The old inhavitiants of india who are sone times called Dravidians, were a dark skinned race, with religious beliefs and dustoms probably did not greatly differ fromthose of other primitive races. They believed the world to be peopled by a nuultitude of spirits, good and bad who were the cause of all un usual events and especially of diseases and disasters. The object of their religion was to propitate those in numerable spirits. At the same time each village seems to have been under the protection of some one spirit which was its guardian diety probably these village deities cae into being at the period when the people began settle down in a agricultural communitie.[೬]

ಆರ್ಯರು ಬರುವ ಪೂರ್ವದಲ್ಲಿ ದ್ರಾವಿಡ ಜನ ಇದ್ದಾಗ ಗ್ರಾಮದೇವತೆಗಳ ಹುಟ್ಟು ಭಾರತದಲ್ಲಿ ಆಯಿತೆಂದು ತಿಳಿದು ಬರುವುದು. ಒಕ್ಕಲತನಕ್ಕಾಗಿ ಬುಡಕಟ್ಟು ಜನಾಂಗದವರು ಒಂದೆಡೆ ಸೇರಿದಾಗ ಗ್ರಾಮಗಳ ರಚನೆಯಾದ ಎಷ್ಟೋ ದಿವಸಗಳ ನಂತರ ಗ್ರಾಮದೇವತೆಗಳು ಅಸ್ಥಿತ್ವದಲ್ಲಿ ಬಂದಂತೆ ಕಾಣುವುದು. ಈ ಮಾತಿಗೆ ಪೂರಕವಾಗಿ ಹೆನ್ರಿ ವೈಟ್ ಹೆಡ್ ಅವರ ಮೇಲಿನ ಮಾತುಗಳನ್ನು ಅವಲೋಕಿಸಬಹುದು.

ಹೀಗಾಗಿ ಭಾರತದ ಹಲವಾರು ಗ್ರಾಮ ದೇವತೆಗಳು ಒಂದೇ ಶಕ್ತಿಯ ಮೂರ್ತೀಕೃತ ಸ್ವರೂಪಗಳಾದರೂ ಅವುಗಳ ಸ್ಥಳೀಯ ಲಕ್ಷಣಗಳು ಬೇರೆ ಬೇರೆ. ಮುಖ್ಯವಾಗಿ ಅವೆಲ್ಲಾ ಫಲವತ್ತತೆಯ ಧಾರಕ ಶಕ್ತಿಯ ಸಂಕೇತಗಳು. ಹೀಗಾಗಿ ಜನಪದ ಸ್ತ್ರೀ ದೈವಗಳಲ್ಲಿ ಕಂಡು ಬರುವ ಸಾಮ್ಯತೆ ಅಪಾರ. ಏಕಪುರಾಣ, ಏಕ ಆಚರಣೆಗಳು ಸರ್ವೇಸಾಮಾನ್ಯವಾಗಿ ಕಂಡು ಬಂದಿರುವುದು ಈ ಹಿನ್ನೆಲೆಯಲ್ಲಿಯೇ. ಜಗತ್ತಿನ ಸಂಸ್ಕೃತಿಯ ಕುರಿತು ಅಧ್ಯಯನಕ್ಕೆ ತೊಡಗಿದರೆ ವಿವಿಧ ಜನಾಗ ಸಂಸ್ಕೃತಿಗಳಲ್ಲಿಯೂ ಮಾತೃ ದೇವತೆಗಳ ಆರಾಧನೆಯು ಸಾಮಾನ್ಯ ಅಂಶವಾಗಿ ಕಾಣುತ್ತದೆ. ಪ್ರಾಚೀನ ಗ್ರೀಕರು ಅಥೆನಾ ದೇವತೆಯನ್ನು, ರೋಮನ್ನರು ಮಿನರ್ವ ದೇವತೆಯನ್ನೂ ಮಾತೃ ದೇವತೆಗಳಾಗಿ ಪೂಜಿಸುತ್ತಿದ್ದರು. ಮಿನರ್ವಾ ಜ್ಞಾನ ಶಕ್ತಿಯ ಅಧಿ ದೇವತೆಯೂ ಹೌದು. ಕುಲದೇವತೆಯೂ ಹೌದು. ಸಮರ ದೇವತೆಯೂ ಹೌದು, ಗ್ರೀಕಿನ ಅಫ್ರೋಡೈಟಿ, ಆರ್ಟಮಿಸ್, ರೋಮಿನ ಡಯಾನ, ವೀನನಸ್, ಇಜಿಪ್ಟಿನ ಐಸಿಸ್, ಇರಾನಿನ ಅನೂಹಿತಾ ಮಾತೃದೇವತೆಗಳ ಸಾಲಿಗೆ ಸೇರುತ್ತದೆ. ಮತ್ತೊಂದು ಉದಾಹರಣೆಯೆಂದರೆ, ಫ್ರೇಜರ್ ಹೇಳುವ ಹಾಗೆ ನೆಮಿಯದಲ್ಲಿ ನಡೆಯುತ್ತಿದ್ದ ಡಯಾನಾಳ ಪೂಜೆಯಲ್ಲಿ ಮುಖ್ಯವಾಗಿ ವ್ಯಾಧಿರ ದೇವತೆ ಎನ್ನುವುದಕ್ಕಿಂತ ಆಕೆ ಸುಖ ಪ್ರಸವ ನಿಡುವ ದೇವತೆ, ಗರ್ಭಿಣಿ ದೇವತೆ ಎಂದೂ ಪ್ರಚಲಿತವಿರುತ್ತಿತ್ತು. ಆಕೆಯ ಪೂಜೆಯಲ್ಲಿ ಅಗ್ನಿಗೆ ಬಹಳ ಪ್ರಾಮುಖ್ಯವಿರುತ್ತಿತ್ತು. ವರ್ಷದ ಅತ್ಯಂತ ಸುಡು ಬೆಸಿಗೆಯಲ್ಲಿಯೂ ವಾರ್ಷಿಕ ಉತ್ಸವ ಸಂಧರ್ಬದಲ್ಲಿ ಆಕೆಯ ವನದಲ್ಲಿ ಸಾವಿರಾರು ದೀವಟಿಗೆಗಳು ಬೆಳಗಿ ಅಲ್ಲಿಯ ಸರೋವರದಲ್ಲಿ ಪ್ರತಿ ಫಲಿಸುತ್ತಿದ್ದವು. ಅಲ್ಲದೇ ಇಡೀ ಇಟಲಿ ದೇಶದಲ್ಲಿ ಪ್ರತಿ ಮನೆಯಲ್ಲೂ ಆಕೆಯನ್ನು ಕುರಿತಂತೆ ಪೂಜೆ ಉತ್ಸವಗಳು ನಡೆಯುತ್ತಿದ್ದವು. ಆಕೆಯನ್ನು ಪೂಸಜಿಸುತ್ತಿದ್ದ ಪ್ರದೇಶದಲ್ಲಿ ದೊರೆತಿರುವ ವಿಗ್ರಹದಲ್ಲಿ ಡಯಾನ ಎತ್ತಿ ಹಿಡಿದ ತನ್ನ ಬಲಗೈಲಿ ದೀವಟಿಗೆಯನ್ನು ಹಿಡಿದು ಬರುತ್ತಿದ್ದರು.

ಹಾಗೆಯೇ ಎಸ್ಕಿಮೋ ಜನಾಂಗದ ದೇವತೆಯಾದ ಸಿಡ್ನಾ ಅಥವಾ ಅರ್ನಾಕುವಾಗಸಾತ್, ಅಂದರೆ ಸ್ತ್ರೀ ಅವರ ಚಿಂತನೆ ಹಾಗೂ ಅಚರಣೆಗಳಲ್ಲಿ ಪ್ರಮುಖ ಸ್ಥಾನ ಪಡೆದಿದ್ದಳು. ಒಟ್ಟಿನನಲ್ಲಿ ಜಗತ್ತಿನ ಎಲ್ಲ ಸಂಸ್ಕೃತಿಗಳ ಅವಲೋಕನವನ್ನು ಮಾಡಿದಾಗ ಕಂಡು ಬರುವ ಅಂಶವೆಂದರೆ ಹೆಣ್ಣನ್ನು, ಭೂಮಿಗೆ, ಚಂದ್ರನಿಗೆ, ಕೃಷಿಗೆ, ಫಲವಂತಿಕೆಗೆ, ಸೃಷ್ಟಿಕಾರ್ಯದ ಆಚರಣೆಗಳಿಗಾಗಿ ಮೂಲವಾಗಿ ಬಳಸಿಕೊಂಡಿರುವುದನ್ನು ಬಳಸಿಕೊಂಡಿರುವದನ್ನು ಕಾಣಬಹುದು. ಪ್ರಾಚೀನ ಕೃಷಿಕ ದೇವತೆಗಳೂ ಸಹಾ ಪ್ರಾಚೀನ ವಿಶ್ವ ವ್ಯಾಪಿ ತಾಯಿ, ದೇವತೆಗಳ ಲಕ್ಷಣವನ್ನೇ ಹೊಂದಿರುವುದು ಇದಕ್ಕೆ ಪ್ರಮುಖ ಉದಾಹರಣೆ. ಜೀವ ಸೃಷ್ಟಿಗೆ ಮಾತೆಯೇ ಕಾರಣ ಎಂಬ ಮನೋಧರ್ಮವೇ ಇದಕ್ಕೆ ಕಾರಣವಿರಬಹುದು.

ಗ್ರಾಮ ದೇವತೆಗಳು ಕೆಲವೊಮ್ಮೆ ಪ್ರಕೃತಿಯ ಸೃಷ್ಟಿಯಾಗಿದ್ದರೆ, ಕೆಲವೊಮ್ಮೆ ಪುರಾಣಗಳ ಸೃಷ್ಟಿಯೂ ಆಗಿರುತ್ತಾಳೆ. ನಿರ್ದಿಷ್ಟ ದೇವತೆ ಇಲ್ಲದಿದ್ದರೆ ಅದಕ್ಕೆ ಸಂಬಂಧಿಸಿದ ಪುರಾಣ ಸೃಷ್ಟಿ

ಆಗುವುದಿಲ್ಲ. ಸ್ಥಳೀಯ ಗುಣ, ಮಾಹಿತಿ ಆಧರಿಸಿ ಈ ಪುರಾಣಗಳನ್ನು ಹುಡುಕಿದಾಗ ಗ್ರಾಮ ದೇವತೆಗಳು ಜನಪದರ ಜನ ಮಾನನಸದಲ್ಲಿ ಹಾಗೂ ಗ್ರಾಮಗಳಲ್ಲಿ ಬೇರೂರಿರುವ ಬಗೆ ಬಗೆಯು ವಿಸ್ಮಯವನ್ನು ಮೂಡಿಸುತ್ತದೆ. ಕೆಲವೊಮ್ಮೆ ವಿವಿಧ ಬಗೆಯ ಹೆಸರುಗಳೂ ಬಗೆ ಬಗೆಯ ಗುಣಲಕ್ಷಣಗಳು ಇದ್ದರೂ ಮೂಲದಲ್ಲಿ ಒಂದೇ ಕಾಣುವುದು. ಈ ಕಾರಣದಿಂದಲೇ ದೈವದ ನಂಬಿಕೆಗಳಿಗೂ, ಸಮುದಾಯಗಳಿಗೂ ಬಗೆಬಗೆಯ ಗುಣ ಲಕ್ಷಣಗಳೂ ಇದ್ದರೂ ಮೂಲದಲ್ಲಿ ಒಂದೇ ಕಾಣುವುದು. ಈ ಕಾರಣದಿಂದಲೇ ದೈವದ ನಂಬಿಕೆಗಳಿಗೂ, ಸಮುದಾಯಗಳಿಗೂ ಎಲ್ಲೆಡೆ ಸಾಮ್ಯತೆಗಳಿರುವುದು. ಪರಿಸರ ಒಳಗೇ ಇನ್ನೊಂದು ಕಾಣದ ಜಗತ್ತು ಮತ್ತು ಅದರ ಶಕ್ತಿ ಇದೆ ಎಂದು ಭಾವಿಸಿದ್ದರಿಂದಲೇ ಮಾನವ ಏಕ ಕಾಲಕ್ಕೆ ಎರಡು ಭಿನ್ನ ಜಗತ್ತುಗಳ ಮುಂದೆ ನಿಂತು ನಿಸರ್ಗವನ್ನೂ, ಸ್ತ್ರೀಯನ್ನೂ ಒಂದರೊಳಗೊಂದು ಐಕ್ಯತೆ ಗೊಳಿಸಿಕೊಂಡು ತನ್ನ ಅಸ್ತಿತ್ವದ ಭಾಗವಾಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಹೀಗಾಗಿ ಜನಪದ ಗ್ರಾಮದೇವತೆಗಳ ಅಧ್ಯಯನವೆಂದರೆ ಶಕ್ತಿಮೂಲವಾದ ಹೆಣ್ಣು ದೇವತೆಗಳ ಅಧ್ಯಯನವೇ ಆಗಿದೆ. ಜಗತ್ತಿನಾದ್ಯಂತ ಇರುವ ಜನಪದ ಹೆಣ್ಣು ದೇವತೆಗಳನ್ನು ಮಾನವಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿದರೆ ಮಾತೃ ದೈವಗಳು ಬಹುರೂಪದಲ್ಲಿದ್ದು, ಕೆಲವೊಮ್ಮೆ 'ರೂಪಕ'ಗಳಾಗಿ ಪರಿವರ್ತಿತವಾಗಿರುವುದೂ ಸಹ ಕಂಡುಬರುತ್ತದೆ. ಎಲ್ಲ ಸಂಸ್ಕೃತಿಗಳಲ್ಲೂ ಸಹಾ ಈ ಮಾತೃರೂಪಕಗಳು 'ತಾಯಿಬೇರು'ಗಳಾಗಿ ಕೆಲಸ ಮಾಡಿ ಮನುಷ್ಯನ ಸೂಕ್ಷ್ಮ ಪ್ರಜ್ಞೆಯ ಸುಪ್ತಸ್ಥಿತಿಯಲ್ಲಿ ದೈವಕಾರಿಗಳಾಗಿ ಉಳಿದುಕೊಂಡಿರುವುದನ್ನು ಕಾಣಬಹುದಾಗಿದೆ. ಸೃಷ್ಠಿಯ ಚೈತನ್ಯವನ್ನು ಸಾಕ್ಷೀಕರಿಸಿಕೊಂಡು ಬೆಳೆಯುತ್ತಾ ಬಂದಿರುವ ಈ ದೈವಗಳು ಎಲ್ಲಾ ಸಂಸ್ಕೃತಿಗಳಲ್ಲಿಯೂ ಅನನ್ಯ ಗುರುತಿನ ದೈವರೂಪಕಗಳಾಗಿ ಬೆಳೆದುಬಂದಿದೆ.

ಫಲವಂತಿಕೆಯ ದೈವಗಳು, ಸಂತಾನ ದೈವಗಳು, ಕೃಷಿ ದೈವಗಳು, ಸಸ್ಯ ದೈವಗಳು, ವನ, ಜಲ ದೈವಗಳು ಮಾತೃ ಚಂದ್ರನ ಕಲ್ಪನೆ, ಕುಲದೇವತೆ, ಶಕ್ತಿ ದೇವತೆ ಹೀಗೆ ನಾನಾ ರೂಪಕಗಳನ್ನು ತಾಳಿದರೂ ಅವುಗಳ ಹಿಂದಿನ ಮಾತೃರೂಪಕಗಳು ಸಂಸ್ಕೃತಿಯ ಸಂವರ್ಧಕಗಳಾಗಿಯೇ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. ಆರ್ಯ ಹಾಗೂ ಶಿಷ್ಟ ಸಂಸ್ಕೃತಿಗಳ ವೈರುಧ್ಯಗಳ ನಡುವೆಯೇ ಮಾತೃಮೌಲ್ಯವು ಅನೇಕ ರೂಪಾಂತರಗಳನ್ನು ತಾಳಿದ್ದರೂ ತನ್ನ ಅಸ್ಮಿತೆಯನ್ನು ಇಂದಿಗೂ ಚೇತೋಹಾರಿಯಾಗಿ ಉಳಿಸಿಕೊಂಡು ಬಂದು ಎಲ್ಲ ವರ್ಗ, ಸಮುದಾಯ, ಸಂಸ್ಕೃತಿಯ ಸಾಕ್ಷೀಭಾವದಲ್ಲಿ ಏಕೀಭವಿಸಿರುವುದಂತೂ ಸತ್ಯ! ನಾಗರೀಕತೆಯ ಆವಿಷ್ಕಾರ, ವೈದಿಕ ಸಂಸ್ಕೃತಿಯ ಪ್ರತಿರೋಧ, ಶಿಷ್ಟ ಜ್ಞಾನ ಕೇಂದ್ರಗಳ ವಿಸ್ತರಣೆ, ತಂತ್ರಜ್ಞಾನದ ತಲ್ಲಣಗಳು ಅಥವಾ ಜಾಗತೀಕರಣದ ಅಪಾಯುಗಳ ನಡುವೆಯೂ ಸಹಾ ವಿಜ್ಞಾನದ ಆವಿಷ್ಕಾರಕ್ಕೆ ಮುಖಾಮುಖಿಯಾಗುತ್ತಲೇ ಜನಪದರ ಜನಮಾನಸದಲ್ಲಿ ಈ ಮಾತೃ ರೂಪಕಗಳು ರಮ್ಯ ವಿಶ್ವಾಸವನ್ನು ಉಳಿಸಿಕೊಳ್ಳುತ್ತಾ ತನ್ನ ಅಸ್ಮಿತೆಗಾಗಿ ನಿರಂತರ ಹೋರಾಡುತ್ತಲೇ ಬಂದಿದೆ. ಒಂದೆಡೆ

ಹಲವಾರು ಹೊಸ ಸಿದ್ಧಾಂತಗಳನ್ನು ಕಟ್ಟುತ್ತಾ, ಮತ್ತೊಂದೆಡೆ ಹಳೆಯ ಸಿದ್ಧಾಂತಗಳನ್ನು ಒಡೆಯುತ್ತಾ ರೂಪಾಂತರಗೊಳ್ಳುತ್ತಿರುವ ಈ ಸಾಂಸ್ಕೃತಿಕ ಸ್ಥಿತ್ಯಂತರಗಳ ಕಾಲದಲ್ಲಿಯೂ ಸಹಾ, ಜಗತ್ತಿನ ಯಾವುದೋ ಭಾಗದಲ್ಲಿ ಯಾವುದೋ ರೂಪದಲ್ಲಿ, ಭಾವದಲ್ಲಿ ನಿರಂತರವಾಗಿ ಕ್ರಿಯಾತ್ಮಕವಾಗಿ ಆಚರಣೆಗೊಳಗಾಗುತ್ತಲೇ ಬಂದಿರುವುದೇ ಇದಕ್ಕೆ ಸಾಕ್ಷಿ.

೪.೩. ಪ್ರಾಚೀನ ಪರಂಪರೆಯಲ್ಲಿ ಶಕ್ತಿ ದೇವತೆಯ ಉಗಮ ಮತ್ತು ವಿಕಾಸ :

ನಮ್ಮ ಸಂಸ್ಕೃತಿಯಲ್ಲಿ 'ಶಕ್ತಿದೇವಿ'ಯ ಆರಾಧನೆ ಪುರಾತನ ಮತ್ತು ವೈವಿಧ್ಯಮಯ. ದೇಶದ ಉದ್ದಗಲಕ್ಕೂ ಕಂಡುಬರುವ 'ಶಕ್ತಿ ದೇವತೆ'ಗಳ ಪ್ರಭಾವ ಅಗಾಧವಾದುದು. ಹರಪ್ಪಾದಲ್ಲಿ ಕ್ರಿ.ಪೂ. ೨೦೦೦ಕ್ಕೂ ಸೇರಿದ ಮೊಹರೊಂದು ಸಿಕ್ಕಿದೆ. ಇದರಲ್ಲಿ ಸ್ತ್ರೀ ದೇವತೆಯ ಮುಂದೆ ಬಲಿ ನೀಡಲು ಪಶುವನ್ನು ಆಕರ್ಷಣೀಯವಾಗಿ ಕೊಂಬುಗಳನ್ನು ಜೋಡಿಸಿದ್ದಾರೆ. ಕ್ರಿ.ಪೂ. ೨೫೦೦ಕ್ಕೆ ಸೇರಿರುವ ಸ್ತ್ರೀ ದೇವತೆಯ ಅವಶೇಷವೊಂದು ಮೊಹೆಂಜೋದಾರೊದಲ್ಲಿ ದೊರೆತಿದೆ.

ಕಾಲಕ್ರಮೇಣ ಶಕ್ತಿದೇವಿ ಲಕ್ಷ್ಮೀಯಾಗಿ, ಮಹಾದೇವಿಯಾಗಿ, ಪಾರ್ವತಿಯಾಗಿ, ಗೌರಿಯಾಗಿ, ಉಷೆಯಾಗಿ, ಸರಸ್ವತಿ, ಆದಿಶಕ್ತಿಯಾಗಿ ಹೀಗೆ ವಿವಿಧ ರೂಪಗಳಲ್ಲಿ ಪೂಜಿಸಲ್ಪಡುತ್ತಿದ್ದಾಳೆ. ರಾಕ್ಷಸೀ ಶಕ್ತಿಗಳ ಮೇಲೆ ದೈವಿ ಶಕ್ತಿಯ ಜಯವನ್ನು ಸಾರಿ ಹೇಳುವ ಹಬ್ಬವೇ 'ವಿಜಯದಶಮಿ'. ನಮ್ಮ ದೇಶದ ಜನ ಮಾನಸದಲ್ಲಿ ದೇವದಾನವರ ಸಂಘರ್ಷದ ಕಥೆ ಭಿನ್ನ ಭಿನ್ನ ಸ್ವರೂಪಗಳಲ್ಲಿ ಪ್ರತಿಬಿಂಬಿತವಾಗಿದೆ. ಶಕ್ತಿದೇವತೆಯ ಆರಾಧನೆ ರಾಕ್ಷಸೀ ಪ್ರವೃತ್ತಿ ಮತ್ತು ಮಾನವತೆಯ ನಡುವಣ ಹೋರಾಟವನ್ನು ಹೇಳುತ್ತದೆ.

ದೇವ-ದಾನವರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸುರಾಸುರರ, ದೇವ-ದಾನವರ ಭೇದವು ದಿನನಿತ್ಯ ಜೀವನದ ಆಚಾರ, ವಿಚಾರಗಳಲ್ಲಿ ಪ್ರಕಟವಾಗಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಳ್ಳೆಯ ಮತ್ತು ಕೆಟ್ಟ ಗುಣಗಳು ಇರುತ್ತವೆ. ಅಂದರೆ ಪ್ರತಿಯೊಬ್ಬರಲ್ಲೂ ಸುರನೂ ಇದ್ದಾನೆ ಮತ್ತು ಅಸುರನೂ ಇದ್ದಾನೆ. ಮಾನವನಲ್ಲಿರುವ ರಾಕ್ಷಸೀ ಪ್ರವೃತ್ತಿ ಮತ್ತು ದೈವ ಪ್ರವೃತ್ತಿಯ ಸಾಮರಸ್ಯ ಅತೀ ಮುಖ್ಯ. ಭಗವದ್ಗೀತೆಯಲ್ಲಿ ಅಸುರೀ ಪ್ರವೃತ್ತಿಯನ್ನು ವಿವರಿಸಲಾಗಿದೆ. ಮನುಷ್ಯನಲ್ಲಿ ಅಸುರೀ ಪ್ರವೃತ್ತಿ ಹೆಚ್ಚಾದಲ್ಲಿ ದುರಂತ ತಪ್ಪಿದ್ದಲ್ಲ. ಈ ಸಂದೇಶವನ್ನು ಸಾರುವ ಹಬ್ಬವೇ **'ದಸರಾ'**.

ಪ್ರಾಚೀನ ಪರಂಪರೆಯಲ್ಲಿ ತಾಯಿ ಹಕ್ಕು ಹಲವು ರೀತಿಗಳಲ್ಲಿ ಉಳಿದಿದೆ. ಮತ ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ನಿಲುವುಗಳಲ್ಲಿ ಸ್ತ್ರೀ ತತ್ವದ ನಿರೂಪಣೆ ಕುತೂಹಲಕಾರಿಯಾಗಿದೆ. ಸ್ತ್ರೀ ತತ್ವವು ತಾಯಿ ಹಕ್ಕಿನ ಸೈದ್ಧಾಂತಿಕ ರೂಪ. "ದೇವತೆಗಳಲ್ಲಿ ಸ್ತ್ರೀ ದೇವತೆಗಳಿಗೆ ಉತ್ತಮ ಸ್ಥಾನವಿದೆ. ಸಾಮಾಜಿಕ ವ್ಯವಸ್ಥೆ ಮತ್ತು ಅದರಲ್ಲಿ ಮಹಿಳೆಯ ಸ್ಥಾನ, ಇವನ್ನವಲಂಬಿಸಿ ಸ್ತ್ರೀ ದೇವತೆಗಳ ಸ್ಥಾನ ತೀರ್ಮಾನವಾಗುತ್ತದೆ. ಯಾವ ಕುಲದಲ್ಲಿ ತಾಯಿಯು ಮುಖ್ಯಸ್ಥಳೋ ಅಲ್ಲಿ

ತಾಯಿದೇವತೆಯು ಉನ್ನತ ಸ್ಥಾನದಲ್ಲಿರುತ್ತಾಳೆ. ಆದರೆ ಅದು ಮಾಂತ್ರಿಕತೆಯ ಹಂತವನ್ನು ದಾಟಿರುವಂತಹ ಸಮಾಜಕ್ಕೆ ಮಾತ್ರ ಅನ್ವಯಿಸುತ್ತದೆ”[೭] ಎಂದು ಹೇಳಿರುವುದು ತರ್ಕಬದ್ಧವಾಗಿದೆ. ಆದರೆ ತಾಯಿಯು ಗುಂಪಿನ ಮುಖ್ಯಸ್ಥಳಾಗಿರುವ ಸನ್ನಿವೇಶ ಯಾವುದು? ಮತ್ತೆ ಹಿಂದೆ ಹೇಳಿದ್ದೇ ಅದಕ್ಕೆ ಉತ್ತರ: ಸ್ತ್ರೀ ತತ್ವಕ್ಕೆ ಭೌತಿಕ ಆಧಾರವೆಂದರೆ ಆದಿಕಾಲದ ಕೃಷಿ ಆರ್ಥಿಕತೆ. ಆದರೆ “ ಸ್ತ್ರೀ ದೇವತೆಗಳ ಆರಾಧನೆಗೆ ಸೂಕ್ತವಾದ ಸರಳ ಬೇಸಾಯಗಾರಿಕೆಯು ಹಿಂದಕ್ಕೆ ಸರಿದಾಗ ಪುರುಷ ದೇವತೆಗಳು ಮೇಲೇರುತ್ತವೆ, ಹೆಣ್ಣು ದೇವತೆಗಳಿಗೆ ಕಡಿಮೆ ಮಟ್ಟದ ಕೆಲಸಗಳನ್ನು ಗೊತ್ತುಪಡಿಸಲಾಗುತ್ತದೆ. ಅವು ಗಂಡು ದೇವತೆಗಳ ಪತ್ನಿ ರೂಪದಲ್ಲಿರುತ್ತವೆ. ಇಲ್ಲವೇ ಪೂರ್ತಿ ಅದೃಶ್ಯರಾಗದಿರಲು ಲಿಂಗವನ್ನು ಬದಲಾಯಿಸಿಕೊಂಡುಬಿಡುತ್ತವೆ”[೮] ಅಂದರೆ, ಯುದ್ಧ ಮತ್ತು ಶಾಂತಿ ಸನ್ನಿವೇಶಗಳ ಉತ್ಪನ್ನಗಳಾಗಿ ಸ್ತ್ರೀ ದೇವತೆಗಳು ಸ್ಥಾನ ಪಡೆಯುತ್ತವೆ: ಯುದ್ಧ ಕಾಲದಲ್ಲಿ ಗಂಡು ದೇವತೆ, ಶಾಂತಿ ಕಾಲದಲ್ಲಿ ಹೆಣ್ಣು ದೇವತೆ: ಅವಶ್ಯಕತೆಗನುಗುಣವಾಗಿ ದೇವತೆಗಳು ಸ್ಥಾನ ಪಡೆಯುತ್ತವೆ. ಒಂದು ಕಾಲದಲ್ಲಿ ರಕ್ಷಣೆ ಬೇಕು, ಕ್ಷೇಮ ಕಾಯ್ದುಕೊಳ್ಳಬೇಕು: ಬೇರೊಂದು ಕಾಲದಲ್ಲಿ ಬೆಳೆ, ಪಶುಗಳು, ಮಕ್ಕಳು, ಎಲ್ಲಾ ಚೆನ್ನಾಗಿರಬೇಕು ಅದಕ್ಕೆ ತಕ್ಕಂತೆ ದೇವತೆಗಳು, ಆದರೆ ಫಲವಂತಿಕೆ ಮತ್ತು ಬೆಳೆಯ ಹೆಚ್ಚಳಕ್ಕೆ ಯಾವಾಗಲೂ ಸ್ತ್ರೀ ದೇವತೆಗಳೇ ಸಂಕೇತಗಳು. ಈ ಹಿನ್ನೆಲೆಯಲ್ಲಿ ಭಾರತದ ಮತಧಾರ್ಮಿಕ ಚರಿತ್ರೆಯನ್ನು ಅವಲೋಕಿಸಬಹುದು.

ಗ್ರಾಮದೇವತೆಗಳು ‘ತಾಯಿ’ ಅಥವಾ ‘ಮಹಾತಾಯಿ’ಯ ಪ್ರತಿನಿಧಿಗಳೆಂಬ ಅಭಿಪ್ರಾಯ ಸರಿಯಾದರೆ, ಅಸಮಾನ ಬೆಳವಣಿಗೆ ಇನ್ನೊಂದು ಉದಾಹರಣೆ ಇದಾಗುತ್ತದೆ. ಆ ತಾಯಂದಿರ ಅವಶೇಷಗಳು ಐದುಸಾವಿರ ವರ್ಷಗಳ ಹಿಂದಿನವು. ಈ ಜನ ಇಂದಿಗೂ ಭಾರತದಲ್ಲಿ ಉಳಿದಿದ್ದಾರೆ, ಅವೇ ಹಳೆಯ ನಂಬಿಕೆಗಳಿಗೆ ಪಕ್ಕಾಗಿದ್ದಾರೆ. ಸಾವಿರಾರು ವರ್ಷಗಳ ಹಿಂದೆ ಸಿಂಧು ನಾಗರಿಕತೆಯ ಪ್ರವರ್ತಕರಾಗಿದ್ದವರ ಪೂರ್ವಜರು ಇವರು. ಭಾರತದ ರೈತಾಪಿ ಜನರ ವಿಶಾಲ ಸಮುದಾಯಗಳು ಇಂದಿಗೂ ಪುರುಷ ದೇವತೆಗಳನ್ನು ಹಚ್ಚಿಕೊಂಡಿರುವುದು ಅಷ್ಟಕ್ಕಷ್ಟೇ. ಅವರೆಲ್ಲಾ ಬುಡಕಟ್ಟು ಸಮಾಜದಲ್ಲೇ ಉಳಿದುರುವವರೇನಲ್ಲ. ಅವರ ಜೀವನದ ಮೇಲೆ ಹಿಡಿತವಿರುವ ದೇವತೆಗಳು ಬಹುತೇಕ ಸ್ತ್ರೀ ದೇವತೆಗಳು. ಅವರಲ್ಲಿ ಪ್ರಮುಖರೆಂದರೆ ದುರ್ಗೆ, ಕಾಳಿ, ಚಂಡಿ, ಮುಂತಾದವರು. ಅವರ ಹೆಸರುಗಳಲ್ಲಿರುವ ವ್ಯತ್ಯಾಸ ನಂತರದ ಕಾಲದಲ್ಲಿ ಹುಟ್ಟಿಕೊಂಡದ್ದು. ಅಂತೆಯೇ ಆ ದೇವತೆಗಳ ಲಕ್ಷಣಗಳು ಮತ್ತು ಇತಿಹಾಸ ಕೂಡ. ಆದರೆ ಅದು ಅಮುಖ್ಯ. ಅವುಗಳೆಲ್ಲದರ ಹಿಂದಿರುವುದು ಆದಿ ಸ್ತ್ರೀ ದೇವತೆ. ಆ ದೇವತೆಯ ಮಣ್ಣಿನ ಪ್ರತಿಮೆಗಳು ಎಲ್ಲ ಪ್ರಾಚೀನ ನಾಗರಿಕತೆಗಳ ಕೇಂದ್ರಗಳಲ್ಲೂ ಉತ್ಖನನದಿಂದ ದೊರಕಿವೆ. ಭಾರತದ ಜನಸಮುದಾಯದ ಪ್ರಜ್ಞೆಯಲ್ಲಿ ಈ ಆದಿ ಮಾತೆ ಉಳಿದಿರುವುದನ್ನು ವಿವರಿಸುವುದು ಹೇಗೆ? ಅದಕ್ಕಿರುವ ವಿವರಣೆ ಒಂದೇ: ಆ ಮಾತೆಯ ಭೌತಿಕ ಆಧಾರವು ಹಾಗೆಯೇ ಉಳಿದಿರುವುದು. ಭಾರತದ ಸಾಮಾಜಿಕ ಚರಿತ್ರೆಯ ಇನ್ನೊಂದು ವೈಲಕ್ಷಣವನ್ನು ಇದು ಸ್ಪಷ್ಟಗೊಳಿಸುತ್ತದೆ.

ಅದೇನೆಂದರೆ, ಪಾರಂಪರಿಕ ಭಾರತೀಯ ಸಮಾಜದ ಪ್ರಮುಖ ಲಕ್ಷಣವು ಭೂತಕಾಲದ ತನ್ನ ಬುಡಕಟ್ಟು ಹಂತವನ್ನು ಜೀವಂತವಾಗಿರಿಸಿಕೊಳ್ಳುವುದೇ ಆಗಿದೆ.

ಫ್ರೇಝರ್ ಒಂದು ಘಟನೆಯನ್ನು ದಾಖಲಿಸಿದ್ದಾನೆ ಓರಿನೋಕೋ ಬುಡಕಟ್ಟಿನವರು ಬಿತ್ತನೆಯ ಕೆಲಸದಲ್ಲಿದ್ದರು. ಹಾಲುಣಿಸುವ ತಾಯಂದಿರು ಮಕ್ಕಳೊಡನೆ ಆ ಕೆಲಸದಲ್ಲಿ ತೊಡಗಿದ್ದಾಗ ಒಬ್ಬ ಕ್ರೈಸ್ತ ಪಾದ್ರಿ ಅಲ್ಲಿದ್ದ ಗಂಡಸರನ್ನು ಛೇಡಿಸಿ ಇದೆಂತಹ ಕ್ರೌರ್ಯ ಎಂದನ್ನಂತೆ ಅದಕ್ಕವರು ಹೇಳಿದರಂತೆ, "ನಿನಗಿಗೆಲ್ಲಾ ತಿಳಿಯುವುದಿಲ್ಲಾ, ಬಿಡು; ಅದಕ್ಕೇ ನಿನಗೆ ಅಸಮಾಧಾನ. ಮಕ್ಕಳನ್ನು ಹೆರುವವರು ಹೆಂಗಸರು, ಗಂಡಸರಲ್ಲ. ಹೆಂಗಸರು ಬಿತ್ತಿದಾಗ ಜೋಳದ ತೆನೆಗಳು ಹೆಚ್ಚಾಗುತ್ತವೆ, ಯುಕ್ಕ ಬೇರು ಮೂರು ಬುಟ್ಟಿಯಷ್ಟು ಸಿಗುತ್ತದೆ. ಪ್ರತಿಯೊಂದೂ ಒಂದಕ್ಕೆರಡಾಗುತ್ತದೆ, ಗೊತ್ತೆ? ಏಕೆಂದು ತಿಳಿದಿದೆಯೇ ನಿನಗೆ? ಹೆಂಗಸರಿಗೆ ಮಕ್ಕಳಾಗುತ್ತವೆ. ಹಾಗೆಯೇ ಅವರು ಬೀಜ ಬಿತ್ತಿದರೆ ಸೊಂಪಾದ ಬೆಳೆ ಬರುತ್ತದೆ. ಆದ್ದರಿಂದ ಅವರು ಬಿತ್ತಲಿ; ಇದೆಲ್ಲಾ ಅವರಿಗೆ ತಿಳಿಯುವಷ್ಟು ನಮಗೆ ತಿಳಿಯುವುದಿಲ್ಲ", ಎಂದು. ಕೃಷಿಯ ಮಾಂತ್ರಿಕತೆಯ ಬಗೆಗಿನ ನಂಬಿಕೆಗೆ ಇದೊಂದು ಮಾದರಿ ಉದಾಹರಣೆ. ಮಾನವ ಫಲವತ್ತತೆ, ವಿಶೇಷತ: ಸ್ತ್ರೀ ಫಲವತ್ತತೆ, ಮತ್ತು ಪ್ರಾಕೃತಿಕ ಫಲವತ್ತತೆ ಅಸ್ತಿತ್ವದಲ್ಲಿ ಒಂದೇ ತೆರನಾದವು. ಅಂದರೆ, ಮಾನವ ಸಂತಾನೋತ್ಪತ್ತಿ ಮತ್ತು ಕೃಷಿ ಉತ್ಪಾದನೆ, ಎರಡಕ್ಕೂ ಸಂಬಂಧವಿದೆ. ಆದ್ದರಿಂದ ಸಾಂಕ್ರಾಮಿಕವೋ ಎಂಬಂತೆ, ಅಥವಾ ಅನುಕರಣೆಯಿಂದ ಒಂದು ಇನ್ನೊಂದನ್ನು ಪ್ರಭಾವಿಸುತ್ತದೆ. ಫ್ರೇಝರ್ ಒಂದನ್ನು ಸಾಂಕ್ರಾಮಿಕ ಮಾಂತ್ರಿಕತೆಯೆಂದೂ, ಇನ್ನೊಂದನ್ನು ಸದೃಶಕ್ರಿಯಾ ಮಾಂತ್ರಿಕತೆಯೆಂದೂ ಕರೆದಿದ್ದಾನೆ.[೬]

ಭೂಮಿತಾಯಿ ಮತ್ತು ಮಾನವ ತಾಯಿಗಳಿಬ್ಬರ ಸಮ್ಮಿಲನವು ಪ್ರಾಚೀನ ನಂಬಿಕೆಯ ಭಾಗ. ಈ ಸಮ್ಮಿಲನದಿಂದ ಪ್ರಾಚೀನ ವಿಶ್ವದಲ್ಲಿ ಅನೇಕ ಸ್ತ್ರೀ ದೇವತೆಗಳು ರೂಪುತಳೆದರು. ಬ್ರಿಫೋ ಅದನ್ನು ಸಮಗ್ರವಾಗಿ ಚಿತ್ರಿಸಿದ್ದಾನೆ. ತಂತ್ರ ವಿದ್ಯೆಯ ಉಗಮದ ಮೇಲೆ ನೇರ ಪ್ರಭಾವ ಬಿರುವ ಅಂತಹ ಒಂದು ಉದಾಹರಣೆಯನ್ನು ಹಿಂದು ಧರ್ಮದಲ್ಲಿ ಕಾಣಬಹುದು. ಮಾರ್ಕಂಡೇಯ ಪುರಾಣದಲ್ಲಿ ದೇವೀ ಮಹಾತ್ಮ್ಯವೆಂಬ ಒಂದು ಭಾಗವಿದೆ. ಅದರಲ್ಲಿ ಸ್ವತ: ದೇವಿಯೇ ಅಚ್ಚರಿಯುಂಟು ಮಾಡುವಂತಹ ಒಂದು ಘೋಷಣೆ ಕೊಟ್ಟಿದ್ದಾಳೆ "ದೇವತೆಗಳೆ, ಮುಂದೆ ನಾನೇನು ಮಾಡುತ್ತೇನೆಂದರೆ ಇಡೀ ವಿಶ್ವವನ್ನು ಜೀವಪೋಷಕ ತರಕಾರಿಗಳಿಂದ ಸಂಭರಿಸುತ್ತೇನೆ. ಮಳೆ ಹೇರಳವಾದಾಗ ಅವು ಸ್ವತ: ನನ್ನ ದೇಹದಿಂದಲೇ ಉದ್ಭವಿಸುತ್ತವೆ (ಆತ್ಮ ದೇಹ ಸಮುದ್ಭವೈ:). ಆಗ ನಾನು ಭೂಮಿಯಲ್ಲಿ ಶಾಕಂಭರಿ ಎಂದು ಪ್ರಸಿದ್ಧಳಾಗುತ್ತೇನೆ." ಈ ಪುರಾಣವಾಕ್ಯದಲ್ಲಿ ಬಹಳ ಪ್ರಾಚೀನವಾದೊಂದು ನಂಬಿಕೆ ಅಡಗಿದೆ. ಅದೇನೆಂದರೆ, ಮೂಲತ: ಸಸ್ಯಗಳು ಬೆಳೆದದ್ದು ಮಹಿಳೆಯ ಶರೀರದಿಂದ, ಎಂದು. ಚಿರೋಕಿ, ಟೂಪಿ, ಮೊದಲಾದ ಬುಡಕಟ್ಟುಗಳಲ್ಲಿ ಇಂತಹ ಜೀವಂತ ನಂಬಿಕೆಗಳಿರುವುದನ್ನು ನಾವೀಗಾಗಲೆ ಗಮಿಸಿದ್ದೇವೆ. ಗಮನಾರ್ಹವಾದ ಸಂಗತಿಯೊಂದಿದೆ: ಈ ನಂಬಿಕೆಯ ಮೂರ್ತ ಪುರಾವೆಯೊಂದು ಹರಪ್ಪದ

ಉತ್ಖನನದಲ್ಲಿ ದೊರೆತಿದೆ ಅದನ್ನು ಮಾರ್ಷಲ್ ಬಣ್ಣಿಸಿದ್ದು ಹೀಗೆ “ದೀರ್ಘ ಚತುರಸ್ರಾಕಾರದ ಈ ಗಮನಾರ್ಹ ಮುದ್ರೆಯಲ್ಲಿ ಒಬ್ಬ ಮಹಿಳೆ ನಗ್ನವಾಗಿ, ತಲೆಕೆಳಗಾಗಿ, ಚಿತ್ರಿತವಾಗಿದ್ದಾಳೆ. ಅವಳು ಕಾಲುಗಳನ್ನು ಹಿಗ್ಗಿಸಿದ್ದಾಳೆ ಮತ್ತು ಅವಳ ಯೋನಿಯಿಂದ ಒಂದು ಸಸಿ ಹೊರಬಂದಿದೆ.” ಆರಕ್ಷರಗಳ ಒಂದು ಬರಹವೂ ಅಲ್ಲಿದೆ, ಆದರೆ ಅದು ಏನೆಂಬುದು ತಿಳಿಯದು. ಶಾಕಂಭರಿ ಎಂಬ ಹೆಸರಿಗೇನಾದರೂ ಸೂಚನೆ ಇರಬಹುದೇ? ಅದೇನೇ ಇರಲಿ. ಈ ಮುದ್ರೆಯಲ್ಲಿ ವ್ಯಕ್ತವಾಗಿರುವ ಸಂಗತಿಯು ಭಾರತೀಯ ಸಂಸ್ಕೃತಿಯ ಬೇರೆ ಹಂತಗಳಲ್ಲೂ ಅಭಿವ್ಯಕ್ತವಾಗಿದೆ. ಗುಪ್ತರ ಕಾಲಕ್ಕೆ ಮುಂಚಿನ ಒಂದು ಟೆರ್ರಾಕೋಟಾ ಚಿತ್ರಣದಲ್ಲಿ ಹೆಚ್ಚು ಕಡಿಮೆ ಇಂಥದೇ ಚಿತ್ರವಿದೆ, ಆದರೆ ಅಲ್ಲಿ ಯೋನಿಯಿಂದ ಹೊರಬರುವುದರ ಬದಲು ಕಮಲವು ಕಂಠದಿಂದ ಹೊರಬಂದಿದೆ.

ಈ ಸ್ತ್ರೀದೇವತೆಯು ಸಸ್ಯ ಪ್ರಪಂಚದೊಡನೆ ಸಂಬಂಧ ಹೊಂದಿರುವುದು ಸ್ಪಷ್ಟವಾಗಿದೆ. ಸಿಂಧೂ ಕಣಿವೆಯ ಉತ್ಖನನಗಳಿಗೂ ಮುಂಚೆಯೇ ಚಂದಾ ಇದನ್ನು ಗಮನಿಸಿದ್ದ ಮತ್ತು ಅನ್ನದಾ, ಅನ್ನಪೂರ್ಣ, ಮುಂತಾದ ಸ್ತ್ರೀ ದೇವತೆಗಳ ಹೆಸರುಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕೆಂದು ಸೂಚಿಸಿಯೂ ಇದ್ದ. ‘ಅನ್ನದಾ’ ಎಂದರೆ ಅನ್ನ ಕೊಡುವವಳು; ‘ಅನ್ನಪೂರ್ಣ’ ಎಂದರೆ ಅನ್ನ ಅವಳಲ್ಲಿ ತುಂಬಿದೆ, ಎಂದರ್ಥ. ಸಸ್ಯ ಮತ್ತು ಸ್ತ್ರೀ ದೇವತೆಗಳ ನಡುವಣ ಸಂಬಂಧವು ಶಕ್ತಿ ಆರಾಧನೆಯಲ್ಲಿ ‘ಕುಲ’ ಸಸ್ಯಗಳ ಮಹತ್ವದಿಂದಲೂ ತಿಳೀಯುತ್ತದೆ. ‘ಕುಲ’ ಎಂಬುದೊಂದು ಮರ. ಶಕ್ತನು ಪ್ರಾತಃಕಾಲ ಎದ್ದಕೂಡಲೆ “ಓಂ ಕುಲವೃಕ್ಷೇಭ್ಯೋ ನಮಃ“ ಎಂದು ಹೇಳುತ್ತಾ ‘ಕುಲ’ ಮರಗಳಿಗೆ ನಮಿಸಬೇಕು. ‘ಕುಲ ಚೂಡಾಮಣಿ’ ಎಂಬ ಗ್ರಂಥದ ಪ್ರಕಾರ ಅಂತಹ ಮರವನ್ನು ಕಂಡಾಗಲೆಲ್ಲಾ ಶಾಕ್ತನು ತಡೆಬಾಗಬೇಕು. “ಶಾಕ್ತಾನಂದ ತರಂಗಿಣಿ” ಎಂಬ ಗ್ರಂಥದಲ್ಲಿ ‘ಕುಲ’ ವೃಕ್ಷಗಳ ಎರಡು ಪಟ್ಟಿಗಳಿವೆ. ಅವುಗಳಲ್ಲಿ ‘ಕುಲ ಯೋಗಿನಿಯರು’ ವಾಸಿಸುತ್ತಾರಂತೆ ಮತ್ತು ಅವುಗಳ ಕೆಳಗೆ ಯಾರೂ ಮಲಗಬಾರದು ಹಾಗೂ ಅವಕ್ಕೆ ನೋವುಂಟುಮಾಡಬಾರದು. ಚಂದಾ ಗುರುತಿಸಿರುವ ಅಂಶಗಳ ಪೈಕಿ ಸಸ್ಯಲೋಕದೊಡನೆ ದುರ್ಗಾಪೂಜೆಯ ಸಂಬಂಧ ಗುರುತಿಸಿರುವುದು ಅತಿ ಮುಖ್ಯವೆನಿಸುತ್ತದೆ. ಆದರೆ ಆ ಆಚರಣೆಯ ವಿವರಗಳಿಗೆ ಆತ ಗಮನ ನೀಡಿಲ್ಲ ಮತ್ತು ಅದರ ಕೆಲವು ವಿಶೇಷ ಅಂಶಗಳನ್ನು ಗುರುತಿಸಿಲ್ಲ.

ದುರ್ಗೆಗೆ ಹತ್ತು ಕೈಗಳು. ಅವಳ ವಾಹನ ಸಿಂಹ. ಇಂತಹ ದೇವತೆಗೂ ದುರ್ಗಾಪೂಜೆಯ ಆಚರಣೆಯಲ್ಲಿನ ಪ್ರಧಾನ ಅಂಶಕ್ಕೂ ಎಲ್ಲಿಯ ಸಂಬಂಧ? ಈಗಿನ ಪ್ರತಿಮೆ ದುರ್ಗೆಯ ಜೊತೆ ಹೇಗೆ ಸಂಬಂಧ ಬೆಳೆಸಿಕೊಂಡಿತೆಂಬುದನ್ನು ಇತಿಹಾಸಕಾರರು ಸಂಶೋಧಿಸಬೇಕು. ಒಂದಂತೂ ನಿಜ; ಅಂತಹ ಸಂಬಂಧ ಈಚಿನದು ಮತ್ತು ಮೂಲ ದುರ್ಗಾಪೂಜೆಯ ಆಶಯಕ್ಕೆ ಕುಂದುಂಟಾಗಿಲ್ಲ. ಈಗ ನೂರು ವರ್ಷಗಳ ಹಿಂದೆ ಕೂಡ ದುರ್ಗೆಯ ಮೂರ್ತಿಗೆ ಹತ್ತು ಕೈ, ಸಿಂಹ, ಎಲ್ಲಾ ಇರಲಿಲ್ಲ. ಈಗಿನ ಮೂರ್ತಿಗಳಲ್ಲಿ ದುರ್ಗೆಯ ಮಕ್ಕಳೂ ತುಂಬಿಬಿಟ್ಟಿದ್ದಾರೆ! ನಿಜಜವಾದ

ದುರ್ಗಾಪೂಜೆಯಲ್ಲಿ ಪೂರ್ಣ ಘಟ ಮತ್ತು ಯಂತ್ರ ಆಚರಣೆಯ ಕೇಂದ್ರವಾಗಿರುತ್ತವೆ. ನೀರು ತುಂಬಿದ ಒಂದು ಮಣ್ಣಿನ ಪಾತ್ರೆಯೇ ಪೂರ್ಣ ಘಟ. ಅದರ ರಚನೆ ಹೀಗಿರುತ್ತದೆ; ಮೊದಲು ಚತುಷ್ಕೋಣಾಕೃತಿಯುಳ್ಳ ಜೇಡಿಮಣ್ಣಿನ ಮೇಲೆ ಐದು ವಿವಿಧ ಬೀಜಜಗಳನ್ನು (ಪಂಚ ಸಸ್ಯ) ಹರಡಲಾಗುತ್ತದೆ. ಅದರ ಮೇಲೆ ನೀರು ತುಂಬಿದ ಮಣ್ಣಿನ ಪಾತ್ರೆಯನ್ನು ಇರಿಸಲಾಗುತ್ತದೆ. ಮೊಸರು ಮಿಶ್ರಿತ ಅನ್ನ ಪಾತ್ರೆಯೊಳಗೆ. ಈ ಪಾತ್ರೆಯ ಕಂಠದ ಸುತ್ತ ಒಂದು ಕೆಂಪುದಾರ. ಪಾತ್ರೆಯ ಬಾಯನ್ನು ಐದು ವಿಧದ ಎಲೆಗಳಿಂದ ಮುಚ್ಚುವುದು. ಆಮೇಲೆ ಒಂದು ಮಣ್ಣಿನ ತಟ್ಟೆಯ ಮೇಲೆ ಸ್ವಲ್ಪ ಅಕ್ಕಿ ಮತ್ತು ಅಡಿಕೆ ಇಟ್ಟು ಅದನ್ನು ಎಲೆಗಳ ಮೇಲಿಡುವುದು. ಅಕ್ಕಿಯ ತಟ್ಟೆಯ ಮೇಲೆ ಇನ್ನೊಂದು ಹಣ್ಣು: ಉದಾಹರಣೆಗೆ ತೊಟ್ಟು ಕೀಳದ ಹಸಿರು ತೆಂಗಿನಕಾಯಿ. ಆ ಕಾಯಿಗೆ ಕುಂಕುಮ ಸವರಿರುತ್ತದೆ. ಮಣ್ಣಿನ ಪಾತ್ರೆಯ ಮೇಲೆ ಕಲಸಿದ ಕುಂಕುಮದಿಂದ ಒಂದು ಮಾನವ ಮಗುವಿನ ಚಿತ್ರ ಬರೆದಿರುತ್ತಾರೆ. ಅದನ್ನು ಸಿಂಧೂರ ಪುತ್ಥಲಿ ಎನ್ನುತ್ತಾರೆ. ಇದಿಷ್ಟೂ ಪೂರ್ಣ ಘಟದ ರೂಪ. ಈ ಘಟವನ್ನಿಡಲು ಚತುಷ್ಕೋಣಾಕಾರದ ಜೇಡಿಮಣ್ಣು ಇರುತ್ತದಷ್ಟೆ: ಅದರ ಮೇಲೆ ಸರ್ವತೋಭದ್ರ ಮಂಡಲವನ್ನು ರಚಿಸಿರುತ್ತಾರೆ. ತಂತ್ರದಲ್ಲಿ ಪ್ರಖ್ಯಾತವಾದ ಯಂತ್ರಗಳಲ್ಲಿ ಇದೂ ಒಂದು. ಅದರ ಮಧ್ಯದಲ್ಲಿ ಒಂದು ಕಮಲದ ಚಿತ್ರ;, ಅದಕ್ಕೆ ಎಂಟು ಕಳಗಳು. ನಾವೀಗಾಗಲೇ ತಿಳಿದಿರುವಂತೆ ತಂತ್ರದಲ್ಲಿ ಪದ್ಮವು ಯಾವಾಗಲೂ ಸ್ತ್ರೀಯೋನಿಯ ಸಾಂಕೇತಿಕ ರೂಪ.[೧೦] ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ದುರ್ಗೆ ಪ್ರಾಚೀನ ಪರಂಪರೆಯಲ್ಲಿ ಹಾಗೂ ಶಿಷ್ಟ ಪರಂಪರೆಯಲ್ಲಿ ಪ್ರಾಕೃತಿಕ ದೇವತೆ, ತಂತ್ರ ದೇವತೆ, ಹಾಗೂ ಕೃಷಿಗೆ ಸಂಬಂಧಿಸಿದ ದೇವತೆಯಾಗಿ ವಿಭಿನ್ನ ಆಯಾಮಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಬಹುಷಃ ಪ್ರಾಚೀನ ಧಾರ್ಮಿಕ ಆಚರಣೆಗಳಲ್ಲಿ ಈ ಆದಿಮ ನಂಬಿಕೆಯ ಉಳಿಕೆಯ ಸೂಚನೆಗಳು ವಿಭಿನ್ನ ಆಯಾಮಗಳನ್ನು ಪಡೆದು ರೂಪಾಂತರಗೊಂಡಿದೆ. ಕಾಲಮಾನಕ್ಕೆ ತಕ್ಕಂತೆ ಕೆಲವೊಮ್ಮೆ ಮಾಂತ್ರಿಕತೆಯ ಕಾಣ್ಕೆ, ಇನ್ನೂ ಹಲವೊಮ್ಮೆ ಸಂತಾನೋತ್ಪತ್ತಿಯ ಕಾಣ್ಕೆ, ಮುಂದೆ ನಾಗರೀಕತೆಯ ವಿಕಾಸವಾದಂತೆ ಮೂರ್ತಿ ಶಿಲ್ಪದ ರೂಪದಲ್ಲಿ ದುರ್ಗೆ ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಮಹಿಳೆಯ ವಿಶೇಷ ಸಾಮರ್ಥ್ಯಗಳಿಗೆ ಸಾಧನವಾಗಿ ಉಳಿದಿರುವ ಸಾಧ್ಯತೆಗಳಿವೆ.

೪.೪. ಬೆಂಗಳೂರಿನ ನಗರ ದೇವತೆ ಅಣ್ಣಮ್ಮ :

ಬೆಂಗಳೂರಿನ ನಗರ ದೇವತೆ ಅಣ್ಣಮ್ಮ ಇಡೀ ನಗರವನ್ನು ಆವರಿಸಿದ್ದಾಳೆ. ನಗರದ ಪ್ರತಿಯೊಂದು ಬಡಾವಣೆಯಲ್ಲಿರುವ ಎಲ್ಲ ಸ್ಥಳೀಯ ದೇವತೆಗಳೂ ಉತ್ಸವ ನಡೆಸುವಾಗ ೩ ವರುಷಗಳಿಗೊಮ್ಮೆ ಈ ಅಣ್ಣಮ್ಮ ದೇವಿಯ ಉತ್ಸವ ವಿಗ್ರಹವನ್ನು ಕೊಂಡೊಯ್ದು ದಾರಿ ಬದಿಯಲ್ಲಿ ದೊಡ್ಡ ಚಪ್ಪರ ಹಾಕಿ ಅಲ್ಲಿಯೇ ಗದ್ದಿಗೆ ಮಾಡಿ ಪ್ರತಿಷ್ಠಾಪಿಸುವುದು, ಕುರಿ, ಕೋಳಿ ಬಲಿ, ತಂಬಿಟ್ಟಿನ ಆರತಿ, ಮೊಸರನ್ನದ ತಂಪು ಮಾಡುವುದು ಈ ಕಾರ್ಯಗಳನ್ನು ಮಾಡುತ್ತಾರೆ. ಸ್ಥಿತ್ಯಂತರದ ಈ ಕಾಲದಲ್ಲಿಯೂ ವಿವಿಧ ಬಡಾವಣೆಯ ನಿರ್ದಿಷ್ಟ ಜನಾಂಗಗಳು ಉತ್ಸವದಲ್ಲಿ

ಕರೆದೊಯ್ದು ಪೂಜಿಸಿ, ಪ್ರದರ್ಶಿಸಿ, ಮೂರುದಿನ ಇರಿಸಿಕೊಂಡು ಭಕ್ತಿಯ ಧನ್ಯತೆಗೆ ಒಳಗಾಗುವುದನ್ನು ಕಾಣಬಹುದು. ಈ ದೇವಾಲಯದ ಉಗಮಕ್ಕೆ ಯಾವುದೇ ಐತಿಹಾಸಿಕ ದಾಖಲೆ ಸಿಗುವುದಿಲ್ಲ. ಆನಪದರೇ ಹೇಳಿದ ೨ ಕತೆಗಳು ನನಗೆ ದೊರೆತವು,

ಕತೆ-೧ : ದೇವಸ್ಥಾನದ ಪೂಜಾರಿ ವೆಂಕಟಪ್ಪನವರು ಹೇಳಿದ ಕತೆ

"ನಮ್ಮ ಹಿಂದಿನ ತಲೆಮಾರಿನವ್ರು ಎಣ್ಣೆ ಯಾಪಾರ ಮಾಡ್ತಿದ್ರು, ನಮ್ ಮುತ್ತಾತನ ಮುತ್ತಾತ ಎಣ್ಣೆ ಮಾರ್‍ಕೊಂಡ್ ಈ ಜಾಗದ ತಾವ ಓಡಾಡ್ತಿದ್ರು, ಆಗ ಇಲ್ಲೆಲ್ಲಾ ತುಂಬಾ ಕಾಡು ಬೆಳ್ಕೊಂಡಿತ್ತು, ಜನ ಸಂಚಾರಾನೇ ಇರಲಿಲ್ಲ. ಒಂದಿನ ಯಾವುದೋ ಒಂದು ಚಿಕ್ಕ ಮಗು ಅಳೊ ಶಬ್ದ ಕೇಳಿಸ್ತು, ಹುಡುಕಿದರೆ ಯಾವುದೂ ಕಾಣ್ಲಿಲ್ಲ. ಎಲ್ಲೋ ಭ್ರಮೆ ಇರ್ಬೆಕು ಅನ್ಕೊಂಡು ಅಂಗೇ ಮುಂದಕ್ ಒಂಟೋದ್ರು, ಮತ್ತೆ ಮಾರ್‍ನೇ ದಿನಕ್ಕೂ ಅಂಗೇ ಕೇಳುಸ್ತು. ಎರಡು ಮೂರು ದಿನ ಇಂಗೇ ಮಗು ಅಳೋ ಶಬ್ದ ಮಾತ್ರ ಕೇಳಿಸ್ತಿತ್ತು. ನೊಡಕ್ಯಾರೂ ಇರ್‍ಲಿಲ್ಲ. ಎದರ್‍ಕೊಂಡು ಮೂರನೇ ದಿನ ಎಣ್ಣೆ ಮಾರೋಕೇ ಹೋಗ್ಲಿಲ್ಲ. ಅವತ್ ರಾತ್ರಿ ಈಯಮ್ಮ ದೇವಿ ಕನಸ್ನಲ್ಲಿ ಬಂದು "ನಾನು ದೇವರು ದೆವ್ವ ಅಲ್ಲ ಇಂಥಾ ದಿಕ್ಕಿನಲ್ಲಿ ಇಂಥಾ ಕಡೆ ಮಣ್ಣಲ್ಲಿ ಇದೀನಿ, ನನ್ನ ಹೊರಗೆ ತೆಗೆದು ಪೂಜೆ ಮಾಡು" ಎಂದಳು. ಮಾರನೇ ದಿನ ನಮ್ ಹಿರೀಕರು ಆ ದೇವಿ ಯೋಳಿದ್ ಜಾಗಕ್ಕೆ ಹೋಗಿ ನೋಡಿದರೆ ಈ ದೇವಿ ವಿಗ್ರಹ ಉದ್ಭವ ಆಗುತ್ತಿತ್ತು. ಅದನ್ನು ಅಲ್ಲೇ ಪ್ರತಿಷ್ಟಾಪಿಸಿ ಪೂಜೆ ಆರಂಭಿಸಿದರು. ಕೆಂಪೇಗೌಡನ ಕಾಲದಲ್ಲಿ ಈ ದೇವಿಯನ್ನು ಇಲ್ಲಿಗೆ ತಂದು ಪ್ರತಿಷ್ಠಾಪನೆ ಮಾಡ್ಸಿ ಸೂರು ಗುಡಿ ಕಟ್ಸಿದ್ರು. ಅದಕ್ಕೂ ಮುಂಚೆ ಈಕೆ ದೇವಸ್ಥಾನದ ಎದುರಿಗಿದ್ದ ಬೇವಿನ ಮರದ ಕೆಳಗೆ ಇದ್ದಳು".

ಕತೆ ೨ : ಸ್ಥಳೀಯ ಗಾಣಿಗ ಭಕ್ತರು ಹೇಳಿದ ಕತೆ- ವಕ್ತೃ - ಲಕ್ಷ್ಮಮ್ಮ- ವಯಸ್ಸು- ೬೮, ಜಾತಿ- ಗಾಣಿಗರು, ಸ್ಥಳ- ನಗರ್ತಪೇಟೆ

"ತುಂಬಾ ವರ್ಸದ್ ಇಂದೆ ನಮ್ಮ ವಂಸ್ ಒಂದು ಅಜ್ಜಿ ಈ ದೇವಸ್ಥಾನದ ಮುಂದೆ ಇರೋ ಬೇವಿನ ಮರದ ಕೆಳಗೆ ಒಂದು ಕಲ್ಲನಿಟ್ಟುಕೊಂಡು ಪೂಜೆ ಮಾಡ್ತಿದ್ರು, ಅದ್ನ ಅಣ್ಣಮ್ಮ ಅಂತ ಕರೀತಿದ್ರು, ಅಜ್ಜಿ ತೀರ್‍ಕೊಂಡ ಮೇಲೆ ಅವಳ ಮಕ್ಕಳು ಮೊಮ್ಮಕ್ಕಳು ಇದು 'ನಮ್ಮ ದೇವತೆ' ಅಂತ ಪೂಜೆ ಸುರು ಮಾಡಿದ್ರು. ಅವರು ಯೋಳಿದ್ ಪ್ರಕಾರ ನಾವೂ ಪ್ರತೀ ಶುಕ್ರವಾರ, ಮಂಗಳವಾರ ಈ ದೇವಿಗೆ ಒಕ್ಕಲಾದೋ" ಆಮೇಲೆ ದೇವಸ್ಥಾನ ಆಗಿದ್ದು ಕೆಂಪೇಗೌಡನ ಕಾಲದಲ್ಲಿ.

ಇಂದಿಗೂ ಅದೇ ಕುಟುಂಬದವರು ತಲೆಮಾರಿನಿಂದ ತಲೆಮಾರಿಗೆ ಈ ದೇವತೆಯ ಪೂಜಾರಿಗಳಾಗುತ್ತಾ ಬಂದು ದೇವಸ್ಥಾನದ ಇಡೀ ಆಡಳಿತವನ್ನು ನೋಡಿಕೊಳ್ಳುತ್ತಾರೆ.

ಈ ಉಗಮದ ಹಿಂದಿನ ಐತಿಹ್ಯದ ಸತ್ಯಾಸತ್ಯತೆಗಿಂತ ಇಲ್ಲಿ ಮುಖ್ಯವಾಗುವುದು ಜನರ ಆಳವಾದ ನಂಬಿಕೆ ಮತ್ತು ಭಕ್ತಿ. ಜೊತೆಗೆ ಈ ದೇವಿಯ ಉಗಮಕ್ಕೆ ಕಾರಣ, ಯಾವುದೋ

ವ್ಯಾಪಾರ ಅಥವಾ ತಿರುಗಾಟದಲ್ಲಿದ್ದ ಕುಟುಂಬವೊಂದರ ನಂಬಿಕೆ, ಶ್ರದ್ಧೆಯ ಪರಿಣಾಮವಾಗಿ ಸ್ಥಾಪನೆಗೊಳಪಟ್ಟು ಎಣ್ಣೆಮಾರುವ ವೃತ್ತಿಯ ಕುಟುಂಬವೊಂದು ಅಲ್ಲೇ ನೆಲೆ ನಿಲ್ಲಲು ಕಾರಣವಾದದ್ದು. ಆದರೆ ಈ ದೇವಿಯ ಕುರಿತು ಜನರಲ್ಲಿ ಭಕ್ತಿಗಿಂತ ಹೆಚ್ಚು ಭಯ ಕಾರಣವಾಗಿರುವುದು. ಬಹಳ ಮುಖ್ಯವಾದ ಸಾಂಸ್ಕೃತಿಕ ಪಲ್ಲಟ, ಸ್ಥಳೀಯರು ಇವಳನ್ನು ತಂದಿಡುವ ದೇವಿ ಎಂತಲೂ ಕರೆಯುತ್ತಾರೆ. ಇವಳು ಶಕ್ತಿದೇವತೆ– ತನ್ನ ಅಕ್ಕತಂಗಿಯರ ಪಕ್ಕದ ಊರಿನಿಂದ ಸಿಡುಬು, ಚಿಕ್ಕಮ್ಮ, ದೊಡ್ಡಮ್ಮ ಮುಂತಾದ ಮಕ್ಕಳ ಕಾಯಿಲೆಗಳನ್ನು ಇವಳು ತಂದಿಡುತ್ತಾಳೆ. ಆಗ ಜನ ಈ ಅಣ್ಣಮ್ಮನ ಬಳಿಗೆ ಬಂದು ಬೇಡಿಕೊಂಡು, ಅವಳ ಗದ್ದುಗೆಗೆ ಮೊಸರನ್ನು ಹಾಕಿ ತಂಪು ಮಾಡುವ ಹರಕೆ ಹೊತ್ತು ಬೇಡಿಕೊಳ್ಳುತ್ತಾರೆ. ಮಕ್ಕಳ ಸಂಕಷ್ಟ, ತಾಯಂದಿರ ಅಳು ನೋಡಲಾಗದ ಇವಳು ಮನಕರಗಿ ೭ ದಿನ ಅಥವಾ ೧೪ ದಿನ ೨೧ ದಿನಗಳಲ್ಲಿ ಸಂಪೂರ್ಣ ಗುಣಪಡಿಸುತ್ತಾಳೆ. ಆಗ ತಾಯಂದಿರು ಬಹಳ ಭಕ್ತಿಯಿಂದ, ಪ್ರೀತಿಯಿಂದ ಇವಳಿಗೆ ಮನತುಂಬಿ ಹರಕೆ ತಂದು ಒಪ್ಪಿಸುವುದು ವಾಡಿಕೆ. ಅಂದಿನಿಂದ ಕಾಲದಿಂದ ಇಂದಿನವರೆಗೂ ಕಾಯಿಲೆ ಬಂದ ನಂತರ ಹಾಗೂ ಬರುವ ಮುನ್ನವೂ ಮುನ್ನೆಚ್ಚರಿಕೆಯಾಗಿ ಹುಟ್ಟಿದ ೩ ದಿನಕ್ಕೆ ಮಗುವನ್ನೂ ಕೆಲವರು ಹಸಿ ಬಾಣಂತಿ ಸಮೇತ ಕರೆತಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ. ಇಲ್ಲಿ ಭಕ್ತಿಯೋ, ಭಯವೋ ಆಚರಣೆಯೊಂದರ ಹಿಂದಿನ ಸಮಷ್ಟಿ ಪ್ರಜ್ಞೆ ಬಹಳ ಮುಖ್ಯವಾಗಿದೆ.

ಸುಮಾರು ೧೦ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ಈ ದೇವಾಲಯದಲಿ ಆಯತಾಕಾರದ ಗರ್ಭಗೃಹವಿದ್ದು ಗರ್ಭಗೃಹದ ನಡುವೆ ಉದ್ದವಾದ ಪೀಠದ ಮೇಲೆ ಸಪ್ತಮಾತೃಕೆಯರ ಪ್ರತೀಕವಾಹಿ ಏಳು ಸಣ್ಣ ಕಲ್ಲುಗಳನ್ನು ಸ್ಥಾಪಿಸಲಾಗಿದೆ. ಎರಡು ದೇವಿ ಶಿಲ್ಪಗಳಿದ್ದು ಚತುರ್ಭುಜೆಯಾದ ದೇವಿಯು ಕೈಯಲ್ಲಿ ಕ್ರಮವಾಗಿ ಖಡ್ಗ ತ್ರಿಶೂಲ, ಡಮರು ಮತ್ತು ಪಾನಪಾತ್ರೆಗಳಿವೆ. ಗರ್ಭಗೃಹದ ಮುಂದಿನ ನವರಂಗಿ, ಮುಖ ಮಂಟಪದ ಪದ ಭಾಗಗಳು ಅನಂತರದ ಸೇರ್ಪಡೆಗಳಾಗುತ್ತವೆ. ದೇವಸ್ಥಾನದ ಮುಂಭಾಗದಲ್ಲಿರುವ ಮೂರು ಅಡಿ ಎತ್ತರದ ಕಲ್ಲು ಇದ್ದು ಇದನ್ನು ದೇವೀ ಪ್ರತೀಕವೆಂದು ಪೂಜಿಸುತ್ತಾರೆ. ದೇವಾಲಯಗಳಲ್ಲಿ ದೇವಿಯ ಹಲವಾರು ಕಂಚಿನ ಮೂರ್ತಿಗಳಿದ್ದು ನಗರದ ನಾನಾ ಕಡೆ ದೇವಿಯನ್ನು ಪೂಜೆಗೆ ಕೊಂಡೊಯ್ಯುತ್ತಾರೆ.

ದೇಗುಲದ ಪ್ರವೇಶದ ಪ್ರಾಂಗಣದಲ್ಲಿ ಬಿಸಿಲುಮಾರಮ್ಮನ ಮೂರ್ತಿ ಇದೆ. ಮೊದಲು ಭಕ್ತರು ಈ ದೇವಿಯನ್ನು ಪೂಜಿಸಿ ನಂತರ ಒಳ ಬಂದು ಅಣ್ಣಮ್ಮನನ್ನು ಪೂಜಿಸುವ ಪರಿಪಾಠವಿದೆ ಎಂದು ತಿಳಿಸಿದ್ದಾರೆ. ಈ ದೇವಾಲಯದ ವಿಗ್ರಹಗಳನ್ನು ಇಂದಿಗೂ ಬೆಂಗಳೂರಿನ ಮೂಲ ದೇವಸ್ಥಾನದಿಂದ ಯಲಹಂಕ, ಅಲಸೂರು, ವೈಟ್ ಫೀಲ್ಡ್, ಪೀಣ್ಯ, ಕೆಂಗೇರಿ ಮತ್ತು ಕೋಣನ ಕುಂಟೆಯವರೆಗೂ ಉತ್ಸವವನ್ನು ಆಚರಿಸಲು ಕೊಂಡೊಯ್ಯುತ್ತಾರೆ.

ದೇವಾಲಯದ ಎಡ ಮತ್ತು ಬಲದಲ್ಲಿ ಬೆಂಗಳೂರಿನ ಮತ್ತು ಭಕ್ತರ ರಕ್ಷಣೆಗಾಗಿ ಆಂಜನೇಯನ ದೇವಸ್ಥಾನವನ್ನೂ ಸಹಾ ಈಗಾಗಲೇ ನಿರ್ಮಿಸಲಾಗಿತ್ತು. ದೇವಸ್ಥಾನದ ಕಲ್ಯಾಣಿ ಇತ್ತೆಂದೂ

ಮೊದಲು ಅಲ್ಲಿ ಮಿಂದು ನಂತರ ದೇವರ ದರ್ಶನ ಪಡೆಯುತ್ತಿದ್ದರಂತೆ. ಕಲ್ಯಾಣಿ ಇದ್ದ ಜಾಗದಲ್ಲಿ ನಾಗರಕಲ್ಲು, ಅಶ್ವತ್ಥ ವೃಕ್ಷ ಇತ್ತೆಂದ ಸ್ಥಳೀಯರ ಹೇಳಿಕೆ. ಅಣ್ಣಮ್ಮ ದೇಗುಲದ ಮುಂಭಾಗ ರಸ್ತೆಯ ಮತ್ತೊಂದು ಭಾಗದಲ್ಲಿ ಮತ್ತೊಂದು ಕಲ್ಲಿನ ಕಂಬವಿದ್ದು ಮೊದಲು ಇದನ್ನು ಸಿಡಿ ಆಡಿಸಲು ಬಳಸುತ್ತಿದ್ದರು.

ಕತೆ–೩ : ಈ ದೇಗುಲ ಇದ್ದ ಸುತ್ತ ಮುತ್ತಲಿನ ಪರಿಸರದಲ್ಲಿ ಯಥೇಚ್ಚವಾಗಿ ಹಣ್ಣುಗಳ ಮರಗಳಿದ್ದುದರಿಂದ ಈ ದೇವಿಗೆ 'ಹಣ್ಣಮ್ಮ' ಎಂದೂ ಹೆಸರು ಬಂತು. ಇದು ಕಾಲಕ್ರಮೇಣ ಅಣ್ಣಮ್ಮ ಆಯಿತು. ಇವಳು ತನ್ನ ೭ ಜನ ಅಕ್ಕ ತಂಗಿಯರೊಂದಿಗೆ ನಗರವನ್ನು ಕಾಯುತ್ತೇನೆ ಎಂದು ಅಶರೀರವಾಣಿಯಲ್ಲಿ ಹೇಳಿದುದರಿಂದ ಈಗ ಬೆಂಗಳೂರಿನ ದೇವತೆಯಾಗಿ ಸಹಸ್ರಾರು ವರ್ಷಗಳಿಂದ ನೆಲೆ ನಿಂತಳು ಎಂದು ನಂಬಿಕೆ. ಅಶರೀರವಾಣಿಯ ಮೂಲಕ ಮೂಲ ಅರ್ಚಕರಿಗೆ ವಿಷಯವನ್ನು ಅಣ್ಣಮ್ಮ ತಿಳಿಸಿದುದರಿಂದ ಅವರು ವಂಶಪಾರಂಪರ್ಯವಾಗಿ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ.

ಕತೆ–೪ : ಈ ದೇಗುಲದಲ್ಲಿ ಮೊದಲು ಒಂದು ನಾಗಸರ್ಪವು ನೆಲೆಸಿದ್ದು ಅದನ್ನು ಹಿಂದಿನ ಪೂರ್ವಜರು ಪ್ರತಿನಿತ್ಯ ನೋಡುತ್ತಿದ್ದರು ಆದರೆ ಅದು ಯಾವಾಗ ಹೇಗೆ ಬರುತ್ತದೆಂದು ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ.

ಇವರ ಇಲ್ಲಿನ ಆಚರಣೆ ಮತ್ತು ನಂಬಿಕೆಗಳು :

೧. ಮಕ್ಕಳು ಹುಟ್ಟಿದ ತಿಂಗಳೊಳಗೆ ಬಾಣಂತಿ ಮತ್ತು ಮಗುವನ್ನು ಕರೆತಂದು ತಾಯಿಯ ಮಡಿಲ್ಲಿ ಮಲಗಿಸಿ ಹಾಲೂಡಿಸಿದರೆ, ಮಗುವಿಕೆ ಶ್ರೇಯಸ್ಸು, ಮೊದಲು ಆವರಣದಲ್ಲಿನ ಬಿಸಿಲು ಮಾರಮ್ಮನಿಗೆ ಉಪ್ಪು, ಮೆಣಸು, ಮೊಸರು, ಎಳನೀರಿನಿಂದ ತಂಪಾಗಿಸಿ ನಂತರ ಒಳಗೆ ಬಂದು ಮಡಿಲಕ್ಕಿ ಸೀರೆಯನ್ನು ಹರಕೆಯಾಗಿ ನೀಡುತ್ತಾರೆ.

೨. ಈ ದೇಗುಲದಲ್ಲಿ ಹಿಂದೆ ೫೦ ವರ್ಷಗಳ ಹಿಂದೆ ಮಾಂಸಾಹಾರವನ್ನೂ ಹರಕೆಯ ರೂಪದಲ್ಲಿ ಮಾಡಿ ಸೇವಿಸುತ್ತಿದ್ದರಂತೆ. ಆದರೆ ಈಗ ಶುದ್ದ ಶಾಖಾಹಾರಿಯಾಗಿ ಬದಲಾಗಿದೆ.

೩. ರಾತ್ರಿಯ ಹೊತ್ತು ಇಲ್ಲಿಂದ ದೇವಿ ಸಂಚಾರ ಹೊರಟು ಇಡೀ ನಗರವನ್ನು ಸಂಚರಿಸಿ ಬೆಳಗಿನ ಜಾವ ಪುನಃ ಗುಡಿ ಸೇರಿಕೊಳ್ಳುತ್ತಿದ್ದಳೆಂದು, ಈಗಿನ ಅರ್ಚಕರ ಪೂರ್ವಿಕರು ಹೇಳಿರುವುದಾಗಿ ತಿಳಿಸಿ, ಅವಳ ಗೆಜ್ಜೆಯ ಸದ್ದು ಕೇಳಿದ ಅನುಭವವಾಗಿದೆ ಎಂದು ತಿಳಿಸುತ್ತಾರೆ.

೪. ಭಾನುವಾರ, ಶುಕ್ರವಾರ ಮಂಗಳವಾರದಂದು ರಾತ್ರಿ ದೇಗುಲದಲ್ಲಿ ಶುದ್ದಿಯಾದ ನಂತರ ದೇಗುಲದ ಒಳಗೆ ದೇವಿಯ ಎದುರಲ್ಲಿ ಒಂದು ಬೆಳ್ಳಿಯ ಪಾತ್ರೆಯಲ್ಲಿ ನೀರನ್ನೂ ಮತ್ತು ಹಣ್ಣನ್ನೂ ಇಡುವ ವಾಡಿಕೆ ಇದ್ದು ಹೀಗೆ ಇಟ್ಟ ಹಣ್ಣು ಮರುದಿನ ಸ್ವಲ್ಪ ಕಡಿಮೆಯಾಗಿರುವುದು ಕಂಡು ಬಂದಿದೆ ಎಂದು ನಂಬುತ್ತಾರೆ.

ಈಗ ಈ ದೇವಸ್ಥಾನದ ಉಸ್ತುವಾರಿಯನ್ನು ಮೂಲ ಗಾಣಿಗ ಅರ್ಚಕರ ವಂಶಸ್ಥರೇ ನಿರ್ವಹಿಸುತ್ತಿದ್ದು ಅವರ ಕುಟುಂಬದವರೇ ಸೇರಿ ಇಲ್ಲಿ ನವರಾತ್ರಿ ಉತ್ಸವಗಳನ್ನೂ ವಿವಿಧ ಪೂಜಾ ಕಾರ್ಯಗಳನ್ನು ಸಭೆ ಸೇರಿ ನಿರ್ವಹಿಸುತ್ತಾರೆ.

೪.೫. ಸಾಂಸ್ಕೃತಿಕ ಸ್ಥಿತ್ಯಂತರಗಳ ನಡುವೆ ಬೆಂಗಳೂರು ಕರಗ :

ಬೆಂಗಳೂರಿನ ನೆಲೆ ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿಯ ಪೂರ್ವ ಭಾಗಕ್ಕೆ ಇದ್ದು ವಿನ್‌ಸ್ಟನ್ ಚರ್ಚಿಲ್ ೧೮೯೫–೯೮ರ ಅವಧಿಯಲ್ಲಿ ಮೂರು ಬಾರಿ ಬೆಂಗಳೂರಿಗೆ ಬಂದು ನೆಲೆಸಿದ್ದರು. ಅವರ ಗ್ರಂಥವಾದ 'ಮೈ ಅರ್ಲಿ ಲೈಫ್'ನಲ್ಲಿ ಬೆಂಗಳೂರಿನ ವಾತಾವರಣ ಅತ್ಯುತ್ತಮವಾದದ್ದು. ಇದು ಸಮುದ್ರ ಮಟ್ಟಕ್ಕಿಂತ ೩೦೦೦ ಅಡಿಗಳಿಗಿಂತಲೂ ಹೆಚ್ಚು ಎತ್ತರದಲ್ಲಿದೆ ಎಂದೂ ತಿಳಿಸಿದ್ದಾರೆ. ಬೆಂಗಳೂರು ಮಹಾನನಗರದ ಭೂ ಮೇಲ್ಮೈನಲ್ಲಿ ಎರಡು ಲಕ್ಷಣಗಳು ಪ್ರಧಾನವಾಗಿ ಕಾಣುತ್ತವೆ. ಪೂರ್ವಭಾಗ ಅಲ್ಪ ಸ್ವಲ್ಪ ಏರಿಳಿತಗಳಿಂದ ಕೂಡಿದೆ. ಉನ್ನತ ಭಾಗ ಇಲ್ಲಿ ಹೆಬ್ಬಂಡೆಗಳು, ಶಿಲಾಚಾಚು ಹೆಚ್ಚು ಸಾಂದ್ರವಾಗಿ ಕಂಡುಬರುವುದಿಲ್ಲ. ಬೆಂಗಳೂರಿನ ಬಸವನಗುಡಿ ಬಡಾವಣೆಯ ದೊಡ್ಡ ಬಸವಣ್ಣ ಇರುವ ಹೆಬ್ಬಂಡೆಗಳ ನಡುವಿನಲ್ಲಿ ಶುದ್ದ ನೀರಿನ ಸಣ್ಣ ತೊರೆಯಾಗಿ ವೃಷಭಾವತಿ ನದಿ ಹುಟ್ಟುತ್ತದೆ ಎಂದು ಶಾಸನದಲ್ಲೂ ಉಲ್ಲೇಖ ಇದೆ.

ಇಂತಹ ಬೆಂಗಳೂರು ತನ್ನ ಉಗಮದ ಕಾಲದಿಂದ ಹಿಡಿದು ಇಂದಿನವರೆಗೆ, ಕೈಗಾರಿಕರಣ, ವಸಾಹಾತುಶಾಹಿ ಸಂಸ್ಕೃತಿ, ಆಧುನಿಕರಣ, ಜಾಗತಿಕರಣದಂತಹ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಬೆಂಗಳೂರಿನ ಸಂಸ್ಕೃತಿ ಒಳಗಾಗುತ್ತಲೇ ಬಂದಿದೆ. ಹಾಗೂ ಇದೊಂದು ನಿರಂತರ ಪ್ರಕ್ರಿಯೆಯಾಗಿ ಸ್ವೀಕರಣೆ, ನಿರಾಕರಣೆಗಳ ಸಾಂಸ್ಕೃತಿಕ ಸಂಘರ್ಷದ ನೆಲೆಯೊಂದಿಗೆ ಬೆಂಗಳೂರಿನ ಮೂಲ ಸೊಗಡು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೆಣಗಾಡುತ್ತಾ ಬಂದಿದೆ. ಈ ಕುರಿತು ಮಾನವ ಶಾಸ್ತ್ರಜ್ಞರು, ಚಿಂತನಶೀಲರು, ವಿದ್ವಾಂಸರು ಏನೆಲ್ಲಾ ಚರ್ಚೆ ಚಿಂತನೆಗಳನ್ನು ನಡೆಸಿದರೂ ಒಂದು ಏಕಪ್ರಕಾರವಾದ ತೀರ್ಮಾನಕ್ಕೆ ಬರಲು ಇಂದಿಗೂ ಸಾಧ್ಯವಾಗಿಲ್ಲ. "ಪ್ರಪಂಚ ಪ್ರಚಂಡ ರಭಸದಲ್ಲಿ ಮುನ್ನಡೆಯುತ್ತಿದೆ. ಅದು ಅದರ ಅಂತ್ಯದ ಸಾಮೀಪ್ಯಕ್ಕೆ ಧಾವಿಸುತ್ತಿದೆ." ಎರಡನೆಯ ಸಹಸ್ರಮಾನದ ಪ್ರಾರಂಭದ ವರ್ಷಗಳಲ್ಲಿ (ಕ್ರಿ.ಶ. ೧೦೧೪) ಇಂಗ್ಲೆಂಡಿನ ಯಾರ್ಕ್ ಪಟ್ಟಣದ ಚರ್ಚ್ ಒಂದರಲ್ಲಿ ಆರ್ಚ್ ಬಿಷಪ್ ಉಲ್ ಫೂಸ್ಟೂನ್, ಜ್ಞಾನೋಪದೇಶವನ್ನು ಬೋಧಿಸುವ ಪ್ರಸಂಗದಲ್ಲಿ ಆಡಿದ ಮಾತುಗಳು ಇವು. ಈ ಮಾತುಗಳು ಇವು. ಈ ಮಾತುಗಳು ಹಿಂದೆಂದಿಗಿಂತಲೂ ಮೂರನೆಯ ಸಹಸ್ರಮಾನದೊಂದಿಗೆ ಹೊಸ ಶತಮಾನವನ್ನು ಪ್ರವೇಶಿಸಿರುವ ಮನುಕುಲದ ಚರಿತ್ರೆಯ ಇಂದಿನ ಅಪೂರ್ವ ಸಂಕೀರ್ಣ ಸಂಕ್ರಮಣದ ಸಂಧರ್ಭವನ್ನು ಸಾರವತ್ತಾಗಿ ಸೆರೆ ಹಿಡಿಯುತ್ತದೆ. ಈ ನೆಲೆಯಲ್ಲಿ ನಿಂತು ಮಾನವನ ಕಳೆದ ಐದು ಸಾವಿರ ವರ್ಷಗಳ ಸಿಂಹಾವಲೋಕನದಲ್ಲಿ ತೊಡಗಿದರೆ, ಕೆಲವು ನಿರ್ಣಾಯಕ ಕಾಲಘಟ್ಟಗಳನ್ನು ಬದಲಾದ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಬಹುದು.

ಆಯಾ ಯುಗ ಮೌಲ್ಯಗಳ ನೆಲೆ ಸೆಲೆಗಳನ್ನು ಪ್ರತಿನಿಧಿಸುತ್ತಾ, ನಾಗರಿಕತೆ ಸಂಸ್ಕೃತಿಗಳನ್ನು ಉದಾತ್ತೀಕರಿಸುತ್ತಾ ಬಂದಿರುವ ಬೆಂಗಳೂರು ನಗರ ಜಿಲ್ಲೆಯ ಜನಪದ ಆಚರಣೆಗಳ ಅವಲೋಕನವನ್ನು ಈ ಸ್ಥಿತ್ಯಂತರದ ಹೊಸ್ತಿಲಲ್ಲಿ ನಿಂತು ಮಾಡುವುದು ಸವಾಲಿನನ ವಿಷಯವೇ ಸರಿ. ಮೂಲ ಸೊಗಡಿಗೆ ಜಾಗತೀಕರಣದ ಬಣ್ಣದ ಲೇಪನ ಮಾಡಿಕೊಂಡ ಸಾಮಾಜಿಕ ಆಚರಣೆಗಳು, ಕೆಲವು ಆಧುನೀಕರಣದ ಬೆಡಗಿಗೆ ಬೆರಗಾಗಿ ಮೂಲವನ್ನೇ ರೂಪಾಂತರಗೊಳಿಸಿಕೊಂಡು ಹೆಮ್ಮೆಯಿಂದ ಬೀಗುತ್ತಿರುವ ಧಾರ್ಮಿಕ ಆಚರಣೆಗಳು ಕೆಲವು. ಇವುಗಳ ನಡುವೆ ಬೆಂಗಳೂರಿನ ಕೆಲವು ಪ್ರಮುಖ ಆಚರಣೆಗಳು ಮಾತ್ರ ತನ್ನ ಮೂಲವನ್ನು ಇಂದಿಗೂ ಪ್ರತಿಬಿಂಬಿಸುತ್ತಾ ಕ್ರಿಯಾತ್ಮಕವಾಗಿ ಅಂದಿನಿಂದ ಇಂದಿನವರೆಗೂ ಜನರ ಜನಮಾನಸದಲ್ಲಿ ಹಾಗೂ ಆಚರಣೆಗಳ ರೂಪದಲ್ಲಿ ತಮ್ಮ ಜೀವಂತಿಕೆಯನ್ನು ಇಂದಿಗೂ ಉಳಿಸಿಕೊಂಡಿರುವುದನ್ನು ಕಾಣಬಹುದು. ಜಾತ್ರೆ ಎನ್ನುವ ಹೆಸರಿನಲ್ಲಿ ಈ ಹಬ್ಬ, ಆಚರಣೆಗಳು ಇಲ್ಲದಿದ್ದರೂ, ಲೋಕ ಪ್ರಸಿದ್ಧಿಯಾದ ಆಚರಣೆ, ಉತ್ಸವಗಳು ಬೆಂಗಳೂರಿಗರಿಗೆ ಚಿರಪರಿಚಿತ. ಅದರಲ್ಲಿ ಬಹಳ ಮುಖ್ಯವಾದುದು "ಬೆಂಗಳೂರು ಕರಗ". ಇದನ್ನು ದ್ರೌಪದಿ ಕರಗ ಎಂಬ ಹೆಸರಿನಿಂದಲೂ ಸಹಾ ಕರೆಯುತ್ತಾರೆ. ದ್ರೌಪದಿ ಮೂಲದ ಕರಗವು ಕುಂಭ ಪ್ರಾಧಾನ್ಯದ ದುರ್ಗೆಯ ಕಥೆಯನ್ನು ಹೇಳುತ್ತದೆ. ಇದರಲ್ಲಿ ಶಕ್ತಿದೇವತೆಯ ಆರಾಧನೆ, ಸ್ತ್ರೀ ಶಕ್ತಿಯ ಓಲೈಕೆ, ಮಾತೃದೇವತಾ ಪೂಜೆ ಅಡಗಿದೆ. ಅಗ್ನಿಯ ವರ ಪ್ರಸಾದದಿಂದ ಜನಿಸಿದ ದ್ರೌಪದಿ ವಹ್ನಿಕುಲ ಕ್ಷತ್ರಿಯರ ಅಥವಾ ತಿಗಳರ ಮನೆ ದೇವರು. ಇದು ಮುಖ್ಯವಾಗಿ ತಿಗಳ ಜನಾಂಗದವರು ಆಚರಿಸುವ ಹಬ್ಬ. ತಿಗಳರು ತೋಟಗಾರಿಕೆ ಕೃಷಿಕರು.

ಹಿನ್ನೆಲೆ : ನಾಡಪ್ರಭು ಕೆಂಪೇಗೌಡ ಬೆಂಗಳೂರು ನಗರ ನಿರ್ಮಾಣ ಮಾಡಿದಾಗ ಸುತ್ತ ಮುತ್ತ ಚದುರಿ ಹೋಗಿದ್ದ ತಿಗಳರನ್ನು ನಗರಕ್ಕೆ ಕರೆಸಿಕೊಂಡ ಎನ್ನುತ್ತಾರೆ. ತಿಗಳರು ನಗರಕ್ಕೆ ವಲಸೆ ಬಂದವರಲ್ಲ. ಸ್ಥಳೀಯರು ಎನ್ನುವುದೂ ಉಂಟು. ಬೆಂಗಳೂರು ನಗರ ನಿರ್ಮಾಣಕ್ಕಿಂತಲೂ ಹಿಂದಿನಿಂದಲೂ ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ಈ ತಿಗಳ ಜನಾಂಗವು ತೋಟಗಾರಿಕೆಯಲ್ಲಿ ಹೆಸರುವಾಸಿ. ವಿವಿಧ ವೃತ್ತಿ ಜನಾಂಗಗಳ ಆಧಾರದ ಮೇಲೆ ಬೆಂಗಳೂರು ನಗರದ ಪೇಟೆಗಳನ್ನು ನಿರ್ಮಾಣ ಮಾಡುವಾಗ ಕೆಂಪೇಗೌಡರು ತಿಗಳರ ಪೇಟೆಯನ್ನೂ ವಿಭಾಗೀಕರಿಸಿರುವುದುಂಟು.

ವಿಶೇಷವಾಗಿ ಕರ್ನಾಟಕ, ತಮಿಳುನಾಡುಗಳಲ್ಲಿ ನಡೆಯುವ ಈ ಉತ್ಸವ ಕರ್ನಾಟಕದ ಕೋಲಾರ, ಮಾಲೂರು ಹಾಗೂ ಬೆಂಗಳೂರು ಜಿಲ್ಲೆಯಲ್ಲಿಯೂ ನಡೆಯುತ್ತದೆ. ಹಾಗೂ ಸಾಮ್ಯತೆಗಳಿವೆ. ಈ ಎಲ್ಲೆಡೆ ಈ ಕರಗವನ್ನು ಕುರಿತು ಇರುವ ಜನಪದ ಕಥೆಗಳು ಕುತೂಹಲವನ್ನು ಮೂಡಿಸುತ್ತವೆ.

ಕಥೆ ೧ : ಅಜ್ಞಾತವಾಸದಲ್ಲಿದ್ದ ಪಾಂಡವರು ದ್ರೌಪದಿಯನ್ನು ಸ್ವಯಂವರದಲ್ಲಿ ಗೆದ್ದಾಗ ಅವಳು ತನ್ನ ತಲೆಮೇಲೆ ಕಲಶವನ್ನು ಧರಿಸಿದ್ದಳು. ಮಾರುವೇಷದಲ್ಲಿದ್ದ ಪಾಂಡವರ ನಿಜರೂಪ ಗೊತ್ತಾದ ಮೇಲೆ ದ್ರುಪದ ರಾಜ ವಿಜೃಂಭಣೆಯಿಂದ ಆಕೆಯನ್ನು ಪಾಂಡವರೊಂದಿಗೆ ವಿವಾಹ ಮಾಡಿ ಕೊಟ್ಟನು. ಇದರ ನೆನಪಿಗೆ ಕರಗ ಉತ್ಸವ ಆಚರಿಸಲಾಗುತ್ತದೆ.

ಕಥೆ ೨ : ದ್ರೌಪದಿ ಆದಿಶಕ್ತಿ ಸ್ವರೂಪಿಣಿ, ಪಾಂಡವರ ರಾಜ್ಯಭಾರವೆಲ್ಲ ಮುಗಿದು ಅವರು ಸ್ವರ್ಗದ ಕಡೆಗೆ ಪ್ರಯಾಣ ಮಾಡುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ದ್ರೌಪದಿ ಮೂರ್ಛಿತಳಾಗಿ ಬೀಳತ್ತಾಳೆ. ಆಕೆ ಸತ್ತು ಹೋದಳೆಂದು ಭಾವಿಸಿ ಪಾಂಡವರು ಮುಂದೆ ಹೊರಟು ಹೋಗುತ್ತಾರೆ. ಸ್ವಲ್ಪ ಸಮಯದ ನಂತರ ಅವಳಿಗೆ ಎಚ್ಚರವಾಗಿ ಗಂಡಸರು ಅಲ್ಲಿರುವುದಿಲ್ಲ ಬದಲಾಗಿ ತಿಮಿರಾಸುರನೆಂಬ ರಾಕ್ಷಸನೊಬ್ಬ ಅವಳ ಶೀಲ ಹರಣಕ್ಕೆ ಪ್ರಯತ್ನಿಸುತ್ತಿದ್ದ. ಆಗ ದ್ರೌಪದಿಯು ಆದಿ ಶಕ್ತಿಯ ರೂಪ ತಾಳಿ ತನ್ನ ತಲೆಯ ಮೇಲೆ ಕಲಶ ಧರಿಸಿ ಆತನನ್ನು ಕೊಂದಳು. ಇದರ ನೆನಪಿಗಾಗಿ ಕರಗ ಉತ್ಸವ ಆಚರಿಸಲ್ಪಡುತ್ತದೆ.

ಕಥೆ ೩ : ಪಾಂಡವರು ದ್ರೌಪದಿಯ ಪಾವಿತ್ರ್ಯವನ್ನು ಪರೀಕ್ಷೆ ಮಾಡಲು ಪೋತಲು ಎಂಬ ರಾಜನಿಂದ ಕರಗವನ್ನು ತಂದು ಅವಳಿಗೆ ಕೊಟ್ಟರು. ಆಕೆ ಅರಿಶಿನದ ಬಟ್ಟೆಯನ್ನು ಉಟ್ಟು ಕರಗವನ್ನು ತಲೆಯ ಮೇಲೆ ಹೊತ್ತು ಕೈಯಲ್ಲಿ ವೀರಚಾವಟಿಗೆಯನ್ನು ಹಿಡಿದು ಊರೆಲ್ಲಾ ಸುತ್ತಾಡಿ ಕೊನೆಗೆ ಅಗ್ನಿ ಕುಂಡವನ್ನು ಪ್ರವೇಶಿಸಿ ಯಾವುದೇ ಅಪಾಯವಿಲ್ಲದೇ ಹೊರಬಂದಳು. ಇದರ ಪ್ರತೀಕವಾಗಿ ಕರಗ ನಡೆಯುತ್ತದೆ.

ಕಥೆ ೪ : ಈ ಕರಗಕ್ಕೆ 'ಧರ್ಮರಾಯನ ಕರಗ' ಎಂದು ಹೆಸರು ಬರಲು ಸ್ವಾರಸ್ಯವಾದ ಜನಪದ ಕಥೆಯೊಂದು ರೂಢಿಯಲ್ಲಿದೆ. ಪಾಂಡವರು ವನವಾಸವನ್ನು ಮುಗಿಸಿ ಹಿಂದಿರುಗುವಾಗ ದಾರಿಯಲ್ಲಿ ಬಡವನೊಬ್ಬ ಸೌತೆಕಾಯಿ ಗಿಡಗಳನ್ನು ಬೆಳೆಸಿ ಅವುಗಳನ್ನು ಕಾಯುತ್ತಿದ್ದನು. ಮುಂದೆ ಹೋಗುತ್ತಿದ್ದ ಭೀಮ ಅಹಂಕಾರದಿಂದ ಸೌತೆ ಕಾಯಿ ಗಿಡಗಳನ್ನು ಕಾಲಿನಿಂದ ಒದ್ದು ಬುಡ ಸಮೇತ ಕಿತ್ತು ಗಿಡಗಳನ್ನು ಹೆಗಲ ಮೆಲೆ ಹಾಕಿಕೊಂಡು ಹೊರಟನು. ಬಡವನ ಕಣ್ಣೀರನ್ನು ಕಂಡು ಮರುಗಿದ ಧರ್ಮರಾಯನು ಭೀಮನಿಗೆ ಬುದ್ದಿ ಹೇಳಿ ಸೌತೆಕಾಯಿ ಗಿಡಗಳನ್ನು ತಾನು ತೆಗೆದುಕೊಂಡು ಕೈಯಾರೆ ಗುಳಿ ತೋಡಿ ನೆಟ್ಟು ಮುಂದೆ ಹೋದನು. ಆಗ ಸೌತೆಕಾಯಿ ಒಂದಕ್ಕೆ ಹತ್ತಾಗಿ, ನೂರಾಗಿ ಸಾವಿರ ಲಕ್ಷವಾಗಿ ಇಮ್ಮಡಿಸಿತು'.[೧೧]

ತೋಟಗಾರಿಕೆಯಲ್ಲಿ ನೈಪುಣ್ಯ ಸಾಧಿಸಿರುವ ತಿಗಳ ಜನಾಂಗಕ್ಕೂ ಪಾಂಡವರಿಗೂ ಇರುವ ಸಂಬಂಧದ ಬಗ್ಗೆ ಮೇಲಿನ ಜನಪದ ಕಥೆಯು ಉತ್ತಮ ಸಾಕ್ಷ್ಯ ಒದಗಿಸುತ್ತದೆ. ವಾಸ್ತವವಾಗಿ ಜನಪದ ಮನೋಧರ್ಮವೇ ಅಂತಹುದು. ತಮ್ಮ ಬಗ್ಗೆ ಪ್ರೀತಿ ತೊರಿದ, ಕಾರುಣ್ಯ ವ್ಯಕ್ತಪಡಿಸಿದ, ಬದುಕಲು ಕಲಿಸಿದವರ ಮೆಲೆ ಅವರದ್ದು ಅದಮ್ಯ ಪ್ರೀತಿ ಆದ್ದರಿಂದಲೇ ಸತ್ತುಳ್ಳ ಪಾಂಡವರು ಸತ್ತರೆ ಎನಬೇಡಿ! ಸತ್ತಾರೆ ಧರ್ಮ ಉಳಿಯೋದು" ಎಂದು ಹಾಡಿದ್ದಾರೆ. ಈ ಕಾರಣಕ್ಕೆ ಶಕ್ತಿಯ ಆರಾಧನೆಯಾದರೂ ಕರಗಕ್ಕೆ ಧರ್ಮರಾಯನ ಕರಗ ಎಂದು ಕರೆದಿದ್ದಾರೆ.

ಈ ಕಥೆಗಳ ಮೂಲ ಹಾಗೂ ವಾಸ್ತವಾಂಶಗಳು ಮೇಲ್ನೋಟಕ್ಕೆ ಭಿನ್ನ ಭಿನ್ನವಾದರೂ, ಕಾಲಾನುಕ್ರಮೇಣ ಬೇರೆ ಬೇರೆ ರೀತಿಗಳಲ್ಲಿ ರೂಪಾಂತರಗೊಂಡರೂ ಇವುಗಳ ಹಿಂದಿನ ಆಶಯ ಒಂದೇ ಐತಿಹಾಸಿಕ ಕಾಲದ ಘಟನೆಗಳು. ಪುರಾಣಗಳಲ್ಲಿ ರೂಪಿತವಾಗಿರುವ ಆಕಸ್ಮಿಕ ಘಟನೆಗಳು

ಕೂಡಾ ಹಲವಾರು ದೇವತೆಗಳನ್ನು ಸೃಷ್ಟಿಸಿರಬಹುದು. ಸಮಾಜದ ಬೆಳವಣಿಗೆಯ ಮೊದಲ ಹಂತದಲ್ಲಿ ಸ್ತ್ರೀ ಮಾನ್ಯತೆಯು ಕೃಷಿಯ ಜೊತೆಗೆ ಹೊಂದಿರಬಹುದಾದ ಸಂಬಂಧವನ್ನು ಈ ಕಥೆಯಲ್ಲಿ ಪ್ರತಿಪಾದಿತವಾಗಿರುವುದನ್ನು ಸ್ಪಷ್ಟವಾಗಿ ಗಮನಿಸಬಹುದು.

ವಹ್ನಿಕುಲ :

ಕರಗ ಸಂಬಂಧವಾದ ಕಥೆಯು ವಹ್ನಿ ಪುರಾಣದಲ್ಲಿ ಕಂಡುಬರುತ್ತದೆ. ಬೆಂಗಳೂರಿನ ಧರ್ಮರಾಜ ದೇವಾಲಯದ ಪುರೋಹಿತರ ಬಳಿಯಲ್ಲಿ ಈ ವಹ್ನಿ ಪುರಾಣದ ಓಲೆಯ ಪ್ರತಿಯಿದೆ. ಈ ವಹ್ನಿ ಪುರಾಣ ಮಹಾ ಪುರಾಣವಾದ ಅಗ್ನಿ ಪುರಾಣದ ಉಪಪುರಾಣವೆಂದು ಹೇಳಿದ್ದರೂ ಈ ಗ್ರಂಥ ಸಂಸ್ಕೃತ ಮಿಶ್ರವಾದ ತಮಿಳಿನಲ್ಲಿ ರಚಿತವಾಗಿದೆ. 'ವಹ್ನಿ' ಎಂಬುವವನು ಒಬ್ಬ ರಾಜನೆಂದು, ಅವನಿಂದ ವಹ್ನಿಕುಲ ಕ್ಷತ್ರಿಯರಾದರೆಂದೂ, ಆ ವಂಶದಲ್ಲಿ ಈಶ್ವರಾಂಶದಿಂದ ಹುಟ್ಟಿದ ನಂದಿ ಪೋತರಾಜನು ಪಾಂಡವರ ಸಹೋದರಿಯಾದ ಮಾದ್ರಿಯ ಮಗಳಾದ ಶಂಭೋದರಿಯನ್ನು ಮದುವೆಯಾಗಿ ಪಲ್ಲವ ಕುಲವನ್ನು ಪ್ರಚಾರ ಮಾಡಿದನೆಂದು ಈ ಪುರಾಣವು ಹೇಳುತ್ತದೆ. ಈ ನಂದಿ ಪೋತರಾಜನು ಬಿಲ್ವ ಪತ್ರೆಗಳನ್ನೆಲ್ಲ ಭಕ್ಷಿಸುತ್ತಿದ್ದ, ಒಂದು ಮೇಕೆಯನ್ನೂ ಸಂಹರಿಸಿದನು. ಈ ಪೋತರಾಜನ ಮುಂದೆ ಅರ್ಜುನನು ಸ್ತ್ರೀ ವೇಷದಲ್ಲಿ ಕರಗವನ್ನು ತಲೆಯ ಮೇಲೆ ಧರಿಸಿ ನೃತ್ಯ ಮಾಡಿದನು. ಆಗ ಭೀಮನು ಸಪ್ತ ಪ್ರಾಕಾರ ಪುರಿಯನ್ನು ಬೇಧಿಸಿದನು. ಕರಗದಲ್ಲಿ ಮೂರು ಕಲಶ ಅಥವಾ ತ್ರಿಗಳನೆಂಬ ರಾಕ್ಷಸನನ್ನು ಸಂಹರಿಸಿದುದರಿಂದ ತ್ರಿಗಳ, ತಿಗುಳ ಎಂಬ ಹೆಸರು ಬಂದಿತೆಂದು ಹೇಳಿದೆ. ಈ ತಿಗುಳರು ತಮಿಳುನಾಡಿನ ಸೋಮನಾಥ ಪುರದಿಂದ ಯಲಹಂಕ ಕೆಂಪೇಗೌಡನ ಕಾಲದಲ್ಲಿ ಕರ್ಣಾಟಕಕ್ಕೆ ಬಂದಾಗ ಕರಗ ಪೂಜೆಯನ್ನು ತಂದರು.

ಈ ಪುರಾಣ ಕಥೆಯಲ್ಲಿ ಅನೇಕ ಅಸಂಬದ್ಧವಾದ ಅಂಶಗಳಿರುವುದರಿಂದ ವಹ್ನಿ ಪುರಾಣದ ಮೂಲ ಪ್ರತಿಯನ್ನು ಶೋಧಿಸಿ ಪ್ರಕಟಿಸುವುದು ಅಗತ್ಯವಾಗಿದೆ. ನಂದಿ ಪೋತವರ್ಮ ಎಂಬುದು ಪಲ್ಲವ ರಾಜ ವಂಶಾವಳಿಯ ಇಬ್ಬರು ರಾಜರ ಹೆಸರಾಗಿದೆ. 'ನಂದಿಕ್ಕಳಂಬಕಂ' ಎಂಬ ತಮಿಳು ಗ್ರಂಥದಲ್ಲಿ ಪ್ರಶಂಸಿತನಾದ ನಂದವರ್ಮ ನು ಕ್ರಿ.ಶ. ೯ನೇ ಶತಮಾನದಲ್ಲಿ ಪ್ರಸಿದ್ಧನಾಗಿದ್ದನು. ಮಹಾಭಾರತದ ಕಥೆಗಳನ್ನು ಈ ನಂದಿವರ್ಮನಿಗೆ ಅನ್ವಯಿಸಿ ಪುರಾಣಗಳನ್ನು ರಚಿಸಲ್ಪಟ್ಟಿರಬೇಕು.

ಧರ್ಮರಾಯ ಸ್ವಾಮಿ ದೇವಾಲಯ :

ಪೇಟೆಯ ಆವರಣದ ಪೂರ್ವ ಪ್ರದೇಶದಲ್ಲಿ ಕಂಡು ಬರುವ ಪ್ರಮುಖವಾದ ಧರ್ಮರಾಯ ಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದೆ. 'ಬೆಂಗಳೂರಿನ ಕರಗ' ಎಂದು ಪ್ರಸಿದ್ಧವಾದ ವಾರ್ಷಿಕ ಆಚರಣೆಯ ಕೇಂದ್ರ ಸ್ಥಾನವಾದ ಧರ್ಮರಾಯ ಸ್ವಾಮಿ ದೇವಾಲಯವು ಶಕ್ತಿ ಆರಾಧನೆಯ ಅಥವಾ ದ್ರೌಪದಿ ಆರಾಧನೆಯ ಕ್ಷೇತ್ರವಾಗಿದೆ. ಈ ದೇವಾಲಯವನ್ನು ಇತ್ತೀಚಿನ

ವರ್ಷಗಳಲ್ಲಿ ಸಂಪೂರ್ಣವಾಗಿ ನವೀಕರಿಸಲಾಗಿದೆ. ಇದು ಗರ್ಭಗುಡಿ, ಅಂತರಾಳ, ಮುಖಮಂಟಪಗಳಿಂದ ಕೂಡಿದೆ. ಈ ಗುಡಿಯಲ್ಲಿ ದ್ರೌಪದಿ, ಅರ್ಜುನ, ಭೀಮ, ನಕುಲ ಸಹದೇವ, ಕೃಷ್ಣ ಮತ್ತು ಪೋತರಾಜನ ಲೋಹದ ವಿಗ್ರಹಗಳಿವೆ. ಅಲ್ಲದೆ ಗರ್ಭಗುಡಿಯಲ್ಲಿ ಆದಿಶಕ್ತಿ ಮತ್ತು ಧರ್ಮರಾಯನ ಶಿಲ್ಪಗಳಿವೆ. ಹೊರಾಂಗಣದಲ್ಲಿ ಧ್ವಜ ಸ್ತಂಭವಿರುವುದು. ಈ ಧ್ವಜ ಸ್ತಂಭವು ಪಟ್ಟಿಕೆಗಳಿಂದ ಕೂಡಿದ ಪೀಠ, ಅದರ ಮೇಲೆ ಆಯತ ಮತ್ತು ವೃತ್ತಾಕಾರದ ಕಂಭ, ಕಾಂಡದಿಂದ ಕೂಡಿದೆ. ಆಯತಾಕಾರದ ಭಾಗದಲ್ಲಿ ಸ್ಥಾನಿಕ ಲಕ್ಷ್ಮಿ, ಮಹಿಷಾಸುರ ಮರ್ದಿನಿ ಶಿಲ್ಪಗಳಿವೆ. ಕಮಲದ ಮೇಲೆ ಕುಳಿತಿರುವ ಸ್ಥಾನಿಕ ಲಕ್ಷ್ಮಿಯ ಶಿಲ್ಪವು ಇಪ್ಪತ್ತನೇ ಶತಮಾನದ ಕ್ಯಾಲೆಂಡರ್‌ಗಳಲ್ಲಿ ಕಾಣುವ ಲಕ್ಷ್ಮಿಯ ಚಿತ್ರಗಳಂತೆ ಇದೆ. "ಕಂಬದ ವೃತ್ತಾಕಾರದ ಕಾಂಡದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಕೆತ್ತಲಾಗಿದೆ. ಎರಡು ಬದಿಗಳಲ್ಲಿ ಕಿರೀಟಗಳುಳ್ಳ ಪುರುಷರ ಮುಖಗಳನ್ನು ರಚಿಸಲಾಗಿದೆ. ಬಲಿಪೀಠದ ಪಕ್ಕದಲ್ಲಿ ನೆಟ್ಟಿರುವ ಕಲ್ಲಿನಲ್ಲಿ ದಂಪತಿಗಳೀರ್ವರು ಕಮಂಡಲಗಳನ್ನು ಹಿಡಿದು ನಿಂತಿರುವ ಶಿಲ್ಪವಿದೆ. ಈ ಶಿಲ್ಪಗಳಲ್ಲಿಯ ಉಡುಪಿನ ಶೈಲಿ ಹಾಗೂ ಶಿಲ್ಪಗಳ ಶೈಲಿಯನ್ನು ಗಮನಿಸಿದರೆ ಇವು ಇತ್ತೀಚಿನ ಶಿಲ್ಪವೆಂದೇ ಹೇಳಬಹುದು. ದಂಪತಿಗಳ ಶಿಲ್ಪದ ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ನಂದಿಯ ಶಿಲ್ಪವನ್ನು ಕೆತ್ತಲಾಗಿದೆ. ಇವುಗಳೆರಡನ್ನೂ ಒಳಗೊಂಡಂತೆ ವರ್ತುಲಾಕಾರದ ಕಮಾನಿನ ಅಲಂಕಾರವಿದೆ."[೨]

ಕರಗದ ಸ್ಥಳ ಮತ್ತು ಸಮಯ :

ಕರಗ ಎಂದರೆ ಮಣ್ಣಿನ ಗಡಿಗೆ ಎಂದರ್ಥ. ಕರಗಕ್ಕೆ ಕಳಶ ಎಂಬ ಅರ್ಥವೂ ಇದೆ. ಮೂರು ಬೇರೆ ಬೇರೆ ಕಳಶಗಳನ್ನು ಸೇರಿಸಿ ಒಂದಾಗಿ ಮಾಡಿ, ಅದರಲ್ಲಿ ಶಕ್ತಿಯನ್ನು ಆವಾಹಿಸಿ ಈ ಕರಗವನ್ನು ಕರಗತ ಮಾಡಿಕೊಂಡು ಶಕ್ತಿ ಕ್ಷೇತ್ರವನ್ನೆಲ್ಲಾ ಸುತ್ತಿಕೊಂಡು ಸೀಮೋಲ್ಲಂಘನ ಮಾಡುವವರೆಗೂ ಮೆರೆಯಿಸುವುದರಿಂದ ಈ ಹೆಸರು ಬಂದಿತು. ಬೆಂಗಳೂರಿನ ಅಲಸೂರು ಪೇಟೆಯಲ್ಲಿರುವ ಧರ್ಮರಾಯನ ದೇವಸ್ಥಾನ ಕರಗ ಉತ್ಸವದ ಕೇಂದ್ರ ಸ್ಥಾನ.

ಆಚರಣಾ ವಿಧಿ ವಿಧಾನಗಳು :

ಕರಗ ಪೂಜೆ ಚೈತ್ರ ಶುದ್ದ ಸಪ್ತಮಿಯ ದಿನ ಚಂದ್ರೋದಯ ಸಮಯದಿಂದ ಆರಂಭವಾಗುತ್ತದೆ. ಚೈತ್ರಮಾಸದಲ್ಲಿ ಒಂಬತ್ತು ದಿನಗಳ ಕಾಲ ಕರಗದ ವಿವಿಧ ಉತ್ಸವಗಳು ಜರುಗುತ್ತವೆ. ಶುಕ್ಲ ಪಕ್ಷದ ಸಪ್ತಮಿಯ ರಾತ್ರಿ ಧರ್ಮರಾಯನ ದೇವಸ್ಥಾನದ ಮುಂದೆ ಆದಿಶಕ್ತಿಯು ಚಾಚಿದ ನಾಲಗೆಯ ವಿನ್ಯಾಸದ ಧ್ವಜಾರೋಹಣದೊಂದಿಗೆ ಆರಂಭವಾಗುತ್ತದೆ. ಧ್ವಜಸ್ಥಂಭ ೩೩ ಹಸ್ತ ಪ್ರಮಾಣವಾಗಿದ್ದು, ಅದರ ಶಿಖೆಯು ಅರಿಸಿನ ವಸ್ತ್ರದಿಂದಲೂ, ಮಧ್ಯಭಾಗ ಕಂಕಣ ಯಜ್ಞೋಪವೀತಗಳಿಂದಲೂ, ಪಾದಭಾಗ ಸುವರ್ಣದಿಂದಲೂ ಅಲಂಕೃತವಾಗಿರುತ್ತದೆ. ನೂರೆಂಟು ಗಿಣ್ಣುಗಳಿಂದ ಕೂಡಿದ ಬಿದಿರಿನ ಬೊಂಬು ಈ ಧ್ವಜ. ಪುರೋಹಿತರು ಹಾಲು ನೀರಿನಿಂದ ಅದನ್ನು ತೊಳೆದು ಅರಿಶಿನ, ಕುಂಕುಮ, ಗಂಧ, ಹೂಗಳಿಂದ ಪೂಜಿಸಿ ಗುಡಿಯ ಮುಂದೆ

ನಿಲ್ಲಿಸುವರು. ಅದರ ತುದಿಗೆ ಅರಿಶಿನದ ಬಟ್ಟೆಯನ್ನು ಕಟ್ಟಲಾಗುವುದು. ಹತ್ತು ದಿನ ನಡೆಯುವ ಪೂಜೆಯಲ್ಲಿ ಗೌಡ, ಗಣಾಚಾರಿ, ಪೋತರಾಜ, ತಂಗ ಪೂಜಾರಿ, ದುರ್ಗಾಪೂಜಾರಿ, ವೀರಕುಮಾರರು, ಭಾಂಕಾದಾಸ ಎಂಬುವವರು ಮುಖ್ಯರು. ಇವರಲ್ಲಿ ಕುಲಸ್ಥರಿಂದ ನೇಮಿಸಲ್ಪಟ್ಟ ಗೌಡನು ಯಜಮಾನನಾಗಿರುವನು. ಗಣಾಚಾರಿಯು ವಹ್ನಿ ಕುಲದವರಲ್ಲಿ ಅಗ್ರನಾಗಿರುವವನು. ಪೋತರಾಜನು ವ್ರತವನ್ನು ರಕ್ಷಿಸುವ ಕೆಲಸವನ್ನು ಮಾಡುತ್ತಾರೆ. ಕರಗ ಪೂಜಾರಿಯು ದೇವಿ ಪೂಜಕನಾಗಿರುತ್ತಾನೆ. ನೂರೆಂಟು ಕುಲದ ವೀರಕುಮಾರರು ಅಲಗು ಸೇವೆಯನ್ನು ಮಾಡುತ್ತಾರೆ. ಈ ವೀರಕುಮಾರರು ಅಲಗು ಸೇವೆ ಮಾಡಲು ಅಂದಿನಿಂದಲೂ ದೀಕ್ಷೆಯನ್ನು ತೆಗೆದುಕೊಂಡು ಒಂಬತ್ತು ದಿನಗಳ ನಿಯಮ ನಿಷ್ಠೆಗಳಿಂದ ಇರುತ್ತಾರೆ. ಇವರು ಸುಮಾರು ಮುನ್ನೂರು ಮಂದಿಗಳಿಗಿಂತಲೂ ಹೆಚ್ಚು ವೀರಕುಮಾರರು ಇರುವುದುಂಟು. ಇವರು ನಿತ್ಯವೂ ಒಂಬತ್ತು ಕೊಳಗಳಲ್ಲಿ ಮೀಯುವ ನಿಯಮವಿರುತ್ತದೆ.

ಧ್ವಜಾರೋಹಣದ ಐದನೆಯ ದಿನ ಆರತಿ ದೀಪವನ್ನು ಅರ್ಪಿಸುವ ಕಾರ್ಯಕ್ರಮ. ಅಂದು ಹೆಂಗಸರು ಮಡಿಯುಟ್ಟು ಅಕ್ಕಿಯ ತಂಬಿಟ್ಟು ಮಾಡಿ ಅದರಲ್ಲಿ ದೀಪಗಳನ್ನಿರಿಸಿ ಹೂವುಗಳಿಂದ ಅಲಂಕರಿಸಿ, ತಲೆಯ ಮೇಲೆ ಹೊತ್ತು ದೇವಸ್ಥಾನದಿಂದ ಹೊರಟು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಸಾಗಿ ಮತ್ತೆ ದೇವಸ್ಥಾನಕ್ಕೆ ಹಿಂದಿರುಗಿ ಪೂಜೆ ಸಲ್ಲಿಸುತ್ತಾರೆ. ದೀಪಾರತಿ ಉತ್ಸವದಲ್ಲಿ ಸಿದ್ದಾಪುರ, ಮಾವಳ್ಳಿಯ ಗರಡಿ ಮನೆಯವರು ಮೆರವಣಿಗೆಯಲ್ಲಿ ಪಾಲ್ಗೊಂಡು ದೊಣ್ಣೆ ವರಸೆ, ಕತ್ತಿ ವರಸೆ, ಬಿಜಲಿ ವರಸೆ, ಬೆಂಕಿ ಭರಾಟೆಗಳನ್ನು ಪ್ರದರ್ಶಿಸುತ್ತಾರೆ. ಅದರ ಮಾರನೆಯ ದಿನ ರಾತ್ರಿ ಅಂದರೆ ಕರಗದ ಆಚರಣೆ ಆರಂಭವಾದ ಆರನೆಯ ದಿನ ತ್ರಯೋದಶಿಯ ತಿಥಿಯ ರಾತ್ರಿ ಹಸಿ ಕರಗದ ಉತ್ಸವ ಅದು ಶಕ್ತಿಯನ್ನು ಆಹ್ವಾನಿಸುವ ದಿನ.

ಕರಗ ಪೂಜಾರಿಯು ವೀರಕುಮಾರರೊಡನೆ ಪೂರ್ವ ದಿಕ್ಕಿಗೆ ಗಮನಿಸಿ ಸಂಪಂಗಿ ಕೆರೆಯಲ್ಲಿ ಸ್ನಾನ ಮಾಡಿ ಅಲ್ಲಿನ ದೇವಾಲಯದಲ್ಲಿ ಹಸಿ ಕರಗವನ್ನು ಸರ್ವಾಕರ್ಷಿಣೀ ಯಂತ್ರದಲ್ಲಿಟ್ಟು ದೇವಿಗೆ ರಹಸ್ಯ ಪೂಜೆ ಮಾಡುವನು. ಒಂದು ನಿರ್ದಿಷ್ಟ ಸ್ಥಳದೊಳಗೆ ಇರುವ ಗುಡಾರದೊಳಗೆ ಪೂಜಾರಿಗಳು ಮಾತ್ರ ಹಸಿಕರಗವನ್ನು ಪೂಜಿಸಿ ಅದನ್ನು ಬಟ್ಟೆ ಹಾಗೂ ಹೂಗಳಿಂದ ಅಲಂಕರಿಸಿ ಮೆರವಣಿಗೆಗೆ ಸಿದ್ದ ಮಾಡುವರು. ವಹ್ನಿ ಪುರಾಣದಂತೆ ದೇವಿಗೆ ಸಪ್ತಪ್ರಾಕಾರಪುರೀ (ಮಾಳಿ ದೇವಿ) ಎಂದು ಹೆಸರು. ಕರಗದಲ್ಲಿ ದೇವಿಯ ಚಿನ್ನದ ವಿಗ್ರಹವಿರುತ್ತದೆ. ಕಳಶದಲ್ಲಿ ಶಕ್ತಿಯ ಅವಿರ್ಭಾವ ಉಂಟಾದ ಮೇಲೆ ಕರಗವು ಪೂಜಾರಿಯ ಹಸ್ತಕ್ಕೆ ಬರುತ್ತದೆ, ಅನಂತರ ಗುರು, ಗೌಡ, ಗಣಾಚಾರಿ ಮುಂತಾದವರಿಗೆ ಮರ್ಯಾದೆಗಳು ನಡೆದು ಕರ್ಪೂರದಾರತಿ ಆಗುತ್ತದೆ. ಕರಗದ ಪೂಜಾರಿ ಸೀರೆಯುಟ್ಟು ಹೂಗಳನ್ನು ಮುಡಿದು (ಪೂಜಾರಿ ದ್ರೌಪದಿಯ ಸಂಕೇತವಾದ್ದರಿಂದ ಸೀರೆ ಉಡಲೇಬೇಕೆಂಬ ನಿಯಮವಿರುತ್ತದೆ). ಘಂಟಾ ಪೂಜಾರಿಯು ಸ್ತೋತ್ರ ಮಾಡುತ್ತಿರಲು ವೀರಕುಮಾರರು ಅಲಗು ಸೇವೆ ಮಾಡುತ್ತಾರೆ. ಅಲ್ಲಿ ಕೊರವಂಜಿ ನೃತ್ಯ

ಕೂಡಾ ನಡೆಯುತ್ತದೆ. ಪೂಜಾರಿಯು ಕೂಡಾ ನೃತ್ಯದಲ್ಲಿ ಭಾಗವಹಿಸುತ್ತಾನೆ. ಮೂರು ಸಲ ನಮಸ್ಕಾರ ಮಾಡಿ ಕರಗ ಪೂಜಾರಿ ಓಡಲು ಪ್ರಾರಂಭಿಸುತ್ತಾನೆ. ವೀರಕುಮಾರರು ಕೂಗುತ್ತಾ ಕತ್ತಿಗಳಿಂದ ತಮ್ಮ ಎದೆಗೆ ಹೊಡೆದುಕೊಳ್ಳುತ್ತಾ ಮಂತ್ರ, ಬೆತ್ತ, ಚಾಕುಗಳನ್ನು ಹಿಡಿದು ಪೂಜಾರಿಯನ್ನು ಸುತ್ತುಗಟ್ಟಿಕೊಂಡು ಓಡಿ ಬರುವರು. ಮಾಳೀ ಸ್ಥಳಕ್ಕೆ ಬಂದು ಏಳು ಪ್ರದಕ್ಷಿಣೆ ಮಾಡಿ ಪೂಜೆ, ಬಲಿ ಆದ ಮೇಲೆ ದೇವಾಲಯಕ್ಕೂ ರಥಕ್ಕೂ ಐದು, ಏಳು ಅಥವಾ ಒಂಬತ್ತು ಪ್ರದಕ್ಷಿಣೆ ಮಾಡಿ ಕಲಶವನ್ನು ದೇವಾಲಯದಲ್ಲಿ ಸ್ಥಾಪಿಸುವರು. ಪೂಜಾರಿಗಳು ಅದನ್ನು ಗರ್ಭಗುಡಿಯ ಒಳಕ್ಕೆ ಒಯ್ದು ಬಾಗಿಲು ಹಾಕಿಕೊಂಡು ಒಂದು ಪೀಠದ ಮೇಲೆ ಇಟ್ಟು ಪೂಜೆ ಸಲ್ಲಿಸುವರು. ಈ ಸನ್ನಿವೇಶವನ್ನು ನೋಡಲು ಬೇರೆಯವರಿಗೆ ಅವಕಾಶ ಇರುವುದಿಲ್ಲ. ನಂತರ ಅದನ್ನು ಶಕ್ತಿ ಪೀಠದಲ್ಲಿ ಪ್ರತಿಷ್ಠಾಪಿಸುತ್ತಾನೆ. ಕರಗದ ಪಾವಿತ್ರ್ಯವನ್ನು ಕಾಪಾಡುವ ದೃಷ್ಟಿಯಿಂದ ಹಸಿಕರಗದ ಸಿದ್ಧತೆಯ ಆರಾಧನಾ ವಿಧಾನಗಳನ್ನು ಗೋಪ್ಯವಾಗಿರಿಸಿದ್ದಾರೆ. ಈ ಗೋಪ್ಯತೆಯನ್ನು ಇವೊತ್ತಿಗೂ ಪಾಲಿಸಿಕೊಂಡು ಬರಲಾಗುತ್ತಿದೆ.

ಚತುರ್ದಶಿಯಂದು ರಾತ್ರಿ ಪೊಂಗಲು ಸೇವೆ. ಈ ದಿನದಂದು ದೇವಸ್ಥಾನದಲ್ಲಿ ಮಹಾಭಾರತದ ಕಥೆಯ ವಾಚನ ನಡೆಯುತ್ತದೆ. ಪೊಂಗಲ್ ತಯಾರಿಸಿ ದೇವರಿಗೆ ಅರ್ಪಿಸಿ ಪೂಜೆ ಸಲ್ಲಿಸುತ್ತಾರೆ. ಈ ಪೊಂಗಲ್ ಸೇವೆಯಲ್ಲಿಯೂ ಮಹಿಳೆಯರದ್ದೇ ಪ್ರಧಾನ ಪಾತ್ರ.

ಏಳನೆಯ ದಿನ ಹೂವಿನ ಕರಗದ ಉತ್ಸವ ಜರುಗುತ್ತದೆ. ಇದೇ ಮುಖ್ಯವಾದ ಸಂಧರ್ಭ. ಪೌರ್ಣಮಿಯ ಮಧ್ಯ ರಾತ್ರಿಯಂದು ಕರಗದ ಉತ್ಸವ ಜರುಗುತ್ತದೆ. ಅಂದು ಹುಣ್ಣಿಮೆಯ ರಾತ್ರಿ ದೇವಸ್ಥಾನದಿಂದ ಹೊರಟು ಸಂಪಂಗಿ ಕೆರೆಯಲ್ಲಿ ಕರಗ ಪೂಜಾರಿಗೆ ಎಣ್ಣೆ ಸ್ನಾನದ ಬಳಿಕ ಕರಿ ಬಳೆಗಳನ್ನು ತೊಡಿಸಿದ ಹೆಣ್ಣು ವೇಷ ಹಾಕುತ್ತಾರೆ. ಅಲ್ಲಿ ಅರಿಸಿನ ಬಣ್ಣದ ಸೀರೆ ಉಡಿಸಿ, ರವಿಕೆ ತೊಡಿಸಿ, ಸ್ತ್ರೀ ವೇಷಧಾರಿಣಿಯಾದ ಬಳಿಕ ತೋಳುಗಳಿಗೆ ಕೆಂಪು ಬಟ್ಟೆಯನ್ನು ತೋಳು ಬಂದಿಯಾಗಿ ಕಟ್ಟುತ್ತಾರೆ. ಕೊರಳಿಗೆ ಹವಳ, ತಲೆಗೆ ಮಲ್ಲಿಗೆ ಮೊಗ್ಗಿನ ಜಡೆ, ಕುಚ್ಚು ಇತ್ಯಾದಿಗಳಿಂದ ಸಿಂಗಾರ ಮಾಡುವುದರಿಂದ ಅವನು ಮದುವೆ ಹೆಣ್ಣಿನಂತೆ ಕಾಣುತ್ತಾನೆ. ಅಲ್ಲಿಂದ ಮತ್ತೆ ದೇವಸ್ಥಾನಕ್ಕೆ ಹಿಂದಿರುಗುತ್ತಾರೆ. ಕರಗ ಹೊರುವ ಪೂಜಾರಿ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆತನ ಹೆಂಡತಿಯ ತಾಳಿಯನ್ನು ಬಿಚ್ಚಿ ಕರಗ ಉತ್ಸವ ಮುಗಿದ ನಂತರ ಮತ್ತೆ ಶಾಸ್ತ್ರೋಕ್ತವಾಗಿ ಕಟ್ಟುವ ಸಂಪ್ರದಾಯವಿದೆ.

ಇತ್ತ ಗುಡಿಯಲ್ಲಿ ಪೀಠದ ಮೇಲಿರುವ ಕರಗವನ್ನು ದುಂಡು ಮಲ್ಲಿಗೆ ಹೂಗಳಿಂದ ಸಂಪೂರ್ಣವಾಗಿ ಮುಚ್ಚಿ ಗೋಪುರದಂತೆ ಹೂಗಳನ್ನು ಪೇರಿಸುವರು. ಅದರ ಮಧ್ಯೆ ಶಂಖ, ಡಮರು, ತ್ರಿಶೂಲ ಇತ್ಯಾದಿ ಆಯುಧಗಳನ್ನು ಅಳವಡಿಸುವರು. ಪೂಜೆಯಾದ ನಂತರ ಅದನ್ನು ಪೂಜಾರಿಯ ತಲೆಯ ಮೇಲೆ ಹೊರಿಸಲಾಗುವುದು. ಆತನ ಎಡಗೈಲಿ ಬೆತ್ತವೂ, ಬಲಗೈಲಿ ಒಂದು ಕತ್ತಿಯೂ ಇರುತ್ತದೆ. ಮಧ್ಯರಾತ್ರಿಯ ಒಂದು ಶುಭಗಳಿಗೆಯಲಿ ಅವನು ಗರ್ಭಗುಡಿಯಿಂದ

ಹೊರಬರುವನು. ಹೊರಗಡೆ ಮಹಾಮಂಗಳಾರತಿಯಾದ ಮೇಲೆ ಮೆರವಣಿಗೆ ಹೊರಡಲು ಅನುವಾಗುತ್ತದೆ. ಅದೇ ವೇಳೆಗೆ ಗುಡಿಯ ಮುಂದಿನ ಸಿಂಗರಿಸಿದ ರಥ ಕೂಡಾ ಚಲಿಸುತ್ತದೆ. ವೀರಕುಮಾರರು ಮೂರು ಸಲ ನಮಸ್ಕಾರ ಮಾಡಿ ಅಲಗು ಸೇವೆ ನಡೆಸಿ ಸಪ್ತ ಪ್ರಾಕಾರ ಪುರಿಯ ಸುತ್ತಲೂ ಹೋಗುವರು. ಕುಲ ಯಜಮಾನ 'ಗಣಾಚಾರಿ' ವೀರರಿಗೆ ಪಾನಕ ಕೊಡುವನು. ಅನಂತರ ಉತ್ಸವ ವಿಗ್ರಹವನ್ನು ರಥದಲ್ಲಿಟ್ಟು ಕರಗವನ್ನು ಪೂಜಾರಿಯ ತಲೆ ಮೇಲಿಡುವರು. ಅವನು ರಥದೊಡನೆ ಸ್ವಲ್ಪ ಪೂರ್ವಕ್ಕೂ ಅನಂತರ ಪಶ್ಚಿಮಕ್ಕೂ ಹೋಗಿ ರಥಕ್ಕೆ ಮೂರು ಪ್ರದಕ್ಷಿಣೆ ಹಾಕಿದ ಮೇಲೆ ಬೆಂಗಳೂರಿನ ನವದ್ವಾರಗಳನ್ನು ಸಂದರ್ಶಿಸಲು ಹೊರಡುವನು. ಸೂರ್ಯೋದಯದ ಒಳಗಾಗಿ ಬೆಂಗಳೂರು ಪಟ್ಟಣದ ಕೆಂಪೇಗೌಡನ ಕಾಲದ ಸರಹದ್ದುಗಳನ್ನು ಮುಖ್ಯ ದೇವಾಲಯಗಳನ್ನು ಸಂದರ್ಶಿಸಿದ ನಂತರ ಕರಗ ಉತ್ಸವ ನಿರ್ದಿಷ್ಟಪಡಿಸಿದ ಅನೇಕ ರಸ್ತೆಗಳಲ್ಲಿ ಸಂಚರಿಸಿ, ಹಿಂದೂಗಳ ದೇವಾಲಯದಿಂದಲೇ ಅಲ್ಲದೆ ಮುಸ್ಲಿಮರಿಂದಲೂ ಕರಗಕ್ಕೆ ಫಾತ್ಸ (ಮಂಗಳಾರತಿ) ಸಲ್ಲುವುದು. ಕರಗದ ಉತ್ಸವ ಹಜರತ್ ತವಕ್ಕಲ್ ಮಸ್ತಾನ್ ಸುಹ್ರಾವರ್ದಿ ಸಾಹೇಬರ ದರ್ಗಾದವರಿಂದ ಕೂಡಾ ಪುಷ್ಪಾಹಾರ, ಧೂಪಾರತಿಯನ್ನು ಪಡೆಯುತ್ತದೆ. ಇದು ಹಿಂದು ಮುಸ್ಲಿಂ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ. ಕರಗದ ಉತ್ಸವದಂದು ಅರ್ಜುನನ ರಥೋತ್ಸವ ಮತ್ತು ಇತರ ದೇವರುಗಳ ರಥ ಹಾಗೂ ಪಲ್ಲಕಿಗಳು ಜರುಗುತ್ತವೆ. ಉತ್ಸವದೊಡನೆ ಹೋಗುವ ವೀರಕುಮಾರರು ಕೈಯಲ್ಲಿ ಖಡ್ಗಗಳನ್ನು ಹಿಡಿದು 'ಗೋವಿಂದಾ ಗೋವಿಂದಾ' ಎಂದು ಹೇಳುತ್ತಾ ದೇವರಿಗೆ ತಮ್ಮ ರಕ್ಷಣೆಯನ್ನೊದಗಿಸುವರು. ದೇವಸ್ಥಾನದಿಂದ ಹೊರಟ ರಥ ಕೂಡಾ ಕೆಲವಾರು ಸ್ಥಳಗಳನ್ನು ಸಂಚರಿಸಿ ಮಾರನೆಯ ಬೆಳಗ್ಗೆ ಹತ್ತು ಹನ್ನೊಂದು ಗಂಟೆಯ ಹೊತ್ತಿಗೆ ವಾಪಸ್ಸಾಗುವುದು.

ಕರಗ ಜರುಗಿದ ಮಾರನೆಯ ದಿನದಂದು ಪಾಡ್ಯದ ದಿನ ಸಂಜೆ ವಸಂತೋತ್ಸವ ಮತ್ತು ಓಕುಳಿಯಾಟ, ವಸಂತೋತ್ಸವದಲ್ಲಿ ಹುಣಸೆ ಬರಲು ಮತ್ತು ಸೊಪ್ಪಿನ ಮಧ್ಯದಲ್ಲಿ ಸುಲಿದ ತೆಂಗಿನ ಕಾಯಿಗಳನ್ನು ಇರಿಸಿ ಸಾಲಾಗಿ ಹಗ್ಗದಲ್ಲಿ ಕಟ್ಟಿ ಅಟ್ಟಣಿಗೆಯ ಮೇಲಿನಿಂದ ಇಳಿ ಬಿಡುತ್ತಾರೆ. ಸಾಲು ಸಾಲಾಗಿ ಎದುರು ಬದುರಾಗಿ ನಿಂತ ಯುವಕರ ಗುಂಪು ಮೇಲಿನಿಂದ ನೇತಾಡುತ್ತಿರುವ ತೆಂಗಿನ ಕಾಯಿಗಳನ್ನು ಒನಕೆ–ದೊಣ್ಣೆಗಳಿಂದ ಒಡೆಯಲು ಪ್ರಯತ್ನಿಸಿದಾಗ, ಪಕ್ಕದಲ್ಲಿಯೇ ನಿಂತ ಯುವತಿಯರು ಮತ್ತು ಹೆಂಗಸರು ದೊಡ್ಡ ಹಂಡೆಗಳಲ್ಲಿ ತುಂಬಿಸಿದ ಅರಿಸಿನದ ನೀರನ್ನು ಯುವಕರ ಮುಖಕ್ಕೆ ಎರಚುತ್ತಾರೆ. ಹೊಡೆತ ತಪ್ಪಿಸಲು ಯತ್ನಿಸುವವರು ಮತ್ತು ಮುಖಕ್ಕೆ ಎರಚುವ ಅರಿಶಿನದ ನೀರಿನ ಹೊಡೆತವನ್ನು ನಿವಾರಿಸಿಕೊಂಡು ನೇತಾಡುವ ತೆಂಗಿನಕಾಯಿಗೆ ಗುರಿಯಿಟ್ಟು ಹೊಡೆದವರು ಗೆಲ್ಲುತ್ತಾರೆ, ಪ್ರಶಂಸೆಗೆ ಪಾತ್ರರಾಗುತ್ತಾರೆ., ಮಾವಳ್ಳಿ, ಸಿದ್ದಾಪುರ, ಕಬ್ಬನ್ ಪೇಟೆ, ಅರಳೇ ಪೇಟೆ ಗರಡಿ ಮನೆಗಳ ಯುವಕರು ವಸಂತೋತ್ಸವದಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವುದುಂಟು.

ಪಾಡ್ಯದ ಮರುದಿನ ಬಿದಿಗೆಯಂದು ಬೆಳಿಗ್ಗೆ ಪೋತರಾಜನನ್ನು ಆಹ್ವಾನಿಸಿ, ಪೂಜಿಸಿ, ಆತನ ಪ್ರೀತ್ಯರ್ಥ ಕರಿಯ ಬಣ್ಣದ ಮೇಕೆಯನ್ನು ಹಲ್ಲಿನಿಂದ ಕಚ್ಚಿ ಕೊಲ್ಲುವ ಈ ಅಮಾನುಷ ಆಚರಣೆಗೆ ಗಾವು ಸಿಗಿಯುವುದು ಅಥವಾ ಗಾವುಸೇವೆ ಎಂದೂ ಕರೆಯುತ್ತಾರೆ. ಬಿದಿಗೆಯ ದಿನದಂದು ಧ್ವಜವನ್ನು ಇಳಿಸುವುದರ ಮೂಲಕ ಕರಗದ ಉತ್ಸವದ ಎಲ್ಲ ಕಾರ್ಯಕ್ರಮಗಳೂ ಮುಕ್ತಾಯವಾಗುತ್ತದೆ.

ಸಾಂಸ್ಕೃತಿಕ ವಿಶ್ಲೇಷಣೆ :

ವಾಸ್ತವವಾಗಿ ಕರಗ ಆಚರಣೆಯು ದ್ರಾವಿಡ ಜನಾಂಗದ ಆಚರಣೆ ಎಂದೇ ಹಿಂದಿನಿಂದ ಆಚರಿಸುತ್ತಾ ಬಂದಿದ್ದಾರೆ. ಆ ಜನಾಂಗದವರೇ ನಿಂತು ಪೂಜಾ ಕಾರ್ಯಗಳನ್ನು ಇಂದಿಗೂ ನಿರ್ವಹಿಸುತ್ತಾರೆ. ಆದರೆ ಚಾರಿತ್ರಿಕ ಕ್ರಮದಲ್ಲಿ ದ್ರಾವಿಡರ ಆಚರಣೆಯು ಮುಂದೆ ಸಂಸ್ಕೃತೀಕರಣಗೊಂಡು ಪುರೋಹಿತಶಾಹಿಗಳ ಪಾಲಾಗಿರುವುದನ್ನು ಹನ್ನೊಂದು ದಿನಗಳ ಕಾಲ ನಡೆಯುವ ಕರಗದ ಆರಾಧನಾ ವಿಧಿಗಳಲ್ಲಿ ಗುರುತಿಸಬಹುದು. ಕರಗ ಎಂದರೆ ಗಡಿಗೆ ಅಥವಾ ಕುಂಭ ಅಥವಾ ಘಟ ಎಂದರ್ಥ. ಜನಪದರು ಆಚರಿಸುವ ಅಚರಿಸುವ ಗ್ರಾಮ ದೇವತೆಗಳ ಹಬ್ಬದಲ್ಲಿ ಗಡಿಗೆ ಅಥವಾ ಕಳಶಕ್ಕೆ ಹೆಚ್ಚು ಪ್ರಾಧಾನ್ಯತೆ ಇದೆ. ಗ್ರಾಮದೇವತೆಗಳ ಹಬ್ಬದಲ್ಲಿ ಘಟ ಸ್ಥಾಪನೆಗೆ ಹೆಚ್ಚು ಮಹತ್ವವಿದೆ. ಅಲ್ಲದೆ ಇದು ದ್ರಾವಿಡ ಸಂಸ್ಕೃತಿಯ ಬಹು ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ. ಗ್ರಾಮೀಣರು ಗ್ರಾಮ ದೇವತೆಯ ಹಬ್ಬಗಳನ್ನು ಆಚರಿಸುವುದು ಹೆಚ್ಚಾಗಿ ಸುಗ್ಗಿಯ ನಂತರದ ದಿನನಗಳಲ್ಲಿ ಅಂದರೆ ಸಮೃದ್ಧವಾದ ಫಸಲು ಕೈಗೊಂಡಿದ್ದರ ಆಶಯವಾಗಿ ಹಿಂದೆ ಮಾತೃ ದೇವತೆಗಳ ಸಮೃದ್ಧಿಯ ಹಬ್ಬಗಳನ್ನು ಸಮುದಾಯವು ಒಂಬತ್ತು ದಿನಗಳ ಕಾಲ ಅದೂ ರಾತ್ರಿ ಕಾಲದಲ್ಲಿ ಸಂಭ್ರಮದಿಂದ ಆಚರಿಸುತ್ತಿದ್ದರೆಂದು ಡಿ.ಡಿ.ಕೊಸಾಂಬಿ ಉಲ್ಲೇಖಿಸುತ್ತಾರೆ. ಇಂತಹ ಹಬ್ಬಗಳಲ್ಲಿ ಗಡಿಗೆಗಳನ್ನು ಮಾತೃದೇವತೆಯ ಸಂಕೇತವಾಗಿ ಪೂಜಿಸುತ್ತಿದ್ದರೆಂದು ಕೊಸಾಂಬಿಯವರೇ ಮುಂದುವರೆದು ಹೇಳುತ್ತಾರೆ. ಇದರ ಅರ್ಥ ಕರಗದ ಪೂಜೆ ಎನ್ನುವುದು ಮಾತೃದೇವತೆಯ ಪೂಜೆಯಲ್ಲದೇ ಬೇರೇನೂ ಅಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸಸ್ಯವರ್ಗ, ಜನವರ್ಗ, ಪ್ರಾಣಿವರ್ಗಗಳ ಸಮೃದ್ಧಿ ಫಲವತ್ತತೆಯೇ ಮಾತೃದೇವತಾ ಆರಾಧನೆಯ ಉದ್ದೇಶವಾಗಿತ್ತು. ಈ ಹಿನ್ನೆಲೆಯಲ್ಲಿ ತೋಟಗಾರಿಕೆಯನ್ನು ತಮ್ಮ ವೃತ್ತಿಯಾಗಿಸಿಕೊಂಡಿರುವ ತಿಗಳರು ಕರಗ ಶಕ್ತಿಯನ್ನು ಆರಾಧಿಸುತ್ತಾ ಇದ್ದದು ಸಮೃದ್ಧಿಯ ಕಾರಣದಿಂದಲೇ ಹೊರತು ಅನ್ಯ ಉದ್ದೇಶದಿಂದಲ್ಲ. "ಭಾರತದಲ್ಲಿ ಈ ಸ್ತ್ರೀ ಮಾನ್ಯತೆಯು ಕೃಷಿಯ ಆರಂಭದ ಹಂತದೊಡನೆ ಸಂಬಂಧ ಹೊಂದಿದೆ. ಮನುಷ್ಯನ ಪ್ರಥಮ ಆರ್ಥಿಕ ಚಟುವಟಿಕೆಯಾದ ಆಹಾರ ಸಂಗ್ರಹಣೆಯ ಹಂತದಲ್ಲಿ ಸ್ತ್ರೀಯ ಪಾತ್ರ ಪ್ರಧಾನವಾಗಿತ್ತು. ಹೆಣ್ಣಿನ ಧಾರಣ ಶಕ್ತಿ ಮತ್ತು ಭೂಮಿಯ ಧಾರಣ ಶಕ್ತಿಯಲ್ಲಿ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ ಹೆಣ್ಣು ಮತ್ತು ಭೂಮಿ ಇವೆರಡೂ ಪೂಜ್ಯ ವಸ್ತುಗಳೆಂದು ಭಾವಿಸಿದ. ಈ ಸಮೃದ್ಧಿಯು ಆಚರಣೆಯಾಗಿ ರೂಪುಗೊಂಡಿರಬಹುದು. ಹೀಗಾಗಿ ಕೃಷಿಯ ಆರಂಭದ ಹಂತದ ಹೆಣ್ಣಿನ ಸ್ಥಾನಮಾನಗಳು ಅನೇಕ ಸ್ತ್ರೀ ದೇವತೆಗಳ ಹುಟ್ಟಿಗೆ

ಕಾರಣವಾಯಿತು–" (ಲೋಕಾಯತ. ಲೇ. ಧೆವಿಪ್ರಸಾದ ಚಟ್ಟೋಪಧ್ಯಾಯ. ಅನುವಾದ; ಜಿ ರಾಮಕೃಷ್ಣ. ಪು ಸಂ ೧೮೬)

ಈ ಆಚರಣೆಗಳಲ್ಲಿ ನಾವು ಗಮನಿಸಬೇಕಾದ ಈ ಜನಪದ ಆಶಯಗಳು, ಪರಿಕಲ್ಪನೆಗಳು, ಆರಾಧನೆ–ಆರಾಧ್ಯ ದೈವಗಳ ಮೇಲೆ ಶಿಷ್ಟ ಸಂಸ್ಕೃತಿಯ ಆಕ್ರಮಣ. ಸಂಸ್ಕೃತೀಕರಣ ಮತ್ತು ಸಾಂಸ್ಥೀಕರಣದ ಪ್ರಕ್ರಿಯೆಗಳು ನಡೆದು ಸ್ಥಾಪಿತ ವ್ಯವಸ್ಥೆಯ ಅಧೀನವಾಗಿ ಆಚರಣೆಗಳ ಮೂಲ ಪ್ರಕ್ರಿಯೆಗಳು ರೂಪಾಂತರಗೊಂಡಿರುವುದೇ ಇದಕ್ಕೆ ಉದಾಹರಣೆ. ಕರಗ ಪೂಜಾರಿಯು ಸ್ತ್ರೀ ವೇಷವನ್ನು ಧಾರಣ ಮಾಡುವಲ್ಲಿ ನಾವು ಈ ಸಾಂಸ್ಕೃತಿಕ ಸಂಘರ್ಷವನ್ನು ಕಾಣಬಹುದು. ಸಮೃದ್ಧಿಯ ಆಚರಣೆಗಳೆಲ್ಲಾ ಸ್ತ್ರೀ ಸಂಬಂಧಿ ಆಚರಣೆಗಳಾಗಿದ್ದರಿಂದ ಅನೇಕ ಸಂಸ್ಕೃತಿಗಳಲ್ಲಿ ಗಂಡಿಗೆ ಆಚರಣೆಯ ಹಕ್ಕನ್ನೂ, ಆಚರಣೆಯ ಸ್ಥಳಕ್ಕೆ ಪ್ರವೇಶವನ್ನೂ ನಿರಾಕರಿಸಲಾಗಿದೆ. ಮಾನವನ ಜೀವನ ಬದಲಾದಂತೆ ಕೃಷಿಯ ಮುಂದುವರೆದ ಘಟ್ಟಗಳಲ್ಲಿ ಗಂಡು ಮಹತ್ವದ ಸ್ಥಾನ ಗಳಿಸುತ್ತಾನೆ. ಆಗ ಸಮೃದ್ಧಿಯ ಆಚರಣೆಗಳನ್ನು ನೆರವೇರಿಸುವ ಹೊಣೆಗಾರಿಕೆ ಅವನದಾಗುತ್ತದೆ. ಆದರ ಹಿಂದೆ ಆಚರಣೆಗಳು ಹೆಣ್ಣಿನ ಮೇಲ್ವಿಚಾರಣೆಯಲ್ಲಿ ಆಗುತ್ತಿದ್ದವು. ಈ ತೊಡಕನ್ನು ನಿವಾರಿಸಲು ಈ ಗಂಡು ಪೂಜಾರಿಯು ಸ್ತ್ರೀ ವೇಷಧಾರಿಯಾಗುತ್ತಾನೆ. ಹೆಣ್ಣು ಪ್ರಧಾನವಾಗಿದ್ದ ಸಾಂಸ್ಕೃತಿಕ ಘಟ್ಟವನ್ನು ಮರೆಯಲಾಗದೇ ಸಾಂಕೇತಿಕವಾಗಿ ಅದನನು ಅಭಿನಯಿಸುವ ಆಚರಣೆಯಾಗಿಯೂ ಗಂಡು ಪೂಜಾರಿಯ ಸ್ತ್ರೀ ವೇಷಧಾರಣೆಯನ್ನು ಗಮನಿಸಬಹುದಾಗಿದೆ. ನಮ್ಮ ಸಂಸ್ಕೃತಿಯಲ್ಲಿ ಇದಕ್ಕೆ ವಿವಿಧ ಉದಾಹರಣೆಗಳು ಸಿಗುತ್ತವೆ. ಚಾಂಬಾ ರಾಜ್ಯದಲ್ಲಿನ ಚಿಕ್ಕ ಗುಡಿಗಳಲ್ಲಿ ಸೇವೆ ಮಾಡುವವರು ಸಾಮಾನ್ಯವಾಗಿ ಕೆಳವೃತ್ತಿಯ ಗಂಡಸರು. ಆದರೆ ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ಈ ಅರ್ಚಕರ ವೃತ್ತಿಯನ್ನು ಹೆಂಗಸರು ನಿರ್ವಹಿಸುತ್ತಿದ್ದರು. ಕೋಕೋ ನಾಡಿನಲ್ಲಿ ಈಗಲೂ ಅರ್ಚಕ ವೃತ್ತಿಯನ್ನು ಬೆಸ್ತ ಜನಾಂಗದ ಹೆಂಗಸರು ನಿರ್ವಹಿಸುತ್ತಿದ್ದಾರೆ. ಅವರಿಗೆ ಈ ವೃತ್ತಿಯು ವಂಶ ಪಾರಂಪರ್ಯವಾಗಿ ಬರುತ್ತದೆ. ಆದರೆ ಅಧಿಕಾರ ಅವಳದಾದರೂ ಅರ್ಚಕ ವೃತ್ತಿಗೆ ತನ್ನ ಹತ್ತಿರದ ಪುರುಷ ಸಂಬಂಧಿಯನ್ನು ನೇಮಿಸುತ್ತಾಳೆ. ಆಂಧ್ರ ಪ್ರದೇಶದ ಗುಯಚಿವಾಡದಲ್ಲೂ ಆರಾಧನೆ ನಡೆಸುವಾಗ ಅರ್ಚಕನು ಸ್ತ್ರೀಯ ವೇಷಭೂಷಣಗಳನ್ನು ಧರಿಸುತ್ತಾನೆ. ಕೇರಳದ ಮಲಬಾರಿನಲ್ಲಿ ದೇವತೆಯ ಹಬ್ಬದಲ್ಲಿ ವಿವಾಹಿತ ಮಹಿಳೆಯು ಮೈದುಂಬಿ ದೇವತೆಯಂತೆಯೇ ನಟಿಸುತ್ತಾಳೆ. ಅವಳನ್ನು ಈ ದೇವತೆಯ ಹೆಸರಿನಿಂದಲೇ ಕರೆಯಲಾಗುತ್ತದೆ.

ಹೀಗಾಗಿ ಭಾರತೀಯ ಮೂಲನಿವಾಸಿ ಮಾತೃದೇವತೆಗಳು ಮೂಲತಃ ಆದಿವಾಸಿ ಮೂಲದ ಪೂರ್ವಕಾಲದ ಸ್ತ್ರೀಯರೆಂದು ಸಾಮಾನ್ಯವಾದ ನಂಬಿಕೆ ಮತ್ತು ಹಲವಾರು ಸಂಧರ್ಭಗಳಲ್ಲಿ ಇದನ್ನು ಒಪ್ಪಿಕೊಳ್ಳಲಾಗಿದೆ.

ಕರಗದಲ್ಲಿ ರಹಸ್ಯಾಚರಣೆಗಳು ಇರುವಂತೆಯೇ ಜಗತ್ತಿನ ಬೇರೆ ಬೇರೆ ಸಮಾಜ ಸಂಸ್ಕೃತಿಗಳಲ್ಲಿಯೂ ಆರಾಧನಾ ವಿಧಿಗಳಿವೆ. ಮೆಕ್ಸಿಕೋ ಮತ್ತು ಆರಿಜೋನ ದೇಶಗಳ ಪ್ರಯಬ್ಲೋ ಆದಿವಾಸಿ

ಜನಾಂಗದ ದೇವತೆಗಳು ಅವರ ಆರಾಧನೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಆರಾಧನಾ ವಿಧಿಗಳು ಗ್ರೀಕ್‌ನ ಎಲೆಯೂಸಿಸ್ ದೇವತೆಯ ಪೂಜಾ ವಿಧಿಗಳನ್ನು ಹೋಲುತ್ತವೆ. ಈ ಜನಾಂಗದ ಮಹಾ ಮಾತೃ ಮತ್ತು ಆಕೆಯ ಹೆಣ್ಣು ಮಕ್ಕಳು ಪ್ರಾಚೀನ ಗ್ರೀಕ್ ದೇಶದ ವಿಧಿಗಳಲ್ಲಿ ಬರುವ ಡೆಮಟರ್ ಮತ್ತು ಕೋರೆ ಇವರ ಪ್ರತಿರೂಪ. ಅಪಾರ ಧಾನ್ಯದ ಮಾತೃ, ಆಹಾರ ಧಾನ್ಯದ ಹೆಂಗೆಳೆಯರು, ಕಾಳುಗಳ ತಾಯಿ ಎಂದು ಕರೆಯಲಾಗುವ ಈ ದೇವತೆಗಳನ್ನು ಆ ದೇವತೆಗಳ ಉಪಾಸಕರು ತಮ್ಮ ಕುಲದ ಪೂರ್ವಿಕರೆಂದೇ ಪರಿಗಣಿಸುತ್ತಾರೆ. ಫಲವಂತಿಕೆಯನ್ನು ಆರಾಧಿಸುವ ಸಮಾಜದಲ್ಲಿ ಸ್ತ್ರೀ ಪ್ರಧಾನವಾಗಿದ್ದ ಸ್ತ್ರೀಯರೇ ಅರ್ಚಕರಾಗಿದ್ದ ಆಚರಣೆಯೂ ಮಹಾಭಾರತದ ಪಾಂಡವರೊಂದಿಗೆ ಸಂಬಂಧವನ್ನು ಬೆಸೆದುಕೊಂಡ ನಂತರ ವೈದಿಕ ಮೂಲದ ಆರಾಧನಾ ಪದ್ದತಿಯೆಡೆಗೆ ಹೊರಳಿಕೊಂಡಿದ್ದು ಸಾಂಸ್ಕೃತಿಕ ಚರಿತ್ರೆಯ ತಿರುವುಗಳಲ್ಲಿ ಒಂದಾಗಿದೆ.

ಆದಿಶಕ್ತಿಯ ಚಾಚಿದ ನಾಲಗೆಯ ವಿನ್ಯಾಸವುಳ್ಳ ಧ್ವಜಪಟ, ವೀರಕುಮಾರರಿಗೆ ಕಂಕಣ ಮತ್ತು ಯಜ್ಞೋಪವೀತ ಧಾರಣೆ, ಕರಗದ ಆಚರಣೆಗಳಲ್ಲಿ ಕುಲಪುರೋಹಿತದ ಪ್ರಾಧಾನ್ಯ. ಇವೆಲ್ಲವೂ ವೈದಿಕೀಕರಣದ ಲಕ್ಷಣಗಳನ್ನು ಸ್ಪಷ್ಟಪಡಿಸುತ್ತದೆ. ಹೆಣ್ಣು ಪೂಜಾರಿಯಾಗಿರುವುದನ್ನು ತಪ್ಪಿಸಿದ ಪುರುಷ ಪ್ರಧಾನ ಸಮಾಜವು ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳಲು ಹಿಂಜರಿದಿರುವುದನ್ನು ಸಹಾ ಗಮನಿಸಬಹುದು. ಕರಗ ನಡೆಯುವ ೧೧ ದಿನಗಳ ಕಾಲವೂ ಕರಗದ ಪೂಜಾರಿಯ ಪತ್ನಿ ವಿಧವೆಯ ವೇಷ ಧರಿಸುತ್ತಾಳೆ. ಆಕೆಯ ಬಳೆಗಳನ್ನು ಒಡೆದು ಮಾಂಗಲ್ಯವನ್ನು ತೆಗೆದು ಆಕೆಯ ಗಂಡನಿಗೆ ತೊಡಿಸುತ್ತಾರೆ. ಹನ್ನೊಂದು ದಿನಗಳ ಕಾಲವೂ ಪೂಜಾರಿಯು ತನ್ನ ಪತ್ನಿಯ ಮಾಂಗಲ್ಯಧಾರಣೆಯೊಂದೇ ಅಲ್ಲದೇ ಹೆಣ್ಣಿನಂತೆಯೇ ಅಲಂಕರಿಸಿಕೊಂಡಿರುತ್ತಾನೆ. ಅರಿಶಿನದ ಸೀರೆ ಉಡುತ್ತಾನೆ. ಅರ್ಚಕರು ಸ್ತ್ರೀ ವೇಷಧಾರಿಗಳಾಗುವ ಪದ್ದತಿಯು ಪ್ರಾಚೀನ ಗ್ರೀಕ್ ಸಂಸ್ಕೃತಿಯಲ್ಲಿಯೂ ಕಂಡುಬರುತ್ತದೆ. ಡಯೋನಿಸಿಸ್ ಹಬ್ಬಕ್ಕೆ ಬರುವ ಪುರುಷರೆಲ್ಲರೂ ಸ್ತ್ರೀ ವೇಷಧಾರಿಗಳಾಗಿಯೇ ಬರಬೇಕಿತ್ತು. ಕರಗದ ಆರಾಧನೆಗಳಲ್ಲಿ ಕಂಡುಬರುವ ಅಲಗು ಸೇವೆ, ಗಾವು ಸಿಗಿಯುವುದೂ ಸಹಾ ಗ್ರಾಮ ದೇವತೆಗಳ ಹಬ್ಬದ ಆಚರಣೆಗಳಲ್ಲಿ ಕಂಡು ಬರುವ ಸಾಮಾನ್ಯ ಅಂಶಗಳಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕರಗವು ಮೂಲತಃ ಸಮೃದ್ಧಿಯ ಫಲವಂತಿಕೆಯ ಪ್ರತೀಕವಾದ ಮಾತೃದೇವತಾ ಆರಾಧನೆ ಸ್ತ್ರೀ ಪ್ರಧಾನವಾದ ಆಚರಣೆ. ಆದರೆ ಸಾಂಸ್ಕೃತಿಕ ಚರಿತ್ರೆಯ ಕಾಲಘಟ್ಟದಲ್ಲಿ ಸಾಮಾಜಿಕ ಕಾರಣಗಳಿಂದಾಗಿ ಪಾಂಡವ ಪರಂಪರೆಯೊಂದಿಗೆ ಸಂಬಂಧವೇರ್ಪಟ್ಟು ವೈದಿಕೀಕರಣಕ್ಕೆ ಒಳಪಟ್ಟ ಆರಾಧನಾ ಪದ್ದತಿಯಾಗಿ ಪರಿಣಮಿಸಿದೆ ಎಂದೂ ಹೇಳಿದ್ದಾರೆ.(ಕ್ಷೇತ್ರ ಕಾರ್ಯವನ್ನು ಆಧರಿಸಿ ಸಂಗ್ರಹಿಸಿದ್ದು.)

"ಕರ್ನಾಟಕದಂತೆ ಆಂಧ್ರದಲ್ಲಿಯೂ ಸಹಾ 'ಕರಗ' ಉತ್ಸವ ನಡೆಯುತ್ತದೆ. ದೇವೀ ನವರಾತ್ರಿ ಉತ್ಸವದ ಕಾಲದಲ್ಲಿ ಅಥವಾ ಗ್ರಾಮ ದೇವತೆಗಳಿಗೆ ಬಲಿಯನ್ನು ಕೊಡುವಾಗ, ಭಕ್ತಿಯಿಂದ ಪೂಜಿಸುವಾಗ 'ಗರಗ' ನೃತ್ಯವನ್ನು ಪ್ರದರ್ಶಿಸುತ್ತಾರೆ. ಅಲ್ಲಿ ಗರ್ಗ ಎಂಬುದು ಬಣ್ಣದ

ಬಟ್ಟೆಗಳಿಂದ, ಅರಿಶಿನ ಕುಂಕುಮಗಳಿಂದ ಅಲಂಕರಿಸಿದ ಲೋಹದ ಅಥವಾ ಮಣ್ಣಿನ ಪಾತ್ರೆ, ಐದು ಹೆಡೆಗಳ ಕಂಚಿನ ಸರ್ಪ ಪಾತ್ರೆಯನ್ನು ಮುಚ್ಚಿರುತ್ತದೆ. ಕುಣಿತಗಾರರು ಬೇವಿನೆಲೆಗಳನ್ನು ಹಿಡಿದುಕೊಂಡು ಉತ್ಸಾಹಭರಿತರಾಗಿ ಢಪ್ಪುಗಳ ಶಬ್ದದ ಲಯಕ್ಕೆ ತಕ್ಕಂತೆ ಕುಣಿಯುತ್ತಾರೆ. ಇದು ಗೋದಾವರಿಯ ಎರಡು ಜಿಲ್ಲೆಗಳಲ್ಲಿಯೂ ಬಹಳ ಜನಪ್ರಿಯವಾದದ್ದು"–(ತಮಿಳು ನಾಡಿನ ಜಾನಪದ. ನವಕರ್ನಾಟಕ ಪಬ್ಲಿಕೇಷನ್)

ತಮಿಳುನಾಡಿನಲ್ಲಿ ಮಾರಿಯಮ್ಮನ ಉಪಾಸನೆಯ ಜೊತೆಯಲ್ಲಿಯೇ ಬೆಳೆದು ಬಂದ ಜನಪದ ಕಲೆಯೇ ಕರಗ. ಇದನ್ನು ಶಕ್ತಿ ಕರಗ ಎಂತಲೂ ಕರೆಯುತ್ತಾರೆ. ಒಂದು ಸಣ್ಣ ಕೊಡವನ್ನು ನೀರಿನಿಂದ ತುಂಬಿ ತೆಂಗಿನ ಕಾಯಿಯಿಂದ ಮುಚ್ಚಲಾಗುವುದು. ಹೂವಿನ ಮಾಲೆಗಳಿಂದ ಅದನ್ನು ಅಲಂಕರಿಸಿ ಕರಗದ ನೆತ್ತಿಯ ಮೇಲೆ ಒಂದು ನಿಂಬೆ ಹಣ್ಣನ್ನು ಇಡಲಾಗುವುದು. ದೇವಾಲಯದ ಅರ್ಚಕ ಅಥವಾ ಅವನು ನೇಮಿಸುವ ಒಬ್ಬ ವ್ಯಕ್ತಿ ಅದನ್ನು ಧಾರ್ಮಿಕ ವಿಧಿ ಪೂರ್ವಕವಾಗಿ ಅನನ್ಯ ಶ್ರದ್ಧೆಯಿಂದ ಹೊರುತ್ತಾರೆ. ಏಕೆಂದರೆ ಅದು ಅವರಿಗೆ ವಂಶಪಾರಂಪರ್ಯವಾಗಿ ಒಂದು ಹಕ್ಕಾಗಿದೆ. ಕರಗ ಶಬ್ದವು ಶುದ್ಧೀಕರಣಕ್ಕಾಗಿ ತುಂಬಿದ ಪವಿತ್ರ ಜಲದಿಂದ ಕೂಡಿದ ಮಡಕೆ ಅಥವಾ ಕುಂಭವನ್ನು ನಿರ್ದೇಶಿಸುತ್ತದೆ. ಸಾಮಾನ್ಯ ಧಾರ್ಮಿಕ ವಿಧಿಗಳಲ್ಲಿ ಮಳೆಯ ದೇವತೆಯಾಗಿ ವರುಣನ ಎಲ್ಲ ಸಮುದ್ರಗಳ ಹಾಗೂ ಏಳು ಪವಿತ್ರ ನದಿಗಳನ್ನೂ ಇತ್ತ ಆಕರ್ಷಿಸಿ ಕರಗದಲ್ಲಿ ಕೂಡಿಸಿದಂತೆ ಭಾವಿಸಲಾಗುತ್ತದೆ. ಪ್ರಾಚೀನ ತಮಿಳರಂತೆ ತಮ್ಮ ಉತ್ಕರ್ಷಕ್ಕೆ ನೀರನ್ನು ಅವಲಂಬಿಸಿರುವ ಗ್ರಾಮೀಣ ಜನತೆ ಮಳೆಯ ದೇವತೆಯಾದ ಮಾರಿಯಮ್ಮನನ್ನು ಜೀವನದಿಗಳಾದ ಗಂಗೆಯನ್ನು ಮತ್ತು ಕಾವೇರಿಯಮ್ಮನನ್ನು ಪೂಜಿಸತೊಡಗಿದರು. ಕರಗದ ಧಾರ್ಮಿಕ ವಿಧಿಯು ಇವರ ಗೌರವಾರ್ಥ ಉದಿಸಿತು. ತಿರುನಲ್ವೇಲಿ ಜಿಲ್ಲೆಯಲ್ಲಿ ಕರಗವನ್ನು ಅಮ್ಮನ್ ಕೊಂಡಾಟ್ಟ ಅಥವಾ ದೇವತೆಯ ಹರಕೆಯನ್ನು ಪಡೆಯುವ ವಿಧಾನ ಎಂದೂ ಕರೆಯಲಾಗುತ್ತದೆ.

ಪೂಜೆಯ ವಿಧಾನ, ಪದ್ಧತಿ ಬೇರೆ ಬೇರೆಯಾದರೂ ಜನಪದ ಹಾಗೂ ಬುಡಕಟ್ಟಿನ ಸಮಾಜ, ಸಂಸ್ಕೃತಿಯಲ್ಲಿ ಮಾತೃದೇವತೆ ಅಥವಾ ಭೂಮಿಯ ಆರಾಧನೆಯ ಹಲವಾರು ರೂಪಾಂತರಗಳೊಂದಿಗೆ ಅಸ್ತಿತ್ವದಲ್ಲಿದೆ. ಈ ದೇವತೆಗಳ ಹೆಸರುಗಳು ಸ್ಥಳೀಯ ಲಕ್ಷಣಗಳೂ ಬೇರೆ ಬೇರೆಯಾದರೂ ಒಂದೇ ಶಕ್ತಿಯ ಮೂರ್ತೀಕೃತ ಸ್ವರೂಪಗಳು, ಬೇರೆ ಬೇರೆಯಾದರೂ ಇವುಗಳೆಲ್ಲದರ ಧಾರಕ ಶಕ್ತಿ ಒಂದೇ! ಅವುಗಳಲ್ಲಿ ಆರ್ಯ ಸಂಸ್ಕೃತಿಯ ವೈದಿಕ ದೇವತೆಗಳ ಪಾತ್ರಗಳೇನೂ ಇಲ್ಲ. ದ್ರಾವಿಡ ಸಂಸ್ಕೃತಿಯ ಬಹು ಮುಖ್ಯ ಆಚರಣೆಗಳ ಕೇಂದ್ರ ಬಿಂದುವಾಗಿರುವ ಈ ದೇವತೆಗಳ ಜೊತೆ ದ್ರಾವಿಡರು ಒಂದು ಬಗೆಯ ಸಾವಯವ ಸಂಬಂಧವನ್ನು ಉಳಿಸಿಕೊಂಡು ಬಂದಿದಾರೆ.

ಇದೊಂದು ಮುಗಿಯದ ಪ್ರಕ್ರಿಯೆಗಳ, ಕೊನೆಯಿರದ ಅನ್ವೇಷಣೆಗಳ ಸರಪಳಿ, ಶ್ರೇಣೀಕೃತ ಸಾಮಾಜಿಕ ಹಿನ್ನೆಲೆಯಲ್ಲಿ ಮಾಡಿರುವ ದೈವಾರಾಧನೆಯ ಸಂಕಲ್ಪ, ಕ್ರಿಯಾತ್ಮಕ ಆಚರಣೆಗಳು ಸಾಂಸ್ಕೃತಿಕವಾಗಿ ಹೊರಳಿರುವುದಕ್ಕೆ ಮೂಲ ಕಾರಣಗಳು ತಕ್ಷಣಕ್ಕೆ ತೀರ್ಮಾನಕ್ಕೆ ಬರುವಂಥದ್ದಲ್ಲ.

ಯಾವುದ್ಯಾವುದೋ ಕಾಲಘಟ್ಟಗಳಲ್ಲಿ ಅಪ್ರಜ್ಞಾಪೂರ್ವಕವಾಗಿ ಸಾಂಸ್ಕೃತಿಕ ಗಡಿ ಗೆರೆಗಳನ್ನು ಸೀಮಿತ ಘಟಕಗಳನ್ನು ಧಾಟಿ, ವಿವಿಧ ಪ್ರದೇಶಗಳ ಭಾವನಾತ್ಮಕ ಬೆಸುಗೆಯಾಗಿ ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ತನ್ನ ಸಂವೇದನಾಶೀಲತೆಯನ್ನು ಉಳಿಸಿಕೊಂಡು ಬಂದಿರುವ ಆಚರಣೆಗಳು ವಾಸ್ತವತೆ, ತರ್ಕ, ಕಲ್ಪನೆಗಳ ಪ್ರತೀಕವಾಗಿ ತಮ್ಮ ಅಸ್ಮಿತೆಯನ್ನು ಈ ಕಾಲಮಾನದ ಸ್ಥಿತ್ಯಂತರಗಳ ನಡುವೆಯೂ ಉಳಿಸಿಕೊಳ್ಳಲು ನಿರಂತರ ಹೋರಾಟವನ್ನು ನಡೆಸುತ್ತಲೇ ಬಂದಿರುವುದಂತೂ ಸತ್ಯ. ನಿಸರ್ಗದ ಶಕ್ತಿಗಳನ್ನು ಸಾಪೇಕ್ಷಗೊಳಿಸುತ್ತಾ ಮನುಷ್ಯರ ಮನಸ್ಸಿನ ಅಂತರ್ಗತ ಚೈತನ್ಯ ರೂಪಕ ಶಕ್ತಿಗಳಾದ ಆಚರಣೆಗಳನ್ನು ಅಧ್ಯಯನದ ಮೂಲಕ ಪುನರ್ ಮೌಲ್ಯೀಕರಣಕ್ಕೆ ಒಳಪಡಿಸಬೇಕಿದೆ.

೪.೬. ದ್ರಾವಿಡ ಸಂಸ್ಕೃತಿಯಲ್ಲಿ ಮಾರಿಯಮ್ಮನ ರೂಪಾಂತರಗಳು :

ಆರೋಗ್ಯ ಮತ್ತು ಮಳೆಯ ದೇವತೆಯಾದ ಮಾರಿಯಮ್ಮ ಜನರನ್ನು ಸಿಡುಬು, ಕಾಲರಾ ಮತ್ತು ಇತರ ಅಂಟುರೋಗಗಳಿಂದ ರಕ್ಷಿಸುತ್ತಾಳೆ. ಸಂಪ್ರದಾಯದಂತೆ ರಾಗಿಯ ಹಿಟ್ಟನ್ನು ಕುದಿಸಿ ಮಾರಿಗೆ ಅರ್ಪಿಸಲಾಗುವುದು. ಮಾರಿಯಪ್ಪ ಕಣ್ಣ ದೃಷ್ಟಿಯನ್ನು ಸರಿಪಡಿಸುವ ಅಥವಾ ಕೆಡಿಸುವ ಶಕ್ತಿಯುಳ್ಳವಳು ತೊಂದರೆಗೀಡಾದವರು ಬೆಳ್ಳಿಯ ಕಣ್ಣುಗಳನ್ನು ಅವಳಿಗೆ ಅರ್ಪಿಸುತ್ತಾರೆ. ಅಮ್ಮನಿಗೆ ಸಾವಿರ ಕಣ್ಣುಗಳಿವೆ ಎಂದು ಭಾವಿಸಲಾಗಿದೆ ಸಿಡುಬು ಕಾಣಿಸಿಕೊಂಡಾಗ ಅಮ್ಮನ ರಕ್ಷಣೆಯನ್ನು ಕೋರಲಾಗುತ್ತದೆ ತೆಂಗಿನ ಕಾಯಿ, ಕೊಡುಗೆಗಳು ಬೆಳ್ಳಿಯ ವಸ್ತುಗಳ ಚೂರುಗಳು, ನೋವು ಮತ್ತು ಹಣವನ್ನು ಪೂಜಾರಿ ದೇವತೆಗೆ ಅರ್ಪಿಸುವನು. ಹೀಗೆ ಈ ಗ್ರಾಮ ದೇವತೆ ಪ್ರಮುಖಳೆನಿಸಿ ಬಲಿಗೆ ಸಂಬಂಧಿಸಿದ ವಿಧಾನಗಳು ವ್ಯಾಪಕವಾಗಿ ನಡೆಯುತ್ತದೆ.

ಸಿಡುಬು ಮತ್ತು ಸೀತಾಳ ಸಿಡುಬುಗಳಿಗೆ ವೈದ್ಯಕೀಯ ಉಪಚಾರ ನಡೆಸುವುದು. ಸಂಪ್ರದಾಯಕ್ಕೆ ವಿರುದ್ಧ ಅವೆಲ್ಲಾ ಮಾರಿಯಮ್ಮ ಬಂದು ಹೋಗುವುದರಿಂದ ಉಂಟಾಗುವುದು. ಕಾಲ ಪ್ರವಾಹದಲ್ಲಿ ತಾವಾಗಿಯೇ ವಾಸಿಯಾಗುವುದೆಂದು ಭಾವಿಸಲಾಗಿದೆ ಸಿಡುಬು ಬಂದ ಕಾಲದಲ್ಲಿ ಅವಳ ವೈಭವವನ್ನು ಹಾಡಿ ಮಾರಿಯಮ್ಮನನ್ನು ಶಾಂತಗೊಳಿಸಬೇಕು. ಸಿಡುಬಿನಿಂದ ಯಾರಾದರೂ ತೀರಿಕೊಂಡರೆ ಸತ್ತನೆಂದು ಹೇಳುವುದಾಗಲೀ ಬೆಳೆಯುವುದಾಗಲೀ ಸಂಪ್ರದಾಯಕ್ಕೆ ವಿರುದ್ಧ ವ್ಯಕ್ತಿಯ ತಣ್ಣಗಾದ ಎಂದು ಘೋಷಿಸಬೇಕು. ಏಕೆಂದರೆ ಆಕೆ ಬಹು ಉಗ್ರಳು. ಆಕೆ ಕೋಪಗೊಂಡರೆ ಇಡೀ ಕುಟುಂಬವನ್ನೆ ಬಲಿ ತೆಗೆದುಕೊಳ್ಳತ್ತದೆ ಎಂಬ ಬಲವಾದ ನಂಬಿಕೆ. ಭಯ.(ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ್ದು.)

ಬೆಂಗಳೂರಿನ ಬಹುತೇಕ ಇರುವ ಬೆಂಗಳೂರಿನ ಕಂಟೋನ್ಮೆಂಟಿನ, ಭಾರತೀ ನಗರದಲ್ಲಿರುವ, ಕೊಡಿಗೇಹಳ್ಳಿಯಲ್ಲಿರುವ. ಮಲ್ಲೇಶ್ವರಂ ವೃತ್ತದಲ್ಲಿರುವ (ಮಾರಮ್ಮ) ಮಾರಿಯಮ್ಮ ದೇವಾಲಯಗಳಲ್ಲಿ ಕೊಂಡದ ಮೇಲೆ ನಡೆಯುವುದು ಒಂದು ಧಾರ್ಮಿಕ ವಿಧಿ ಅದನ್ನು ಪಕ್ಕುಲಿತ್ತಾಳ್ ಅಥವಾ ಹೂವಿನ ಹಾಸಿಗೆಯ ಮೇಲೆ ನಡೆಯುವುದು ಎಂದು ಹೇಳಲಾಗುತ್ತದೆ. ಮೈಯೆಲ್ಲಾ ವಿಭೂತಿ

ಬಳಿದುಕೊಂಡ ಜನ ಮೂರು ಮೀಟರ್ ದೂರಹರಡಿಕೊಂಡ ಸುಡು ಕೆಂಡಗಳ ಮೇಲೆ ನಡೆಯುವುದು ಒಂದು ಧಾರ್ಮಿಕ ವಿಧಿ ಅದನ್ನು ಪಕ್ಕುಲಿತ್ತಾಳ್ ಅಥವಾ ಹೂವಿನ ಹಾಸಿಗೆಯ ಮೇಲೆ ನಡೆಯುವುದು ಎಂದು ಹೇಳಲಾಗುತ್ತದೆ. ಅಂತ್ಯದಲ್ಲಿ ಅವರು ದೇವತೆಯ ಮುಂದೆ ಅಡ್ಡ ಬೀಳುತ್ತಾರೆ. ಕೆಂಡದ ಮೇಲೆ ನಡೆಯುವವರಿಗೆ ಅವರ ತೀವ್ರ ನಂಬಿಕೆಯ ಫಲವಾಗಿ ಬೆಂಕಿಯಿಂದ ಯಾವುದೇ ಈ ರೀತಿಯ ತೊಂದರೆಯಾಗುವುದಿಲ್ಲ. ಹೆಂಗಸರು ಬೆಂಕಿಯ ಮೇಲೆ ನಡೆಯುವುದಿಲ್ಲ ಬದಲಾಗಿ ಅವರು ತಮ್ಮ ತಲೆಯನ್ನು ಸೆರಗಿನಿಂದ ಮುಚ್ಚಿಕೊಂಡು ತಲೆಯ ಮೇಲೆ ಬಂದು ಗುದ್ದಲಿಯ ತುಂಬಾ ಕೆಂಡವನ್ನು ಸುರಿಸಿ ಅವರ ಬಟ್ಟೆಗಳು ಸುಡುವುದಿಲ್ಲ. ಅದರ ದು:ಸಹವಾದ ಶಾಖದಿಂದ ಅವರಿಗೆ ಏನೂ ಆಗುವುದಿಲ್ಲ. ಅಗ್ನಿ ಚಟ್ಟಿ ಎಂಬ ಬೆಂಕಿಯ ಮಡಕೆಗಳನ್ನು ತಲೆಯ ಮೇಲೆ ಹಾಗೂ ಕೈಗಳ ಮೇಲೆ ಕ್ರಮವಾಗಿ ಹೆಂಗಸರೂ ಹೆಣ್ಣು ಮಕ್ಕಳೂ ಇಟ್ಟುಕೊಳ್ಳುವುದು. ಮಾರಿಯಮ್ಮನ ದೇವಾಲಯಗಳಲ್ಲಿನ ಮತ್ತೊಂದು ಬಗ್ಗೆಯ ಸೇವೆ ಹಬ್ಬಕ್ಕೆ ಮುನ್ನ ೨೧ ದಿವಸಗಳು ದಿನಕ್ಕೆ ಒಂದೇ ಬಗೆಯ ಊಟವನ್ನು ಸೇವಿಸುತ್ತಾರೆ, ನೆಲದ ಮೇಲೆ ಮಲಗುತ್ತಾರೆ. ಲೈಂಗಿಕ ಸಂಬಂಧವನ್ನು ದೂರ ಮಾಡುತ್ತಾರೆ. ಅವರಲ್ಲಿ ದೈವೀ ಭಾವನೆ ಬಂದರೆ ನಡು ಬೇಸಿಗೆಯಲ್ಲಿ ಅಗ್ನಿ ನಕ್ಷತ್ರಂ ಎಂಬ ತೀವ್ರ ಉಷ್ಣ ಸಂದರ್ಭದಲ್ಲಿ ಬರುವ ಮಾರಿಯಮ್ಮನ ಹಬ್ಬದಲ್ಲಿ ಒಂದು ಮಡಕೆ ಕೆಂಡವನ್ನು ದೇವಾಲಯಕ್ಕೆ ಹೊತ್ತು ಹೋಗುತ್ತಾರೆ.

ದೇವಾಲಯದ ಹಬ್ಬದ ಉದ್ಘಾಟನೆಯನ್ನು ಸೂಚಿಸಲು ಬಾವುಟವನ್ನು ಹಾರಿಸಲಾಗುವುದು. ಪ್ರತಿಯೊಂದು ಕುಟುಂಬದಲ್ಲಿಯೂ ಒಂದು ಮಡಕೆಯಲ್ಲಿ ಮಣ್ಣು ಪ್ರತಿಯೊಂದು ಕುಟುಂಬದಲ್ಲಿಯೂ ಒಂದು ಮಡಕೆಯಲ್ಲಿ ಮಣ್ಣು ಹಾಕಿ ಭತ್ತ, ನವಣೆ ಮತ್ತು ಕಡಲೆಗಳನ್ನು ಬಿತ್ತುವರು. ಎಂಟನೆಯ ದಿನ ಕೊಡಗಳನ್ನು ದೇವಲಯಕ್ಕೆ ತರುವರು ಅಲ್ಲದೇ ಭಕ್ತಿ ಭಾವದಿಂದ ಆ ಮಣ್ಣಿನ ಮಡಕೆಗಳ ಸುತ್ತ ಪ್ರದಕ್ಷಿಣೆ ಬರುವರು ಹಬ್ಬದ ಕೊನೆಯ ಹಂತವಾಗಿ ಹತ್ತಿರದ ಕೆರೆ ಅಥವಾ ನದಿಗಳಲ್ಲಿ ಈ ಮಡಕೆಗಳನ್ನು ಮುಳುಗಿಸಲಾಗಿವುದು.

ಅಕ್ಕಿಯನ್ನು ಬೆಲ್ಲದ ಜೊತೆ ಬೆರೆಸಿ ಒಂದು ದೀಪದಂತೆ ಮಾಡಿ ಬತ್ತಿಯನ್ನು ಹಾಕಿ ದೇವರ ಎದುರಿನಲ್ಲಿ ಇಡುವುದು ತಮ್ಮ ಆದ್ಯ ಕರ್ತವ್ಯ ಎಂದು ಭಾವಿಸುತ್ತಾರೆ. ಕೊನೆಯಲ್ಲಿ ಅದನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ.

೪.೭. ಬೆಂಗಳೂರಿನ ಬಿಸಿಲು ಮಾರಮ್ಮ ಉತ್ಸವದ ಒಳನೋಟಗಳು :

ನಿಸರ್ಗದ ವಿರುದ್ದ ಸೆಟೆದು ನಿಂತ ಮನುಷ್ಯ ತನ್ನ ಅಸ್ತಿತ್ವಕ್ಕಾಗಿ ಹೋರಾಟ ನಡೆಸಬೇಕಾದ ತುರ್ತು ಅಗತ್ಯ, ಸಾವಿನ ಬಗ್ಗೆ ಅವನಲ್ಲಿದ್ದ ವಿಚಿತ್ರ ರೀತಿಯ ಮಾನಸಿಕ ಆತಂಕ ಹಾಗೂ ತಲ್ಲಣಗಳಿಂದ ತಪ್ಪಿಸಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿ, ಮನುಷ್ಯನ ಮೂಲಭೂತ ಸ್ವಭಾವವಾದ ಆಹ್ಲಾದಕಾರೀ ಮನೋಭಾವ ಈ ಮೂರೂ ಸ್ಥಿತಿ ಮುಪ್ಪುರಿಗೊಂಡು ಮನುಷ್ಯನ ಬದುಕನ್ನು ತೀವ್ರ ಸಂವೇದನೆಗೆ ಒಳಗು ಮಾಡಿದ್ದರ ಫಲವಾಗಿ ಕುಣಿತ ಹುಟ್ಟಿತು. ಮನುಷ್ಯನ ಸಮಸ್ತ

ಅಭಿವ್ಯಕ್ತಿಯ ಮಾಧ್ಯಮವಾಗಿ ಕುಣಿತವು ರೂಪುಗೊಂಡು ಅದರಿಂದ ಅವನು ಅತೀವವಾದ ಆನಂದ ಮತ್ತು ಮಾನಸಿಕ ತೃಪ್ತಿಗಳನ್ನು ಕಂಡುಕೊಂಡನು. ತನ್ನ ಬದುಕಿನ ಅತ್ಯಂತ ಆಪ್ತ ಸಂಗತಿಗಳನ್ನೂ ಸಹಾ ಕುಣಿತದ ಮೂಲಕ ಸಾಕಾರಗೊಳಿಸಿದನು. ವಾದ್ಯದವರ ಉತ್ಸವ, ಆವೇಶ ಬಡಿತಗಳೂ ಈ ಕುಣಿತಕ್ಕೆ ಹೆಚ್ಚು ಪ್ರಚೋದನೆಯನ್ನು ನೀಡುವುದನ್ನು ಗಮನಿಸಬಹುದು. ಬೆಂಗಳೂರಿನ ಮಾವಳ್ಳಿ ಪ್ರದೇಶದ ಚಿಕ್ಕ ಮಾವಳ್ಳಿ ಮತ್ತು ದೊಡ್ಡ ಮಾವಳ್ಳಿ ಪ್ರದೇಶದ ಬಿಸಿಲು ಮಾರಮ್ಮನ ಉತ್ಸವ ಜಾತ್ರೆ ಬೆಂಗಳೂರಿನ ಪ್ರಾಚೀನ ಕಾಲದ ಜನಪದ ಉತ್ಸವ. ಮುಂಚೆ ಕೆಂಪೇಗೌಡನ ಕಾಲದಲ್ಲಿ ೭ ವರ್ಷಕ್ಕೊಮ್ಮೆ ನಡೆಯುತ್ತಿದ್ದ ಈ ಆಚರಣೆ ಈಗ ಕೇವಲ ೩ ವರ್ಷಕ್ಕೊಮ್ಮೆ ಸೀಮಿತವಾಗಿದೆ. ಒಟ್ಟು ನಾಲ್ಕು ದಿನ ನಡೆಯುವ ಆಚರಣೆಗಳು ಮತ್ತು ಉತ್ಸವದ ವಿವರ ಹೀಗಿದೆ.

೧ನೇ ದಿನ ಬೆಳಿಗ್ಗೆ	–	ಪ್ರಸನ್ನ ಆಂಜನೇಯ ಸ್ವಾಮಿಗೆ ಅಭಿಷೇಕ
ಮಧ್ಯಾಹ್ನ ಹಾಗೂ ಸಂಜೆ	–	ಶ್ರೀ ಆಂಜನೇಯ ಸ್ವಾಮಿಗೆ ಮಂಗಳಾರತಿ, ಬೆಲ್ಲದ ಆರತಿಗಳು
ಸಂಜೆ	–	ಸಾಂಸ್ಕೃತಿಕ ಕಾರ್ಯಕ್ರಮಗಳು

ಮೊದಲ ದಿನದ ಈ ವಿವರವನ್ನು ಗಮನಿಸಿದಾಗ ಇದು ಬಿಸಿಲು ಮಾರಮ್ಮನ ಉತ್ಸವವಾದರೂ ಜನಪದ ದೈವ ಹಾಗೂ ಶಿಷ್ಟ ದೈವ ಎರಡೂ ವರ್ಗದವರಿಗೆ ಬೇಕಾದ ಆಂಜನೇಯ ಸ್ವಾಮಿಯ ಪೂಜೆಯಿಂದ ಉತ್ಸವ ಆರಂಭವಾಗುವುದು ಕುತೂಹಲಕರವಾದ ಸಂಗತಿಯಾಗಿದೆ. ಈ ವಿವರವನ್ನು ಕ್ಷೇತ್ರ ಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಈ ಬಗ್ಗೆ ಅಲ್ಲಿಯ ಸ್ಥಳಿಯರನ್ನು ಕೇಳಿದಾಗ ನಮ್ಮ ಗ್ರಾಮದೇವತೆಯ ಹಬ್ಬವು ಸಾರುವಿಕೆಯಿಂದ ಪ್ರಾರಂಭವಾಗುತ್ತದೆ. ಈ ಸಾರುವಿಕೆ ಗ್ರಾಮದ ಗಡಿ ಭಾಗದಿಂದ ಪ್ರಾರಂಭಿಸುವುದರಿಂದ ಗಡಿ ಕಾಯುವ ಸ್ವಾಮಿ ಆಂಜನೇಯ ಆಗಿರುವುದರಿಂದ ಈ ಉತ್ಸವದಲ್ಲಿ ಆ ದೇವನಿಗೆ ಪ್ರಥಮ ಸ್ಥಾನ ನೀಡಿರುವುದಾಗಿ ತಿಳಿಸಿದರು. ಸಾರಣಿ ಎಂತಲೂ ಇದನ್ನು ಕರೆಯುವರು. ಗ್ರಾಮ ದೇವತೆಯ ಹಬ್ಬಕ್ಕೆ ಗ್ರಾಮದ ಜನರನ್ನು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸಿದ್ದಗೊಳಿಸುವ ಆರಂಭದ ಆಚರಣೆಯು ಇದಾಗಿದೆ. ಹೀಗೆ ಸಾರುವ ವ್ಯಕ್ತಿಯನ್ನು ಗುರಿಕಾರ ಎಂದೂ ಕರೆಯುತ್ತಾರೆ. ಕೆಲವು ಕಡೆ ಪೂಜಾರಿಯೇ ಸಾರುವವನೂ ಆಗಿರುತ್ತಾನೆ. ಗ್ರಾಮವು ಸಮೃದ್ದವಾಗುವ ಸಂತೋಷವೂ ಗ್ರಾಮದೇವತೆಯ ಹಬ್ಬಕ್ಕೆ ನಾಂದಿ ಹಾಡುವುದು. ಕೆಲವು ಗ್ರಾಮಗಳಲ್ಲಿ ಸಾರುವಿಕೆಯನ್ನು ಕಂಬ ನೆಡುವುದರ ಮೂಲಕ ಸೂಚಿಸಲಾಗುತ್ತದೆ. ಇಲ್ಲಿಯೂ ಸಹಾ ಬಿಸಿಲು ಮಾರಮ್ಮನ ದೇವಾಲಯದ ಮುಂದೆ ಸಾರಿದ ದಿನ ಕಂಬ ನೆಡುತ್ತಾರೆ. ಕಂಬವಿಲ್ಲದ ಗ್ರಾಮದೇವತೆಗೆ ಅಸ್ತಿತ್ವವಿಲ್ಲ. ಕಂಬವನ್ನು ಗ್ರಾಮದೇವತೆಯ ಗಂಡನೆಂದೂ ಕೆಲವೆಡೆ ಪರಿಗಣಿಸುತ್ತಾರೆ. ನಿರ್ದಿಷ್ಟ ದಿನ ನಿರ್ದಿಷ್ಟ ವ್ಯಕ್ತಿಯೊಬ್ಬ ಸ್ನಾನ ಮಾಡಿ ಮರದ ಮೂರು

ಕವಲಿರುವ ಕೊಂಬೆಯನ್ನು ಒಂದೇ ಏಟಿಗೆ ಹೊಡೆದು ತರುತ್ತಾನೆ. ಆ ಕಂಬವನ್ನು ಸಕಲ ಗೌರವಗಳೊಂದಿಗೆ ನೆಡುತ್ತಾರೆ. ನೆಟ್ಟ ನಂತರ ಹಬ್ಬ ಶುರುವಾಗುತ್ತದೆ.

ಇಲ್ಲಿ ಚಿಕ್ಕ ಮಾವಳ್ಳಿ ಮತ್ತು ದೊಡ್ಡ ಮಾವಳ್ಳಿ ಎರಡೂ ಕಡೆ ಮಾರಮ್ಮನ ದೇವಸ್ಥಾನವಿದೆ. ಒಂದು ಬಿಸಿಲು ಮಾರಮ್ಮ, ಮತ್ತೊಂದು ದೊಡ್ಡ ಮಾರಮ್ಮ. ಇವಳನ್ನು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬಿಸಿಲಮ್ಮ ಎಂದೂ ಕರೆಯುವುದುಂಟು. ಬಿಸಿಲು ಕಾಲದಲ್ಲಿ ಪೂಜೆ ಮಾಡುವುದರಿಂದ ಎಂದು ಒಂದು ಅರ್ಥ ಬಂದರೆ, ಊರನ್ನು ಬಿಸಿಲಿನಿಂದ ಬರುವ ಸಾಂಕ್ರಾಮಿಕ ರೋಗಗಳಿಂದ ಕಾಪಾಡಲು ನೆಲೆನಿಂತಿರುವುದರಿಂದ ಬಿಸಿಲು ಮಾರಮ್ಮ ಎಂದು ಕರೆಯುವ ವಾಡಿಕೆಯಿದೆ, ಎಂದೂ ಹೇಳಬಹುದು.

ಎರಡನೆಯ ದಿನ ಬೆಳಿಗ್ಗೆ ಊರಿನ ಸುಮಂಗಲಿಯರು ಬಿಸಿಲು ಮಾರಮ್ಮ ದೇವಿಗೆ ಕೊಡಗಳಲ್ಲಿ ಅರಿಶಿನ ನೀರನ್ನು ಹೊತ್ತು ತಂದು ಅಭಿಷೇಕ ಮಾಡುತ್ತಾರೆ ಹಾಗೂ ಪಂಚಾಮೃತ ಅಭಿಷೇಕ ಮಾಡುತ್ತಾರೆ. ಗ್ರಾಮದೇವತೆಗಳು ಸ್ತ್ರೀ ಚೈತನ್ಯ ಶಕ್ತಿಯ ಆರಾಧನೆಯಾಗಿರುವುದರಿಂದ ಬಹುಶಃ ಸುಮಂಗಲಿಯರಿಂದಲೇ ಅರಿಶಿನದ ನೀರನ್ನು ಹೊತ್ತು ತರುವ ಪರಿಪಾಠ ಆರಂಭವಾಗಿರಬೇಕು. ಮಹಿಳೆ ಮತ್ತು ಗ್ರಾಮ ದೇವತೆಯ ನಡುವಿನ ಭಾವ ಸಂಬಂಧವನ್ನು ಗಟ್ಟಿಗೊಳಿಸುವ ನೆಲೆಯಲ್ಲಿಯೂ ಸಹಾ ಈ ಕ್ರಿಯೆ ಕೆಲಸಮಾಡುತ್ತದೆ. ಪ್ರತಿ ಮನೆಯವರೂ ತಮ್ಮ ಮನೆಯಿಂದಲೇ ಅರಿಶಿನದ ನೀರನ್ನು ಹೊತ್ತು ತರುವುದರಿಂದ ದೇವತೆಗೂ ಮನೆಗೂ ನಡುವಿನ ಸಂಬಂಧ ಗಟ್ಟಿಯಾಗಿ ಅವಳು ಕಾಯುತ್ತಾಳೆ ಎಂಬ ಅಚಲವಾದ ನಂಬಿಕೆ ಇಲ್ಲಿ ಕೆಲಸ ಮಾಡುವುದನ್ನು ಕಾಣಬಹುದು. ಇನ್ನು ಪಂಚಾಮೃತ ಅಭಿಷೇಕ ವೈದಿಕೀಕರಣಗೊಂಡ ಸಾಂಸ್ಕೃತಿಕ ಸಂಘರ್ಷದ ಫಲ. ಅರಿಶಿನದ ನೀರು ಸಾಮಾನ್ಯವಾಗಿ ಎಲ್ಲ ವೈದಿಕ ದೈವಗಳಿಗೆ ಪಂಚಾಮೃತ ನಂತರ ಮಾಡಿದರೆ, ಗ್ರಾಮ ದೇವತೆಗಳ ಆಚರಣೆಗಳಲ್ಲಿ ಮೊದಲು ಅರಿಶಿನದ ನೀರಿನ ಅಭಿಷೇಕ ಮಾಡಿಸಿ ನಂತರ ಪಂಚಾಮೃತ ಅಭಿಷೇಕ ಮಾಡುವುದನ್ನು ಕಾಣಬಹುದು. ಸಂಸ್ಕೃತಿಯ ಪ್ರಸರಣ ಕ್ರಿಯೆಯಲ್ಲಿ ಇಂತಹ ಆಚರಣೆಗಳು ಪ್ರಧಾನ ಪಾತ್ರವಹಿಸುತ್ತವೆ.

ಕರ್ನಾಟಕದ ಎಲ್ಲೆಡೆಯಲ್ಲಿ ಪ್ರಚಲಿತವಾಗಿರುವ ಗ್ರಾಮದೇವತೆಯ ಮೂಲ ಆಶಯ ಒಂದೇ ಆದರೂ ಅದರ ಒಳ ವಿವರಗಳನ್ನು ಸಣ್ಣ ಪುಟ್ಟ ವ್ಯತ್ಯಾಸಗಳಿರುವುದನ್ನು ಕಾಣುತ್ತೇವೆ. ಮೂಲದಲ್ಲಿ ಕಾಲರಾ, ಸಿಡುಬು, ಇನ್ನಿತರ ರೋಗಗಳ ದೇವತೆಯಾದ ಮಾರಮ್ಮನ ಕಥೆಗೆ ಮೂಲ ಪುರಾಣವು ಸೇರಿಕೊಂಡಿರುವ ಸಾಧ್ಯತೆಯಿದೆ. ಆರ್ಯರ ಆಗಮನದ ನಂತರ ಶಿಷ್ಟರ ಪುರಾಣಗಳಲ್ಲಿ ದಟ್ಟವಾಗಿ ಕಾಣಿಸಿಕೊಂಡ ರಾಕ್ಷಸ ಸಂಹಾರ ಪುರಾಣಗಳು ಜನಪದ ರೂಪವನ್ನು ಧರಿಸಿ ಗ್ರಾಮ ದೇವತೆಗಳ ಕಥೆಗಳಲ್ಲಿ ಸೇರಿಕೊಂಡವು ಎನ್.ಎನ್. ಭಟ್ಟಾಚಾರ್ಯರು ಪುರಾಣ ಕಥೆಗಳಿಗಿಂತ ಭಿನ್ನವಾದ, ಸರಳವಾದ ಕಥೆಗಳು ಮಾರಮ್ಮನನ್ನೇ ಕುರಿತು ಪ್ರಚಲಿತವಾಗಿರುವುದನ್ನು ಗುರುತಿಸಿದ್ದಾರೆ. ಅವರ ಈ ಕಥೆಗಳು ಸ್ಥಳೀಯದಂತ ಕತೆಗಳೆಂದು ಹೇಳಬಹುದು. ಅವುಗಳು

ಶಿಷ್ಟ ಪುರಾಣದ ವಿಕೃತ ರೂಪಗಳೆಂದು ಹೇಳಬಹುದು. ಈ ಸಂಬಂಧದಲ್ಲಿ ಅವರು ಮೂರು ಕತೆಗಳನ್ನು ಸೂಚಿಸಿದ್ದಾರೆ. ಒಂದು ಕತೆಯಲ್ಲಿ ಮಾರಮ್ಮನ ಹೆಸರು ನಾಗವಲ್ಲಿ, ಈಕೆ ವೆರುಹು ಎಂಬ ಋಷಿಯ ಹೆಂಡತಿ, ಋಷಿಯು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಅವಳ ಸೌಂದರ್ಯವನ್ನು ಪರೀಕ್ಷಿಸಲು ಮೂವರು ದೇವತೆಗಳು ಬರುತ್ತಾರೆ. ಅವರ ದುರುದ್ದೇಶವನ್ನು ಗ್ರಹಿಸಿ ಅವರನ್ನು ಮಕ್ಕಳಾಗಿ ರೂಪಾಂತರಗೊಳಿಸಿದಳು. ಕೋಪಗೊಂಡ ದೇವತೆಗಳು ಶಾಪ ಹಾಕಿದರು. ಅವಳ ಸೌಂದರ್ಯ ನಾಶವಾಗಿ ಮುಖದಲ್ಲಿ ಸಿಡುಬಿನ ಕಲೆಗಳು ಕಾಣಿಸಿಕೊಂಡವು. ಈ ಕಥೆಗಳು ಶಿಷ್ಟ ಪುರಾಣದಲ್ಲಿ ಪ್ರಸಿದ್ದವಾದ ಅನಸೂಯೆಯ ಕಥೆ. ಅತ್ರಿ ಮಹಾಮುನಿಯ ಪತ್ನಿಯಾದ ಈಕೆಯ ಪಾತಿವ್ರತ್ಯವನ್ನು ಪರೀಕ್ಷಿಸಲು ತ್ರಿಮೂರ್ತಿಗಳು ಬಂದು ಈಕೆಯನ್ನು ಮೆಚ್ಚಿ ವರಪ್ರಧಾನ ಮಾಡುವ ಕತೆಯೇ ಹೀಗೆ ಜನಪದೀಕರಣಗೊಂಡಿದೆ ಎನ್ನಬಹುದು. ಆನಪದ ದಂತ ಕಥೆಯ ನಾಗವಲ್ಲಿಗೆ ಉಂಟಾಗುವ ಸಿಡುಬಿನ ಕಲೆಗೂ, ಮಾರಿ ದೇವತೆಗೂ ಸಂಬಂಧವಿದೆ. ಇನ್ನೊಂದು ಕಥೆಯಲ್ಲಿ ಮಾರಮ್ಮ ತಮಿಳು ಕವಿ ತಿರುವಳ್ಳವರ್ ಅವರ ಹೆಂಡತಿ ಅವಳಿಗೆ ಉಂಟಾಗುವ ಸಿಡುಬು ರೋಗವನ್ನು ಆಕೆ ಬೇವಿನ ಎಲೆಯಿಂದ ಬೀಸಿಕೊಳ್ಳುವುದರ ಮೂಲಕ ಗುಣಪಡಿಸಿಕೊಳ್ಳುತ್ತಾಳೆ. ಇದನ್ನು ಕಂಡ ಜನರು ಈಕೆಯನ್ನು ಸಿಡುಬಿನ ದೇವತೆಯೆಂದು ಪೂಜಿಸಲು ಪ್ರಾರಂಭಿಸಿದರು. ಈ ಕಥೆಯು ಸರಳವಾಗಿದೆ. ಮರಮ್ಮ ಬೇವಿನನ ಸೊಪ್ಪಿನಿಂದ ಸಿಡಿಬನ್ನು ವಾಸಿಮಾಡಲು ಸಾಧ್ಯವೆಂದು ತೋರಿಸಿಕೊಟ್ಟಿದ್ದರಿಂದ ಜನ ಆಕೆಯನ್ನು ಕೃತಜ್ಞತಾಪೂರ್ವಕವಾಗಿ ಆರಾಧಿಸತೊಡಗಿದ್ದು ಅರ್ಥಪೂರ್ಣವಾಗಿವೆ. ಮಾರಿ ಹಬ್ಬದಲ್ಲಿ ಬೇವಿನ ಸೊಪ್ಪಿನ ಪ್ರಾಧಾನ್ಯತೆಗೆ ಈ ಪುರಾಣ ವಿವರಣೆಯನ್ನು ಕೊಟ್ಟಿದೆ.

ಎನ್.ಎನ್. ಭಟ್ಟಾಚಾರ್ಯ ಅವರು ದಾಖಲು ಮಾಡಿರುವ ಮೂರನೆಯ ಕತೆಯು ಕುತೂಹಲಕಾರಿಯಾಗಿದೆ. ಮಾರಮ್ಮ ಜಮದಗ್ನಿಯ ಹೆಂಡತಿ. ಈಕೆಯ ಪಾತಿವ್ರತ್ಯವನ್ನು ಶಂಕಿಸಿದ ಜಮದಗ್ನಿ ಮಗನಾದ ಪರಶುರಾಮನನ್ನು ತನ್ನ ತಾಯಿಯ ಶಿರಚ್ಛೇದ ಮಾಡುವಂತೆ ಹೇಳಿದ. ಹಾಗೆ ತಾಯಿಯ ಶಿರವನ್ನು ಕತ್ತರಿಸುವಾಗ ಆಕೆಯ ಮನೆಯಲ್ಲಿ ಸೇವಕಿಯಾಗಿದ್ದ ಹೊಲೆಯರ ಹೆಣ್ಣುಮಗಳೊಬ್ಬಳು ಮಾರಮ್ಮನನ್ನು ತಬ್ಬಿಕೊಂಡಳು. ಈ ಕಾರಣದಿಂದ ಇಬ್ಬರಿಗೂ ಶಿರಚ್ಛೇದನವಾಯಿತು. ಮಗನ ಪಿತೃವಾಕ್ಯ ಪರಿಪಾಲನೆಯನ್ನು ಮೆಚ್ಚಿದ ಜಮದಗ್ನಿ ಅವನಿಗೆ ಪವಿತ್ರ ಜಲವನ್ನು ದಂಡವನ್ನೂ ಕೊಟ್ಟು, ತಲೆಯನ್ನು ದಂಡದಿಂದ ಸ್ಪರ್ಷಿಸಿ ಜಲವನ್ನು ಚಿಮುಕಿಸಿ ದೇಹಕ್ಕೆ ಜೋಡಿಸುವಂತೆ ಹೇಳಿದ. ಪರಶುರಾಮ ಅತ್ಯುತ್ಸಾಹದಲ್ಲಿ ತನ್ನ ತಾಯಿಯ ತಲೆಯನ್ನು ಹೊಲತಿಯ ದೇಹಕ್ಕೂ, ಹೊಲತಿಯ ತಲೆಯನ್ನು ತಾಯಿಯ ದೇಹಕ್ಕೂ ಜೋಡಿಸಿಟ್ಟ, ಬ್ರಾಹ್ಮಣತಿಯ ತಲೆ ಹೊಲತಿಯ ದೇಹದವಳು ಮಾರಿಯಮ್ಮನಾದಳು, ಹೊಲತಿಯ ತಲೆ, ಬ್ರಾಹ್ಮಣತಿಯ ದೇಹದವಳು ಎಲ್ಲಮ್ಮನಾದಳು. ಈ ಕಥೆಯು ಆರ್ಯರು ದಕ್ಷಿಣ ಭಾರತಕ್ಕೆ ಆಗಮಿಸಿದ ಪ್ರಾರಂಭದ ದಿನಗಳಲ್ಲಿ ಆರ್ಯ ದ್ರಾವಿಡ ಪಂಥಗಳು ಬೆಸೆದುಕೊಂಡಿದ್ದನ್ನು

ಹೇಳುತ್ತಾರೆ. ಹೊಲತಿಯ ಮುಂಡ ಮತ್ತು ಬ್ರಾಹ್ಮಣತಿಯ ರುಂಡದ ಜೋಡಣೆ ಶಿವನ ಪಂಥದ ಸೂಚನೆಯಾಗಿದೆ. ಹೊಲತಿಯ ರುಂಡ ಮತ್ತು ಬ್ರಾಹ್ಮಣತಿಯ ಮುಂಡ ಪ್ರಾಚೀನ ದ್ರಾವಿಡ ಪಂಥವೊಂದು ವೈದಿಕ ವಿಚಾರಗಳಿಂದ ಪರಿಷ್ಕೃತ ಗೊಂಡಿದ್ದರ ಸೂಚನೆಯಾಗಿದೆ. ಎಂದು ಹೆನ್ರಿ ವೈಟ್ ಹೆಡ್ ಅಭಿಪ್ರಾಯ ಪಡುತ್ತಾರೆ.

ಇವುಗಳನ್ನು ಪರಿಶೀಲಿಸಿದಾಗ ಆರ್ಯ ದ್ರಾವಿಡ ಸಂಸ್ಕೃತಿಯ ಸಂಘರ್ಷದ ಕಾಲದಲ್ಲಿ ಜನಪದ ಗ್ರಾಮೀಣ ದೇವತೆಗಳ ಕತೆಗಳೂ ಮತ್ತು ಆಚರಣೆಗಳೂ ಒಂದಕ್ಕೊಂದು ಪೂರಕವಾಗಿ ಹೆಣೆದುಕೊಂಡು ಕಾಲಾನುಕ್ರಮದಲ್ಲಿ ಹಲವಾರು ಸಾಮ್ಯತೆ, ಭಿನ್ನತೆಗಳಿಗೆ ಒಳಪಟ್ಟಿರುವುದನ್ನು ಗಮನಿಸಬಹುದಾಗಿದೆ.

ಎರಡನೆಯ ಮಧ್ಯಾಹ್ನ ಬಿಸಿಲು ಮಾರಮ್ಮ ದೇವಿಯ ಉಯ್ಯಾಲೆ ಪೂಜೆಯಿಂದ ಜಾತ್ರೆ ಆರಂಭವಾಗುತ್ತದೆ. ಮೊದಲು ದೇವಿಯನ್ನು ಉಯ್ಯಾಲೆಯಲ್ಲಿ ಕೂರಿಸಿ ಎಷ್ಟು ಎತ್ತರಕ್ಕೆ ಸಾಧ್ಯವೋ ಅಷ್ಟು ಎತ್ತರವಾಗಿ ತೂಗುತ್ತಾರೆ. ನಂತರ ಹರಕೆ ಹೊತ್ತ ಯಾರು ಬೇಕಾದರೂ ಉಯ್ಯಾಲೆ ಸೇವೆಯನ್ನು ಮುಂದುವರೆಸಬಹುದು. ನಿಯಮವೆಂದರೆ ಉಯ್ಯಾಲೆಸೇವೆ ಸಲ್ಲಿಸುವವರು ಮೊದಲು ಸಿಡೀರಣ್ಣನನ್ನು ಬೆನ್ನ ಮೇಲೆ ಹೊತ್ತು ೩ ರಿಂದ ೪ ನಿಮಿಷ ಉಯ್ಯಾಲೆಯ ಮುಂದೆ ಕುಣಿದು ನೃತ್ಯ ಸೇವೆಯನ್ನು ಸಲ್ಲಿಸಿ, ಸಿಡೀರಣ್ಣನನ್ನು ಇಳಿಸಿ ಉಯ್ಯಾಲೆ ಏರುತ್ತಾರೆ. ಪೈಪೋಟಿಯ ಮೇರೆಗೆ ಉಯ್ಯಾಲೆ ಸೇವೆ ನಡೆಸುತ್ತಾರೆ. ನಂತರ ಅದೇ ದಿನ ಸಂಜೆ ಹರಕೆ ಹೊತ್ತವರಿಂದ ಬಾಯಿ ಬೀಗ ಚುಚ್ಚಿಸಿಕೊಳ್ಳುವ ಸಂಪ್ರದಾಯವೂ ಸಹಾ ನಡೆಯುತ್ತದೆ. ಹರಸಿಕೊಂಡವರು ತಾಮ್ರದ ತಂತಿಯಿಂದ ಎರಡೂ ಕೆನ್ನೆಯನ್ನು ತೂತು ಮಾಡಿಸಿಕೊಂಡು ಬಾಯಿಗೆ ಬೀಗ ಹಾಕಿಸಿಕೊಳ್ಳುವರು. ಈ ಸಂದರ್ಭದಲ್ಲಿ ಅವರು ಮಾತನಾಡಲು ಸಾಧ್ಯವಾಗುವುದಿಲ್ಲ. ನಿರ್ದಿಷ್ಟ ಕುಟುಂಬದವರೇ ಬಾಯಿ ಬೀಗ ಹಾಕಿ ತೆಗೆಯುವ ಹಕ್ಕನ್ನುಳ್ಳವರಾಗಿರುತ್ತಾರೆ. ಇದಕ್ಕೆ ಕಾಣಿಕೆ ತೆಗೆದುಕೊಳ್ಳುವರು. ಹೆಂಗಸರು ಗಂಡಸರು ಎಂಬ ಭೇದವಿಲ್ಲದೆ ಯಾರು ಬೇಕಾದರೂ ಬಾಯಿ ಬೀಗವನ್ನು ಚುಚ್ಚಿಸಿಕೊಳ್ಳಬಹುದು. ಕೆಲವು ಕಡೆ ಕೊಂಡದ ನಂತರ ಬಾಯಿ ಬೀಗ ತೆರೆದರೆ, ಇನ್ನು ಹಲವೆಡೆ ಜಾತ್ರೆಯ ಕಡೆಯ ದಿನ ಹಾಕಿದ ಬಾಯಿಬೀಗವನ್ನು ತೆಗೆಯುತ್ತಾರೆ. ಈ ಉಗ್ರ ಆಚರಣೆಯ ಬಗ್ಗೆ ವಿಚಾರಿಸಿದಾಗ ಈಕೆ ಬಹು ಉಗ್ರ ದೇವತೆಯಾದ್ದರಿಂದ ತಮ್ಮ ಬೇಡಿಕೆಗಳು ಈಡೇರಬೇಕಾದರೆ ಇಂಥಹ ಉಗ್ರ ಆಚರಣೆಗಳನ್ನು ತಮ್ಮ ಹಿರಿಯರು ಪಾಲಿಸುತ್ತಾ ಬಂದಿರುವುದರಿಂದ ತಾವು ಅದನ್ನೇ ಆಚರಿಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು.

ಮಧ್ಯರಾತ್ರಿ ೧–೩೦ಕ್ಕೆ ಗ್ರಾಮದ ಒಳಿತಿಗಾಗಿ ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಬಲಿಚೆಲ್ಲುವ ಸಂಪ್ರದಾಯ ನಡೆಯುತ್ತದೆ. ಬಲಿ ಚೆಲ್ಲುವ ಮುನ್ನ ಸುತ್ತ ಮುತ್ತಲೂ ಯಾರೂ ಓಡಾಡಬಾರದು ಎಂಬ ನಿಯಮವನ್ನು ಅನುಸರಿಸುತ್ತಾರೆ. ಆದರೆ ಈಗ ಮೂಢನಂಬಿಕೆಗಳ ಪ್ರತಿಬಂಧಕ ಕಾಯ್ದೆ ಇರುವುದರಿಂದ ಬಲಿಯನ್ನು ಚೆಲ್ಲದೆ ಸಾಂಕೇತಿಕವಾಗಿ ಈ ಕಾರ್ಯಕ್ರಮವನ್ನು ನಡೆಸುತ್ತಾರೆ.

ಇದಕ್ಕೆ ಮುನ್ನ ರಾತ್ರಿ ಹನ್ನೆರಡು ಗಂಟೆಗೆ ದೇವತೆಗೆ ಬಲಿಕೊಡುವರು. ಮಡಿವಾಳರು ದೇವತೆಯ ಎದುರಿಗೆ ನಾಲ್ಕು ಕಂಬ ನೆಟ್ಟು ದುಪ್ಪಟಿಯಿಂದ ಗೂಡು ನಿರ್ಮಿಸಿ, ಕುಂಕುಮವನ್ನು, ಬಳೆಯನ್ನು, ಮೊಸರನ್ನದ ರಾಶಿ ಹಾಕುವರು. ಎಲ್ಲಾ ಭಾಗದಲ್ಲಿಯೂ ಬಲಿ ಚೆಲ್ಲಿ ಮೂರು ರಸ್ತೆ ಕೂಡುವ ಜಾಗದಲ್ಲಿ ಈ ಮೂರು ಅನ್ನವನ್ನಿಟ್ಟು ಒಂದು ದೀಪ ಹಚ್ಚಿಡುತ್ತಾನೆ. ಊರ ತಳವಾರರು ಬಲಿಯೋಬಲಿ ಎಂದು ಕೂಗುತ್ತಾ ಬರುತ್ತಾರೆ. ಇದರಿಂದ ಊರಿಗೆ ದುಷ್ಟ ಶಕ್ತಿಗಳು ಪ್ರವೇಶಿಸುವುದಿಲ್ಲ ಎಂಬ ನಂಬಿಕೆಯಿದೆ. ಮಳೆ ಬೆಳೆ ಸಮೃದ್ದಿಯಾಗಿ ಆಗುತ್ತದೆಂಬ ಭರವಸೆ ಜನರಿಗೆ ಮೂಡುತ್ತದೆ.

ಮೂರನೆಯ ದಿನ ಬೆಳಿಗ್ಗೆ ಕೊಂಡ ಹಾಯುವ ಕಾರ್ಯಕ್ರಮ. ಕೆಂಡದ ಸೇವೆ ವಂಶಸ್ಥರಿಂದ ಅಗ್ನಿ ಕೊಂಡಕ್ಕೆ ಪೂಜೆ ಹಾಗೂ ಅಗ್ನಿ ಸ್ಪರ್ಶ ಕಾರ್ಯಕ್ರಮ ನಡೆಯುತ್ತದೆ. ಆರತಿ ಹೊತ್ತು ಕೊಂಡ ಹಾಯುವ ಸಂಪ್ರದಾಯ ಕೆಲವೆಡೆ ಕಂಡು ಬರುತ್ತದೆ. ಕೆಲವು ಕಡೆ ಇದನ್ನು ಅಗ್ನಿಕೊಂಡ ಎಂದೇ ಕರೆಯುತ್ತಾರೆ. ಕೊಂಡ ಹಾಯುವ ಆಚರಣೆ ಅಗ್ನಿ ಪ್ರವೇಶವಲ್ಲದಿದ್ದರೂ ಅಗ್ನಿ ಸಂಬಂಧವಾದುದು. ಇಲ್ಲಿ ಭಕ್ತರು ಉರಿಯುವ ಕೆಂಡವನ್ನು ತುಳಿದುಕೊಂಡು ಓಡುವುದನ್ನು ಕಾಣಬಹುದು. ಈ ಸಂಧರ್ಭದಲ್ಲಿ ಅವರಿಗೆ ಕಾಲು ಸುಡುವುದಿಲ್ಲ ಎಂದೂ ಹೇಳುತ್ತಾರೆ. ಅದು ಅವರವರ ನಂಬಿಕೆಯ ಪ್ರತೀಕ.

ನಂತರ ಆರತಿ ಸೇವೆ – ಒಂದು ಬುಟ್ಟಿ ಅಥವಾ ತಣಿಗೆ, ತಪ್ಪಲೆಯಲ್ಲಿ ತಂಬಿಟ್ಟನ್ನು ಮಡಿಟ್ಟು ಅದರ ಮೇಲೆ ದೀಪ ಹಚ್ಚಿ ಹೆಣ್ಣು ಮಕ್ಕಳು ಮೆರವಣಿಗೆಯಲ್ಲಿ ಹೊತ್ತು ತರುವರು. ಬರೀ ತಂಬಿಟ್ಟಿದ್ದಾಗ ಅದನ್ನು ತಂಬಿಟ್ಟನಾರತಿ ಎಂದೂ, ಬೆಲ್ಲ ಇದ್ದರೆ ಬೆಲ್ಲದಾರತಿ ಎಂದೂ, ದೀಪಗಳು ಮಾತ್ರ ಇದ್ದಾಗ ದೀಪದಾರತಿ ಎಂದೂ ಕರೆಯುವರು. ಆರತಿಯಲ್ಲಿ ಹೊಂಬಾಳೆ, ಬೇವಿನಸೊಪ್ಪು ಇರುತ್ತದೆ. ಇದನ್ನು ಮೆರವಣಿಗೆಯಲ್ಲಿ ತಂದು ದೇವತೆಗೆ ಬೆಳಗಿ ಹಿಂದಕ್ಕೆ ತೆಗೆದುಕೊಂಡು ಹೋಗುವರು. ಕರ್ನಾಟಕದ ಹಲವು ಭಾಗಗಳಲ್ಲಿ ಪುರುಷರು ಮತ್ತು ಊರ ಯಜಮಾನರೇ ಆರತಿ ಹೊರುತ್ತಿದ್ದರೆಂಬ ಅಂಶವನ್ನು ವೈಟ್ ಹೆಡ್ ರವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

ದೇವತೆಗೆ ಆರತಿ ತರುವಾಗ ಮೊದಲು ಊರ ಮುಖಂಡನ ಆರತಿ, ನಂತರ. ಇಲ್ಲಿ ಗ್ರಾಮದ ಮಡಿವಾಳ ಜನಾಂಗದವರಿಂದ ಗ್ರಾಮ ದೇವತೆಗೆ ಮೊದಲ ಆರತಿ ಸೇವೆ ನಡೆಯುತ್ತದೆ. (ಕ್ಷೇತ್ರಕಾರ್ಯದ ಮಾಹಿತಿ) ನಂತರ ಉಳಿದ ಗ್ರಾಮದ ಹೆಂಗೆಳೆಯರು ಆರತಿ ಹೊರುವ ಸಂಪ್ರದಾಯವನ್ನು ನಡೆಸುತ್ತಾರೆ. ಪ್ರತಿ ಮನೆಯಿಂದಲೂ ಗ್ರಾಮ ದೇವತೆ, ಕುಲ ದೇವತೆ, ಇಷ್ಟದೇವತೆಗೆ ಇಚ್ಚಾನುಸಾರ ಆರತಿ ತಟ್ಟೆ ಹೊತ್ತು ತರುತ್ತಾರೆ. ಅಕ್ಕಿಯನ್ನು ತೊಳೆದು ಒಣಹಾಕಿ ಕೈಯಿಂದ ಕುಟ್ಟಿ ಹಿಟ್ಟು ಮಾಡಿ ಅದಕ್ಕೆ ಬೆಲ್ಲದ ಪಾಕದ ಮಿಶ್ರಣವನ್ನು ಬೆರೆಸಿ ತಯಾರಿಸಿದ ತಂಬಿಟ್ಟಿನ ಮಧ್ಯೆ ತುಪ್ಪದ ಬತ್ತಿಯನ್ನು ಬೆಳಗಿ ಆರತಿ ಹೊತ್ತು ತರುತ್ತಾರೆ. ಕೆಲವರು ತಟ್ಟೆಯಲ್ಲಿ ಆರತಿ ಹೊತ್ತು ತಂದರೆ, ಕೆಲವು ಮನೆತನದವರು ಹೂವಿನಿಂದ ಸಿಂಗರಿಸಿದ ನೀರಿನ ಕೊಡಪಾನದ

ಮೇಲೆ ಆರತಿ ತಟ್ಟೆಯನ್ನು ಹಿಡಿದು ಬಂದು ದೇವಿಗೆ ಭಯಭಕ್ತಿಯಿಂದ ಆರತಿ ಮಾಡುತ್ತಾರೆ. ಪ್ರತಿ ಮನೆಯವರೂ ಅಡಿಕೆ, ಹೊಂಬಾಳೆ, ತಾಳೆಗರಿ– ಹೀಗೆ ವಿವಿಧ ಸಸ್ಯ, ಹೂವುಗಳಿಂದ ಅಲಂಕೃತಗೊಂಡ ಆರತಿ ತಟ್ಟೆಯನ್ನು ಅವರವರು ಪಾಲಿಸಿಕೊಂಡು ಬಂದ ಸಂಪ್ರದಾಯಕ್ಕನುಗುಣವಾಗಿ ಆರತಿಯನ್ನು ಹೊತ್ತು ತರುತ್ತಾರೆ.

ಶಿಷ್ಟ ದೈವವನ್ನು ಆರಾಧಿಸುವಲ್ಲಿ ಈ ಮಾದರಿಯ ತಂಬಿಟ್ಟಿನ ಆರತಿಯ ಆಚರಣೆಗಳು ಕಡಿಮೆ. ಅಲ್ಲಿ ಕೇವಲ ಪೂಜಾರಿಯೊಬ್ಬ ಆರತಿ ಬೆಳಗುತ್ತಾನೆ. ತಮಿಳು ನಾಡಿನಿಂದ ವಲಸೆ ಬಂದ ಹೆಣ್ಣು ದೈವಗಳಿಗೆ ತಂಬಿಟ್ಟಿನ ಆರತಿಗೆ ಪರ್ಯಾಯವಾಗಿ ನಿಂಬೆ ಹಣ್ಣಿನ ಮತ್ತು ಬೆಲ್ಲದ ಆರತಿಗಳನ್ನು ಹರಸಿಕೊಂಡು ಬೆಳಗುವುದೂ ಉಂಟು. ಆರತಿ ಹೊತ್ತ ಹೆಣ್ಣು ಮಕ್ಕಳು ಅಗ್ನಿಕೊಂಡದ ಸುತ್ತಾ ಮೂರು ಪ್ರದಕ್ಷಿಣೆ ಮಾಡಿಸಿ ಆರತಿ ಹೊರಿಸುತ್ತಾರೆ. ನಂತರ ಮಾರಮ್ಮ ದೇವಿಯನ್ನು ಹೂವಿನ ಪಲ್ಲಕ್ಕಿ ರಥದಲ್ಲಿ ಆಂಜನೇಯ ಸ್ವಾಮಿ ದೇವಾಲಯದಿಂದ ಮುಂಭಾಗದ ಬಿಸಿಲು ಮಾರಮ್ಮ ದೇವಿಯ ಆವರಣಕ್ಕೆ ತರುತ್ತಾರೆ. ಅಗ್ನಿಕೊಂಡಕ್ಕೆ ಯಾರು ಬೇಕಾದರೂ ಸೌದೆಯನ್ನು ಹಾಕಬಹುದು. ಮೊದಲು ಆರತಿ ಹೊತ್ತವರು ಕೊಂಡವನ್ನು ದಾಟಿ ಗುಡಿಯನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡುವರು. ನಂತರ ಬಾಯಿ ಬೀಗದವರು ಹಾಯುತ್ತಾರೆ. ನಂತರ ಹರಕೆ ಮಾಡಿಕೊಂಡವರು ಕೈಗೆ ಕೆಂಡ ಹುಯ್ಯಿಸಿಕೊಳ್ಳುವರು. ಆದರೆ ಆಧುನೀಕತೆಯಿಂದ ಇತ್ತಿಚೆಗೆ ಈ ಆಚರಣೆಗಳು ಇತ್ತೀಚೆಗೆ ಮಸುಕಾಗುತ್ತಿವೆ ಎಂದು ತಿಳಿಸಿದರು.

ನಂತರ ಪಟಾಲಮ್ಮ ದೇವಿಗೆ ಪೂಜೆ ಸಲ್ಲಿಕೆ ನಡೆಯುತ್ತದೆ. ಪಟಾಲಮ್ಮನ ಪೂಜೆಯ ನಂತರ ಸಿಡಿಮರದ ಪೂಜೆ ಮತ್ತು ಸಿಡೀರಣ್ಣನಿಗೆ ತಿರುಗಣಿ ಸೇವೆ ನಡೆಯುತ್ತದೆ. ಈ ಸಿಡಿಯ ಆಚರಣೆಯಲ್ಲಿ ಹಲವಾರು ಬಗೆಗಳಿವೆ. ತೊಟ್ಟಿಲು ಸಿಡಿ, ಬೆನ್ನ ಸಿಡಿ, ಗೊಂಬೆ ಸಿಡಿ, ಹೀಗೆ ವೈವಿಧ್ಯತೆಯನ್ನು ಕಾಣಬಹುದು. ಸಿಡಿಯ ಆಚರಣೆಯಲ್ಲಿ ಸಿಡೀರಣ್ಣನದೇ ಬಹಳ ಮುಖ್ಯ ಪಾತ್ರ, ಸಿಡೀರಣ್ಣನ ಗೊಂಬೆಯನ್ನು ತೊಟ್ಟಿಲಿನಲ್ಲಿಟ್ಟು ಇನ್ನೊಂದು ತುದಿಯ ಹಗ್ಗವನ್ನು ಎಳೆಯುತ್ತಾ ಸುತ್ತಿಸುವರು. ಸಿಡೀರಣ್ಣನನ್ನು ಗ್ರಾಮದೇವತೆಯ ಮಗನೆಂದೂ ಭಾವಿಸುವರು.

ಅಮ್ಮನ ಗುಡಿಯಲ್ಲಿ ಮಾರಮ್ಮ ಒಬ್ಬಳೇ
ಮಗನೆಲ್ಲಿ ಹೋದ ಸಿಡೀರಣ್ಣ! ತಾಯೆ
ಸಿಡಿಯಾಡಿ ಗುಡಿಗೆ ಬರಲೋದ! ತಾಯೆ
ಸಿಡಿಮರಕೆ ಬೆನ್ನ ಕೊಡಲೋದ.[೧೨] (ಗ್ರಾಮದೇವತೆಗಳು ಅಧ್ಯಯನ ಸಿದ್ದಲಿಂಗಯ್ಯ. ೧೦೮)

ಮೇಲಿನ ಹಾಡಿನಲ್ಲಿ ಸಿಹಿ ಮತ್ತು ಸಿಡೀರನ ಸಂಬಂಧ ವ್ಯಕ್ತವಾಗುತ್ತದೆ. ಸಿಡೀರಣ್ಣನ ಗೊಂಬೆಯನ್ನು ಸುತ್ತಿಸುವುದರಿಂದ ಇದನ್ನು ಗೊಂಬೆಸಿಡಿ ಎಂದೂ ಕರೆಯುತ್ತಾರೆ. ಈ ಸಂಪ್ರದಾಯವಿರುವ ಎಲ್ಲ ದೇವತೆಗಳೂ ಮಾರಿ, ದುರ್ಗ, ಊರಮ್ಮಗಳೇ ಆಗಿರುವುದು ಮುಖ್ಯ ಸಂಗತಿ.

ನಾಲ್ಕನೆಯ ಹಾಗೂ ಕೊನೆಯ ದಿನ ಮಧ್ಯಾಹ್ನ ಗ್ರಾಮದ ಹೆಣ್ಣುಮಕ್ಕಳು ಓಕುಳಿ ನೀರನ್ನು ಸ್ಪರ್ಧೆ ನಡೆಯುವ ಸ್ಥಳಕ್ಕೆ ತರುತ್ತಾರೆ. ಯುವಕರ ತಂಡದಿಂದ ಮಲ್ಲ ಕಂಬ ಹತ್ತುವ ಸ್ಪರ್ಧೆ ನಡೆಯುತ್ತದೆ. ಇದಕ್ಕೆ ಗ್ರೀಸ್ ಕಂಬ ಹತ್ತುವುದು ಎಂದೂ ಕರೆಯುತ್ತಾರೆ. ಯುವಕರು ಎಣ್ಣೆ ಹಚ್ಚಿದ ಕಂಬವನ್ನು ಹತ್ತುವಾಗ ಸಮಯವನ್ನು ನಿಗದಿಪಡಿಸುತ್ತಾರೆ. ಅವರು ಹತ್ತಲಾಗದಂತೆ ಅಡ್ಡಿಪಡಿಸಿ ಸುತ್ತಲೂ ಇರುವವರು ಅವರ ಮೇಲೆ ಓಕುಳಿ ನೀರನ್ನು ಎರಚುತ್ತಾರೆ. ಕಾಲಮಾನಕ್ಕೆ ತಕ್ಕಂತೆ ಈ ಕ್ರೀಡೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. ಯುವಕರು ಹಿಂದೆ ಒಬ್ಬರೇ ಹತ್ತುತ್ತಿದ್ದವರು ಈಗ ಸಮೂಹ ಕ್ರೀಡೆಯಾಗಿ ಬದಲಾಗಿ ಪಿರಮಿಡ್ ರಚಿಸಿ ಒಬ್ಬರ ಮೇಲೊಬ್ಬರು ಹತ್ತಿ ತುದಿಯಲ್ಲಿ ಕಟ್ಟಿರುವ ಕಾಯಿ/ಮಡಕೆಯನ್ನು ಕೋಲಿನಿಂದ ಹೊಡೆಯುತ್ತಾರೆ. ಇದು ಅವರ ಏಕಾಗ್ರತೆ, ಏಕತೆ ಎರಡನ್ನೂ ಇಮ್ಮಡಿಗೊಳಿಸುತ್ತದೆ. ಇದರ ನಂತರ ಉಟ್ಲುಕಾಯಿ ಹೊಡೆಯುವ ಕ್ರೀಡೆಯೂ ಹಾ ನಡೆಯುತ್ತದೆ. ಪುರಾಣ ಪ್ರಸಂಗವೊಂದರ ಅಭಿನಯ ಆಚರಣೆ ಎನ್ನುವುದಕ್ಕೆ ಈ ಆಚರಣೆ ಉತ್ತಮ ಉದಾಹರಣೆ. ಮರಕ್ಕೆ ಒಂದು ತೊಲೆ ಹಾಕಿ ಅದರ ಮೇಲೆ ಉಟ್ಲುಕಾಯಿಯನ್ನು ತೂಗಿ ಬಿಡುತ್ತಾರೆ. ಅದಕ್ಕೆ ದೊಣ್ಣೆಯಿಂದ ಸುತ್ತುಗಟ್ಟಿ ಒಡೆಯುತ್ತಾರೆ. ಪ್ರಾರಂಭದಲ್ಲಿ ಕರಗ ಹೊತ್ತ ವ್ಯಕ್ತಿ ಗಟೆಯನ್ನು ಹೊಡೆದಾಗ ಜನ ಅವನ ಕೈ ಬಳೆಗಳನ್ನು ಒಡೆದು ಹಾಕುವರು. ಹೊಡೆಯುವವನಿಗೆ ಅರಿಸಿನದ ನೀರನ್ನು ಎರಚಿ ಪ್ರೋತ್ಸಾಹಿಸುತ್ತಾರೆ. ಈ ಉಟ್ಲು ಕಾಯನ್ನು ಕೀಚಕ ಎನ್ನುವರು. ಕೀಚಕ ವಧೆಯ ಆಚರಣೆಯೇ ಈ ಉಟ್ಲು ಕಾಯಿಯ ಆಚರಣೆ ಎಂದೂ ಹೇಳುವುದುಂಟು. ಚಿಕ್ಕ ಮಾವಳ್ಳಿ ಮತ್ತು ದೊಡ್ಡ ಮಾವಳ್ಳಿ ಯುವಕರ ತಂಡದವರ ನಡುವೆ ತೀವ್ರವಾದ ಪೈಪೋಟಿ ಏರ್ಪಟ್ಟು ಕ್ರೀಡೆಯಲ್ಲಿ ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿಯೂ ಸಹಾ ರೂಪಾಂತರಗೊಂಡಿತು.

ಸಂಜೆ ಹೂವಿನ ಪಲ್ಲಕಿ ಮೆರವಣಿಗೆ, ಅಲಂಕಾರ, ಬಾಣ ಬಿರುಸು ಹಾಗೂ ತಮಟೆವಾದ್ಯಗಳೊಂದಿಗೆ ಮುಖ್ಯಬೀದಿಗಳಲ್ಲಿ ಮೆರವಣಿಗೆಯೊಂದಿಗೆ ದೇವಿ ಪುನಃ ದೇವಸ್ಥಾನ ಸೇರುತ್ತಾಳೆ. "ಆಧುನಿಕ ನಾಗರಿಕತೆಯ ತರ್ಕ ಒಂದು ಏಕರೂಪೀ ಜೀವನ ಕ್ರಮವನ್ನು ರೂಪಿಸುವುದಾಗಿದೆ. ಹಳೆಯ ಜ್ಞಾನ ವ್ಯವಸ್ಥೆಗಳು ಭಾವನಾಲಯಗಳ ತೀವ್ರ ರೀತಿಯ ಹಿಂಸೆಯನ್ನು ಅನುಭವಿಸಿ ಕಣ್ಮರೆಯಾಗುತ್ತಿವೆ. ಗ್ರಾಮದೇವತೆಗಳು ಆಧುನೀಕರಣದ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಹಲವಾರು ನೆಲೆಗಳಲ್ಲಿ ಕಾಣಬಹುದಾಗಿದೆ.

೧. ಮನುಷ್ಯ ಮತ್ತು ನಿಸರ್ಗದ ನೆಲೆ

೨. ಮನುಷ್ಯ ಮನುಷ್ಯರ ಭಾವ ಸಂಬಂಧದ ನೆಲೆ

೩. ಮನುಷ್ಯ ಮತ್ತು ಸಮಾಜದ ನೆಲೆ

ಈ ಮೂರೂ ನೆಲೆಗಳಲ್ಲಿ ಗ್ರಾಮ ದೇವತೆಯ ಹಬ್ಬ, ಉತ್ಸವ ಮತ್ತು ಆಚರಣೆಗಳನ್ನು ಕಾಯ್ದುಕೊಳ್ಳಬೇಕಾದ ತುರ್ತಿದೆ. ವೈದಿಕೀಕರಣ ಮತ್ತು ಆಧುನೀಕರಣದ ಪ್ರಭಾವದ ಪರಿಣಾಮವಾಗಿ

ಪಿತೃ ಪ್ರಧಾನ ಮತ್ತು ಮಾತೃ ಪ್ರಧಾನ ಆಚರಣೆಗಳು ಪರಸ್ಪರ ಸ್ಪರ್ಧೆಗಿಳಿಯುವುದೂ ಉಂಟು. ಜನಪದ ದೇವತೆಗಳು ಮಾತೃಪ್ರಧಾನದ ಮೂಲ ಮಾತೃಕೆಗಳಾದರೆ ವೈದಿಕ ಸಂಸ್ಕೃತಿಯ ದೇವತೆಗಳು ಪಿತೃ ಪ್ರಧಾನ ಮೂಲದವು. ಅದೇನೇ ಇರಲಿ ನಾಗರೀಕತೆಯ ದಾಳಿಗೆ ಈ ಎರಡೂ ಇಂದು ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹೆಣಗಾಡಲೇಬೇಕಾಗಿದೆ. ಇದರ ಪರಿಣಾಮವಾಗಿ ಬೆಂಗಳೂರಿನ ಬಿಸಿಲು ಮಾರಮ್ಮನ ದೇವಾಲಯದ ಆಚರಣೆಗಳಲ್ಲೂ ಆಧುನೀಕರಣ ಎದ್ದು ಕಾಣುತ್ತಿದೆ. ಈ ಶತಕದಲ್ಲಿ ರೂಪುಗೊಂಡ ದೇವಾಲಯಗಳ ಕಾರ್ಯಾಚರಣೆಯಲ್ಲಿ ಇಂದಿನ ನವ ನಾಗರಿಕತೆಗೆ ತಕ್ಕಂತೆ ಹಲವು ಬದಲಾವಣೆಗಳು ಕಾಣ ಬರುತ್ತವೆ. ಇದರಂತೆ ಸಾಮಾನ್ಯ ಜನರ ಧಾರ್ಮಿಕ ಮನೋಭಾವದಲ್ಲಾಗಿರುವ ಪರಿಣಾಮಗಳು ಗಮನಾರ್ಹವಾಗಿದೆ.

೧. ಇಂದಿನ ದೇವಾಲಯಗಳಲ್ಲಿ ಹಿಂದಿನಂತೆ ಮಂಗಳಾರತಿಯ ಸಮಯದಲ್ಲಿ ಪಂಚವಾದ್ಯಗಳ ಘೋಷವಿರದೆ ವಿದ್ಯುದುಪಕರಣಗಳನ್ನು ಬಾಜಿಸುತ್ತಾರೆ. ಇವು ಅನುಕೂಲಕರವಾದರೂ ಯಾಂತ್ರಿಕವಾಗಿದ್ದು ಮನುಷ್ಯನ ಶ್ರದ್ಧೆ, ಭಕ್ತಿ, ಭಾವನೆಗಳನ್ನು ಬಿಂಬಿಸದೇ ಏಕತಾನತೆಯನ್ನುಂಟು ಮಾಡುತ್ತದೆ. ವಾದ್ಯ ಬಾಜನವನ್ನು ದೇವರ ಸೇವೆ ಎಂದು ಭಾವಿಸಿದ್ದ ಕಲಾವಿದರಿಗೆ ಇಂದು ವಿಮುಕ್ತಿಯಾಗಿದೆ.

೨. ದೈವದ ಅಸ್ತಿತ್ವದ ರಹಸ್ಯವನ್ನು ಮಹತ್ವವನ್ನೂ ಸೂಚಿಸುತ್ತಿರುವಂತೆ ಗರ್ಭ ಗುಡಿಯಲ್ಲಿ ಕತ್ತಲೆ ಇರುತ್ತಿತ್ತು. ಆದರೆ ಇಂದು ದೇವರ ಬಿಂಬಕ್ಕೆ ವಿಶೇಷವಾಗಿ ಬೀಳುವಂತೆ ಬೆಳಕಿನ ಹೊನಲನ್ನು ಅಳವಡಿಸಿದ್ದಾರೆ. ದೇವರ ಬಿಂಬವು ಎತ್ತರದಲ್ಲಿದ್ದಾಗ ನವರಂಗದ ತೊಲೆಗಳಲ್ಲಿ ಅಳವಡಿಸಿದ ದೀಪವು ಬೆಳಕಿನ ಹೊನಲನ್ನು ಚೆಲ್ಲುತ್ತದೆ.

೩. ದೇವಾಲಯದಲ್ಲಿ ವಿಶೇಷ ಪೂಜೆ ಉತ್ಸವಗಳಿದ್ದಾಗ ಎಲ್ಲ ಜನರಿಗೂ ನೇರವಾಗಿ ದೇವರ ದರ್ಶನ ಸಾಧ್ಯವಾಗುವುದಿಲ್ಲ. ಇದನ್ನು ಪರಿಹರಿಸಲು ದೇವಾಲಯದ ಆವರಣದಲ್ಲಿ ಸೀಮಿತ ಮಂಡಲ ದೂರದರ್ಶನಗಳನ್ನೂ ಅಳವಡಿಸಿರುವುದನ್ನು ದೊಡ್ಡಗಣಪತಿ ದೇವಾಲಯದಲ್ಲಿ ಕಾಣುತ್ತೇವೆ.

೪. ಅತ್ಯಂತ ಎತ್ತರವಾದ ದೇವರಿಗೆ ಹಾರ ಹಾಕಲು ಕ್ರೇನ್ ಬಳಕೆ.

೫. ಉತ್ಸವ ಮೂರ್ತಿಯನ್ನು ಚಿಕ್ಕ ಕೋಣೆಯೊಂದರಲ್ಲಿ ಇಟ್ಟು ಎರಡೂ ಕಡೆ ಸಾಲಾಗಿ ಕನ್ನಡಿ ಹೊಂದಿಸಲಾಗಿದೆ. ಇದರಿಂದ ಪ್ರೇಕ್ಷಕರು ಒಂದೇಬಾರಿಗೆ ಅಸಂಖ್ಯಾತ ಮೂರ್ತಿಗಳನ್ನು ನೋಡಿ ಬೆರಗಾಗುವುದು, ಇಂತಹ ಆಧುನಿಕ ಸೌಲಭ್ಯಗಳಿಂದ ದೇವಾಲಯಗಳು ಜನಾಕರ್ಷಣೆಯ ಕೇಂದ್ರವಾಗಿದೆ. ಜನಸಾಮಾನ್ಯರನ್ನು ದೈವತ್ವದ ಕಡೆಗೆ ಸೆಳೆಯುವ ಪ್ರಯತ್ನ.

೬. ಗ್ರಾಮದೇವತೆಯ ಹಬ್ಬದಲ್ಲಿ ಮಡಿವಾಳರು ಹಿಡಿಯುತ್ತಿದ್ದ ಪಂಜಿನ ಬದಲು ಪೆಟ್ರೋಮ್ಯಾಕ್ಸ್ ಅಥವಾ ಟ್ಯೂಬ್ ಲೈಟ್ ಗಳನ್ನು ಹಿಡಿದು ಮೆರವಣಿಗೆ ಮಾಡುವುದು.

೭. ಟ್ರಾಕ್ಟರಿನಲ್ಲಿ ಗ್ರಾಮ ದೇವತೆಯ ಮೆರವಣಿಗೆ ಮಾಡುವುದರಿಂದ ಮಡಿವಾಳರು ಹಾಸುತ್ತಿದ್ದ ನಡೆಮುಡಿ ಇಲ್ಲದಾಗಿದೆ.

೮. ರಾಜಕೀಯ ಧುರೀಣರ ಫ್ಲೆಕ್ಸ್ ಬ್ಯಾನರ್‌ಗಳು, ಶುಭಾಶಯ ಕೋರುವ ಭಿತ್ತಿ ಚಿತ್ರಗಳೂ ರಾರಾಜಿಸುತ್ತವೆ. ಮತ್ತು ಇದರ ಪರಿಣಾಮವಾಗಿ ಒಟ್ಟು ೧೧ ಊರಿನ ದೇವರುಗಳು ತರುತ್ತಿದ್ದ ಪಲ್ಲಕಿಯಲ್ಲಿ ಇಂದು ೭ ಊರಿನವರು ಮಾತ್ರ ಸೇರುತ್ತಾರೆ. ಉಳಿದ ೪ ಊರಿನವರು ತಾವೇ ಬೇರೆಯ ದಿನ ಆಚರಣೆ ನಡೆಸುವುದನ್ನೂ ಕಾಣಬಹುದು. ಅಧಿಕಾರದ ಪ್ರತಿಷ್ಟೆಯ ಲಾಲಸೆಯಿಂದ ಹಬ್ಬವೊಂದು ವಿಕೇಂದ್ರೀಕರಣಗೊಂಡು ಸಮಾಜದ ಜೊತೆಗೆ ಗ್ರಾಮ ದೇವತೆಗಳ ಸಂಬಂಧ ಸಡಿಲವಾಗಿರುವುದನ್ನು ಕಾಣಬಹುದು.

ಈ ಎಲ್ಲ ಕಾರಣಗಳಿಂದ ಸಂಸ್ಕೃತಿಯ ಅಧ್ಯಯನವು ಒಂದು ಸೃಜನಾತ್ಮಕವಾದ ಎಚ್ಚರ ಮತ್ತು ಪ್ರತಿಭಟನೆಯ ಹಿಂದಿನ ದೇಶೀವಾದವನ್ನು ಉಳಿಸಿಕೊಳ್ಳಬೇಕಾಗುತ್ತದೆ. ದೇಶೀಯತೆ ಎನ್ನುವುದು ಜನತೆಯೊಂದಿಗೆ ಸದಾಕಾಲ ಇರುವಂಥದ್ದಾಗಿರುವುದರಿಂದ ಸಾಂಸ್ಕೃತಿಕ ಸಂಧಿಕಾಲದಲ್ಲಿ ಒಡಂಬಡಿಕೆಗೆ ಮುಂದಾಗುವ ಸ್ವರೂಪವನ್ನು ಬೆಳಸಿಕೊಳ್ಳಬೇಕಾಗಿರುತ್ತದೆ. ಜಾನಪದವನ್ನು ಒಡೆದು ಪುನಃ ಜಾನಪದವನ್ನು ಕಟ್ಟುವ ಕ್ರಿಯೆಯು ವಿರುದ್ಧ ಸಂಸ್ಕೃತಿಯ ಮುಖಾಮುಖಿಯ ಸಂಧರ್ಭದಲ್ಲಾಗಿರಬಹುದು. ಆಕ್ರಮಣಕಾರಿ ಸಂಸ್ಕೃತಿಯನ್ನು ಸ್ವೀಕರಿಸುವ ಅನಿವಾರ್ಯತೆ ಇದ್ದಾಗಲೂ ಅವುಗಳ ನಡುವೆ ತನ್ನ ಮೂಲ ದೇಶೀಯತೆಯ ಅಸ್ಮಿತೆಯನ್ನು ಇಂದಿನ ಆಚರಣೆಗಳು ಉಳಿಸಿಕೊಂಡು ಬರಲು ಹೆಣಗಾಡುತ್ತಿವೆ.

೪.೮. ಬಂಡಿ ಮಹಾಂಕಾಳಿ ದೇವಾಲಯದ ಆಚರಣೆಗಳು :

ಬೆಂಗಳೂರಿನ ಗವಿಪುರಂನ ಈ ದೇವಾಲಯವನ್ನು ಬಂಡೆ ಮಹಾಕಾಳಿ ದೇವಾಲಯ ಎಂದೂ ಕರೆಯುತ್ತಾರೆ. ಬಂಡಿ ಮಹಾಂಕಾಳಿ “ಪುಟ್ಟ ಬಂಡೆಯೊಂದರಲ್ಲಿ ಕೆತ್ತಿರುವ ಸುಮಾರು ಮೂರಡಿ ಎತ್ತರದ ಮಹಾಕಾಳಿ ಶಿಲ್ಪವು ಪದ್ಮ ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಶಿಲ್ಪವಾಗಿದೆ.[೧೪]

ಮೊದಲು ಇಲ್ಲಿ ಕೇವಲ ಒಂದು ಅಂಕಣದ ನಿರ್ಮಾಣದ ಗುಡಿ ಇತ್ತೆಂದು ತಿಳಿದುಬರುತ್ತದೆ. ಕೆಂಪೇಗೌಡನ ಕಾಲದಲ್ಲಿ ಪ್ರವಾಸಿಗರು ಕೆಂಪಾಂಬುದಿ ಕೆರೆ ವೀಕ್ಷಿಸಲು ಬರುತ್ತಿದ್ದು, ತಂಗಲು ಹತ್ತಿರದಲ್ಲಿಯೇ ಛತ್ರವೊಂದಿತ್ತು. ರಾತ್ರಿ ಊರಿಗೆ ಬಂದಾಗ ಬಂಡಿಗಳನ್ನು ಅಲ್ಲಿ ನಿಲ್ಲಿಸಿ ಛತ್ರದಲ್ಲಿ ತಂಗುತ್ತಿದ್ದುದರಿಂದ ಬಂಡಿ ಮಹಾಕಾಳಿ ಎಂದು ಈ ಗುಡಿ ಪ್ರಚಲಿತವಾಯಿತು ಎಂದು ಸ್ಥಳೀಯರು ಹೇಳುತ್ತಾರೆ. ದೇವಾಲಯದ ಅರ್ಚಕರು ಇಲ್ಲಿ ಕಾಳಿಕಾದೇವಿ ಬಂಡೆಯ ರೂಪದಲ್ಲಿ ನೆಲೆಸಿರುವುದರಿಂದ ಬಂಡೆ ಮಹಾಕಾಳಿ ಎಂತಲೂ ಹೇಳುತ್ತಾರೆ.

ಇಲ್ಲಿ ಮಂಗಳವಾರ ಮಂಗಳಕರ-ರೋಗ ನಿವಾರಣೆಗಾಗಿ ಪೂಜಿಸಿದರೆ ಶುಕ್ರವಾರ ಸಿರಿಸಂಪತ್ತು ಸುಖ ಸಮೃದ್ದಿಯನ್ನುಂಟು ಮಾಡಿ ಶುಕ್ರದೆಸೆ ಹೆಚ್ಚಿಸುವ ದಿನವಾಗಿದೆ. ಅದಕ್ಕಾಗಿ ಈ ಎರಡೂ ದಿವಸ ವಿಶೇಷ ಪೂಜೆ ಸಲ್ಲಿಸುತ್ತಾರೆ. ಅಮಾವಾಸ್ಯೆ ಮತ್ತು ಹುಣ್ಣಿಮೆಯಂದು ಇಲ್ಲಿ ದೇವಿಗೆ ವಿಶೇಷ ಅಲಂಕಾರ ಮಾಡುತ್ತಾರೆ.

ಹಿಂದೆ ಪ್ರತಿ ರಾತ್ರಿಯೂ ಇಲ್ಲಿನ ಕೆಂಪಾಂಬುಧಿ ಕೆರೆಯ ಏರಿಯ ಮೇಲೆ ದೇವಿ ಸಂಚಾರ ಹೊರಡುತ್ತಾಳೆ ಎಂಬ ಪ್ರತೀತಿ ಸ್ಥಳೀಯರಿಗೆ ಇತ್ತು. ಈ ದೇವಿಯ ಗರ್ಭಗೃಹದ ಹಿಂದೆ ಇವಳ ತಂಗಿ ಬನ್ನಿ ಮಹಾಕಾಳಿಯ ದೇವಾಲಯ ಇದ್ದು- ಇವಳಿಗೆ ತೆಂಗಿನಕಾಯಿ, ಮೊಟ್ಟೆ, ನಿಂಬೆ ಹಣ್ಣು ನೀವಳಿಸಿ ಅದನ್ನು ತಡೆ ಒಡೆಯಲು ಬಳಸುತ್ತಾರೆ. ಇಲ್ಲಿ "ತಡೆ ಒಡೆಯುವ ಕ್ರಿಯೆ" ಅಂದರೆ ದೃಷ್ಟಿ ನಿವಾಳಿಸುವ ಕ್ರಿಯೆ ನಡೆಯುತ್ತದೆ. ಬನ್ನಿ ಮಹಾಕಾಳಿಯ ಮುಂದೆ ಹರಕೆ ಹೊತ್ತವರ, ದೃಷ್ಟಿಯಾಗಿರುವವರನ್ನು ನಿಲ್ಲಿಸಿ ಈ ಮೂರನ್ನೂ ಇಳೇ ತೆಗೆದು ನೀವಳಿಸಿ ನಂತರ ಹೊರಗೆ ನೆಲದ ಮೇಲಿಟ್ಟು ಮೂರು ಬಾರಿ ದಾಟಿಸುತ್ತಾರೆ. ನಂತರ ಕಾಯಿ ಮೊಟ್ಟೆಯನ್ನು ತಡೆ ಒಡೆದು ಹತ್ತು ಹೆಜ್ಜೆ ಮುಂದೆ ನಡೆದ ನಂತರ (ಪುನಃ ಹಿಂತಿರುಗಿ ನೋಡಬಾರದು) ಕಲ್ಲಿನ ಮೇಲೆ ಕೂರಿಸಿ ಭುಜ, ತಲೆ ಕಾಲು ಕೈಗಳಿಗೆ ನಿಂಬೆ ಹಣ್ಣು ಸೋಕಿಸಿ ಕತ್ತರಿಸಿ ನೀವಳಿಸಿ ಬಿಸಾಡುತ್ತಾರೆ. ಇದರಿಂದ ಆಗಿರುವ ದೃಷ್ಟಿ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ. ನಂತರ ಕಾಲು ತೊಳೆದು ಬಂಡಿ ಮಹಾಕಾಳಿಯ ದರ್ಶನ ಮಾಡಿಸುತ್ತಾರೆ. ವಿಶೇಷವಾಗಿ ಹುಣ್ಣಿಮೆ ಅಮಾವಾಸ್ಯೆಗಳಂದು ವಯಸ್ಸು ಲಿಂಗಭೇದವಿಲ್ಲದೇ ತಾವಾಗಿ ಬಂದು ತಡೆ ಬಿಡಿಸಿಕೊಳ್ಳುವುದನ್ನು ನಾವು ಕಾಣಬಹುದು. ಕೆಲವರು ಪ್ರತೀ ತಿಂಗಳೂ ಬಂದು ಒಡೆಸಿಕೊಂಡು ಹೋಗುವುದುಂಟು.

ಬಂಡಿ ನಿಲ್ಲಿಸುವ ಘಟಿತ ಕ್ರಿಯೆಯೊಂದು ದೇವಿಯೊಬ್ಬಳ ಅವತರಣಿಕೆಗೆ ಇಲ್ಲಿ ಕಾರಣವಾಗಿದೆ. ಮುಂದೆ ಇದೇ ದೇವಿಯೇ ರೂಪಾಂತರಗೊಂಡು ಜನರನ್ನು ಪೊರೆಯುತ್ತಿದ್ದಾಳೆ ಎಂಬ ನಂಬಿಕೆ ಕೆಂಪೇಗೌಡನ ಕಾಲದಿಂದಲೂ ಇಂದಿನವರೆಗೂ ಜನಮಾನಸದಲ್ಲಿ ಸ್ಥಿರವಾಗಿದೆ. ಸ್ಥಿತ್ಯಂತರಗಳ ಕಾಲಘಟ್ಟದಲ್ಲಿ ಆ ಪ್ರದೇಶದ ಭೌಗೋಳಿಕ ವಿನ್ಯಾಸ ಬದಲಾಗಿ ಕೆರೆಯು ತನ್ನ ಮೂಲ ಅಸ್ಥಿತ್ವವನ್ನು ಬದಲಾಯಿಸಿಕೊಂಡಿದ್ದರೂ ದೇವಿಯ ಅಸ್ತಿತ್ವ ಬದಲಾಗಿಲ್ಲ. ಮೂಲ ವಿಧ್ಯುಕ್ತ ಆಚರಣೆಗಳನ್ನು ಬಹಿರಂಗಪಡಿಸದೆ ವರ್ತಮಾನ ಮನಸ್ಥಿತಿಗೆ ತಕ್ಕಂತೆ ಆಧುನೀಕರಣಗೊಳಿಸಿಕೊಂಡು ಅಲ್ಲಿನ ಆಚರಣೆಗಳು ಪಾರಂಪರಿಕವಾಗಿ ವಾರ್ಷಿಕ ಉತ್ಸವವಾಗಿ ನವರಾತ್ರಿಯ ಸಂದರ್ಭದಲ್ಲಿ ನಡೆದುಕೊಂಡು ಬಂದಿರುವುದು ಗಮನಾರ್ಹ ಸಂಗತಿ. ಇಲ್ಲಿ ಪ್ರಸ್ತುತ ಪ್ರದೇಶದ ಪ್ರಾದೇಶಿಕ ಸಂಗತಿಗಳೇ ಒಂದು ದೇವಿಯ ಉಗಮಕ್ಕೆ ಕಾರಣವಾಗಿರುವುದು ಮತ್ತು ನಾಗರಿತೆಯ ಅತ್ಯುಚ್ಚ ನೆಲೆಯಲ್ಲಿಯೂ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿರುವುದು ಸ್ಥಿತ್ಯಂತರ ಕಾಲಘಟ್ಟದ ಮಹತ್ತರ ಸಂಗತಿಯೆಂದು ಪರಿಗಣಿಸಬಹುದು.

೪.೧೦. ಬನಶಂಕರಿಯ ಶಕ್ತಿ ದೇವತೆಯ ಆಚರಣೆಗಳು :

ಬಾದಾಮಿ ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿಯಿಂದ ಸುಮಾರು ೫ ಕಿ.ಮೀ ದೂರದಲ್ಲಿರುವ ಬನಶಂಕರಿ ದೇವಸ್ಥಾನ ಅಗಸ್ತ್ಯ ಮುನಿ ಲಿಖಿತವೆಂದು ಹೇಳಲಾಗುವ ಶ್ಲೋತ್ರಗಳಲ್ಲಿ ಹಾಗೂ ಎಂಟನೆಯ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ ಪ್ರಸ್ತಾಪ ಪಡೆದಿದೆ. ಈ ದೇವಸ್ಥಾನವನ್ನು ಕ್ರಿಸ್ತಶಕ ೬೮೧ರಲ್ಲಿ ಕಟ್ಟಲಾಯಿತೆಂದು ಹೇಳಲಾಗಿದ್ದರೂ, ಇದರ ಬಗ್ಗೆ ಭಿನ್ನಾಭಿಪ್ರಾಯವಿದೆ.

ಆದರೆ ಅದೇ ಆವರಣದಲ್ಲಿನ ಕೇದಾರೇಶ್ವರ ದೇವಸ್ಥಾನದಲ್ಲಿನ ಹರಕೆ ಕಂಭಗಳು, ೧೧ನೇ ಶತಮಾನದ ವೇಳೆಗೆ ಬನಶಂಕರಿ ಸುಸ್ಥಾಪಿತ ಕುಲದೇವತೆಯಾಗಿದ್ದಳು ಎನ್ನುವುದನ್ನು ಸೂಚಿಸುತ್ತವೆ. ದೇವಸ್ಥಾನದ ಸಮೀಪದಲ್ಲಿರುವ ಗ್ರಾಮವು ವೀಳ್ಯದೆಲೆಗಾಗಿ ಹೆಸರುವಾಸಿಯಾಗಿದ್ದರು, ಸರಸ್ವತಿ ನಾಲಾ ಮತ್ತು ಹರಿಶ್ಚಂದ್ರ ತೀರ್ಥದಿಂದ ನೀರು ಪಡೆಯುತ್ತದೆ.

ಪ್ರಕೃತಿದೇವತೆಯಾದ ಬನಶಂಕರಿಯು ಉತ್ತಮವಾಗಿ ಸಂಕಲ್ಪಿಸಲ್ಪಟ್ಟ ಅರಣ್ಯವು. ಮಳೆ ಮತ್ತು ವಿಪುಲ ಅರಣ್ಯ ಸಂಪತ್ತಿನ ರೂಪದದಲ್ಲಿ ನಾಡಿಗಾಗಿ ಸಮೃದ್ಧಿಯನ್ನು ತರುತ್ತದೆ ಎನ್ನುವ ಪ್ರತೀಕವಾಗಿದ್ದಾಳೆ. ಮಾನವನ ಅತಿರೇಕ ಚಟುವಟಿಕೆಗಳನ್ನು ಪರಿಸರವಾಗಿ ನಿವಾರಿಸುವ ದೇವಿ ಮತ್ತು ಭೂಮಿಯನ್ನು ಉಳದೇ ಆಹಾರವನ್ನು ತರುವ ದೇವತೆಯೆಂದೂ ಅವಳನ್ನು ಸ್ತುತಿಸಲಾಗುತ್ತದೆ. ಈ ಗುಣಗಳಿಂದಾಗಿ ಅವಳನ್ನು, ಕಾಡುಗಳ ಅಧಿದೇವತೆಯಾದ ಅರಣ್ಯನ ಪತ್ನಿಯಾಗಿ ಪರಿಗಣಿಸಬಹುದಾಗಿದೆ. ಮತ್ತು ಈ ಸಂಬಂಧವನ್ನು ಮಹಾಭಾರತದಲ್ಲಿ ವಿವರಿಸಿರುವ ಅರಣ್ಯಕರಾದ ಶಿವ ಮತ್ತು ಪಾರ್ವತಿಯ ದಿವ್ಯ ಸಂಬಂಧಕ್ಕೆ ಹೋಲಿಸಬಹುದಾಗಿದೆ.

ಮಧ್ಯಕಾಲೀನ ಕನ್ನಡ ಸಾಹಿತ್ಯವು ಬನಶಂಕರಿಯನ್ನು ಬನದ ದೇವಿ, ಬನದ ಮಹಾಮಾಯೆ ಬನದುಬ್ಬೆ ಮತ್ತು ವನದುಬ್ಬೆ ಎಂದು ಕರೆಯುತ್ತದೆ. ಇವುಗಳ ಪೈಕಿ ಬನದುಬ್ಬೆಯನ್ನು ಉತ್ತಮ ಫಸಲಿಗಾಗಿ ಪೂಜಿಸಲಾಗುತ್ತಿತ್ತು. ಬನಶಂಕರಿಯನ್ನು ಶಾಕಾಂಬರಿ, ಶತಾಕ್ಷಿ ಮತ್ತು ಅನ್ನಪೂರ್ಣ ಎನ್ನುವ ಇತರ ಹೆಸರುಗಳಿಂದಲೂ ಸ್ತುತಿಸಲಾಗುತ್ತದೆ. ಒಂದು ಐತಿಹ್ಯದ ಪ್ರಕಾರ, ಉತ್ತರ ಭಾರತದ ನೂರು ವರ್ಷಗಳಿಗೂ ಅಧಿಕ ಕಾಲಕ್ಕಾಗಿ ಒಮ್ಮೆ ಭೀಕರ ಕ್ಷಾಮ ಸಂಭವಿಸಿದಾಗ ಮುನಿಗಳು ಮತ್ತು ಬ್ರಾಹ್ಮಣರು ದಕ್ಷಿಣದತ್ತ ಬೃಹತ್ ಸಂಖ್ಯೆಯಲ್ಲಿನ ವಲಸೆ ಹೋದರು, ಬಾದಾಮಿ ಸಮೀಪದ ಮಲಪ್ರಭ ನದಿಯ ಗೊಂಡಾರರಣ್ಯವನ್ನು ತಲುಪಿದಾಗ ಅವರು ಬನಶಂಕರಿ ದೇವಿಯನ್ನೂ ಪ್ರಾರ್ಥಿಸಿ, ಪರಿಸ್ಥಿತಿ ಸುಧಾರಿಸುವವರೆಗೂ ತಮಗೆ ವಾಸವನ್ನು ಅನುಮತಿಸಬೇಕೆಂದು ಪ್ರಾರ್ಥಿಸಿದರು. ಅವಳು ಈ ವರವನ್ನು ನೀಡಿ, ಭಕ್ತರಿಗಾಗಿ ಮೂರ್ತೀಕರಿಸಿದಳಲ್ಲದೇ, ಕ್ಷಾಮ ಉಂಟಾಗಿದ್ದ ಕ್ಷುದ್ಬಾಧೆಯನ್ನು ನಿವಾರಿಸಲು ತನ್ನ ದೇಹದಿಂದ ಶಾಕಗಳನ್ನು ಉತ್ಪತ್ತಿ ಮಾಡಿದ್ದರಿಂದ ಶಾಕಾಂಬರಿ ಎನ್ನುವ ಹೆಸರಿನಿಂದ ಜಗಜ್ಜನಿತಳಾದಳು ಬರಗಾಲಕ್ಕೆ ತುತ್ತಾಗಿದ್ದ ಬ್ರಾಹ್ಮಣರ ಬವಣೆಯಿಂದ ನೊಂದ ದೇವಿಯು ಒಂಬತ್ತು ರಾತ್ರಿಗಳಿಗಾಗಿ ಎಡೆಬಿಡದೆ ಅತ್ತಿದ್ದರಿಂದ ಅವಳ ಕಣ್ಣೀರು ನದಿಗಳು, ಕೊಳಗಳು ಮತ್ತು ಸರೋವರಗಳನ್ನು ತುಂಬಿತು. ಈ ಸ್ವರೂಪದಲ್ಲಿ ಅವಳನ್ನು ಶಾತಾಕ್ಷಿ ಅಥವಾ ಅನ್ನಪೂರ್ಣೆ ಎಂದು ಕರೆಯಲಾಗುತ್ತದೆ. ಈ ಅನುಗ್ರಹವನ್ನು ಕೊಂಡಾಡಲು ಇಂದ್ರ ಮತ್ತು ಇತರ ದೇವತೆಗಳು ಬನಶಂಕರಿಯನ್ನು ಬಾದಾಮಿಯಲ್ಲಿ ಸ್ಥಾಪಿಸಿದರೆಂದು ಶಾಕಾಂಬರಿ ಮಹಾತ್ಮೆ ಹೇಳುತ್ತದೆ. ಮಾರ್ಕಂಡೇಯ ಪುರಾಣವು ಶಾಕಾಂಬರಿಯನ್ನು ಅಭ್ಯುದಯದ ಪ್ರತೀಕವಾದ ಲಕ್ಷ್ಮಿಯೆಂದು ವರ್ಣಿಸುತ್ತದೆ; ಸ್ಕಂದ ಪುರಾಣ, ದೇವಿ ಭಗವತ ಮತ್ತು ಭವಿಷ್ಯೋತ್ತರ ಪುರಾಣಗಳು ಬನಶಂಕರಿಯನ್ನು ದುರ್ಗೆಯ ಅವತಾರವೆಂದು ಸ್ತುತಿಸುತ್ತವೆ.

ದುರ್ಗಮಾಸುರನನ್ನು ವಧಿಸಿದ ದುರ್ಗೆಯ ಸ್ವರೂಪದಲ್ಲಿರುವ ಬನಶಂಕರಿಯು ಕಪ್ಪು ಶಿಲೆಯಲ್ಲಿ ಕೆತ್ತಲಾಗಿರುವ ಮಧ್ಯಯುಗದ ಶಿಲೆಯಾಗಿದ್ದಾಳೆ.

ಉಗ್ರನೋಟದ ಸಿಂಹದ ಮೇಲೆ ಅಸೀನಳಾಗಿರುವ ಅವಳು ಅಷ್ಟಭುಜೆ; ಕೈಗಳಲ್ಲಿ ಖಡ್ಗ, ಡಮರು, ತ್ರಿಶೂಲ, ಪಾಶ, ಮುಂಡ, ಗುರಾಣಿಯನ್ನು ಹಿಡಿದಿದ್ದಾಳೆ, ಅತ್ಯಂತ ಅಲಂಕಾರಿಕವಾದ ಪ್ರಭಾವಳಿಯು ದೇವಿಯ ಸುತ್ತಲೂ ಸಂಗೀತಗಾರರು ಚಾಮರಧಾರಿಗಳು ಮತ್ತು ಪರಿಚಾರಿಕೆಯರು ನಿಂತಿದ್ದಾರೆ. ಗರ್ಭಗುಡಿ, ಮುಖಮಂಟಪ ಮತ್ತು ಗೋಪುರವು ವಿಜಯನಗರ ಶೈಲಿಯ ವಾಸ್ತು ಶಿಲ್ಪವನ್ನು ಹೊಂದಿದ್ದವು. ಆದರೆ ಹಳೆಯ ದೇವಸ್ಥಾನವು ನೀರಿನಲ್ಲಿ ಮುಳುಗಿಹೋಯಿತು. ಮತ್ತು ಈಗಿನ ದೇಗುಲವು ಕಲ್ಲು ಕಟ್ಟಡವಾಗಿದೆ.

ದೇವಿಯ ಎರಡು ಉತ್ಸವಮೂರ್ತಿಗಳಿದ್ದು ಇಂದನ್ನು ಪ್ರತಿ ರಾತ್ರಿ ಮಂಟದಲ್ಲಿ ವಿರಮಿಸಲು ಇಡಲಾಗುತ್ತದೆ. ಮತ್ತೊಂದು ದೇವಸ್ಥಾನದಿಂದ ಎರಡು ಕಿ.ಮೀ ದೂರದಲ್ಲಿರುವ ಜೋಳದಗುಡಿಯಿಂದ ರಥೋತ್ಸವದ ಸಮಯದಲ್ಲಿ ಮಾತ್ರ ತರಲಾಗುತ್ತದೆ.

ಬನಶಂಕರಿಯ ದೇವಸ್ಥಾನದ ಒಳಪ್ರಾಕಾರದಲ್ಲಿ ಮೂರು ದೀಪ ಕಂಭಗಳಿವೆ ನಂತರದ ಸೇರ್ಪಡೆಯಾಗಿ ೨೪ ಕಂಭಗಳನ್ನು ಮುಖಮಂಟಪದಲ್ಲಿ ಸ್ಥಾಪಿಸಲಾಗಿದೆ.

ತೆಪ್ಪೋತ್ಸವ ಮತ್ತು ಇತರ ಪೂಜಾ ವಿಧಿಗಳನ್ನು ಆಚರಿಸಲು ಬಳಸಲಾಗುವ ಹರಿದ್ರ ತೀರ್ಥ ಒಳಪಟ್ಟಂತೆ ಈ ಸ್ಥಳದ ಸುತ್ತಮುತ್ತ ಹಲವಾರು ತೀರ್ಥಗಳಿದ್ದು, ಪ್ರತಿಯೊಂದು ತನ್ನದೇ ಆದ ಐತಿಹ್ಯ ಮತ್ತು ಮಹತ್ವವನ್ನು ಹೊಂದಿದೆ.

ವೈಶಾಖ ಹುಣ್ಣಿಮೆಯಂದು ಈ ತೀರ್ಥಗಳಲ್ಲಿ ಮಿಂದು ದೇವಿದರ್ಶನ ಮಾಡುವವರಿಗೆ ಎಲ್ಲಾ ಪಾಪಗಳಿಂದಲೂ ಪ್ರಾಯಶ್ಚಿತ್ತ ಸಿಗುತ್ತದೆಯೆಂಬ ನಂಬಿಕೆ ಇದೆ. ಹರಿದ್ರ ತೀರ್ಥದ ಒಮದು ತುದಿಯಿಂದ ಮತ್ತೊಂದು ತುದಿಯವರೆಗೆ ನವಜಾತ ಶಿಶುವನ್ನು ಬಾಳೆಯ ಎಲೆಯ ಮೇಲಿಟ್ಟು ತೇಲಿ ಬಿಡುವ ಮೂಲಕ ದೇವಿಯ ಕೃಪೆಯನ್ನು ಕೋರುವ ಪದ್ಧತಿ ಇತ್ತೀಚಿನವರೆಗೆ ಆಚರಣೆಯಲ್ಲಿತ್ತು. ದೇವಸ್ಥಾನದಲ್ಲಿ ವಿಶೇಷ ಉತ್ಸವವಾದ ಪಲ್ಲೇದ ಹಬ್ಬದಂದು ದೇವಿಯನ್ನು ೧೦೮ ವಿಭಿನ್ನ ಕಾಯಿಪಲ್ಲೆಗಳಿಂದ ಅಲಂಕರಿಸಲಾಗುತ್ತದೆ. ಈ ಸಂದರ್ಭವಾಗಿ ೧೫ ದಿನಗಳವರೆಗೆ ವೈಭವಯುತ ಶುದ್ಧ ಅಷ್ಟಮಿಯಂದು ಆರಂಭವಾಗುವ ನವರಾತ್ರಿ ಬಾದಾಮಿ ವಂಶದವರ ಪದ್ಧತಿಯಾಗಿದೆ ಮತ್ತು ಬನದ ಹುಣ್ಣಿಮೆಯಂದು ರಥೋತ್ಸವ ನಡೆಯುತ್ತದೆ.

೪.೧೧. ಬನಂಕರಿ ಬೆಂಗಳೂರಿಗೆ ಬಂದ ಪರಿ :

ರಾಜ್ಯದ ನೇಕಾರ ಸಮುದಾಯವಾದ ದೇವಾಂಗದ ಕುಲದೇವತೆಯಾದ ಬಾದಾಮಿ ಬನಶಂಕರಿಯು ಬೆಂಗಳೂರಿಗೆ ಪಯಣ ಬೆಳೆಸಿ, ನಗರೀಕರಣಗೊಂಡಿದ್ದರ ಬಗ್ಗೆ ಒಂದು ಆಸಕ್ತಿಯುತ ಘಟನೆಯಿದೆ. ಬೆಂಗಳೂರಿನ ರೇಷ್ಮೆ ವ್ಯಾಪಾರಿಯಾಗಿದ್ದ ಬಸಪ್ಪ ಶೆಟ್ಟಿ ಎನ್ನುವವರು

ತಮ್ಮ ವ್ಯಾಪಾರದ ಅಂಗವಾಗಿ ಪದೇಪದೇ ಬಾದಾಮಿಗೆ ಹೋದಾಗ ಬನಶಂಕರಿಯ ದರ್ಶನ ಮಾಡುತ್ತಿದ್ದರು. ಆದರೆ ಕಾಲ ಕ್ರಮೇಣ ವೃದ್ಧಾಪ್ಯದ ಕಾರಣ ಎತ್ತುಗಾಡಿಗಳಲ್ಲಿ ದೀರ್ಘ ಪ್ರಯಾಣಗಳು ಕಠಿಣಗೊಂಡಿದ್ದರಿಂದ ತಮ್ಮ ನಿಕಟ ಸ್ನೇಹಿತರಾಗಿದ್ದ ಕೃಷ್ಣಸ್ವಾಮಿ ರಾವ್ ಎನ್ನುವ ದೇಶಸ್ಥ ಬ್ರಾಹ್ಮಣರ ಸಲಹೆಯ ಮೇರೆಗೆ ಬೆಂಗಳೂರಿಗೆ ಈ ದೇವಿಯನ್ನು ವಲಸೆ ತಂದರು. ಮಂಗಳವಾರ, ಶುಕ್ರವಾರ ಮತ್ತು ಭಾನುವಾರಗಳಂದು ನೂರಾರು ಮಹಿಳೆಯರು ಆಚರಿಸುವ ರಾಹು ಕಾಲ ಪೂಜೆಯ ಆಚರಣೆಯೂ ವಲಸೆಗೆ ಬಂದಿತು. ಇದನ್ನು ಕುರಿತ ಒಂದು ನಂಬಿಕೆಯ ರೀತ್ಯ ಬಸಪ್ಪ ಶೆಟ್ಟಿ ಮತ್ತು ಕೃಷ್ಣಸ್ವಾಮಿ ರಾವ್ ಅವರು ದೇವಸ್ಥಾನದಲ್ಲಿ ಉಪಸ್ಥಿತರಿದ್ದಾಗ ಐವರು ಸುಮಂಗಲಿಯರು ರಾಹು ಕಾಲದ ಸಮಯದಲ್ಲಿ ಬನಶಂಕರಿಯನ್ನು ಪೂಜಿಸಿದ್ದರಿಂದ ಅವರುಗಳ ಪ್ರಾರ್ಥನೆ ಈಡೇರಿತು ಮತ್ತು ಜನರು ಈ ಸುಮಂಗಲಿಯರು ಬನಶಂಕರಿಯ ಪ್ರತಿನಿಧಿಗಳೆಂದು ನಂಬುತ್ತಾರೆ.

ಬಾದಾಮಿಯಿಂದ ದೇವಿಯ ಅಷ್ಟಭುಜ ಪಂಚಲೋಹ ವಿಗ್ರಹವೊಂದನ್ನು ತಂದು ದಕ್ಷಿಣ ಬೆಂಗಳೂರಿನ ಕನಕಪುರ ರಸ್ತೆಯ ಕಾಡು ಪ್ರದೇಶವೊಂದರಲ್ಲಿ ೧೯೧೫ ರಲ್ಲಿ ವೈದಿಕ ಕಟ್ಟಳೆಗಳ ಅನುಸಾರ, ಶ್ರೀಚಕ್ರವೊಂದರ ಮೇಲೆ ಸ್ಥಾಪಿಸಿದರು. ದೇವಿಯು ಬಸಪ್ಪ ಶೆಟ್ಟಿಯವರ ಕನಸಿನಲ್ಲಿ ಪ್ರತ್ಯಕ್ಷವಾಗಿ ನಗರದ ಜನರು ತನ್ನನ್ನು ಆರಾಧಿಸುವುದರಿಂದ ಇಡೀ ಬೆಂಗಳೂರಿಗೆ ಅಪಾರ ಬೆಳವಣಿಗೆ ಮತ್ತು ಅಭ್ಯುದಯವಿರುತ್ತದೆಯೆಂದು ವರವಿತ್ತಳು ಎನ್ನಲಾಗುತ್ತದೆ.

ಮೂಲತಃ ಸುಮಾರು ೧೪೦ ಎಕರೆ ಭೂಮಿಯಿದ್ದ ಈ ದೇವಸ್ಥಾನ ಪ್ರಸ್ತುತ ಸುಮಾರು ೧೪ ಎಕರೆ ಉಳಿಸಿಕೊಂಡು, ಬೆಂಗಳೂರಿನ ಒಂದು ಅತ್ಯಂತ ಪ್ರತಿಷ್ಠಿತ ದೇವಸ್ಥಾನವಾಗಿ ಇಡೀ ಬಡಾವಣೆಗೆ ತನ್ನ ಹೆಸರನ್ನು ಕೊಟ್ಟಿದೆ. ದೇವಸ್ಥಾನದ ಖ್ಯಾತಿಗೆ ಮತ್ತೊಂದು ಕಾರಣವೆಂದರೆ ಮಂಗಳವಾರ, ಶುಕ್ರವಾರ ಮತ್ತು ಭಾನುವಾರಗಳಂದು ನೂರಾರು ಮಹಿಳೆಯರು ಆಚರಿಸುವ ರಾಹು ಕಾಲ ಪೂಜೆ, ಇದನ್ನು ಕುರಿತ ಒಂದು ನಂಬಿಕೆಯ ರಿತ್ಯ ಬಸಪ್ಪ ಶೆಟ್ಟಿ ಮತ್ತು ಕೃಷ್ಣಸ್ವಾಮಿ ರಾವ್ ಅವರು ದೇವಸ್ಥಾನದಲ್ಲಿ ಉಪಸ್ಥಿತರಿದ್ದಾಗ ಐವರು ಸುಮಂಗಲಿಯರು ರಾಹು ಕಾಲದ ಸಮಯದಲ್ಲಿ ಬನಶಂಕರಿಯನ್ನು ಪೂಜಿಸಿದ್ದರಿಂದ ಅವರುಗಳ ಪ್ರಾರ್ಥನೆ ಈಡೇರಿತು ಮತ್ತು ಜನರು ಈ ಸುಮಂಗಲಿಯರು ಬನಶಂಕರಿಯ ಪ್ರತಿನಿಧಿಗಳೆಂದು ನಂಬುತ್ತಾರೆ.

ಬನಶಂಕರಿಯ ಈ ಮಹಿಮೆಯು ಬೆಂಗಳೂರಿನ ಇತರೆಡೆ ಹರಡಿರುವ ಕಾರಣ, ಮಲ್ಲೇಶ್ವರದಲ್ಲೂ ೧೯೯೯ರಲ್ಲಿ ಅಮ್ಮನವರಿಗೆ ಗುಡಿಯನ್ನು ಕಟ್ಟಿ ಇಲ್ಲಿಯೂ ರಾಹುಕಾಲದ ಪೂಜೆಯನ್ನು ಅತ್ಯಂತ ಶ್ರದ್ಧೆಯಿಂದ ಕೈಗೊಳ್ಳಲಾಗುತ್ತದೆ. ಉಳಿದಂತೆ ಮೂಲ ಬನಶಂಕರಿಯ ದೇವಾಲಯದಲ್ಲಿ ಕೈಗೊಳ್ಳಲಾಗುವ ಆಚರಣೆಗಳನ್ನು "ತೆಪ್ಪೋತ್ಸವ" ಹೊರತುಪಡಿಸಿ ಉಳಿದೆಲ್ಲವುಗಳನ್ನು ಅಂತೆಯೇ ಪಾಲಿಸುತ್ತಿದ್ದಾರೆ.

ಸಂಖ್ಯಾ ಟಿಪ್ಪಣಿಗಳು

೧. Cultural Anthropology, Herskovitz, p-116

೨. David.L.Sills- international encyclopedia of social sciences vol-3 p-557.

೩. ಶಕ್ತಿ ಶಾರದೆಯ ಮೇಳ, ಡಿ.ಆರ್. ನಾಗರಾಜ್, ಪು-೬೭

೪. Dravidian Gods in modern Hinduism, Wilber Theodre Elmore,, Scholars Choice-1913, p-274

೫. ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಚನ್ನಣ್ಣ ವಾಲಿಕಾರ, ಪು-೪೬

೬. The village gods of south india, Henry whitehead, introduction p-11- 1921

೭. ಲೋಕಾಯತ, (ಅನು) ಜಿ. ರಾಮಕೃಷ್ಣ, ಪು-೧೮೧.

೮. ಲೋಕಾಯತ, ಅನು: ಜಿ. ರಾಮಕೃಷ್ಣ, ಪು-೧೮೧.

೯. ಲೋಕಾಯತ, ಅನು: ಜಿ. ರಾಮಕೃಷ್ಣ, ಪು-೨೦೧

೧೦. ಲೋಕಾಯತ, ಅನು: ಜಿ. ರಾಮಕೃಷ್ಣ, ಪು-೨೦೪

೧೧. ಬೆಂಗಳೂರು ದರ್ಶನ, ಸಂ: ವಿಜಯಾ, ಪು-೧

೧೨. ಹಕ್ಕಿನೋಟ, ಸಿದ್ದಲಿಂಗಯ್ಯ, -೧೯೯೦

೧೩. ಗ್ರಾಮದೇವತೆಗಳು, ಸಿದ್ದಲಿಂಗಯ್ಯ, ಪು-೧೧೪

೧೪. ಬೆಂಗಳೂರು ದರ್ಶನ

ಅಧ್ಯಾಯ : ೫

ಸಂಸ್ಕೃತೀಕರಣದ ಕವಲುಗಳಲ್ಲಿ ಶಿಷ್ಟ ದೇವತೆಗಳು

೫.೧: ನವರಾತ್ರಿ ಮತ್ತು ದುರ್ಗಾದೇವಿಯ ಆಚರಣೆಯ ಸ್ವರೂಪ

೫.೨: ಶಿಷ್ಟ ಪುರಾಣಗಳಲ್ಲಿ ದುರ್ಗಾಪೂಜೆಯ ವೈಭವ – ವೈಶಿಷ್ಟ್ಯ

೫.೩: ಪ್ರಾಚೀನ ಧಾರ್ಮಿಕ ನಂಬಿಕೆಗಳಲ್ಲಿ ದುರ್ಗೆ

೫.೪: ಇಂಡೊನೇಷ್ಯಾದ ದುರ್ಗೆ ಮತ್ತು ಸರಸ್ವತಿ

೫.೫: ಲಾರಯೊಂಗ್‌ರಾಂಗ್ ಕರ್ನಾಟಕದಿಂದ ಪ್ರಭಾವಿತಳೇ?

ಅಧ್ಯಾಯ : ಐದು

ಸಂಸ್ಕೃತೀಕರಣದ ಕವಲುಗಳಲ್ಲಿ ಶಿಷ್ಟ ದೇವತೆಗಳು

೫.೧. ನವರಾತ್ರಿ ಮತ್ತು ದುರ್ಗಾದೇವಿಯ ಆಚರಣೆಯ ಸ್ವರೂಪ :

ನವರಾತ್ರಿ ಹಬ್ಬದಾಚರಣೆಯ ಕೇಂದ್ರ ಬಿಂದು ಶ್ರೀ ದುರ್ಗಾ, ಆಶ್ವೀಜ ಶುದ್ಧ ೮ ಇವಳ ಹೆಸರಿನಲ್ಲಿ ಪ್ರಕಟಗೊಂಡು ದುರ್ಗಾಷ್ಟಮಿ ಎಂದು ಖ್ಯಾತವಾಗಿದೆ. ಮಹಿಷಮರ್ದಿನಿ ಇವಳ ಜನಪ್ರಿಯ ಹೆಸರು. ಸಿಂಹವಾಹಿನಿಯಾಗಿ ದುರ್ಗೆ ಮಹಿಷಾಸುರನನ್ನು ಸಂಹರಿಸಿದಳು. ಇವಳ ಬಹುತೇಕ ಚಿತ್ರಗಳು ಮತ್ತು ಶಿಲ್ಪಗಳು ಮಹಿಷನ ದೇಹವನ್ನು ಮೆಟ್ಟಿ, ತಲೆಯನ್ನು ಕಡಿಯುತ್ತಿರುವ ಭಂಗಿಯಲ್ಲಿ ಇವೆ. ಕೆಲವೊಮ್ಮೆ ಕಡಿದ ಮಹಿಷನ ತಲೆ ಕೆಳಗೆ ಬಿದ್ದಿದ್ದರೆ ಮನುಷ್ಯ ರೂಪ ತಾಳಿದ ಅಸುರನ ಹೆಡೆಮುರಿ ಕಟ್ಟಿರುವ ದೃಶ್ಯವೂ ಇದೆ.

ದುರ್ಗೆ ಮಹಿಷಾಸುರನನ್ನು ಸಂಹರಿಸಿದ ಕಥೆಯನ್ನು ಮಾರ್ಕಂಡೇಯ, ವಾಮನ, ವರಾಹ, ಶಿವ, ಸ್ಕಾಂದ, ಕಾಳಿಕಾ ಮತ್ತು ದೇವಿ ಭಾಗವತ ಪುರಾಣಗಳು ತಿಳಿಸುತ್ತವೆ. ಶ್ರೀ ದೇವಿಯು (ಶಕ್ತಿಯು) ದುರ್ಗಾರೂಪ ತಳೆದುದರ ಕಾರಣವನ್ನು ಸ್ಕಾಂದ ಪುರಾಣ ತಿಳಿಸುತ್ತದೆ. ಗೌರಿಯು ಅರುಣಾಚಲದಲ್ಲಿ ಧರ್ಮಕಾರ್ಯ ರಕ್ಷಣೆಯಲ್ಲಿ ನಿರತಳಾಗಿದ್ದಳು. ಸೈನ್ಯ ಸಮೇತನಾಗಿ ಅಲ್ಲಿಗೆ ಬಂದ ಮಹಿಷಾಸುರನು ಗೌರಿಯ ಸೌಂದರ್ಯಕ್ಕೆ ಮರುಳಾದನು. ಮೋಹಿಸಿ ಮದುವೆಯಾಗಬಯಸಿದನು. ದೇವಿ ನಿರಾಕರಿಸಿದಾಗ ಮೋಹ ಮಾಯಾಪಾಶದಲ್ಲಿ ಸಿಲುಕಿದ್ದ ಮಹಿಷನು ಚತುರೋಕ್ತಿಯಿಂದ ಆಕೆಯನ್ನು ಒಲಿಸಿಕೊಳ್ಳಲು ನೋಡಿದ. ಅದು ಸಾಧ್ಯವಾಗದಿದ್ದಾಗ ಆಸುರೀ ಶಕ್ತಿಯ ಪ್ರಯೋಗಕ್ಕೆ ಮುಂದಾದ. ಯುದ್ಧದಲ್ಲಿ ಮಹಿಷನನ್ನು ದೇವಿ ಸಂಹರಿಸಿದಳು.

ದುರ್ಗಾವತಾರದ ಕುರಿತು ಹಲವು ಕಥೆಗಳಿವೆ. ದೇವಕಿಯ ಎಂಟನೆಯ ಗರ್ಭದಲ್ಲಿ ಜನಿಸಿದ ಶಿಶು (ಕೃಷ್ಣ)ವನ್ನು ಕೊಲ್ಲಲು ಧಾವಿಸಿದ ಕಂಸ, ತಂಗಿಯ ಕೈಯಿಂದ ಮಗುವನ್ನು ಕಿತ್ತುಕೊಂಡು ಅದನ್ನು ತನ್ನ ಕತ್ತಿಯಿಂದ ಛೇದಿಸಬೇಕೆನ್ನುವಾಗ ಶಿಶು ಹಾರಿ ಆಕಾಶದಲ್ಲಿ ಮಾಯಾಶಕ್ತಿ

(ದುರ್ಗಾ) ರೂಪ ತಾಳಿತು. ಕಂಸನನ್ನು ಸಂಹರಿಸುವ ಕೃಷ್ಣ ಸುರಕ್ಷಿತವಾಗಿ ಬೆಳೆಯುತ್ತಿದ್ದಾನೆಂದು ಹೇಳಿ ಅಂತರ್ಧಾನವಾಯಿತು. ಇದು ವಿಷ್ಣು ಪುರಾಣದ ಕಥೆ.

ದೇವಿಮಹಾತ್ಮೆ ಪ್ರಕಾರ ಬ್ರಹ್ಮನ ಕೋರಿಕೆಯಂತೆ, ಮಧು ಕೈಟಭರೆಂಬ ಅಸುರರ ಸಂಹಾರಕ್ಕಾಗಿ, ವಿಷ್ಣುವನ್ನು ಎಚ್ಚರಿಸುವ ಸಲುವಾಗಿ ಅವತರಿಸಿದವಳು. ಇನ್ನೊಂದು ಕಥೆಯ ಪ್ರಕಾರ ದೇವಿ ಪಾರ್ವತಿಯು ಶುಂಭ, ನಿಶುಂಭರೆಂಬ ಅಸುರರ ಸಂಹಾರಕ್ಕಾಗಿ ದುರ್ಗಾ ರೂಪತಾಳಿದಳು.

ಆದರೆ ಎಲ್ಲಕ್ಕೂ ಮಿಗಿಲಾದುದು ಮಹಿಷ ದಮನ ಕಥೆ. ಹೆಂಗಸನ್ನು ಬಿಟ್ಟು ದೇವ, ಗಂಧರ್ವರಾದಿಯಾಗಿ ಯಾರಿಂದಲೂ ಸಾವು ಬರಬಾರದೆಂಬ ವರವನ್ನು ಮಹಿಷ ಪಡೆದ. ಮೂರು ಲೋಕಗಳನ್ನು ತನ್ನ ವಶ ಮಾಡಿಕೊಂಡು ದೇವತೆಗಳನ್ನು ಆತಂಕಕ್ಕೀಡುಮಾಡಿದ. ಇದರಿಂದ ಅವಮಾನಿತರಾದ ದೇವತೆಗಳು ತಮ್ಮ ಶಕ್ತಿಹೀನ ವೀರ್ಯಕ್ಕೆ ನಾಚಿಕೆಪಟ್ಟು ಅದನ್ನು ಹೊರಹಾಕಿದರು. ಅದು ಒಂದುಗೂಡಿ ಒಂದು ತೇಜಃಪುಂಜ ರಾಶಿಯಾಗಿ ಸುಂದರ ಹೆಣ್ಣಿನ ರೂಪ ತಳೆಯಿತು. ಶಿವನಿಂದ ಮುಖ ಮತ್ತು ತ್ರಿಶೂಲ, ವಿಷ್ಣುವಿನಿಂದ ತೋಳುಗಳು ಮತ್ತು ಚಕ್ರ, ಯಮನಿಂದ ಕೆದರಿದ ಕೇಶರಾಶಿ ಮತ್ತು ಇತರರಿಂದ ಸೂಕ್ತ ಆಯುಧಗಳನ್ನು ಇವಳು ಪಡೆದಳು. ಹಿಮವಂತನು ಇವಳಿಗೆ ಸಿಂಹವನ್ನು ವಾಹನವಾಗಿ ಕೊಟ್ಟನು. ಹಿಮಾಲಯದಲ್ಲಿ ವಿಹರಿಸಿದ ಇವಳು ಒಮ್ಮೆ ಮಾಡಿದ ಸಿಂಹಘರ್ಜನೆಗೆ ಭೂಮಿ ಕಂಪಿಸಿತು. ದುಷ್ಟ ಮಹಿಷಾಸುರನನ್ನು ತನ್ನ ಮಾಯಾಜಾಲದಲ್ಲಿ ಬಂಧಿಸಿ ಸಂಹರಿಸಿದಳು. ಲೋಕಕ್ಕೆ ಒದಗಿದ್ದ ಕಂಟಕವನ್ನು ನಿವಾರಿಸಿದಳು.

ಇಲ್ಲಿ ನಾವು ಬಹು ಮುಖ್ಯವಾಗಿ ಕಾಣುವ ಒಂದು ಅಂಶವೆಂದರೆ ಪುರುಷಶಕ್ತಿಯ ದಮನಕ್ಕಾಗಿ ಸ್ತ್ರೀ ಶಕ್ತಿಯ ಬಳಕೆ ಮತ್ತು ಅದರ ಪಾರಮ್ಯತೆ. ಅಷ್ಟೊಂದು ಜನ ದೇವವೀರರು ಒಬ್ಬ ಮಹಿಷ ಮತ್ತು ಅವನ ಸೈನ್ಯವನ್ನು ಸೋಲಿಸಲಾಗಲಿಲ್ಲ. ಅಂತೆಯೇ ಈ ಮಹಾವೀರ ಮಹಿಷನಾದರೋ ಕೇವಲ ಒಬ್ಬ ಹೆಣ್ಣಿನ ಮುಂದೆ ನಿರ್ವೀರ್ಯನಾದ. ಸರ್ವಸ್ವವನ್ನೂ ಕಳೆದುಕೊಂಡ ಮಾನಸಿಕ ಮತ್ತು ದೈಹಿಕ ಅಧಃಪತನಕ್ಕೆ ಒಳಗಾಗಿದ್ದ ದೇವತೆಗಳು ಶತ್ರು ಸಂಹಾರಿಣಿ ದುರ್ಗೆಗೆ ಶರಣಾದರು.

ದುರ್ಗೆ ಪುರುಷ ದ್ವೇಷಿಯಂತೇನೂ ಕಾಣುವುದಿಲ್ಲ. ಆದರೆ ಅಸುರ ಸಂಹಾರಕ್ಕಾಗಿ ನೇರವಾಗಿ ಪುರಷ ಸಹಾಯಕರಾರೂ ಇವಳಿಗಿಲ್ಲ. ತನಗೆ ನೆರವಾಗಲು ಸ್ವಯಂರೂಪಗಳನ್ನು ಧರಿಸಿದಳು. ಇದರಲ್ಲಿ ಮುಖ್ಯವಾದುದು ಕಾಳಿ ಮತ್ತು ಹೆಚ್ಚು ಪ್ರಸಿದ್ಧಿ ಪಡೆದಿರುವ ಸಪ್ತ ಮಹಾಮಾತೆ (ಸಪ್ತಮಾತೃಕೆ)ಯರಾದ 'ಬ್ರಾಹ್ಮೀ', 'ಮಾಹೇಶ್ವರೀ', 'ಕೌಮಾರೀ', 'ವೈಷ್ಣವೀ', 'ವಾರಾಹೀ', 'ಇಂದ್ರಾಣಿ' ಮತ್ತು 'ಚಾಮುಂಡಿ'. ಹೀಗೆ ಸರ್ವತಂತ್ರ ಸ್ವತಂತ್ರ ಶಕ್ತಿರೂಪಿಣಿಯಾಗಿ ಹೊರಹೊಮ್ಮಿದ್ದಾಳೆ 'ದುರ್ಗಾ'.

ವಿವಿಧ ಕವಲುಗಳಿಂದ ಹರಿದು ಬಂದು ಸೇರುವುದರಿಂದ ಆ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡಿರುತ್ತವೆ. ಏಕತಾನತೆ ಇಲ್ಲದ ಏಕತೆ ಇಲ್ಲಿದೆ. 'ಹೊಸ ಚಿಗುರು', ಹಳೆ ಬೇರು ಕೂಡಿರಲು ಮರ ಸೊಗಸು; ಎಂಬ ಧರ್ಮದ ಮರ್ಮ ಇಲ್ಲಿದೆ.

ಇದಕ್ಕೆ ಅತಿ ಸೂಕ್ತವಾಗಿ ಸ್ಪಂದಿಸಬಲ್ಲಂಥ ಹಬ್ಬ–ಆಚರಣೆ ನಮ್ಮಲ್ಲೊಂದಿಗೆ. ಅದನ್ನು ವ್ಯಕ್ತಿಗತವಾಗಿ ಇಲ್ಲವೇ ಸಾಮೂಹಿಕವಾಗಿ, ಸಾಮಾನ್ಯರಿಂದ ಶ್ರೀಮಂತರ (ಚಕ್ರವರ್ತಿ) ವರೆಗೆ ಸರಳ, ಶಾಂತ, ಪ್ರೀತಿ, ಭಕ್ತಿ, ವಿಶ್ವಾಸಗಳಿಂದ ಅಥವಾ ಕ್ಲಿಷ್ಟ, ರೌದ್ರ, ದರ್ಪ, ಭೀತಿಯಂಥ ವಿರುದ್ಧ ಭಾವನೆಗಳಿಂದುಂಟಾದ ಭಕ್ತಿಯಿಂದ ಆಚರಿಸುವುದಿದೆ. ಪರ್ಷಿಯನ್ ರಾಯಭಾರಿ ಅಬ್ದುಲ್ ರಜಾಕ್ (ಕ್ರಿ.ಶ. ೧೪೪೨)ನ ಮಾತಿನಲ್ಲಿ ಹೇಳುವುದಾದರೆ – "ಆಡಳಿತ ನಡೆಸುವ ಈ ದೇಶದ ವಿಗ್ರಹಾರಾಧಕರು ತಮ್ಮ ಗೌರವ, ಪ್ರತಿಷ್ಠೆ, ಅಧಿಕಾರ, ದರ್ಪ ಮತ್ತು ವೈಭವ ಪ್ರದರ್ಶನಕ್ಕಾಗಿ ಪ್ರತಿವರ್ಷವೂ 'ಮಹಾನದಿ' ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬ ನಿಜವಾಗಿಯೂ ಒಬ್ಬ ಚಕ್ರವರ್ತಿಗೆ ಯೋಗ್ಯವಾದ ಹಬ್ಬವೇ ಸರಿ". ಅಬ್ದುಲ್ ರಜಾಕ್ ಹೀಗೆ ವಿಶ್ಲೇಷಿಸುವ ಹಬ್ಬವೇ 'ಮಹಾನವಮಿ'. ಅದರ ಆಚರಣೆಯಲ್ಲಿದ್ದ ಅದಾಧತೆಯನ್ನು ಕಂಡು ಸೂಚ್ಯವಾಗಿ 'ಮಹಾನದಿ' ಎಂದು ಹೇಳಿದ್ದಾನೆ.[೧]

ಅನಾದಿ ಕಾಲದಲ್ಲಿ ಈ ಹಬ್ಬವನ್ನು ವಸಂತ ಋತುವಿನಲ್ಲಿ ಆಚರಿಸುತ್ತಿದ್ದರಂತೆ. ಆದರೆ ಶ್ರೀರಾಮ ಅನಿವಾರ್ಯ ಕಾರಣದಿಂದ ವಸಂತ ಕಾಲಕ್ಕೆ ಕಾಯದೆ ಆಶ್ವೀಜದಲ್ಲಿ ಪೂಜೆ ಮಾಡಿ ಇಷ್ಟಸಿದ್ಧಿ ಪಡೆದನಂತೆ. ಅಂದಿನಿಂದ ಜನ ವಸಂತ ನವರಾತ್ರಿಯನ್ನು ಬಿಟ್ಟು ಶ್ರೀರಾಮ ಪ್ರಾರಂಭಿಸಿದ ಶರನ್ನವರಾತ್ರಿಯನ್ನು ರೂಢಿಗೆ ತಂದರಂತೆ.

ಶರನ್ನವರಾತ್ರಿ ಪ್ರಾರಂಭವಾದರೂ ವಸಂತ ನವರಾತ್ರಿ ಉತ್ಸವಾಚರಣೆ ಸಂಪೂರ್ಣ ನಿಲ್ಲಲಿಲ್ಲವೆಂದು ಕಾಣುತ್ತದೆ. ಶ್ರದ್ಧಾವಂತ ಜನಕ್ಕೆ ಎರಡೂ ಕಾಲಗಳಲ್ಲಿ ಉತ್ಸವಾಚರಣೆಯ ಹಂಬಲವಿದ್ದಿರಬೇಕು. ಸಂಪ್ರದಾಯದ ಪ್ರಕಾರ ವಸಂತ ನವರಾತ್ರಿ ಆಚರಿಸಲೇ ಬೇಕು ಎಂಬ ಪರಂಪರಾಗತ ನಂಬಿಕೆಯ ವಿಚಾರವನ್ನು ಬಂಗಾಳದ ಹಳ್ಳಿಗಳಲ್ಲಿ ಜನ ಈಗಲೂ ನೆನಪಿಸಿಕೊಳ್ಳುತ್ತಾರೆ. ವಸಂತದಲ್ಲಿ ಚಿಗುರು ಚೈತನ್ಯಪೂರ್ಣವಾಗಿ ಮೈದಳೆದರೆ, ಶರತ್ಕಾಲದಲ್ಲಿ ಅದು ಮಾಗಿರುತ್ತದೆ. ಇಲ್ಲಿ ಜೀವ ಮತ್ತು ಪ್ರಕೃತಿಯ ಸಂಬಂಧ ಕಲ್ಪನೆ ಇರಬಹುದು. ಹಬ್ಬದ ಆಚರಣೆಯಲ್ಲೂ ನಿರ್ದಿಷ್ಟ ಫಲಾಪೇಕ್ಷೆ ಇರಬಹುದು. ಏನೇ ಆಗಲಿ, ಮೂಲ ವಿಚಾರ ಭೇದಗಳಾವುವೂ ಇಲ್ಲದೆ ಸರ್ವಶ್ರೇಷ್ಠವೆಂದು ತಿಳಿದು ಸರ್ವರೂ ಭಕ್ತಿ, ಉತ್ಸಾಹಗಳಿಂದ ಆಚರಿಸುವ ಹಬ್ಬ ಇದು.

ಈ ದುರ್ಗೆಗೆ 'ತ್ರಿಪುರಾಂತಕೀ', 'ಕಾತ್ಯಾಯನಿ' ಮತ್ತು 'ವಿಂಧ್ಯವಾಸಿನಿ' ಎಂಬ ಹೆಸರುಗಳೂ ಇವೆ. ಸ್ವತಃ ಶಿವನಿಗೆ ತ್ರಿಪುರಾಸುರ ಸಂಹಾರಕ್ಕಾಗಿ ಮುಖ್ಯ ಚೇತನಳಾದ ದುರ್ಗೆ ತ್ರಿಪುರಾಂತಕೀ ಆದಳು. ಮಹಿಷಾಸುರನೊಡನೆ ಯುದ್ಧ ಅನಿವಾರ್ಯವಾದಾಗ ಗೌರಿಯು ಸಾವಿರ ಸೂರ್ಯರ ಪ್ರಭೆಯನ್ನು ಹೊಂದಿ ದುರ್ಗಾ ರೂಪದಲ್ಲಿ ಕಾತ್ಯಾಯನ ಋಷಿಗಳ ಆಶ್ರಮದಿಂದ ಹೊರ ಬಂದಳಾದ್ದರಿಂದ 'ಕಾತ್ಯಾಯನಿ (ಕಾತ್ಯಾಯಿನಿ)' ಆದಳು. ಇವಳು ಸಾಮಾನ್ಯವಾಗಿ ವಿಹರಿಸುವ ಮತ್ತು ವಾಸಿಸುವ ಸ್ಥಳ ವಿಂಧ್ಯಾವಾಸಿನಿ, ಮಹಾಮುನಿ ಸೇವಿತೆ' ಎಂದು ಅತ್ಯಂತ ಪ್ರಾಚೀನ ಶಾಸನಗಳಲ್ಲೂ ಉಲ್ಲೇಖ ಇದೆ.

ಮಹಿಷ ಸಂಹಾರದಲ್ಲಿ ಯಾವ ಭಿನ್ನಾಭಿಪ್ರಾಯಗಳೂ ಇಲ್ಲ. ಆದರೆ ಯಾವಾಗ ಅನ್ನುವ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ಪೌರಾಣಿಕದ ಒಂದು ನಂಬಿಕೆಯ ಪ್ರಕಾರ ಮಂದರ ಪರ್ವತದಲ್ಲಿ ಸ್ವಯಂಭೂವ ಮನ್ವಂತರ ಕಾಲದಲ್ಲಿ ಈ ಘಟನೆ ನಡೆಯಿತು. ಮತ್ತೊಂದು ನಂಬಿಕೆಯ ಪ್ರಕಾರ ವೈವಸ್ವತ ಮನ್ವಂತರ ಕಾಲದಲ್ಲಿ ವಿಂಧ್ಯಾಚಲದಲ್ಲಿ ಆಯಿತು.

'ದುರ್ಗ' ಎಂಬ ಹೆಸರು ದುರ್ಗ (ಕೋಟೆ), ದುರ್ಗಮ (ಕಷ್ಟಸಾಧ್ಯವಾಗದ), ಕಠಿನ, ಭೇದಿಸಲಾಗದ, ತಲಪಲಾಗದ ಎಂಬಿತ್ಯಾದಿ ಅರ್ಥದಲ್ಲಿದೆ. ಮಾತೆ ದುರ್ಗಾ ಸಹ ಅಷ್ಟೇ ಸುಲಭಗ್ರಾಹ್ಯವಲ್ಲದವಳು. ಸುಲಭ ಎಂದೆನಿಸುವ 'ಮಾಯಾ' ಸ್ವಭಾವ ಸೃಷ್ಟಿಸುವವಳು.

ಆದರೆ ಇವಳು ನಿಜವಾಗಿ ಯಾರು? ಪುರಾಣಗಳಲ್ಲಿ ಉದಾಹರಣೆಗಳ ಮೂಲಕ ಇದನ್ನು ಅರ್ಥೈಸುವ ಕಾರ್ಯ ನಡೆದಿದೆ. 'ದೇವಿ ಮಹಾತ್ಮೆ'ಯಲ್ಲಿರುವ ವಿಚಾರವನ್ನು ಇಲ್ಲಿ ಉದಾಹರಿಸಬಹುದು.

ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳನ್ನು ಯಂತ್ರಿಸುವ ಆದ್ಯಂತ ರಹಿತವಾದ ಒಂದು ಶಕ್ತಿ ಇದೆ. ಇದೇ ಆದಿಶಕ್ತಿ. ಈ ದೇವಿ ತನ್ನ ಇಚ್ಛಾನುಸಾರ ತನ್ನ ಮೂರು ಭಿನ್ನ ರೂಪಗಳನ್ನು ಸೃಷ್ಟಿಸಿದಳು. 'ಮಹಾಕಾಳಿ, ಮಹಾಲಕ್ಷ್ಮೀ ಮತ್ತು ಮಹಾಸರಸ್ವತಿ' ದೇವರೇ ಆ ರೂಪಗಳು. ಮಧು-ಕೈಟಭರ ನಾಶಕ್ಕೆ ಕಾರಣಳಾದ ತಮೋಗುಣದ ಮಹಾಕಾಳಿ - 'ಮಧು-ಕೈಟಭ ನಾಶಿನಿ' ಆದಳು. ಇಂದ್ರಾದಿ ದೇವತೆಗಳ ಮನೋಭೀಷ್ಟ ಸಿದ್ಧಿಗಾಗಿ ಹುಟ್ಟಿದ ರಜೋಗುಣದ ಮಹಾಲಕ್ಷ್ಮೀ ಮಹಿಷಾಸುರನನ್ನು ಕೊಂದು ಮಹಿಷಮರ್ದಿನಿಯಾದಳು. ಶುಂಭ, ನಿಶುಂಭರೆಂಬ ರಕ್ಕಸರನ್ನು ಮತ್ತು ಅವರ ಸೇನಾಪತಿಗಳಾದ ಚಂಡ-ಮುಂಡ ಮತ್ತು ರಕ್ತ ಬೀಜಾಸುರನನ್ನು ಸಂಹರಿಸಿದ ದೇವಿ ಸತ್ವಗುಣರೂಪಿ ಮಹಾಸರಸ್ವತಿ. ಅವಳಿಗೆ 'ಚಾಮುಂಡಾ' ಎಂಬ ಹೆಸರು ಚಂಡ-ಮುಂಡರ ಸಂಹಾರದಿಂದ ಬಂತು. ದೇವಿ ಮಹಾತ್ಮೇ ಪ್ರಕಾರ ಈ ಮೂವರೂ ದುರ್ಗಾ ಸ್ವರೂಪಿಗಳೇ.

ದೇವ, ದಾನವ ಮತ್ತು ಮನುಷ್ಯ ಸಹಜವಾದ ಸತ್ವ, ರಜಸ್ ಮತ್ತು ತಮೋಗುಣಗಳ ಪ್ರತಿರೂಪಗಳು ಈ ಮೂರು ದುರ್ಗಾ ರೂಪಗಳು. ಇವಳು ತ್ರಿಮೂರ್ತಿಗಳ ಸೃಷ್ಟಿ, ಸ್ಥಿತಿ, ಲಯ ಕಾರ್ಯವನ್ನು ತನ್ನ ಆಜ್ಞಾವರ್ತಿಯಲ್ಲಿರಿಸಿಕೊಂಡಿದ್ದಾಳೆ ಎಂಬ ನಂಬಿಕೆ ಪೌರಾಣಿಕವಾದುದು. ದೇವಿ ಮಹಾತ್ಮೆಯ ಈ ತ್ರಿಗುಣ, ತ್ರಿಮೂರ್ತಿ ಸ್ವರೂಪದ ಶಕ್ತಿಪಾರಮ್ಯತೆಯನ್ನು ವಿವರಿಸುತ್ತದೆ. ಶಕ್ತಿ, ಮಾಯಾ ಮತ್ತು ಪ್ರಕೃತಿ ರೂಪಗಳಲ್ಲಿ ಇವಳನ್ನು ಗುರುತಿಸಲಾಗಿದೆ.

ದೇವಿಯ ತ್ರಿಗುಣ ಸ್ವರೂಪಿ ರೂಪಗಳು ತಮ್ಮ ಪ್ರತಿರೂಪಗಳನ್ನು ಸೃಷ್ಟಿಸಿದರು. ಮಹಾಕಾಳಿಯು ಈಶ್ವರ ಮತ್ತು ಸರಸ್ವತಿಯನ್ನು, ಮಹಾಲಕ್ಷ್ಮೀಯು ಬ್ರಹ್ಮ ಮತ್ತು ಲಕ್ಷ್ಮೀಯನ್ನು, ಮಹಾಸರಸ್ವತಿಯು ವಿಷ್ಣು ಮತ್ತು ಪಾರ್ವತಿಯರನ್ನು ಸೃಷ್ಟಿಸಿದರು. ಬ್ರಹ್ಮ ಸರಸ್ವತಿಯನ್ನು, ವಿಷ್ಣು ಲಕ್ಷ್ಮೀಯನ್ನು, ಈಶ್ವರ ಪಾರ್ವತಿಯನ್ನೂ ವಿವಾಹವಾದರು. ದುರ್ಗೆಯ ಪ್ರತಿರೂಪಗಳು ಹೀಗೆ ಮೂರು ಮೂರು

ರೂಪಗಳಲ್ಲೂ ಪ್ರಕಟಗೊಂಡವು ಈ ವಿಚಾರವನ್ನು ತಂತ್ರ ಮತ್ತು ಪುರಾಣಗಳು ಬಹಳ ಸೂಚ್ಯವಾಗಿ, ಆದರೆ ಸುಂದರವಾಗಿ ವರ್ಣಿಸಿವೆ.

ತ್ರಿಪುರಾ ತ್ರಿವಿಧಾದೇವಿ ಬ್ರಹ್ಮ ವಿಷ್ಣೀಶ ರೂಪಿಣಿ ।
ಜ್ಞಾನಶಕ್ತಿ ಕ್ರಿಯಾಶಕ್ತಿಃ ಇಚ್ಛಾಶಕ್ತ್ಯಾತ್ಮಿಕಾಪಿಯೋ ॥

(ವಾಮಕೇಶ್ವರ ತಂತ್ರ)

ತ್ರಿವಿಧಾ ಕುಂಡಲೀ ಶಕ್ತಿಃ ತ್ರಿದೇವಾನಾಂಚ ಸೃಷ್ಟಯೇ ।
ಸರ್ವಂತ್ರಯಂ ತ್ರಯಂ ಯಸ್ಮಾತ್ ತಸ್ಮಾತ್ ತ್ರಿಪುರಾ ಮಾತಾ ॥೨

(ಕಾಲಿಕಾ ಪುರಾಣ)

ದುರ್ಗಾ ತನ್ನ ಸಂಹಾರ ಕಾರ್ಯದಲ್ಲಿ ಸಹಕರಿಸಲು ತಾನೇ ಹಲವು ರೂಪಗಳಲ್ಲಿ ಪ್ರಕಟಗೊಂಡಳು. ಈ ರೂಪಗಳನ್ನು ನವದುರ್ಗೆಯರು ಎಂದು ಕರೆಯಲಾಗಿದೆ. ಪುರಾಣಗಳು ಇವರನ್ನು ಹೆಸರಿಸುತ್ತವೆ.

ದುರದೃಷ್ಟವಶಾತ್ ಇವುಗಳೊಳಗೆ ಹೆಸರಿನ ಬಗ್ಗೆ ಒಮ್ಮತವಿಲ್ಲ. ವಿದ್ಯಾರ್ಣವ ತಂತ್ರದ ಪ್ರಕಾರ ದುರ್ಗಾ, ಜಯದುರ್ಗಾ, ಶೂಲಿನಿ ದುರ್ಗಾ, ವಿದ್ಯಾವಾಸಿನಿ ದುರ್ಗಾ, ವನದುರ್ಗಾ, ರುದ್ರದುರ್ಗಾ, ಲವಣದುರ್ಗಾ, ಭೀಮದುರ್ಗಾ ಮತ್ತು ಕಾತ್ಯಾಯನೀ ದುರ್ಗಾ ಇವರು ಆ ನವದುರ್ಗೆಯರು.

ಶಾಸ್ತ್ರ ಸಂಪ್ರದಾಯ ಬೆಳೆದಂತೆ ಹೆಸರುಗಳ ಸಂಖ್ಯೆಯೂ ವೃದ್ಧಿಸಿದೆ. ಅಷ್ಟೇ ಅಲ್ಲ, ದುರ್ಗೆಯ ಪ್ರತಿರೂಪಗಳಲ್ಲಿ ಕೆಲವು ಸ್ವತಃ ಹಲವು ರೂಪಗಳನ್ನು ಧರಿಸಿರುವುದನ್ನೂ ಕಾಣುತ್ತೇವೆ. ಉದಾಹರಣೆಗೆ ಕಾಳಿ. ಇವಳಿಗೆ ಮಹಾಕಾಳಿ ಸ್ವರೂಪದ ಎರಡು ಪ್ರತ್ಯೇಕ ರೂಪಗಳಿದ್ದರೆ ಕಾಳಿ, ಶ್ಯಾಮ, ಕಾಲಿಕಾ, ಭದ್ರಕಾಳಿ ಮತ್ತು ಶ್ಮಶಾನ ಕಾಳಿ ರೂಪಗಳೂ ಇವೆ.

ತಂತ್ರ ಗ್ರಂಥಗಳಲ್ಲಿ ದುರ್ಗೆಯ ಬಹುರೂಪದ ನಾಮ, ಗುಣ, ಕಾರ್ಯ ಇತ್ಯಾದಿಗಳ ವೈವಿಧ್ಯಮಯ ವರ್ಣನೆ ಇದೆ. ಈ ಹೆಸರುಗಳಲ್ಲಿರುವ ವ್ಯತ್ಯಾಸವು ಪ್ರಾದೇಶಿಕ ಭಿನ್ನತೆಯನ್ನು ಸೂಚಿಸುವಂತಿದೆ.

ದುರ್ಗೆಯ ಎಲ್ಲಾ ಸ್ವರೂಪಗಳಲ್ಲೂ ಕಾಣುವ ಒಂದು ಮುಖ್ಯ ಗುಣವೆಂದರೆ, ಅತಿಯಾದ ದಾಹ ಮತ್ತು ಹಸಿವು. ವಿಶೇಷವಾಗಿ ಮಾನವ ರಕ್ತ, ಮಾಂಸಗಳ ಮೇಲೆ ಆಸಕ್ತಿ. ಅದಕ್ಕಾಗಿ ಉನ್ಮತ್ತ ಸ್ಥಿತಿಯಲ್ಲಿರಲು ಮದಿರಾಪಾನ. ಕೆಲವರಂತೂ ಶ್ಮಶಾನವಾಸಿಗಳು ಮತ್ತು ರುಂಡಮಾಲಾಧಾರಿಗಳು, ಕಾಮ ಪ್ರಚೋದಕ ಸುಂದರ ವದನದವರು, ತಮ್ಮನ್ನು ಮೋಹಿಸಿ ದೈಹಿಕ ಸುಖಕ್ಕಾಗಿ ಹಂಬಲಿಸುವವರನ್ನು ವಶೀಕರಿಸಿಕೊಂಡು ನಿರ್ನಾಮ ಮಾಡುವವರು.

ಈ ಎಲ್ಲದರ ನಡುವೆಯೂ ಒಂದು ವಿಚಿತ್ರ ರೂಪವನ್ನು ಕಾಣುತ್ತೇವೆ. ಅದು ದೇವಿಯ ಚಿನ್ನಮಸ್ತರೂಪ. ಸ್ಮಶಾನ ವಾಸಿಯಾದ ಇವಳು ಕ್ರೀಡಿಸುತ್ತಿರುವ (ರತಿ–ಮನ್ಮಥ) ಶವಗಳ ಮೇಲೆ

ನಿಂತಿದ್ದಾಳೆ. ಈ ನಗ್ನ ದೇಹಿ ತನ್ನ ತಲೆಯನ್ನು ತಾನೇ ಛೇದಿಸಿಕೊಂಡು ಒಂದು ಕೈಯಲ್ಲಿ ಹರಿತವಾದ ಕತ್ತಿಯನ್ನು ಇನ್ನೊಂದರಲ್ಲಿ ಕಡಿದ ತಲೆಯನ್ನೂ ಹಿಡಿದಿದ್ದಾಳೆ. ಛೇದಿಸಿದ ಕತ್ತಿನಿಂದ ಮೂರು ರಕ್ತ ಪ್ರವಾಹ. ಒಂದನ್ನು ತಾನು ಕಡಿದ ತಲೆಯ ಬಾಯಿಯಿಂದಲೇ ಸ್ವತಃ ಹಸಿ ಕುಡಿಯುತ್ತಿದ್ದಾಳೆ. ಇನ್ನೆರಡನ್ನು ಅವಳ ಸೇವಕಿಯರು ಪಾನ ಮಾಡುತ್ತಿದ್ದಾರೆ. ಇವಳು ಸಂಪೂರ್ಣ ತಾಂತ್ರಿಕ ಸಾಧಕರ ದೇವಿ. ಬೌದ್ಧತಾಮತ್ರಿಕರು ಇವಳನ್ನು 'ವಜ್ರ ಯೋಗಿನಿ' ಎಂದು ಕರೆದಿದ್ದಾರೆ. ಅವರ ಪ್ರಕಾರ ಇವಳು ಹಾಗೂ ಸೇವಕಿಯರು (ಯೋಗಿನಿಯರು) ನಗ್ನ ದೇಹಿಗಳು. ಬೇರೆಯವರ 'ಬಲಿ'ಗಾಗಿ ಇತರ ರೂಪಗಳು ಹಾತೊರೆದರೆ ಚಿನ್ನಮಸ್ತ ತನ್ನನ್ನೇ 'ಬಲಿ'ಯನ್ನಾಗಿ ಮಾಡಿದ್ದಾಳೆ. ಸಾವು – ಹುಟ್ಟು ಜೀವನ ಇವು ಪ್ರಕೃತಿಸಹಜವಾದ ಕ್ರಿಯೆ, ನಿಯಮಗಳೆಂಬುದನ್ನು ಸಾರುವಂತಿದ್ದಾಳೆ ಇವಳು.

ಮಾತೆ ಜನ್ಮದಾತೆ, ಲಾಲನೆ, ಪಾಲನೆ, ಶಿಕ್ಷಣ, ರಕ್ಷಣೆ, ದಂಡನೆ ಇತ್ಯಾದಿ ಕಾರ್ಯಗಳನ್ನು ಮಾಡುವವಳು. ಸಮಯ ಬಂದರೆ ಸರ್ವಸ್ವವನ್ನೂ ತ್ಯಾಗ ಮಾಡುವವಳು. ತಾಯಿ ದಂಡಿಸಿದರೂ ಮರುಕ್ಷಣದಲ್ಲಿ ರಕ್ಷಣೆ ಕೋರಿ ಅವಳ ಮಡಿಲನ್ನೇ ಆಸರಿಸುವ ಮಕ್ಕಳು. ಇಲ್ಲಿ ಕಾಮ, ಪ್ರೇಮ, ಶ್ರದ್ಧೆ, ವಾತ್ಸಲ್ಯ, ಶಿಸ್ತು, ಕರ್ತವ್ಯ ಮತ್ತು ನಿಸ್ವಾರ್ಥಗಳೆಲ್ಲದರ ಮೂರ್ತ ಸ್ವರೂಪ ಕಾಣುತ್ತೇವೆ. ದುರ್ಗಾಮಾತೆಯ ಪ್ರತಿಯೊಂದು ರೂಪವೂ ಒಂದೊಂದು ಗುಣ ವಿಶೇಷಗಳ ಪ್ರತಿರೂಪ. ಸಮಷ್ಟೀ ರೂಪದಲ್ಲಿ ದುರ್ಗೆ ಎಲ್ಲವನ್ನೂ ಪ್ರತಿನಿಧಿಸುತ್ತಾಳೆ, ಮಹಾಮಾತೆಯಾಗುತ್ತಾಳೆ.

ಮಾನವ ತನಗರಿವಾದಾಗಿನಿಂದ 'ಪರತತ್ವ'ದ ಪ್ರಕೃತಿ ಮಾತೆಯ ಆರಾಧಕನಾದ. ಮಾತೆಯ ಸ್ತ್ರೀ–ಪುರುಷ ರೂಪಗಳನ್ನು ಕಲ್ಪಿಸಿ, ಇಲ್ಲವೇ ಸೃಷ್ಟಿಸಿ ಪೂಜಿಸಲಾರಂಭಿಸಿದ. ಪ್ರಕೃತಿಯಿಂದ ತನ್ನ ಸುಖ, ಸಂತೋಷಗಳನ್ನು ಬಯಸಿ ಅದಕ್ಕೆ ತನ್ನ 'ಬಲಿ' ಕಾಣಿಕೆ ಅರ್ಪಿಸಲು ಪ್ರಾರಂಭಿಸಿದ. ಪ್ರಾಚೀನ ಭಾರತೀಯ ಬುಡಕಟ್ಟು ಜನಾಂಗ, ಅರಣ್ಯ ಮತ್ತು ಬೆಟ್ಟವಾಸಿಗಳು ಆಚರಿಸುತ್ತಿದ್ದ '**ಶರಭೋತ್ಸವ**' ಇದಕ್ಕೊಂದು ಸೂಕ್ತ ಉದಾಹರಣೆ. ರಾವಣ ಸಂಹಾರಕ್ಕಾಗಿ ಬ್ರಹ್ಮ ದುರ್ಗಾಪೂಜೆ ಮಾಡಿದ. ಒಂಬತ್ತನೆಯ ದಿನ ರಾಮ ರಾವಣನನ್ನು ಸಂಹರಿಸಿದ. ದುರ್ಗೆಯ ಕೃಪಾಕಟಾಕ್ಷಕ್ಕಾಗಿ ಅವಳನ್ನು ಸಂತೃಪ್ತಿಗೊಳಿಸಲು ಹತ್ತನೆಯ ದಿನ ಬ್ರಹ್ಮ ಶರಭೋತ್ಸವವನ್ನು ಆಚರಿಸಿದ ಎಂದು 'ಕಾಲಿಕಾ ಪುರಾಣ' ತಿಳಿಸುತ್ತದೆ.

ಪ್ರಾಚೀನ ಸಂಸ್ಕೃತಿಯ ಕೇಂದ್ರಗಳಾದ ಈಜಿಪ್ಟ್ ಮೆಸಪೊಟೇಮಿಯಾ, ಕ್ರೀಟ್, ಮಾಯಾ ಇನ್ಕಾ ಮತ್ತು ಗ್ರೀಸ್ ದೇಶಗಳಲ್ಲೂ ಮಾತೃ ದೇವತಾರಾಧನೆ ಇತ್ತು. ಭಾರತೀಯರಂತೆ ಈಜಿಪ್ಟಿಯನ್ನರೂ ನೈಲ್ ನದಿಯನ್ನು 'ತಾಯಿ' ಎಂದು ಪೂಜಿಸುತ್ತಿದ್ದರು. ಭೂಮಿಯ ಫಲವತ್ತತೆ ಕೋರಿ ನಾನಾ ರೀತಿಯ ಪೂಜೆ, ಆಚರಣೆಗಳು ಇಲ್ಲಿ ನಡೆಯುತ್ತಿದ್ದವು.

೫.೨. ಶಿಷ್ಟ ಪುರಾಣಗಳಲ್ಲಿ ದುರ್ಗಾಪೂಜೆಯ ವೈಭವ–ವೈಶಿಷ್ಟ್ಯ :

ಶರನ್ನವರಾತ್ರಿಯಲ್ಲಿ ದುರ್ಗಾಪೂಜೆಯನ್ನು ನಾನಾ ರೀತಿಯಲ್ಲಿ ಆಚರಿಸುವ ಪದ್ಧತಿ ಬೆಳೆದುಬಂದಿದೆ. ವೈದಿಕ ಸಂಪ್ರದಾಯದ ಪ್ರಕಾರ ಸ್ಥಾಪನೆ, ಜಪ, ಹೋಮ ತರ್ಪಣ, ಅಭಿಷೇಚನ, ವಿಪ್ರಭೋಜನ

ಇತ್ಯಾದಿ. ಇದನ್ನು 'ರುದ್ರಯಾಮಲ' ತಿಳಿಸುತ್ತದೆ. ಕುಲಾರ್ಣದ ತಂತ್ರದ ಪ್ರಕಾರ ಇದು ದೇವಿಯ ಪೀಠಪೂಜೆಯಿಂದ ಪ್ರಾರಂಭವಾಗಿ ಮಂತ್ರೋದ್ಧಾರದಲ್ಲಿ ಕೊನೆಗೊಳ್ಳುತ್ತದೆ. 'ದುರ್ಗಾಕಲ್ಪ' ದಲ್ಲಿ ದುರ್ಗಾಪೂಜೆ ಪ್ರಯೋಗದ ವಿವರಣೆ ಇದೆ.

ಆಶ್ವಯುಜ ಶುದ್ಧ ಪ್ರತಿಪದೆ (ಅಂದು ಹಿಂದಿನ ದಿನದ ಅಮಾವಾಸ್ಯೆ ಇರಬಾರದು) ದೇವಿ ಆರಾಧನೆಯ ಕಲಶ ಸ್ಥಾಪನೆಗೆ ಶುಭದಿನವು. (ಸಪ್ತಮಿ ದಿನದಂದೂ ಕಲಶ ಸ್ಥಾಪನೆ ಮಾಡಬಹುದೆಂದು ದೇವಿಪುರಾಣ ತಿಳಿಸುತ್ತದೆ.) ರಾತ್ರಿಯಲ್ಲಿ ಕಲಶ ಸ್ಥಾಪನೆ, ಅರ್ಚನಾ ವಿಧಿಗಳನ್ನು ಮಾಡಬಾರದೆಂದು ಎಲ್ಲ ಪುರಾಣಗಳೂ, ತಂತ್ರಶಾಸ್ತ್ರಗಳೂ ತಿಳಿಸುತ್ತವೆ. (ನವರಾತ್ರಿ ಎಂದರೆ ಒಂಬತ್ತು ರಾತ್ರಿಗಳಿರುವ, ಹತ್ತು ಹಗಲಿನ ಪೂಜೆ.)

ಎರಡನೆಯ ದಿನದಿಂದ ಛಾಯಾ ಮತ್ತು ಸೂರ್ಯರ ಪುತ್ರನಾದ ರೇವಂತನನ್ನು ಪೂಜಿಸಬೇಕು. ಇದು ಅಶ್ವಕ್ಷೇಮಕ್ಕಾಗಿ. ಅನಂತರ ಗಜ ಮತ್ತು ಅಸ್ತ್ರಗಳ ಪೂಜೆ. ಯುದ್ಧದ ಸಮಯದಲ್ಲಿ ಇವು ಕ್ಷೇಮದಿಂದಿದ್ದು ಜಯ ತರಲಿ ಎಂಬ ಭಾವನೆಯಿಂದ ಈ ಪೂಜೆ.

ಕಲಶ ಸ್ಥಾಪನೆಯ ಅನಂತರ ಐದು ದಿನಗಳ ಕಾಲ ದುರ್ಗಾ ನಿದ್ರಾವಸ್ಥೆಯಲ್ಲಿರುತ್ತಾಳೆ. ಅದಕ್ಕಾಗಿಯೇ ಅರ್ಚನಾ ವಿಧಿಗಳು. ಆರನೆಯ ದಿನ ಜ್ಯೇಷ್ಠಾ ನಕ್ಷತ್ರದಲ್ಲಿದೇವಿ ದುರ್ಗೆಯನ್ನು ಎಚ್ಚರಿಸುವುದು.

ಏಳನೆಯ ದಿನ ಮೂಲನಕ್ಷತ್ರದಲ್ಲಿ ದುರ್ಗೆಯ ಪ್ರಾರ್ಥನೆ ಮತ್ತು ದೇವಿಯನ್ನು ಸರಸ್ವತಿ ರೂಪದಲ್ಲಿ ಸ್ಥಾಪಿಸುವುದು ಮತ್ತು ಮುಂದಿನ ಮೂರು ದಿನಗಳವರೆಗೆ ಅವಳನ್ನು ಪೂಜಿಸುವುದು. ಈ ಸಮಯದಲ್ಲಿ ಪಾಠ-ಪ್ರವಚನ ನಿಷಿದ್ಧ ಎಂದು ಶಾಸ್ತ್ರ ಗ್ರಂಥಗಳು ಹೇಳುತ್ತದೆ. ಅಂದು ದೇವಿಯ ದ್ವಾರಪಾಲರ ಪೂಜೆ ಸಹ ಇದೆ.

ಎಂಟನೆಯ ದಿನ ದುರ್ಗಾಷ್ಟಮಿ. 'ದುರ್ಗೋತ್ಸವ' ಎಂಬ ಹೆಸರೂ ಇದೆ. (ಈ ದಿನ ಕೃಷ್ಣಾಷ್ಟಮಿಗೆ ಸಮನಾದುದೆಂಬ ನಂಬಿಕೆ ಇದೆ.) ದಕ್ಷಯಜ್ಞ ನಾಶಕ್ಕಾಗಿ ಭದ್ರಕಾಳಿ ಹುಟ್ಟಿದ ದಿನ. (ಇವಳು ದಶ ಮಹಾವಿದ್ಯಾ ದೇವಿಯರಲ್ಲಿ ಒಬ್ಬಳು.) ಭದ್ರಕಾಳಿಯ ಪೂಜೆಯನ್ನು ಮಾತ್ರ ಅಂದು ಉಪವಾಸವಿದ್ದು ರಾತ್ರಿ ನೆರವೇರಿಸಬೇಕು.

ದೇವಿಪೂಜೆಯೊಂದಿಗೆ ಉಗ್ರ ಚಂಡಾದುರ್ಗೆ ಪೂಜೆ. ಇವಳೊಂದಿಗೆ ಯೋಗಿನಿಯರು, ಸಪ್ತಮಾತೃಕೆಯರು ಮತ್ತು ಕಾತ್ಯಾಯಿನಿ ದುರ್ಗಾ ಇವರುಗಳಿಗೆ ಪೂಜೆ. ಇದರೊಂದಿಗೆ ಪೂಜೆ ಸಲ್ಲುತ್ತದೆ. ಶಸ್ತ್ರಾಸ್ತ್ರ, ರಥ, ವಾಹನ ಇತ್ಯಾದಿಗಳಿಗೂ ಪೂಜೆ ಸಲ್ಲುತ್ತದೆ.

ನವಮಿಯು ದುರ್ಗೆ ಮಹಿಷನನ್ನು ಕೊಂದ ದಿನ. ಮಹಿಷನ ತಲೆಯ ಮೇಲೆ ತನ್ನ ಎಡಗಾಲನ್ನಿಟ್ಟು, ತನ್ನೊಡನೆ ಮಹಿಷನಿಗೂ ಪೂಜೆ ದೊರೆಯುವಂತೆ ಮಾಡಿದ ದಿನ. ಪೌರಾಣಿಕ ಕಥೆಯ ಪ್ರಕಾರ ದುರ್ಗಾ ಅಂದು ತನ್ನ ಉಗ್ರ ಚಂಡೀ ರೂಪದಲ್ಲಿ ಹದಿನೆಂಟು

ಭುಜಗಳುಳ್ಳವಳಾಗಿದ್ದಳು. ಮಹಿಷನನ್ನು ಸಂಹಿರಿಸಿದ್ದಷ್ಟೇ ಅಲ್ಲದೆ ಶಾಂತವದನಳಾಗಿ ಸದಾ ತನ್ನೊಡನಿರುವ ಮರುಹುಟ್ಟಿನ ವರವನ್ನ ಮಹಿಷನಿಗೆ ಕೊಟ್ಟಳು.

ಎಂಟನೆಯ ದಿನ ನಡೆದ ಪೂಜೆಗಳೆಲ್ಲವೂ ನವಮಿಯಂದು ನಡೆಯುವುದು. ಅದರೊಂದಿಗಿನ ವಿಶೇಷವೆಂದರೆ ದುರ್ಗಾಸಪ್ತಶತಿ ಪಾರಾಯಣ ಮತ್ತು ಮಂಗಳ, ಕುಮಾರಿ ಪೂಜೆ, ಹೋಮ ಮತ್ತು ಬಲಿ. ಹೆಚ್ಚಿನದ್ದು ತಾಂತ್ರಿಕ ವಿಧಾನ.

ಪ್ರದೋಷ ಕಾಲದಲ್ಲಿ ಕುಮಾರಿ ಪೂಜೆ ಮಾಡಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ. ಕುಮಾರಿಯರು ೭ ರಿಂದ ೯ ವರ್ಷ ಪ್ರಾಯದವರಾಗಿದ್ದು ದೋಷರಹಿತರಾಗಿರಬೇಕು. ಸರ್ವಸಿದ್ಧಿಗಾಗಿ ಬ್ರಾಹ್ಮಣ, ಖ್ಯಾತಿಗಾಗಿ ಕ್ಷತ್ರಿಯ, ಐಶ್ವರ್ಯಕ್ಕಾಗಿ ವೈಶ್ಯ ಮತ್ತು ಸಂತಾನಪ್ರಾಪ್ತಿಗಾಗಿ ಶೂದ್ರ ಕನ್ಯೆಯರನ್ನು ಪೂಜಿಸಬೇಕೆಂದು ಪುರಾಣಗಳು ಹೇಳುತ್ತವೆ.

೫.೩. ಇಂಡೋನೇಷ್ಯಾದ ದುರ್ಗೆ ಮತ್ತು ಸರಸ್ವತಿ :

ಇಂಡೋನೇಷ್ಯಾದ ಅತಿ ದೊಡ್ಡ ದೇವಾಲಯ ಸಮುಚ್ಚಯವಾದ ಪ್ರಾಂಬನನ್ ಕೇಂದ್ರದ ಜಕಾರ್ತದಲ್ಲಿದೆ ಮತ್ತು ಇದನ್ನು ಸುಮಾರು ಕ್ರಿ.ಶ.೮೫೦ರಲ್ಲಿ ಸಂಜಯ ವಂಶಸ್ಥರು ಕಟ್ಟಿದರು. ಯುನೆಸ್ಕೊ ವಿಶ್ವ ಪರಂಪರೆಯ ನಿವೇಶನವಾದ ಇದು ಆಗ್ನೇಯ ಏಷ್ಯಾದಲ್ಲಿ ಒಂದು ಅತಿ ದೊಡ್ಡ ಹಿಂದೂ ದೇವಾಲಯವಾಗಿದೆ ಮತ್ತು ತ್ರಿಶಕ್ತಿ ಹೆಸರಿನ ನಾಮ ಉತ್ಪತ್ತಿಯಾಗಿದ್ದರೂ ಕಾಲಕ್ರಮೇಣ ಹಿಂದು ಮತ್ತು ಬೌದ್ಧ ಪ್ರಾರ್ಥನಾ ಸ್ಥಳಗಳನ್ನು ಚಂಡಿ ಎಂದು ಕರೆಯಲು ಆರಂಭಿಸಲಾಯಿತು. ಎಂದು ಕರೆಯಲಾಗುವ ಎಂಟು ಮುಖ್ಯ ಗುಡಿಗಳು ಹಾಗೂ ೨೫೦ ಕ್ಕೂ ಅಧಿಕವಾಗಿರುವ ಪ್ರತ್ಯೇಕ ಚಂಡಿಗಳು ರೊರೊ/ಲೊರೊ/ಲಾರ ಯೊಂಗ್‌ರಾಂಗ್ ಎನ್ನುವ ಕನ್ಯಹಾ ದೇವತೆಗೆ ಸಂಬಂಧಪಟ್ಟಿದ್ದು ಇವಳು ದುರ್ಗೆಯ ಸ್ವರೂಪವಾಗಿದ್ದಾಳೆ.

ಸ್ಥಳೀಯ ಜಾನಪದವೊಂದರ ರೀತ್ಯ ಲಾರಾ ಯೊಂಗ್‌ರಾಂಗ್, ಜಾವಾದ ರಾಜಕುಮಾರಿಯಾಗಿದ್ದಳು. ಪಕ್ಕದ ರಾಜ್ಯದ ಬಾಂಡುಗ್ ಎನ್ನುವ ಮಂತ್ರಿ ಅವಳಲ್ಲಿ ಅನುರಕ್ತನಾದಾಗ, ತನ್ನ ತಂದೆಯಾದ ಪ್ರಭುಬಾಕಾರಾಜನನ್ನು ಅವನು ಹತ್ಯೆ ಮಾಡಿದ್ದ ಕಾರಣ ಅವನ್ನು ವರಿಸಲು ಇಷ್ಟಪಡದೇ, ತನ್ನನ್ನು ವರಿಸಬೇಕೆಂದಲ್ಲಿ ಅವನು ಒಂದೇ ರಾತ್ರಿಯಲ್ಲಿ ಒಂದು ಸಾವಿರ ದೇವಸ್ಥಾನಗಳನ್ನು ಕಟ್ಟಬೇಕೆಂಬ ಅಸಾಧ್ಯ ಷರತ್ತನ್ನು ಅವಳು ವಿಧಿಸಿದಳು.

ಇದಕ್ಕಾಗಿ ಆ ಮಂತ್ರಿ ತನ್ನ ಮಾಯಾಶಕ್ತಿಯಿಂದ ಕೆಲವು ಅತಿಮಾನುಷ ಜೀವಿಗಳ ಸಹಾಯವನ್ನು ಕೋರಿದಾಗ ಅವುಗಳು ಒಪ್ಪಿಕೊಂಡು, ದೇವಸ್ಥಾನಗಳನ್ನು ಒಂದೇ ರಾತ್ರಿಯಲ್ಲಿ ಕಟ್ಟುಇ ಮುಗಿಸಲು ಒಪ್ಪಿಕೊಂಡವು. ಆದರೆ ಲಾರ ಯೊಂಗ್‌ರಾಂಗ್ ರಾಜಕುಮಾರಿಯು ಇದನ್ನು ಇಷ್ಟಪಡಲಿಲ್‌ಲ. ಈ ವಿವಾಹವನ್ನು ತಪ್ಪಿಸಲು ಅವಳು ಅಕ್ಕಪಕ್ಕದ ಕನ್ಯೆಯರು ಬೆಳಕು ಹರಿಯುವ ಮೊದಲೇ ಭತ್ತ ಕುಟ್ಟಲು ಆರಂಭಿಸಬೇಕೆಂದು ಆಜ್ಞಾಪಿಸಿದಳು. ಪದ್ಧತಿಯು

ಸೂರ್ಯೋದಯದ ಸಂಕೇತವಾಗಿದ್ದರಿಂದ ಬೆಳಗಾಗುತ್ತಿದೆಯೆಂದು ನಂಬಿದ ಅತಿಮಾನುಷ ಜೀವಿಗಳು ತಮ್ಮ ಕೆಲಸ ನಿಲ್ಲಿಸಿದವು. ಆದರೆ ಆ ವೇಳೆಗಾಗಲೇ ೯೯೯ ದೇವಸ್ಥಾನಗಳನ್ನು ಕಟ್ಟಲಾಗಿತ್ತು. ಈ ವಂಚನೆಯಿಂದ ಕುಪಿತನಾದ ಬಾಂಡುಗ್, ಲಾರ ಯೊಂಗ್‌ರಾಂಗ್ ಕಲ್ಲಾಗಬೇಕೆಂದು ಶಪಿಸಿದನು ಮತ್ತು ಅವಳ ಸಮೀಪದಲ್ಲೇ ತಾನೂ ಇರಲು ಕಲ್ಲು ಹಸುವಾಗಿ ಮಾರ್ಪಟ್ಟನು. ಅವಳು ಎಲ್ಲಕ್ಕಿಂತ ಕೊಟ್ಟ ಕೊನೆಯ ಮತ್ತು ಅತಿ ಸುಂದರ ಪ್ರತಿಮೆಯಾದ ದುರ್ಗೆಯಾದಳು. ಇಂಡೋನೇಷ್ಯಾದಲ್ಲಿ ಯೊಂಗ್ ರಾಂಗ್‌ನ ಮತ್ತೊಂದು ಹೆಸರೆಂದರೆ Deuga ಯೊಂಗ್ ರಾಂಗ್ ಶಿಲ್ಪವು ವಾಸ್ತವಿಕವಾಗಿ ಮಹಿಷ ಮರ್ಧಿನಿಯಾಗಿದ್ದಾಳೆ.

ಸರಸ್ವತಿ–ಬಾಲಿ ಪ್ರದೇಶದ ಜ್ಞಾನ ದೇವತೆ :

ಇಂಡೋನೇಷ್ಯಾದ ಬಾಲಿ ದ್ವೀಪದ ಹಿಂದೂಗಳ ಪೂಜಾ ಪದ್ಧತಿಯಲ್ಲಿ ವಿದ್ಯೆ, ವಿಜ್ಞಾನ ಮತ್ತು ಸಾಹಿತ್ಯದ ಪ್ರತೀಕವಾದ ಸರಸ್ವತಿಯು ಅತ್ಯಂತ ಜನಪ್ರಿಯ ದೇವಿಯಾಗಿರುವುದರಿಂದ ಅವಳ ಉಪಾಸನೆಯು ಅತಿಮುಖ್ಯ ಆಚರಣೆಯಾಗಿರುತ್ತದೆ. ಶ್ವೇತ ಹಂಸದ ಮೇಲೆ ಆಸೀನಳಾಗಿರುವ ಸರಸ್ವತಿಯು ಚತುರ್ಭುಜಳಾಗಿದ್ದಾಳೆ. ಕೈಗಳಲ್ಲಿ ಲೋಂಟಾರ್ ಎಂದು ಕರೆಯಲಾಗುವ ವಿಜ್ಞಾನ ಮತ್ತು ಜ್ಞಾನದ ಮೂಲವಾದ ಬಾಲಿಯ ಸಾಂಪ್ರದಾಯಿಕ ಹಸ್ತಪ್ರತಿ, ಜ್ಞಾನಕ್ಕೆ ಅಂತ್ಯವೇ ಇಲ್ಲವೆಮದು ಸೂಚಿಸಲು ೧೦೮ ಕೊಂಡಿಗಳ ಒಂದು ಮಾಲೆ (ಅಕ್ಷರಮಾಲೆಯ ರೀತಿಯದ್ದು) ಹಾಗೂ ವೀಣೆಯಂತಹ ರೆಬಾಬ್ ಎಂದು ಕರೆಯಲಾಗುವ ಬಾಲಿಯ ಒಂದು ಸಾಂಪ್ರದಾಯಿಕ ತಂತಿ ವಾದ್ಯವಿರುತ್ತದೆ. ವೀಣೆಯ ನಾದವು ವಿಜ್ಞಾನದಷ್ಟೇ ಸುಂದರವಾಗಿದೆ ಮತ್ತು ಕಮಲವು ಪಾವಿತ್ರತೆಯ ಸಂಕೇತವಾಗಿದೆ. ಹಂಸಗಳು ಒಳಿತು ಮತ್ತು ಕೆಡುಕಿನ ನಡುವಣ ವ್ಯತ್ಯಾಸವನ್ನು ಅರಿತುಕೊಳ್ಳುವ ಪರಿಜ್ಞಾನದ ಸಂಕೇತವಾಗಿದೆ. ಬಾಲಿ ಹಿಂದುಗಳ ಪ್ರಕಾರ, ಲೌಕಿಕ ಆಸ್ತಿತ್ವದ ದೇವಿಯಾದ ಶತರೂಪಳ ಬಗ್ಗೆ ಮಗ್ನನಾಗಿದ್ದ ಬ್ರಹ್ಮನ ವಿಷಯಾಸಕ್ತ ಮನಸ್ಸನ್ನು ಹತೋಟಿಗೆ ತರುವಲ್ಲಿ ಸರಸ್ವತಿಯು ಯಶಸ್ವಿಯಾಗಿದ್ದರಿಂದ ಅವಳು ಪೂಜಾಯೋಗ್ಯವಾಗಿದ್ದಾಳೆ ಮತ್ತು ಮಾನವ ಜೀವನದಲ್ಲಿ ಜೀವನ ಧ್ಯೇಯವನ್ನು ಸಾಧಿಸಲು ಜ್ಞಾನವು ಪರಮೋಚ್ಚಸಾಧನವಾಗಿದೆ ಎನ್ನುವುದನ್ನು ಸಾರುತ್ತಾಳೆ.#೩ ಈ ದಿನದಂದು ಯಾರೂ ಓದಕೂಡದು ಅಥವಾ ಬರೆಯಕೂಡದು ಮತ್ತು ಲೋಂಟಾರ್ ಹಸ್ತಪ್ರತಿಗಳು ಹಾಗೂ ಪುಸ್ತಕಗಳನ್ನು ಗುಡಿಗಳಲ್ಲಿ ಪೂಜಿಸಲಾಗುತ್ತದೆ. ಸರಸ್ವತಿ ದಿನವನ್ನು ಪ್ರತಿ ೨೧೦ ದಿನಗಳಿಗೊಮ್ಮೆ ಬಾಲಿಯ ಪಾವುಕೊನ್ ಪಂಚಾಂಗದ ಪ್ರಕಾರ ಶನೀಶ್ಚರ ಉಮಾನೀಸ್ ವುಕು ವಾತುಗುನುಂಗ್ ಎನ್ನುವ ದಿನದಂದು ಆಚರಿಸಲಾಗುತ್ತದೆ. ಅಂದು ಈ ದ್ವೀಪದ ಎಲ್ಲಾ ಹಿಂದುಗಳು ತಮ್ಮ ದೇವಾಲಯಗಳಲ್ಲಿ ಎಲ್ಲಾ ರೀತಿಯ ಪವಿತ್ರ ಪುಸ್ತಕಗಳು ಇಟ್ಟು, ಹಬ್ಬದಾಚರಣೆ ಮತ್ತು ಪ್ರಾರ್ಥನೆಗಳನ್ನು ಎಲ್ಲಾ ದೇವಸ್ಥಾನಗಳಲ್ಲಿ ಮನೆಗಳ ಅಂಗಣದಲ್ಲಿ, ಹಳ್ಳಿಗಳಲ್ಲಿ ಮತ್ತು ವ್ಯಾಪಾರ ಸದನಗಳಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಆಚರಿಸುತ್ತಾರೆ. ಶಾಲೆಗಳು ಮತ್ತು ಇತರ ವಿದ್ಯಾ ಸಂಸ್ಥೆಗಳಲ್ಲೂ ಪ್ರಾರ್ಥನೆಗಳಿರುತ್ತವೆ. ಅಧ್ಯಾಪಕರು

ಮತ್ತು ವಿದ್ಯಾರ್ಥಿಗಳು ರಂಗುರಂಗಿನ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ, ಇಡೀ ದ್ವೀಪವನ್ನು ವರ್ಣರಂಜಿತಗೊಳಿಸುತ್ತಾರೆ. ಮಕ್ಕಳು ಹಣ್ಣುಗಳು ಮತ್ತು ಸಾಂಪ್ರದಾಯಿಕ ಸಿಹಿ ಭಕ್ಷ್ಯಗಳನ್ನು ದೇವಸ್ಥಾನಕ್ಕೆ ಸಲ್ಲಿಸುತ್ತಾರೆ.

೫.೪. ಲಾರಯೊಂಗ್‌ರಾಂಗ್ ಕರ್ನಾಟಕದಿಂದ ಪ್ರಭಾವಿತಳೇ? :

ಬಾದಾಮಿ ಚಾಳುಕ್ಯ ದೊರೆ ಇಮ್ಮಡಿ ಪುಲಕೇಶಿ (ಕ್ರಿ.ಶ.೬೦೯–೬೪೨) ತನ್ನ ತಮ್ಮ ಕುಬ್ಜ ವಿಷ್ಣುವರ್ಧನನ್ನು ವೆಂಗಿಮಂಡಲದ ಅಧಿಪತಿಯಾಗಿ ನೇಮಿಸಿದ ಕಾಲದಿಂದಲೂ, ಕರ್ನಾಟಕದ ವರ್ತಕರು ಮತ್ತು ವ್ಯಾಪಾರಿಗಳು ಪೂರ್ವ ಭಾರತದಿಂದ ಬರ್ಮಾ, ಮಲಯ, ಜಾವಾ, ಮುಂತಾಗಿ ಆಗ್ನೇಯ ಏಷ್ಯಾ ವಲಯದಲ್ಲಿ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿದರು. ಹಿಂದೂ ಸಂಸ್ಕೃತಿಯ ನಿಜವಾದ ರಾಯಭಾರಿಗಳಾಗಿದ್ದ ಈ ವರ್ತಕರು ತಮ್ಮೊಂದಿಗೆ ಧಾರ್ಮಿಕ ನಂಬಿಕೆಗಳು, ಪೂಜಾ ವಿಧಿವಿಧಾನಗಳು, ಸಾಮಾಜಿಕ ಪದ್ಧತಿಗಳು ಮತ್ತು ಕಲೆಯನ್ನು ಈ ದ್ವೀಪಗಳಿಗೆ ಪರಿಚಯಿಸಿ, ಪೋಷಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಯೊಂಗ್ ರಾಂಗ್ ಪ್ರತಿಮೆಯು ಕರ್ನಾಟಕದಲ್ಲಿ ಬಾದಾಮಿ ಚಾಳುಕ್ಯರು ನಿರ್ಮಿಸಿದ ದೇವಸ್ಥಾನಗಳಲ್ಲಿ ಕೆತ್ತಲ್ಪಟ್ಟಿರುವ ಮಹಿಷಮರ್ಧಿನಿ ಶಿಲ್ಪಗಳನ್ನು ಬಹುತೇಕವಾಗಿ ಹೋಲುವುದರಿಂದ, ಜಾವಾದ ಈ ದೇವತೆ, ನಮ್ಮ ಕಲಾ ಸಂಪ್ರದಾಯದ ಕೊಡುಗೆಯೇ ಎನ್ನುವುದು ಕುತೂಹಲಕರ ಸಂಗತಿಯಾಗಿದೆ.

ವಿಜಯದಶಮಿ ಇದು ವಿಜಯೋತ್ಸವದ ದಿನ. ಯಶಸ್ಸು ಗಳಿಸುವ ದೃಷ್ಟಿಯಿಂದ ಯಾವುದೇ ಪ್ರಮುಖ ಕಾರ್ಯವನ್ನು ಈ ದಿನ ಆರಂಭಿಸುವ ನಂಬಿಕೆಯೂ ನಡೆದು ಬಂದಿದೆ. ಆದ್ದರಿಂದ ಹೊಸ ಕಟ್ಟಡಕ್ಕೆ ಶಂಕುಸ್ಥಾಪನೆಯಾಗಲೀ, ಹೊಸ ಅಂಗಡಿ ಇಲ್ಲವೇ ಕಾರ್ಖಾನೆ ಪ್ರಾರಂಭೋತ್ಸವವಾಗಲೀ ಅಥವಾ ಮಕ್ಕಳ ಅಕ್ಷರಾಭ್ಯಾಸಕ್ಕಾಗಲಿ ಈ ದಿನ ಗೊತ್ತುಪಡಿಸುತ್ತಾರೆ. ಕ್ಷತ್ರಿಯರು ಯುದ್ಧ ಯಾತ್ರೆಗೆ ಹೊರಡುವ ಮುಖ್ಯ ದಿನವಾಗಿತ್ತು. ಕೌರವರ ವಿರುದ್ಧ ಯುದ್ಧ ಹೂಡುವ ನಿರ್ಧಾರ ತೆಗೆದುಕೊಂಡಿದ್ದು, ಪಾಂಡವರು ಇದೇ ದಿನ. ದಸರಾ ನವರಾತ್ರಿಯ ಉತ್ಸವದ ಭಾಗವಲ್ಲ. ಆದರೂ ದಸರಾ ಇಲ್ಲದೆ ನವರಾತ್ರಿ ಅಪೂರ್ಣ. ಕ್ಷತ್ರಿಯರಿಗೆ ವಿಜಯದಶಮಿಯಾದರೆ ಉಳಿದವರಿಗೆ ಇದು ವಿದ್ಯಾದಶಮಿ. ವಿದ್ಯಾಧಿದೇತೆ ಆರಾಧನೆ.

ವಿಜಯದಶಮಿಯ ಮೂಲ ರಾಮಾಯಣದಲ್ಲೂ ಉಲ್ಲೇಖವಾಗಿದೆ. ಲಂಕೆಯಲ್ಲಿ ಶ್ರೀರಾಮಚಂದ್ರನು ಪ್ರಚಂಡ ರಾವಣನೊಡನೆ ಹೋರಾಡಿದಾಗ ಬಗೆಹರಿಯದ ಸಮಸ್ಯೆಯೊಂದು ಎದುರಾಯಿತು.ರಾವಣನಿಗೆ ಹತ್ತು ತಲೆಗಳಿದ್ದು ರಾಮನು ತನ್ನ ಮಾರಕಾಸ್ತ್ರಗಳಿಂದ ಏಳು ಬಾರಿ ತಲೆ ತುಂಡರಿಸಿದರೂ ಏಳು ಬಾರಿಯೂ ಹಳೆ ತಲೆಗಳ ಜಾಗದಲ್ಲಿ ಹೊಸ ತಲೆಗಳು ಎದ್ದೇಳುತ್ತಿದ್ದವು. ಈ ಧರ್ಮಸಂಕಟದಲ್ಲಿ ರಾಮನ ಮಂತ್ರಾಲೋಚಕರು ರಾವಣನ ವಿರುದ್ಧ ಮತ್ತೆ ಹೋರಾಡುವದಕ್ಕೆ ಮುನ್ನ ಮಹಾನ್

ಶಕ್ತಿ ಮಹಾದೇವಿಯನ್ನು ಆರಾಧಿಸುವಂತೆ ಸಲಹೆ ಮಾಡಿದರು. ಅದೇ ರೀತಿ ರಾಮನು ಮಹಾದೇವಿಯನ್ನು ಪೂಜಿಸಿದ ಸಂತುಷ್ಟಳಾದ ದೇವಿಯು ವಿಜಯಶಾಲಿಯಾಗು ಎಂದು ಹರಸಿದಳು. ಮರುದಿನ ರಾಮನು ತನ್ನ ಎಂಟನೇ ಪ್ರಯತ್ನದಲ್ಲಿ ಅಂತಿಮವಾಗಿ ರಾವಣನನ್ನು ಹತ ಮಾಡಿದ. ಆನಂತರ ಸಹಧರ್ಮಿಣಿ ಸೀತಾದೇವಿಯೊಂದಿಗೆ ಅಯೋಧ್ಯೆಗೆ ಮರಳುವ ಮುನ್ನ ಶಮೀವೃಕ್ಷವನ್ನು ಪೂಜಿಸಿದನೆಂದು ರಾಮಾಯಣ ತಿಳಿಸುತ್ತದೆ. ಈ ಘಟನೆಯ ಕಾರಣದಿಂದಲೇ ಉತ್ತರ ಭಾರತದಲ್ಲಿ ವಿಜಯದಶಮಿಯ ದಿನ ರಾಂಲೀಲಾ ಉತ್ಸವವೂ ಜರುಗುತ್ತದೆ. ಅಂದಿನಿಂದ ಶಮೀವೃಕ್ಷವು ಪೂಜಿಸುವ ವಸ್ತುವಾಗಿದೆ.

ಪ್ರಾಸಂಗಿಕವಾಗಿ ಈ ವೃಕ್ಷವು ಪಾಂಡವರ ಕಾಲದಲ್ಲೂ ಪ್ರಸ್ತಾಪಕ್ಕೆ ಬಂದಿದೆ. ಪಾಂಡವರು ತಮ್ಮ ಆಜ್ಞಾತವಾಸ ಕಾಲದಲ್ಲಿ ಈ ವೃಕ್ಷದ ಕೊಂಬೆಗಳಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಅಡಗಿಸಿಟ್ಟಿದ್ದರೆಂದು ಹೇಳಲಾಗಿದೆ. ಈ ಪ್ರಾಚೀನ ಸಂಬಂಧವನ್ನು ಕೆಲವು ನಂಬಿಕೆಗಳನ್ನು ಪದ್ಧತಿಗಳನ್ನು ಈಗಲೂ ಅನುಸರಿಸಲಾಗಿದೆ. ಇಂಥವುಗಳಲ್ಲಿ ವಿಶೇಷವಾಗಿ ಪಶ್ಚಿಮ ಭಾರತದಲ್ಲಿ ದೇವಿಗೆ ಹಾಗೂ ಸ್ನೇಹಿತರಿಗೆ ಮತ್ತು ಬಂಧುಗಳಿಗೆ ಅವರ ಆಶೀರ್ವಾದ ಕೇಳಿ ಪಲಾಸ್ ವೃಕ್ಷದ ಎಲೆಗಳ ರೂಪದಲ್ಲಿ ಬಂಗಾರ ಅರ್ಪಿಸುವ ವಿಶಿಷ್ಟವಾದ ಪದ್ಧತಿಯಿದೆ. ಇನ್ನೊಂದು ರಜಪೂತ್ ರಾಜರ ಸಾಂಪ್ರಾದಾಯಿಕ ಮೆರವಣಿಗೆ. ಶಮೀವೃಕ್ಷದ ಬಳಿಗೆ ಬಂದು ಬಲಿ ಕೊಡುವದು ಮತ್ತು ಅಲ್ಲಿಯೇ ಬ್ರಾಹ್ಮಣರಿಗೂ ಸರ್ದಾರರಿಗೂ ಖಿಲ್ಲತ್‌ಗಳನ್ನು ನೀಡುವದು ಪದ್ಧತಿ, ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ರಾಜ ಪ್ರಭುತ್ವ ಭಾರತದಲ್ಲಿ ಮುಖ್ಯವಾಗಿ ಮೈಸೂರು ಹಾಗೂ ಬರೋಡಾದಂತಹ ರಾಜ್ಯಗಳಲ್ಲಿ ವಾರ್ಷಿಕ ಎದುರು ನೋಡುತ್ತಿದ್ದ ಉತ್ಸವವಿದು.

ಸಂಖ್ಯಾ ಟಿಪ್ಪಣಿಗಳು

೧. ಯುಗಯಾತ್ರಿ ಭಾರತೀಯ ಸಂಸ್ಕೃತಿ, ಲೇ. ನಿರ್ಮಲ್ ಕುಮಾರ್ ಬೋಸ್, ೪೨೮

೨. ದೇವಿ ಭಾಗವತ ಪುರಾಣ ೭.೨೮ ಮತ್ತು ದೇವಿ ಮಹಾತ್ಮೆ ೧೧.೪೫

೩. Hindu divinities in Japanese,Buddhist, pantheon,p-108

ಅಧ್ಯಾಯ : ೬

ಪ್ರಾಕೃತಿಕ/ದೇಸಿ ಆಚರಣೆ – ಕಡಲೆ ಕಾಯಿ ಪರಿಷೆ

ಅಧ್ಯಾಯ– ಆರು

ಪ್ರಾಕೃತಿಕ/ದೇಸಿ ಆಚರಣೆ – ಕಡಲೆಕಾಯಿ ಪರಿಷೆ

೬.೧. ಪ್ರಾಕೃತಿಕ ಆಚರಣೆಗಳು :

ಮಾನವನು ಅಗೋಚರವಾದ ದೈವಶಕ್ತಿಗಳ ಪ್ರತೀಕವಾಗಿ ನಡೆಸುವ ಹಲವಾರು ಆಚರಣೆಗಳನ್ನು ಗಮನಿಸಿದಾಗ, ಅವುಗಳ ಹಿನ್ನೆಲೆಯಲ್ಲಿ ನಮಗೆ ಬಲವಾದ ನಂಬಿಕೆಗಳು ಗೋಚರವಾಗುತ್ತದೆ. ಈ ಆಚರಣೆಗಳ ವ್ಯಾಪ್ತಿಗೆ ಬಂದು ಆರಾಧಿಸಲ್ಪಡುವವರು ಧಾರ್ಮಿಕ ವ್ಯಕ್ತಿಗಳು, ಅಸಾಮಾನ್ಯ ವ್ಯಕ್ತಿಗಳಷ್ಟೇ ಅಲ್ಲದೆ, ಮರ, ಗಾಳಿ, ನೀರು ಮುಂತಾದ ನಿಸರ್ಗದ ವಸ್ತುಗಳೂ ಒಳಪಡುತ್ತದೆ. ಇವುಗಳ ಮೂಲವನ್ನು ಶೋಧಿಸಿದಾಗ ಇತಿಹಾಸ, ಸಾಂಸ್ಕೃತಿಕ ಪಳೆಯುಳಿಕೆಗಳ ಪದರುಗಳಷ್ಟೇ ಬಿಚ್ಚಿಕೊಳ್ಳುತ್ತಾ ಹೋದಂತೆ, ಅವುಗಳ ಆಳದಲ್ಲಿ ಮನುಷ್ಯ–ಮತ್ತು ಪ್ರಕೃತಿಯ ಒಡನಾಟ, ಮನುಷ್ಯ–ಧರ್ಮದ ಉಗಮ, ಮನುಷ್ಯ–ಸಾಮಾಜಿಕ, ಸಾಂಸ್ಕೃತಿಕ ಶ್ರೇಣೀಕರಣ ಹಿನ್ನೆಲೆಯಲ್ಲಿ ಉದಯವಾಗಿರುವ ಚಿಂತನೆಗಳ ಪದರುಗಳು ತನ್ನಿಂದ ತಾನೇ ಬಿಚ್ಚಿಕೊಳ್ಳುತ್ತಾ ಹೋಗಿ ಊಹೆಗೂ ನಿಲುಕದ ಸತ್ಯಗಳು ಪ್ರಮಾಣೀಕೃತಗೊಳ್ಳುತ್ತಾ ಹೋಗುತ್ತವೆ. ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾರೂಪಕಗಳಾಗಿ ಕಾಣಿಸುವ ಈ ಆಚರಣೆಗಳು ಕೃಷಿ ಸಂಸ್ಕೃತಿಯಲ್ಲಿ ಸ್ಪಷ್ಟ ಸ್ವರೂಪವನ್ನು ಪಡೆದು, ಕಾಲಾನಂತರದಲ್ಲಿ ವಿಕಾಸಗೊಳ್ಳುತ್ತಾ ಜಟಿಲವಾದದ್ದುಂಟು. ಪ್ರತಿಯೊಂದು ಕಾಲಘಟ್ಟದಲ್ಲೂ ಆಯಾ ಯುಗದ ಜನರು ತಮ್ಮ ತಮ್ಮ ಮನೋಧರ್ಮಗಳಿಗನುಗುಣವಾಗಿ ಅವುಗಳ ರೂಪ ಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡಿರುವುದುಂಟು. ಜನಪದರ ಜೀವನ ಪ್ರಮುಖವಾಗಿ ದೈವಭಕ್ತಿ ಪ್ರಧಾನವಾಗಿದ್ದು ತಮ್ಮ ಜೀವನದ ಮೊದಲ ಬೆಸುಗೆಯಾಗಿ ಪ್ರಕೃತಿ ಹಾಗೂ ಭೂಮಿಯ ಒಡನಾಟವನ್ನು ರೂಪಿಸಿಕೊಂಡಿದ್ದರಿಂದ ಮೊದಲು ಅವುಗಳನ್ನು ಪೂಜಿಸಲಾರಂಭಿಸಿದರು. ತಮ್ಮ ಜೀವನದ ಎಲ್ಲ ಮೂಲಭೂತ ಸಂಗತಿ ಹಾಗೂ ಅವಶ್ಯಕತೆಗಳಿಗೆ ಪ್ರಕೃತಿ, ಅಥವಾ ಅವುಗಳ

ಹಿಂದಿರುವ ಅತಿಮಾನುಷ ಶಕ್ತಿಯೇ ಕಾರಣೀಭೂತವೆಂದು ನಂಬತೊಡಗಿದರು, ಆರಾಧಿಸತೊಡಗಿದರು ಹಾಗೂ ಪೂಜಿಸಲು ಆರಂಭಿಸಿದರು. ತಮ್ಮ ಕಲ್ಪನೆಗಳಿಂದ ಒಂದು ವಸ್ತುನಿಷ್ಠವಾದ ಆಯಾಮವನ್ನು ನೀಡಲು ಪ್ರಾರಂಭಿಸಿದರು ನಂತರ ವಿಭಿನ್ನ ಹಂತಗಳಲ್ಲಿ ವಿಭಿನ್ನ ವಸ್ತುಗಳ ರೂಪದಲ್ಲಿ ಅವರ ಆರಾಧನಾ ಪದ್ಧತಿಗಳು ಬದಲಾಗಿ ಅವುಗಳಿಗನುಗುಣವಾದ ಆಚರಣಾ ವಿಧಾನಗಳು ರೂಪುಗೊಳ್ಳತೊಡಗಿದವು. ಅವುಗಳನ್ನು ರಾಚನಿಕವಾಗಿ ಪರಿಶೀಲಿಸಿ ವಿಭಜಿಸಿದಾಗ ಆರಾಧನಾಹಂತ ಪ್ರಕೃತಿ ಪೂರ್ವಿಕರು ಅವರ ವಸ್ತುಗಳು ಶಿಲಾಯುಗದ ದೈವಗಳು ಜನಪದ ದೈವಗಳು ಹೀಗೆ ವಿಭಿನ್ನ ಹಂತಗಳಲ್ಲಿ ವಿಭಿನ್ನ ವಸ್ತುಗಳು ಅವರಿಂದ ಆರಾಧನೆಗೆ, ಆಚರಣೆಗೆ ಒಳಪಡುವುದು ಕಂಡು ಬರುತ್ತದೆ. ಇವುಗಳ ಜೊತೆ ಅಲೆಮಾರಿ ಪದ್ಧತಿಯ ನಂತರದ ಹಂತವಾದ ಕೃಷಿ ಹಂತದಲ್ಲಿ ಮನುಷ್ಯನಿಗೆ ದೈವವನ್ನು ಕುರಿತಾಗಿ ಇದ್ದ ನಂಬಿಕೆ, ಭಯ, ವಿಧಿ, ನಿಷೇಧಗಳು ಬಹಳ ದೊಡ್ಡ ಮಾರ್ಪಾಡಿಗೆ ಒಳಪಟ್ಟಿರುವುದನ್ನು ಕಾಣಬಹುದು. ಇದುವರೆಗೆ ನಡೆದಿರುವ ಈ ಆರಾಧನಾ ಆಚರಣಾ ಪದ್ಧತಿಗಳ ಬಗೆಗೆ ವ್ಯಾಪಕವಾದ ಅಧ್ಯಯನ ಮತ್ತು ಚರ್ಚೆಗಳು ನಡೆದಿದ್ದು, ಪ್ರಕೃತಿಯ ಜೊತೆಗೆ ಕೃಷಿ ಮೂಲವಾದ ಪಶು ಪಕ್ಷಿ ಪ್ರಾಣಿಗಳನ್ನು ತಮ್ಮ ಕುಲದೈವ, ಸಂಕೇತಗಳಾಗಿ ರೂಪಿಸಿಕೊಳ್ಳುವುದರ ಜೊತೆಗೆ ಒಂದು ನಿರ್ದಿಷ್ಟ ಕಾರಣಕ್ಕಾಗಿ ಆರಾಧನೆಗೆ ಒಳಪಡಿಸಿ ನಂತರ ಅದು ವಾರ್ಷಿಕ ಆಚರಣೆಯಾಗಿ ರೂಪಾಂತರಗೊಂಡಿರುವುದನ್ನು ಕಾಣಬಹುದಾಗಿದೆ. ೧೮೯೭ರಲ್ಲಿ ಅಬ್ಬೆ ದುಬೈಸ್ ರವರು "ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಅಂಡ್ ಸೆರಮನೀಸ್" ಎಂಬ ಕೃತಿಯಲ್ಲಿ ಕೂಲಂಕಷವಾಗಿ ದೇವತೆಗಳ ಬಗ್ಗೆ ಚರ್ಚೆಯನ್ನು ನಡೆಸಿದ್ದಾರೆ. ಇದು ಎರಡು ಸಂಪುಟದಲ್ಲಿದೆ. ಈ ಕೃತಿಯ ಎರಡನೇ ಸಂಪುಟದಲ್ಲಿ ಭಾರತೀಯ ಸಂಪ್ರದಾಯದಲ್ಲಿ ದೇವತೆಗಳೆಂದು ಪರಿಗಣಿಸಿ ಪೂಜಿಸಲ್ಪಡುವ ಪ್ರಾಣಿ ಪಕ್ಷಿಗಳ ಬಗೆಗೆ, ಅವು ದೇವರ ಸ್ಥಾನದಲ್ಲಿ ಪೂಜಿಸಲ್ಪಟ್ಟಿರುವುದನ್ನು ವಿವರಿಸಿದ್ದಾರೆ. ಅಲ್ಲದೇ ದೇವರ ಉತ್ಸವಗಳಲ್ಲಿ ಗಮನ ಹರಿಸಬೇಕಾದ ನಿಷೇಧಗಳ ಬಗ್ಗೆಯೂ ಗಮನ ಹರಿಸಿದ್ದಾರೆ. ಜೊತೆಗೆ ಗಮನಿಸಬೇಕಾದ ಮತ್ತೊಂದು ಮಹತ್ವದ ಕೃತಿಯೆಂದರೆ ೧೯೧೩ ರಲ್ಲಿ ವಿಲ್ಮರ್ ಥಿಯೋಡರ್ ಎಲ್ಮೋರ್ ರವರು ದ್ರವಿಡಿಯನ್ ಗಾಡ್ ಇನ್ ಮಾರ್ಡರ್ನ್ ಹಿಂದೂಯಿಸಂ ಎಂಬ ಕೃತಿಯಲ್ಲಿ ದಕ್ಷಿಣ ಭಾರತದ ಜನಪದ ಸಂಸ್ಕೃತಿಯ ಬಗ್ಗೆ ಪರಿಚಯ ಮಾಡಿ ಕೊಟ್ಟಿದ್ದಾರೆ. ಇಲ್ಲಿ ವೈದಿಕ ದೇವತೆಗಳ ಬಗ್ಗೆ ಚರ್ಚೆ ನಡೆಸುತ್ತಾ ಮೇಲ್ವರ್ಗದವರು ಹೇಗೆ ಗ್ರಾಮ ದೇವತೆಗಳ ಬಗ್ಗೆ ಭಯ ಭಕ್ತಿಗಳಿಂದ ನಡೆದುಕೊಳ್ಳುತ್ತಾರೆ ಎಂಬುದರ ಬಗ್ಗೆ ಚರ್ಚೆ ನಡೆಸಿದ್ದಾರೆ. ೧೯೨೧ ರಲ್ಲಿ ಪ್ರಕಟವಾದ ಬಿಷಪ್ ಹೆನ್ರಿ ವೈಟ್‌ಹೆಡ್ ರವರ "ದಿ ವಿಲೇಜ್ ಗಾಡ್ಸ್ ಆಫ್ ಸೌತ್ ಇಂಡಿಯಾ" ದಲ್ಲಿ ಹಿಂದೂ ಧರ್ಮದ ಉಗಮ ಮತ್ತು ವಿಕಾಸದ ಬಗ್ಗೆ ಚರ್ಚೆ ನಡೆಸಿದ್ದಾರೆ. ಆರ್ಯರ ಆಗಮನದಿಂದ ದಕ್ಷಿಣಕ್ಕೆ ವಲಸೆ ಬಂದ ದ್ರಾವಿಡರ ಚಿತ್ರಣವನ್ನು ನೀಡಿ, ಕನ್ನಡ, ತಮಿಳು, ತೆಲುಗು ಪ್ರದೇಶಗಳ ಗ್ರಾಮ ದೇವತೆಗಳನ್ನು ಪ್ರತಿನಿಧಿತವೆನ್ನುವಂತೆ ಅಧ್ಯಯನಕ್ಕೆ ಒಳಪಡಿಸಿ ಅವುಗಳ ವೈವಿಧ್ಯವನ್ನು ಹಾಗೂ ವ್ಯತ್ಯಾಸವನ್ನು ತೌಲನಿಕವಾಗಿ ನಿರೂಪಿಸಿದ್ದಾರೆ.

ಈ ಎಲ್ಲ ಕೃತಿಗಳ ಅಧ್ಯಯನವನ್ನು ಮಾಡಿದಾಗ ನಮಗೆ ಕಂಡುಬರುವ ಅಂಶವೆಂದರೆ ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳ ದೇವರುಗಳ ನಡುವೆ ಪರಸ್ಪರ ಸಾಮ್ಯತೆ ಮತ್ತು ವಿಭಿನ್ನತೆ ಹಾಗೂ ಸಂಘರ್ಷಗಳನ್ನೂ ಕಾಣಬಹುದಾಗಿದೆ. ಮೂಲದಲ್ಲಿ ಒಂದೇ ಆಗಿದ್ದ ಪ್ರಾಚೀನ ಕಾಲದಲ್ಲಿದ್ದ ಬೇಟೆಯುಗದ ಮಾನವನಿಗೆ ಪ್ರಕೃತಿಯ ಬದಲಾವಣೆಗಳು ಅಚ್ಚರಿಯನ್ನುಂಟು ಮಾಡಿರಬೇಕು, ಆದಿವಾಸಿಯಾಗಿದ್ದ ಮಾನವ ಕೃಷಿ ಯುಗಕ್ಕೆ ಕಾಲಿರಿಸಿದಾಗ ಹಲವಾರು ಬದಲಾವಣೆಗಳಾಗಿ ಅವನು ರೂಪಿಸಿಕೊಂಡ ದೈವತ್ವದ ಕಲ್ಪನೆಯೂ ಸಂಸ್ಕೃತೀಕರಣದ ಪ್ರಕ್ರಿಯೆಗೆ ಒಳಗಾಯಿತು. ಸ್ಥಳೀಯ ಗ್ರಾಮ ದೇವತೆಗಳ ಜೊತೆಗೆ ಆರ್ಯರ ಆಗಮನದ ಮೂಲಕ ಈ ದೇಶಕ್ಕೆ ಶಿಷ್ಟ ದೇವತೆಗಳೂ ಪ್ರವೇಶ ಪಡೆದವು. ಸಂಸ್ಕೃತಿ, ಸಂಸ್ಕೃತಿಗಳ ನಡುವೆ ಸಂಘರ್ಷ ನಡೆದಂತೆ ಪರಸ್ಪರ ಕೊಡುಕೊಳ್ಳುವಿಕೆಯ ಕಾರ್ಯವೂ ನಡೆಯಿತು. ಆಗ ಜನಪದ ದೇವತೆಗಳ ಮೇಲೆ ಶಿಷ್ಟ ದೇವತೆಗಳ ಪ್ರಭಾವ, ಶಿಷ್ಟ ಸಮುದಾಯಕ್ಕೆ ಜನಪದ ದೇವತೆಗಳ ಭಯ ಏಕಕಾಲಕ್ಕೆ ಕಾಣಿಸಿಕೊಂಡಿರಬೇಕು. ಸಾವಿರಾರು ವರ್ಷಗಳಿಂದ ಇಲ್ಲಿ ಕೂಡಿ ಬದುಕಿದ ಆರ್ಯ-ದ್ರಾವಿಡರ ಸಂಸ್ಕೃತಿ ಇಂದು ಸಮನ್ವಯ ಸಂಸ್ಕೃತಿಯಾಗಿರುವಂತೆ, ಜನಪದ ದೇವತೆ-ಶಿಷ್ಟ ದೇವತೆಗಳಲ್ಲಿಯೂ ಕೂಡಾ ಅನೇಕ ರೀತಿಯ ಭಿನ್ನತೆಗಳ ಜೊತೆಗೆ ಸಾಮ್ಯಗಳೂ ಇವೆ. ಡಾ. ಷುಕಿಕೊಸಾಕ ಅವರು "Dravidian and folk deities seem to have gained more significance than Aryan and classical deities at the fold level in Karnataka are honour of deities of villages and localities. We find evidence of this in the fact that the name of the place in most often associated with the name of a folk deity".[೧]

ಹೀಗೆ ಹುಟ್ಟಿಕೊಂಡ ದೇವತೆಗಳ ಪ್ರಾಚೀನತೆ ತುಂಬಾ ಪುರಾತನವಾದುದಾಗಿದೆ. ಮೊಹೆಂಜದಾರೋ ಹರಪ್ಪಾಗಳಲ್ಲಿ ಕ್ರಿ.ಪೂ ೪ನೇ ಶತಮಾನದಲ್ಲಿಯೇ ಇವುಗಳ ಕುರುಹುಗಳನ್ನು ಕಾಣಬಹುದಾಗಿದೆ. ಮನುಷ್ಯನ ಆಹಾರ ಪದ್ಧತಿ, ಆತನ ನಡೆ-ನುಡಿ ಆಚಾರ-ವಿಚಾರಗಳಂತೆಯೇ ಆತನ ದೇವತೆಗಳಿರುವುದನ್ನು ಕಾಣಬಹುದಾಗಿದೆ. ಶಾಕಾಹಾರಿಗಳ ನಡುವೆ ಪೂಜಿಸಲ್ಪಡುವ ದೇವರು ಶಾಕಾಹಾರಿಯಾದರೆ ಮಾಂಸಾಹಾರಿಗಳ ನಡುವೆ ಪೂಜಿಸಲ್ಪಡುವ ದೇವರು ಮಾಂಸಾಹಾರಿಯಾಗಿರುವುದನ್ನು ಕಾಣಬಹುದಾಗಿದೆ. ಆರ್ಯ ದೇವತೆಗಳಿಗೆ ಒಂದು ನಿರ್ದಿಷ್ಟವಾದ ಸ್ವರೂಪದಲ್ಲಿ ಪುರಾಣ ಹಾಗೂ ಲಿಖಿತ ದಾಖಲೆಗಳಿದ್ದರೆ, ದ್ರಾವಿಡ ಜನಪದ ದೇವತೆಗಳಿಗೆ ಪರಂಪರಾನುಗತವಾದ ಮೌಖಿಕ ವಾಙ್ಮಯವಿರುತ್ತದೆ. ಅದೇನೇ ಇರಲಿ, ಕಾಲದಿಂದ ಕಾಲಕ್ಕೆ ಸಂಸ್ಕೃತಿಯ ಅನೇಕ ಸವಾಲುಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಾ ಬಂದಂತೆ ಈ ಜನಪದ ಆರಾಧನಾ ಮತ್ತು ಆಚರಣಾ ಪರಿಕಲ್ಪನೆಗಳೂ ಸಹಾ ಸಾಂಸ್ಕೃತಿಕ ಸ್ಥಿತ್ಯಂತರಗಳ ಅಗ್ನಿ ದಿವ್ಯವನ್ನು ಹಾದು ಬಂದು ಸಂಸ್ಕೃತಿಯ ಮೇಲ್ಮುಖದ ಚಲನೆಯೊಂದಿಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು

ಹೆಣಗಾಡುತ್ತಲೇ ಬಂದಿದೆ. ಚರಿತ್ರೆಯ ಮೂಸೆಯಲ್ಲಿ ಬೆಂದು ಗ್ರಾಮೀಣರ, ಜನಪದರ ಜನಮಾನಸದಲ್ಲಿ ಪರಿಕಲ್ಪಿತವಾಗಿ, ಮಾನವನ ಸಂಸ್ಕೃತಿ, ನಾಗರೀಕತೆಗಳನ್ನು ಉದಾತ್ತೀಕರಿಸುವ ವಿವಿಧ ವಿದ್ವಾಂಸರ ಚಿಂತನೆಗಳಲ್ಲಿ ನಿರಾಕಾರ ಸ್ವರೂಪಿಯಾದ ತಾನು ಸಾಕಾರ ರೂಪವನ್ನು ತಾಳಿ ಮನುಷ್ಯ ಸಮಾಜದ ರಾಚನಿಕ ವಿಧಾನವನ್ನೇ ಹಲವು ಬಾರಿ ಬುಡಮೇಲು ಮಾಡುವ ಸಾಹಸಕ್ಕೆ ಕೈ ಹಾಕಿದೆ.

ಭಾರತವು ವಸಹಾತೀಕರಣಕ್ಕೆ ಒಳಪಡುವ ಮೊದಲು ನಮ್ಮಲ್ಲಿ ಹಳ್ಳಿ ಮತ್ತು ನಗರಗಳ ನಡುವೆ ಅಂತಹ ಹೇಳಿಕೊಳ್ಳಬಹುದಾದ ವ್ಯತ್ಯಾಸಗಳೇನೂ ಇರಲಿಲ್ಲ ಸಾಕ್ಷರತೆ, ಅನಕ್ಷರತೆ ವ್ಯಕ್ತಿ ವಿಶಿಷ್ಟ ಸಂವೇದನೆ–ಸಮೂಹ ಸಂವೇದನೆ–ವೈಚಾರಿಕತೆ, ಭಾವನಾತ್ಮಕತೆ ಇವೇ ಮೊದಲಾದ ವೈದೃಶ್ಯಗಳಿಂದ ಕೂಡಿದ್ದವಷ್ಟೇ. ಆದರೆ ಪಾಶ್ಚಿಮಾತ್ಯರ ಪ್ರವೇಶದ ನಂತರ ಸ್ಥಾಪಿತ ವ್ಯವಸ್ಥೆಯು ಅಲುಗಾಡಲಾರಂಭಿಸಿತು. ಔದ್ಯಮಿಕ ಕ್ರಾಂತಿಯಿಂದಾಗಿ ನಗರಗಳು ಕ್ಷಿಪ್ರಗತಿಯಲ್ಲಿ ಬೆಳೆಯಲಾರಂಭಿಸಿದವು. ನಗರಗಳ ಸುತ್ತಣ ಜಮೀನಿಗೆ ಎಲ್ಲಿಲ್ಲದ ಬೇಡಿಕೆ ಉಂಟಾಯಿತು. ಕೃಷಿ ಸಂಸ್ಕೃತಿಗೆ ಈ ಶತಮಾನದಲ್ಲಿ ಉಂಟಾದ ಮೊಟ್ಟ ಮೊದಲ ಆಘಾತ ಇದು. ಸಮುದಾಯವು ಬದಲಾದ ಸಾಮಾಜಿಕ ಪರಿಸ್ಥಿತಿಗಳನ್ನು ಕುರಿತು ಚಿಂತಿಸುವಂತಾಯಿತು. ಬದಲಾದ ಸಾಂಸ್ಕೃತಿಕ ಅಗತ್ಯಗನುಗುಣವಾಗಿ ನಗರ ಸಂಸ್ಕೃತಿಯು ರೂಪುಗೊಂಡಿತಲ್ಲದೆ ವ್ಯಕ್ತಿ ಹಾಗೂ ಸಮಷ್ಟಿಯ ಚಿಂತನಾ ಕ್ರಮವೇ ಬದಲಾಯಿತು.

ಈ ಹಿನ್ನೆಲೆಯಲ್ಲಿ ಹಿಂದೆ ಗ್ರಾಮೀಣ ಪರಿಸರದಲ್ಲಿ ಆಚರಿಸಲ್ಪಡುತ್ತಿದ್ದ ಹಬ್ಬ, ಉತ್ಸವ, ಜಾತ್ರೆಗಳು ಸಹಾ ಸ್ಥಿತ್ಯಂತರಗಳ ಚಲನೆಗೆ ಒಳಪಟ್ಟು ಏಕಮುಖವಾಗಿದ್ದ ಆರಾಧನೆ ಆಚರಣೆಗಳ ಮೇಲೆ ಗಮನಾರ್ಹ ಪರಿಣಾಮ ಬೀರಿದವು. ಆದರೆ ತಮ್ಮ ಮೂಲ ಜೀವದ್ರವ್ಯವನ್ನು ಬಿಡದೆ ಉಳಿಸಿಕೊಂಡು ಕ್ರಿಯಾತ್ಮಕವಾದ ಚಟುವಟಿಕೆಗಳನ್ನಷ್ಟೇ ನಗರ ಸಂಸ್ಕೃತಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳತೊಡಗಿದವು. ಆರ್ಥಿಕವಾಗಿ ಬಲವಾಗಿರುವ ಅತ್ಯುನ್ನತ ನಾಗರೀಕ ಸಂಸ್ಕೃತಿಯು ಸಾಮಾಜಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ ಎಂಬುದು ನಿಜವಾದರೂ ಅವೆಲ್ಲವನ್ನೂ ನಿರಾಕರಿಸಿ ಜೀವಂತವಾಗಿ ಉಳಿಯಬಲ್ಲ ಸ್ಥಿತಿಯೂ ಬಂದಿದೆ ಎಂಬುದನ್ನು ಜನಪದ ಆಚರಣೆಗಳು ವಿಶೇಷವಾಗಿ ನಗರಗಳಲ್ಲಿ ಸಾಬೀತುಗೊಳಿಸುತ್ತಾ ಹೋದವು. ಹೀಗಾಗಿ ಈಗ ನಮ್ಮ ಮುಂದೆ ಎರಡು ಸವಾಲುಗಳಿವೆ. ಮೊದಲನೆಯದು ಹಳ್ಳಿಗಳು ನಗರಗಳಲ್ಲಿ ಗರ್ಭೀಕರಿಸಿಕೊಳ್ಳುವ ಮುಂಚೆ ಇದ್ದ ಆಚರಣೆಗಳ ಮೂಲ ಸ್ವರೂಪವನ್ನು ಕಂಡುಕೊಳ್ಳುವುದು ಮತ್ತು ಆಧುನಿಕ ಸಮಾಜದಲ್ಲಿ ತೃತೀಯ ಜಗತ್ತು ಹುಟ್ಟು ಹಾಕಿರುವ ತಲ್ಲಣಗಳು ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳ ನಡುವೆ ಈ ಆಚರಣೆಗಳ ಅಸ್ಮಿತೆಯನ್ನು ಮರುಕಳಿಸುವುದು. ಚರಿತ್ರೆಯೊಂದಿಗೆ ನಿರಂತರತೆಯನ್ನು ಕಲ್ಪಿಸಬೇಕಾದರೆ ಈ ಎರಡೂ ಅಧ್ಯಯನಗಳು ವಿಶೇಷವಾಗಿ ಮುಖ್ಯವಾಗುತ್ತದೆ. ಮಾನವನ ಸಾಂಸ್ಕೃತಿಕ ಚರಿತ್ರೆಯ ಸುದೀರ್ಘ ಪಯಣವನ್ನು ಗಮನಿಸಿದಾಗ ತನ್ನ ಪ್ರಾಚೀನ ಅಂಶಗಳನ್ನು ಉಳಿಸಿಕೊಂಡು, ಜೊತೆಗೆ ವಿಸ್ತರಣೆಯನ್ನು ಹೊಂದುತ್ತಿರುವ ನಗರೀಕರಣದ ಸಂಸ್ಕೃತಿಯನ್ನು ತನ್ನದಾಗಿಸಿಕೊಳ್ಳುವುದು

ಎಲ್ಲ ಕಾಲಕ್ಕೂ ಸವಾಲಿನ ವಿಷಯವೇ ಸರಿ. ಅದರಲ್ಲೂ ವಿಶೇಷವಾಗಿ ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ಎಲ್ಲಿಯೂ ಸಹಾ ಸ್ಥಿರವಾಗಿ ಒಂದೇ ಜನಾಂಗ ಎಲ್ಲ ಕಾಲಗಳಲ್ಲಿಯೂ ನೆಲೆ ನಿಂತಿಲ್ಲವಾದ್ದರಿಂದ "ಸಂಸ್ಕೃತೀಕರಣ"ದ ಅಧ್ಯಯನ ಅಷ್ಟು ಸುಲುಭವಲ್ಲ. ಆರ್ಯ-ದ್ರಾವಿಡರ ನಡುವಿನ ವಲಸೆ, ಸಾಂಸ್ಕೃತಿಕ ಸ್ವೀಕರಣೆ, ನಿರಾಕರಣೆ, ಸಾಮ್ಯತೆ, ಭಿನ್ನತೆಗಳ ನಡುವಿನ ಸಂಘರ್ಷದ ಕಾಲದಲ್ಲಿಯೂ ನಗರೀಕರಣ ಉಂಟುಮಾಡಿದ ತಲ್ಲಣಗಳನ್ನು ಗುರುತಿಸಬಹುದು.

ಅನ್ಯಭಾಷಿಕರ ಮೇಲೆ ಅವರದಲ್ಲದ ಭಾಷೆಯನ್ನು ಹೇರಬೇಕಾದರೆ ಅದು ಆ ಅನ್ಯಭಾಷಿಕರಿಗಿಂತ ಉನ್ನತ ಮಟ್ಟದ ಉತ್ಪಾದನಾ ವಿಧಾನ ಹೊಂದಿರುವ ಜನರಿಗೆ ಮಾತ್ರ ಸಾಧ್ಯ ಎನ್ನುವುದು ಸಾರ್ವತ್ರಿಕ ತತ್ವ.[೨]

ಆರ್ಯರ ಮೂಲನಾಡನ್ನು ನೋಡಿದರೆ ಅವರು ದಾಳಿ ಮಾಡಿದ್ದ ಕೃಷಿಯಾಧಾರಿತ, ನಾಗರಿಕ ಪ್ರಾಂತ್ಯಗಳಲ್ಲಿ ಇದ್ದ ಜನರಿಗಿಂತ ಹೆಚ್ಚಿನ ಸಂಖ್ಯೆಯ ಜನರು ನೆಲೆಸುವುದಕ್ಕೆ ಬೇಕಾದ ಅನುಕೂಲ ಅಲ್ಲಿರಲಿಲ್ಲ. ಹಾಗಾಗಿ ಆರ್ಯರು ಒಂದು ದೊಡ್ಡ ದಾಳಿಕೋರ ಗುಂಪಾಗಿರಬಹುದಾದ ಸಾಧ್ಯತೆಗಳು ಕಡಿಮೆ ಎನಿಸುತ್ತದೆ. ಹಾಗಾದರೆ ಅವರು ತಮ್ಮ ಅಧಿಕಾರವನ್ನು ಮತ್ತು ತಮ್ಮ ಭಾಷೆಯನ್ನು ಬೇರೆಯವರ ಮೇಲೆ ಹೇರುವುದಕ್ಕೆ ಹೇಗೆ ಸಾಧ್ಯವಾಯಿತು? ಸಂಸ್ಕೃತಿ ಎನ್ನುವುದನ್ನು ಒಂದು ವಿಶಾಲವಾದ ಅರ್ಥದಲ್ಲಿ ಗ್ರಹಿಸಿಕೊಂಡಲ್ಲಿ, ಅದಕ್ಕೆ ಆರ್ಯರ ಮುಖ್ಯ ಕೊಡುಗೆ ಏನು? ಎಂದೆಲ್ಲ ಪ್ರಶ್ನೆಗಳು ಏಳುತ್ತವೆ. ಇಂಡೋ-ಇರಾನಿಯನ್ ಜನರನ್ನು ಆರ್ಯರೆಂದು ಕರೆಯುವುದಕ್ಕೆ ಕ್ರಿ.ಪೂ ಎರಡನೇ ಮಿಲೆನಿಯಂ ನಂತರದ ಕಾಲದ ದಾಖಲೆಗಳು ಹಾಗೂ ಭಾಷಾ ಶಾಸ್ತ್ರದ ಪುರಾವೆಗಳು ಸಮರ್ಥನೆಯನ್ನು ಒದಗಿಸುತ್ತವೆ. ಪ್ರಾಕ್ತನ ಶಾಸ್ತ್ರದ ಪ್ರಕಾರ ಎರಡನೇ ಮಿಲೆನಿಯಂನಲ್ಲಿ ಈ ನಿರ್ದಿಷ್ಟ ಆರ್ಯರು ಅಲೆಮಾರಿ ಯೋಧರಾಗಿದ್ದರು. ದನಕರುಗಳು ಅವರ ಆಹಾರ ಮತ್ತು ಸಂಪತ್ತಿನ ಮುಖ್ಯ ಆಕರಗಳಾಗಿದ್ದವು. ಅದರ ಮೇವಿಗೆ ಆ ವಿಶಾಲವಾದ ಆ ಇಡೀ ಖಂಡವನ್ನೇ ಅವರು ಬಳಸಿಕೊಂಡಿದ್ದರು. ಆರ್ಯರ ಬುಡಕಟ್ಟಿನ ಸಂರಚನೆ ಮೂಲಭೂತವಾಗಿ ಪಿತೃ ಪ್ರಧಾನವಾಗಿತ್ತು. ಅವರ ಬುಡಕಟ್ಟಿನಲ್ಲಿ ಗಂಡಸರದೇ ಪ್ರಾಧಾನ್ಯ. ಆಸ್ತಿಗೆಲ್ಲಾ ಗಂಡಸರೇ ಒಡೆಯರು. ಅವರಲ್ಲಿ ಪುರುಷ ದೇವತೆಗಳೇ ಹೆಚ್ಚು. ಆದರೆ ಅವರು ತಮಗಿಂತ ಹಿಂದಿನ ಕಾಲದ ಮತ್ತು ಹಿಂದಿನದರ ಕೆಲವು ಸ್ತ್ರೀ ದೇವತೆಗಳನ್ನು ತಮ್ಮ ದೇವಗಣಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು. ಆದರೆ ದ್ರಾವಿಡರಲ್ಲಿ ಹಾಗಲ್ಲ. ಹೀಗಾಗಿ ಇವೆಲ್ಲವೂ ಸಹಾ ಧರ್ಮ, ಆಚರಣೆಗಳ ಮೇಲೆ ಗಮನಾರ್ಹವಾದ ಪ್ರಭಾವವನ್ನು ಬೀರುತ್ತಾ ಬಂದಿತು. ಈ ಸಾಂಸ್ಕೃತಿದ ವೈರುಧ್ಯಗಳು ಎಲ್ಲ ಕಾಲಗಳಲ್ಲಿಯೂ ಸಹಾ ತನ್ನದೇ ಆದ ಸವಾಲುಗಳನ್ನು ಎದುರಿಸುತ್ತಲೇ ಬಂದಿದೆ.

ಬೆಂಗಳೂರಿನ ಸಂಸ್ಕೃತಿಯ ಮೇಲೂ ಸಹಾ ಈ ಸವಾಲು ನಿರಂತರವಾಗಿದೆ. ಎಲ್ಲ ಶತಮಾನಗಳಲ್ಲೂ ಬೆಂಗಳೂರು ಈ ವಸಾಹತೇತರರ ಮತ್ತು ಸಾಂಸ್ಕೃತಿಕ ಧಾಳಿಗೆ ಒಳಗಾಗುತ್ತಲೇ

ಬಂದಿದೆ. ಮೂರು ಹಂತಗಳಲ್ಲಿ ಬೆಂಗಳೂರಿನ ಮೇಲೆ ಆದ ಈ ಸಂಸ್ಕೃತೀಕರಣದ ಪ್ರಕ್ರಿಯೆಯನ್ನು ವಿದ್ವಾಂಸರು ಗುರುತಿಸಿದ್ದಾರೆ:

೧. ವಸಾಹತೀಕರಣ

೨. ಕೈಗಾರಿಕೀಕರಣ

೩. ಜಾಗತೀಕರಣ

ಈ ಮೂರೂ ಸಹಾ ಬೆಂಗಳೂರಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವಿನ್ಯಾಸಗಳ ಮೇಲೆ ಮಹತ್ತರವಾದ ಬದಲಾವಣೆಯನ್ನು ಬೀರಿತು. ಇದನ್ನು ಸಮಾಜಶಾಸ್ತ್ರಜ್ಞರಾದ ಎಂ.ಎನ್.ಶ್ರೀನಿವಾಸ್ ಹೀಗೆ ಗುರುತಿಸುತ್ತಾರೆ:

"The Three step explanation of social change the following classical sequence of

1. Technological innovation

2. Industrialisation

3. Change in social public and cultural institutions is a model that may have explained adequately the individual revolution in 19th century."[೩]

ಈ ನಿಟ್ಟಿನಲ್ಲಿ ಬೆಂಗಳೂರಿನ ಜನಪದ ಆಚರಣೆಗಳನ್ನು ಶೋಧಿಸಿದಾಗ ವಸಹತುಶಾಹಿ ೧೯ನೇ ಶತಮಾನದ ಕೈಗಾರಿಕೀಕರಣ ಹಾಗೂ ೨೦ನೇ ಸಹಸ್ರಮಾನದ ಜಾಗತೀಕರಣವೂ ಸಹಾ ಮಹತ್ತರವಾದ ಪ್ರಭಾವವನ್ನು ಬೀರಿದೆ. ಒಂದೆಡೆ ಬ್ರಿಟೀಷ್ ಧಾಳಿ, ಮತ್ತೊಂದೆಡೆ ವೈದಿಕ ಸಂಸ್ಕೃತಿಯ ಯಾಜಮಾನ್ಯತೆ, ಇವುಗಳ ನಡುವೆ ನಗರಗಳಾಗಿ ರೂಪಾಂತರಗೊಳ್ಳುತ್ತಿದ್ದ ಬೆಂಗಳೂರಿನ ಹಳ್ಳಿಗಳ ಆಚರಣೆಗಳು ಹಲವಾರು ರೂಪಾಂತರಗಳನ್ನು ತಾಳಿದೆ. ಈ ಇಕ್ಕಟ್ಟಿನ ಹೊರಳು ದಾರಿಯಲ್ಲಿ ಬೆಂಗಳೂರು ಅನೇಕ ಹಳ್ಳಿಗಳನ್ನು ತನ್ನೊಳಗೆ ಗರ್ಭೀಕರಿಸಿಕೊಂಡು ಇರುವುದಂತೂ ಸತ್ಯ. ಸಂಸ್ಕೃತಿಯ ಹೆಸರಿನ ಯಜಮಾನ್ಯ ಮೌಲ್ಯಗಳ ಮೌಖಿಕ ಸಂವಿಧಾನ ಯಾವುದೇ ಸಂವಿಧಾನಕ್ಕಿಂತಲೂ ಬಲಶಾಲಿಯಾದುದು. ಮೌಖಿಕ ಪರಂಪರೆಯ ಇಂತಹ ಇಕ್ಕಟ್ಟಿನಲ್ಲೇ ತನ್ನದಲ್ಲದ ಕಥನವನ್ನು ಹಾಡಿ ತನ್ನದಲ್ಲದ ಚಹರೆಯನ್ನು ಧರಿಸಿ ತನ್ನದೇ ಅಲ್ಲದ ನೀತಿಯನ್ನು ಸಾರಿರುವುದು ಗ್ರಾಮ ಜನಪದ ಮಧ್ಯಕಾಲೀನ ಕಾಲಘಟ್ಟದ ವೇಳೆಗೆ ಬರುವಷ್ಟರಲ್ಲಿ ನಿಚ್ಚಳವಾಗಿ ಕೆಲವು ಸಮುದಾಯಗಳು ಯಜಮಾನ ಜಾತಿಗಳಾಗಿ ಮಾರ್ಪಟ್ಟಿದ್ದವು. ವೈದಿಕ ಪರಂಪರೆ ಗ್ರಾಮ ನಾಗರೀಕತೆಯ ದೇವಾಲಯಗಳ ಗರ್ಭಗುಡಿಗೆ ಬಂದಾಗಿತ್ತು. ಗ್ರಾಮ ದೈವಗಳು ಈ ಮೊದಲೇ ಪುರುಷ ಪ್ರಧಾನ ದೈವಗಳ ಆಚಾರವನ್ನು ಒಪ್ಪಿಕೊಂಡಿದ್ದವು.[೪]

ಈ ನೆಲೆಯಲ್ಲಿ ಬೆಂಗಳೂರಿನ ಕೆಲವು ಪ್ರಧಾನ ಆಚರಣೆಗಳು ಸಾಂಸ್ಕೃತಿಕವಾಗಿ ಮರುವಿವೇಚನೆಗೆ ಒಳಪಡುವ ತುರ್ತು ಇಂದು ಇದೆ. ಯಾವುದೇ ಜ್ಞಾನಶಿಸ್ತು ಸಮಕಾಲೀನ ಅಗತ್ಯದ ಜೊತೆಯಲ್ಲಿಯೇ

ತನ್ನ ಇರುವಿಕೆಯನ್ನೂ ಕಂಡುಕೊಳ್ಳಬೇಕಾಗುತ್ತದೆ. ಮೌಖಿಕ ಪರಂಪರೆಯ ಭಾಗವಾಗಿರುವ ಆಚರಣೆಗಳನ್ನು ಇದು ಬಹುಪಠ್ಯಗಳ ನೆಲೆಯಲ್ಲಿ ವಿವೇಚನೆಗೆ ಒಳಪಡಿಸಬೇಕಾಗಿದೆ. ನೆನ್ನೆಯನ್ನು ಇವತ್ತಿನ ಸ್ಥಿತಿಯಾಗಿಸುವ ಇವತ್ತಿನ ಅಸ್ತಿತ್ವವನ್ನು ಕಾಲದ ನಾಳೆಯನ್ನಾಗಿಸುವ ಮತ್ತು ಕಾಲದ ಪಲ್ಲಟಗಳನ್ನು ತನಗೆ ಬೇಕಾದಂತೆಲ್ಲ ವಿಸ್ತರಿಸುವ ಕೂಡುವ ಕಳೆಯುವ ಸಂಕೀರ್ಣವಾದ ಒಂದು ವ್ಯವಸ್ಥೆಯನ್ನು ಜನಪದ ಲೋಕವು ಮಾಡಿಕೊಂಡು ಆ ಮೂಲಕ ತನ್ನ ಪರಂಪರೆಯನ್ನು ಪರಿಶೀಲಿಸುತ್ತದೆ. ಆದ್ದರಿಂದಲೇ ಮೌಖಿಕ ಚರಿತ್ರೆಯನ್ನು ನಮ್ಮ ಬದುಕಿನ ಜೊತೆ ಸಮೀಕರಿಸುವುದು ಸುಲಭವಾಗುವುದು.[೫]

ಈವತ್ತಿನ ಸಮಕಾಲೀನತೆಯ ಜೊತೆಗೆ ಆಚರಣೆಗಳಲ್ಲಿ ಆಗುತ್ತಿರುವ ಸಾಂಸ್ಕೃತಿಕ ಸಾಮಾಜಿಕ ಪಲ್ಲಟಗಳನ್ನು ಮೌಖಿಕ ಪರಂಪರೆಯ ಉಳಿವಿನ ಜೊತೆಗೆ ಅನುಸಂಧಾನಗೊಳಿಸುವುದು ಮತ್ತು ಅದನ್ನು ಪ್ರಸ್ತುತ ಸಂಧರ್ಭಕ್ಕೆ ಅನ್ವಯಿಸುವುದು ಈಗಿನ ಬಹುದೊಡ್ಡ ಸವಾಲು. ವರ್ತಮಾನದ ಚಾರಿತ್ರಿಕ ನಿರ್ವಚನ ಎಂದರೆ ದೇಶೀ ಸಂಸ್ಕೃತಿಯನ್ನು ಮಾನವಿಕ ಶಾಸ್ತ್ರಗಳ ಅಧ್ಯಯನ ವಿಧಾನದಲ್ಲಿ ಹೊಸದಾಗಿ ಅನುಸಂಧಾನಗೊಳಿಸುವುದಾಗಿದೆ. ಜಗತ್ತು ಏಕಮಾದರಿಯ ಕಡೆ ತನ್ನ ಬೌದ್ಧಿಕ ಗುಂಪುಗಾರಿಕೆಯನ್ನು ಹೇರುತ್ತಿರುವಾಗ ಇಂತಹ ಬಹುಬಗೆಯ ಸಾಂಸ್ಕೃತಿಕ ವಿವರಗಳನ್ನು ಅನನ್ಯತೆಯ ವಿಶಿಷ್ಟತೆಯಲ್ಲಿಯೇ ಉಳಿಸಿಕೊಂಡು ಚರಿತ್ರೆಗೆ ನಮ್ಮದೇ ಆದ ಅರ್ಥವನ್ನು ನಿರೂಪಿಸಬೇಕಾಗುತ್ತದೆ.ಹಾಗಾದಾಗ ಮಾತ್ರ ಜಾನಪದ ಅಥವಾ ಮೌಖಿಕ ಪರಂಪರೆಯೊಂದು ಮುಂದಿನ ತಲೆಮಾರಿಗೆ ತಲುಪಲು ಸಾಧ್ಯ. ಅದನ್ನು ಕಳೆದ ದಶಕದಲ್ಲೇ ಪಾಶ್ಚಿಮಾತ್ಯ ವಿದ್ವಾಂಸರು ಮನಗಂಡಿದ್ದರು.

ಭಾರತದಂತಹ ಗ್ರಾಮೀಣ ಸಂಸ್ಕೃತಿ ಪ್ರಧಾನವಾದ ದೇಶದಲ್ಲಿ ಜಾನಪದ ಗ್ರಾಮೀಣರಿಗೆ ಸಂಬಂಧಿಸಿದ್ದು ಎಂಬ ಅಭಿಪ್ರಾಯವಿದ್ದರೆ, ಅಮೆರಿಕಾದಂತಹ ನಗರ ಕೇಂದ್ರಿತವಾದ ಕೈಗಾರಿಕೀಕರಣಗೊಂಡ ಹಾಗೂ ವಿವಿಧ ದೇಶ, ಭಾಷೆ, ಧರ್ಮ ಹಾಗೂ ಸಂಸ್ಕೃತಿಗಳಿಂದ ಕೂಡಿದ ದೇಶದಲ್ಲಿ ಜಾನಪದದ ವ್ಯಾಖ್ಯಾನ ಬದಲಾಗಿದೆ. ೧೯೮೯ ರಲ್ಲಿ ನಡೆದ ಯುನೆಸ್ಕೋ ವಾರ್ಷಿಕ ಆಧಿವೇಶನದಲಿ UNESCO Recommendations for safe guarding folklore and traditional culture ಎಂಬ ಮಸೂದೆಯನ್ನು ಒಪ್ಪಿಕೊಳ್ಳಲಾಯಿತು. ಇದರಿಂದ ಜಗತ್ತಿನ ಎಲ್ಲಾ ದೇಶಗಳೂ ಅನುಸರಿಸಬಹುದಾದ ಏಕರೂಪದ ಜಾನಪದ ಸಂರಕ್ಷಣೆಯ ಸಂಹಿತೆಯೊಂದು ರೂಢಿಗೆ ಬಂದಂತಾಗಿದೆ. ವಿವಿಧ ದೇಶಗಳ ನಡುವೆ ಸಮಾನತೆಯ ಆಧಾರದ ಮೇಲೆ ಪರಸ್ಪರ ಕೊಡು ಕೊಳ್ಳುಗೆಗಳು ಸಾಧ್ಯವಾಗುವ ನಿರೀಕ್ಷೆ ಇದೆ. ಇದರಲ್ಲಿ ಜಾನಪದರ ಮಹತ್ವವನ್ನು ಸ್ಪಷ್ಟಪಡಿಸಲಾಗಿದೆ. ಜಗತ್ತಿನ ಸಂಸ್ಕೃತಿಯಾಗಲೀ ಇತಿಹಾಸವನ್ನಾಗಲೀ ಅದರ ಪೂರ್ಣ ಸ್ವರೂಪದಲ್ಲಿ ಅರ್ಥಮಾಡಿಕೊಳ್ಳಲು ಹಾಗೂ ವಾಸ್ತವ ಸ್ಥಿತಿಯನ್ನು ತಿಳಿಯಲು ಶಿಷ್ಟ ಸಂಗತಿ ಹಾಗೂ ಶಿಷ್ಟ ಇತಿಹಾಸವನ್ನು ತಿಳಿದರೆ ಸಾಕಾಗುವುದಿಲ್ಲ, ಜನಪದ ಸಂಸ್ಕೃತಿ ಮತ್ತು ಜನಪದ ಇತಿಹಾಸವನ್ನು

ತಿಳಿಯಬೇಕಾಗುತ್ತದೆ. ವಿಭಿನ್ನ ಸಂಸ್ಕೃತಿಗಳ ಜನರನ್ನು ಒಟ್ಟಿಗೆ ತರಲು ಅವರ ಸಾಂಸ್ಕೃತಿಕ ಅನನ್ಯತೆಯನ್ನು ಧೃಢೀಕರಿಸಲು ಜಾನಪದ ಬಹಳ ಮುಖ್ಯವಾಗುತ್ತದೆ. ಅದು ಆದಿವಾಸಿಗಳಲ್ಲಿ ಗ್ರಾಮೀಣರಲ್ಲಿ ಮಾತ್ರವಲ್ಲದೇ ನಗರಗಳಲ್ಲಿಯೂ ಸೃಷ್ಟಿಯಾಗುತ್ತದೆ. ಅದು ಯಾವುದೋ ಕಾಲದಲ್ಲಿ ಸೃಷ್ಟಿಯಾಗಿ ಈಗ ನಾಶವಾಗುತ್ತಿದೆ ಎನ್ನುವುದಕ್ಕಿಂತ ಹೊಸ ಹೊಸ ರೂಪಗಳನ್ನು ಪಡೆದುಕೊಳ್ಳುತ್ತಿದೆ ಎಂಬುದನ್ನು ಈ ಮಸೂದೆಯಲ್ಲಿ ಪ್ರತಿಪಾದಿಸಲಾಗಿದೆ. "Folklore or traditional and popular culture is the totality of tradition based creation of community, expressed by a group of individuals and recognized as reflecting the expectation of a community in so far as it reflects its cultural and social identity; its standards and values are transmitted orally by limitation or other means; its forms include among others language, literature, music, games, mythology, rituals, customs, handicrafts, architectures and other art.[೬]

ಎಂದು ಜಾನಪದವನ್ನು ಸೂತ್ರೀಕರಿಸಲಾಗಿದೆ. ಈ ಮಸೂದೆಯಲ್ಲಿ ಜಾನಪದ ಸಂರಕ್ಷಣೆಗೆ ಸಂಬಂಧಿಸಿದಂತೆ ಎರಡು ಬಗೆಯ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

1. Conservation 2. Preservation

1. Conservation : ಇದು ಜಾನಪದ ದಾಖಲಾತಿಗೆ ಸಂಬಂಧಪಟ್ಟದ್ದು. ದಾಖಲು ಮಾಡುವುದರ ಮೂಲಕ ಜಾನಪದವನ್ನು ಹಿಡಿದಿಡುವುದು. ಜೀವಂತವಾದ ಜಾನಪದವನ್ನು, ಅದರ ನಿರಂತರ ಪರಿವರ್ತನೆಯ ರೂಪಗಳನ್ನು ಎಲ್ಲಾ ಹಂತಗಳಲ್ಲೂ ಸಂರಕ್ಷಿಸಲು ಸಾಧ್ಯವಿಲ್ಲ ಎಂಬುದನ್ನು ತಾತ್ವಿಕವಾಗಿ ಒಪ್ಪಲಾಗಿದೆ. ಆದರೆ ಒಂದು ಹಂತದಲ್ಲಾದರೂ ದಾಖಲಾತಿ ಮಾಡುವುದರಿಂದ ಮುಂದಿನ ಅಧ್ಯಯನಗಳಿಗಾಗಿ ಜಾನಪದವನ್ನು ಸಂರಕ್ಷಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ದೇಶವೂ ತನ್ನ ಜಾನಪದವನ್ನು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಆಸ್ತಿ ಎಂದು ಪರಿಗಣಿಸಬೇಕು.

2. Preservation : ಇದರ ಕಲ್ಪನೆ Conservation ಗಿಂತ ಭಿನ್ನವಾದದ್ದು, ಜನಪದ ಸಾಹಿತ್ಯ, ವೈದ್ಯ, ಕಲೆ, ಸಂಗೀತ, ನೃತ್ಯ ಮೊದಲಾದವು ಜನಜೀವನದಲ್ಲಿ ಎಂದಿನಂತೆ ಅಥವಾ ಪರಿಷ್ಕೃತ ರೂಪದಲ್ಲಿ ಮುಂದುವರಿಯಲು ಪ್ರೋತ್ಸಾಹ ನೀಡುವುದು, ಆ ಮೂಲಕ ಜಾನಪದದ ಸೃಜನಶೀಲ ನೆಲೆಗಳನ್ನು ಪ್ರೋತ್ಸಾಹಿಸುವುದು. ಪ್ರತಿಯೊಂದು ಸಾಂಸ್ಕೃತಿಕ ಸಮುದಾಯಕ್ಕೂ ವಿಶಿಷ್ಟವಾದ ಲೋಕದೃಷ್ಟಿ (World view) ಇರುವುದು ಸಹಜವಾದುದು ಎಂದು ಒಪ್ಪಿ ಗೌರವಿಸುವುದು, ವಿಭಿನ್ನತೆಯಲ್ಲಿ ಏಕತೆ, ಪರಸ್ಪರ ಗೌರವ ಮತ್ತು ಸಮಾನತೆ ಈ ತತ್ವಗಳ ಆಧಾರದ ಮೇಲೆ ಇದು ಅವಲಂಬಿತವಾಗಿದೆ.

ಇದನ್ನೇ ಲ್ಯಾರಿ ಹಾಂಕೋ ತಮ್ಮ ಉಪನ್ಯಾಸದಲ್ಲಿ ವಿವರಿಸುತ್ತಾ "ಸಾಂಸ್ಕೃತಿಕ ಅನನ್ಯತೆಯ ಸ್ವರೂಪ ಜಗತ್ತಿನ ವಿವಿಧ ಭಾಷಿಕ, ಧಾರ್ಮಿಕ, ಜನಾಂಗಿಕ, ಸಾಂಸ್ಕೃತಿಕ ಸಮುದಾಯಗಳ ಅನನ್ಯತೆಗಳ ಅಧ್ಯಯನ ಮಾಡುವ ಅಗತ್ಯ ಹಾಗೂ ತುರ್ತು ಇದೆ" ಎಂದು ವಿವರಿಸಿದರು. ಈ ಎಲ್ಲ ಫಲಿತಗಳ ಒಟ್ಟು ಮೊತ್ತವೇ ಸಂಸ್ಕೃತೀಕರಣ. ಬೆಂಗಳೂರಿನ ಜಾನಪದ ಆಚರಣೆಗಳ ಮೂಲವನ್ನು ಕೆದಕುತ್ತಾ ಹೋದಾಗ ಭಾಷಿಕ ಅನನ್ಯತೆ, ಪ್ರಾದೇಶಿಕ ಅನನ್ಯತೆ, ಧಾರ್ಮಿಕ ಅನನ್ಯತೆ ಹೀಗೆ ಹಲವು ಬಗೆಯ ಅನನ್ಯತೆಗಳು ರೂಪುಗೊಳ್ಳುತ್ತವೆ. ಹೀಗಾಗಿ ಬೆಂಗಳೂರಿನ ಆಚರಣೆಗಳು ಬದಲಾದ ಕಾಲಸ್ಥಿತಿಗೆ ಅನುಗುವಾಗಿ ಹಲವಾರು ರೂಪಾಂತರಗಳನ್ನು ಹೊಂದುತ್ತಿವೆ. ವಾಣಿಜ್ಯೀಕರಣ, ಜಾಗತೀಕರಣ ಮತ್ತು ಕಾರ್ಪೋರೇಟ್ ಸಂಸ್ಕೃತಿಗಳ ಭರಾಟೆಗಳ ನಡುವೆ ನಲುಗುತ್ತಿರುವ ಜಾನಪದ ಆಚರಣೆಗಳು ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿದೆ.

೬.೨. ಬೆಂಗಳೂರಿನ ದೊಡ್ಡ ಬಸವನ ಗುಡಿಯ ಚಾರಿತ್ರಿಕ ಹಿನ್ನೆಲೆ :

ಬೆಂಗಳೂರಿನ ನೆಲೆ ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿಯ ಪೂರ್ವಭಾಗಕ್ಕೆ ಇದ್ದು ವಿನ್‌ಸ್ಟನ್ ಚರ್ಚಿಲ್ ೧೮೯೫-೯೮ರ ಅವಧಿಯಲ್ಲಿ ಮೂರು ಬಾರಿ ಬೆಂಗಳೂರಿಗೆ ಬಂದು ನೆಲೆಸಿದ್ದರು. ಅವರ ಗ್ರಂಥವಾದ " ಮೈ ಅರ್ಲಿ ಲೈಫ್" ನಲ್ಲಿ ಬೆಂಗಳೂರಿನ ವಾತಾವರಣವು ಅತ್ಯುತ್ತಮವಾಗಿದ್ದು ಇದು

ಸಮುದ್ರ ಮಟ್ಟಕ್ಕಿಂತಲೂ ೩೦೦೦ ಅಡಿಗಳಿಗಿಂತಲೂ ಹೆಚ್ಚು ಎತ್ತರದಲ್ಲಿದೆ ಎಂದು ತಿಳಿಸಿದ್ದಾರೆ. ಈ ಔನ್ನತ್ಯವೇ ಬೆಂಗಳೂರಿನ ಸಂಸ್ಕೃತಿಯ ಮೇಲೂ ಗಣನೀಯವಾದ ಪರಿಣಾಮವನ್ನು ಬೀರಿದೆ.

ಆಡಳಿತಾತ್ಮಕವಾಗಿ ಬೆಂಗಳೂರನ್ನು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಎಂದು ವಿಂಗಡಿಸಿ (೧೯೮೬) ಮಹಾನಗರವೂ ಸೇರಿದಂತೆ ಇಡೀ ಜಿಲ್ಲೆ ೧೨೩೯' ಉತ್ತರದಿಂದ ೧೩೨೮' ಉತ್ತರ ಅಕ್ಷಾಂಶ, ೭೭೨೦' ಪೂರ್ವದಿಂದ ೭೭೫೦' ಪೂರ್ವ ರೇಖಾಂಶದವರೆಗೂ ಹಬ್ಬಿದೆ. ಭಾರತೀಯ ಸರ್ವೆ ಇಲಾಖೆ ರಚಿಸಿರುವ ಮೇಲ್ಮೈ ನಕ್ಷೆಯಲ್ಲಿ ಬೆಂಗಳೂರು ಮಹಾನಗರ ೫೭-ಜಿ ಮತ್ತು ೫೭-ಹೆಚ್ ಡಿಗ್ರಿ ನಕ್ಷೆಯಲ್ಲಿ (೧೨,೫೦೦೦) ಅಳತೆಪಟ್ಟಿಯಲ್ಲಿ ಹಂಚಿಕೆಯಾಗಿದೆ.[೭]

ಬೆಂಗಳೂರು ಮೆಟ್ರೋಪೋಲ್ ಎಂದರೆ ಸುಮಾರು ೧೪೦೦ ಚ.ಕಿ.ಮೀ ವಿಸ್ತೀರ್ಣ ಹೊಂದಿರುವ ಹೊಸ ಬಡಾವಣೆಗಳನ್ನು ಒಳಗೊಂಡಿರುವ ನಗರ ಹಲವು ಗ್ರಾಮಾಂತರ ಪ್ರದೇಶಗಳನ್ನು ಒಳಗೆ ಸೇರಿಸಿಕೊಳ್ಳುತ್ತಲೇ ಎಲ್ಲಾ ದಿಕ್ಕುಗಳಲ್ಲೂ ಹಬ್ಬಿದೆ. ೧೯೪೯ ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ರೂಪುಗೊಂಡು ಬೆಂಗಳೂರು ನಗರವನ್ನು ಸಿವಿಲ್ ಮತ್ತು ಮಿಲಿಟರಿ ಕೇಂದ್ರಗಳೊಂದಿಗೆ ಐಕ್ಯಗೊಳಿಸಿದಾಗ ನಗರದ ವಿಸ್ತೀರ್ಣ ೬೯ ಚ.ಮೀ ಇತ್ತು. ಆದರೆ ೭೦ರ ದಶಕದಲ್ಲಿ ಇದು ೪೦೦ ಚ.ಮೀ ಗಳಷ್ಟು ಹಿಗ್ಗಿತು. ಆದರೆ ೨೧ನೇ ಶತಮಾನದ

ಹೊಸ್ತಿಲಲ್ಲಿ ಬೆಂಗಳೂರು ಮಹಾನಗರದ ಎಲ್ಲೆಯನ್ನು ಗುರುತಿಸುವುದು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳಿಗೂ ಕಷ್ಟದ ಕೆಲಸ. ಇಂದು ಬೆಂಗಳೂರು ಭಾರತದಲ್ಲಿಯೇ ಐದನೆಯ ಅತಿ ದೊಡ್ಡ ನಗರ ಹಾಗೂ ಏಷ್ಯಾದಲ್ಲಿಯೇ ವೇಗವಾಗಿ ಬೆಳವಣಿಗೆಯಾಗುತ್ತಿರುವ ನಗರ ಎಂಬ ಖ್ಯಾತಿ ಪಡೆದಿದೆ. ಅದೇ ರೀತಿ ಪ್ರಪಂಚದಲ್ಲಿಯೇ ಅತೀ ಶೀಘ್ರವಾಗಿ ವಿಸ್ತರಣೆಯಾಗುತ್ತಿರುವ ಹತ್ತನೆಯ ನಗರ ಎಂಬ ಹೆಗ್ಗಳಿಕೆಗೂ ಪಾತ್ರವಾಗುತ್ತಿದೆ.

"ಬೆಂಗಳೂರು ಮಹಾನಗರದ ಭೂ ಮೇಲ್ಮೈನಲ್ಲಿ ಎರಡು ಲಕ್ಷಣಗಳು ಪ್ರಧಾನವಾಗಿ ಕಾಣುತ್ತವೆ. ಪೂರ್ವಭಾಗ ಅಲ್ಪ ಸ್ವಲ್ಪ ಏರಿಳಿತಗಳಿಂದ ಕೂಡಿದ ಉನ್ನತ ಭಾಗ, ಇಲ್ಲಿ ಹೆಬ್ಬಂಡೆಗಳು ಶಿಲಾಚಾಚುಗಳು ಹೆಚ್ಚು ಕಂಡು ಬರುವುದಿಲ್ಲ. ನೆಲ ಅಗೆದರೆ ೩೦೦ರಿಂದ ೨೦೦ ಮೀಟರ್‌ಗಳವರೆಗೆ ಶೀಥಲೀಕರಣವಾದ ಶಿಲೆಗಳೇ ಹೆಚ್ಚು. ಬೆಂಗಳೂರಿನ ಬಸವನ ಬಡಾವಣೆಯ ದೊಡ್ಡ ಬಸವಣ್ಣ ಇರುವ ಹೆಬ್ಬಂಡೆಗಳ ಬಿರುಕಿನಲ್ಲಿ ಶುದ್ಧ ನೀರಿನ ಸಣ್ಣ ತೊರೆಯಾಗಿ ವೃಷಭಾವತಿ ನದಿ ಹುಟ್ಟುತ್ತದೆ ಎಂದು ಒಂದನೇ ಶಾಸನದಲ್ಲಿ ಉಲ್ಲೇಖ ಇದೆ.

ಬೆಂಗಳೂರಿನ ನಗರೀಕರಣ ಮತ್ತು ಕೈಗಾರಿಕೀಕರಣದ ಭರಾಟೆಯಲ್ಲಿ ವೃಷಭಾವತಿ ಈಗ ತನ್ನ ಹಿಂದಿನ ವೈಭವವನ್ನು ಕಳೆದುಕೊಂಡು ಸಂಪೂರ್ಣವಾಗಿ ಕಲುಷಿತವಾಗಿದೆ. ಇದನ್ನು ಹೊರತುಪಡಿಸಿ ನದಿಗಳಾಗಲೀ ತೊರೆಗಳಾಗಲೀ ಇಲ್ಲ. ಎಲ್ಲರ ಕಣ್ಣು ಸೆಳೆಯುವ ಲಾಲ್‌ಬಾಗ್ ಬಳಿಯ ಪೆನಿನ್‌ಸುಲಾರ್ ನೈಸ್ ವಿಶ್ವ ಪ್ರಸಿದ್ಧಿಯಾಗಿದೆ. ಏನೇ ಇರಲಿ, ಸಾಂಸ್ಕೃತಿಕ ಸ್ಥಿತ್ಯಂತರಗಳ ಒತ್ತಡಗಳ ನಡುವೆ, ಜಾಗತೀಕರಣದ ಕಬಂದ ಬಾಹುಗಳ ನಡುವೆಯೂ ಅಲ್ಲಲ್ಲಿ ಮೂಲ ಬೆಂಗಳೂರಿನ ಸೊಗಡು, ಛಾಯೆಗಳು ಹಲವಾರು ರೂಪಾಂತರಗಳೊಂದಿಗೆ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿರುವುದು ಹೆಮ್ಮೆಯ ಸಂಗತಿ.

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ನಿರ್ಮಾಣದ ಹಂತದಲ್ಲಿನ ವಿವಿಧ ಬಡಾವಣೆಗಳ ಸ್ವರೂಪ ವ್ಯಾಪ್ತಿಗಳನ್ನು ಗಮನಿಸಿದಾಗ ಕೆಲವು ಪ್ರಮುಖ ಅಂಶಗಳನ್ನು ಕಾಣಬಹುದಾಗಿದೆ. ಬೆಂಗಳೂರು ಜಿಲ್ಲೆಯ ಪ್ರದೇಶದಲ್ಲಿ ಕ್ರಿ.ಶ. ಸುಮಾರು ೫೦೦ರಿಂದ ಕ್ರಿ.ಶ.೧೩೫೦ರ ಅವಧಿಯಲ್ಲಿ ಬೇರೆ ಬೇರೆ ಭಾಗಗಳಲ್ಲಿ ಹೆಸರುಗೊಂಡ ಸುಮಾರು ೩೦ಕ್ಕಿಂತಲೂ ಹೆಚ್ಚಿನ ಪ್ರಾದೇಶಿಕ ಆಡಳಿತ ವಿಭಾಗಗಳನ್ನು ಗುರುತಿಸಬಹುದಾಗಿದೆ.

ಆಡಳಿತದ ಅನುಕೂಲಕ್ಕಾಗಿ ಒಂದು ಜಿಲ್ಲೆಯನ್ನು ತಾಲ್ಲೂಕು, ಹೋಬಳಿ, ಪಂಚಾಯ್ತಿ ಮತ್ತು ಗ್ರಾಮ ಎಂದು ವಿಂಗಡಿಸಿಕೊಳ್ಳುವುದು ಅಂದಿನ ಪ್ರಚಲಿತ ವ್ಯವಸ್ಥೆಯಾಗಿತ್ತು. ಹಾಗೆ ವಿಂಗಡಿಸಿಕೊಂಡಾಗ ಅವುಗಳಲ್ಲಿದ್ದ ಪ್ರಮುಖ ಪ್ರಾದೇಶಿಕ ವಿಭಾಗಗಳಾವುವು,ಅವುಗಳಲ್ಲಿ ಸಮಾವೇಶಗೊಂಡಿದ್ದ ಗ್ರಾಮಗಳೆಷ್ಟು, ಹಾಗೆ ವಿಲೀನನಗೊಳ್ಳುವಾಗ ಅಲ್ಲಿನ ಭೌಗೋಳಿಕ ವಿಲೀನವಷ್ಟೇ ಅಲ್ಲದೆ ಅದರ ಜೊತೆಗೆ ವಿಲೀನವಾದ ಐತಿಹಾಸಿಕ, ಚಾರಿತ್ರಿಕ, ಸಾಂಸ್ಕೃತಿಕ ಅಂಶಗಳಾವುವು ಎಂಬ ಕುತೂಹಲಕಾರಿ ಅಂಶಗಳು ನಮ್ಮ ಗಮನ ಸೆಳೆಯುತ್ತವೆ. ಈ ನಿಟ್ಟಿನಲ್ಲಿ ಶೋಧಿಸಲು ನಮಗಿರುವ ಮೂಲ

ಎರಡು ಆಕರಗಳೆಂದರೆ ಒಂದು: ಜಾನಪದ, ಎರಡು: ಶಾಸನಗಳು. ಒಂದು ಮೌಖಿಕ ಮತ್ತೊಂದು ಗ್ರಾಂಥಿಕ. ಈ ಎರಡರಲ್ಲೂ ಉಲ್ಲೇಖಿತವಾಗಿರುವ ಅಂಶಗಳು ಕೆಲವೊಮ್ಮೆ ಒಂದಕ್ಕೊಂದು ಪೂರಕವಾಗಿಯೂ ಇರಬಹುದು ಅಥವಾ ವೈರುಧ್ಯದ ನೆಲೆಯಲ್ಲಿಯೂ ನಿಂತಿರುವ ಸಾಧ್ಯತೆಗಳಿವೆ. ಕೆಂಪೇಗೌಡನಿಂದ ಸ್ಥಾಪಿಸಲ್ಪಡುವ ಮುಂಚೆಯೇ ಬೆಂಗಳೂರು ಅಸ್ತಿತ್ವದಲ್ಲಿತ್ತೆಂದು ಕೆಲವು ಇತಿಹಾಸಕಾರರ ಅಭಿಪ್ರಾಯ. ದಿ.ಕರ್ಲಮಂಗಲಂ ಶ್ರೀಕಂಠಯ್ಯನವರು ಈ ಬಗ್ಗೆ ಕೆಂಪೇಗೌಡರ 'ಜಯ ಪ್ರಶಸ್ತಿ' ಎಂಬ ಗ್ರಂಥದಲ್ಲಿ– "ಈಗ ಬೆಂಗಳೂರಿನಲ್ಲಿ ಉಳಿದಿರುವ ಕೋಟೆಗೆ ಹೊಂದಿಸಿ ಕಟ್ಟುವಾಗಲೇ ಜೋಡಿಸಿರುವ ಹೊಯ್ಸಳ ಲಾಂಛನವಾದ ಸಳನು ಹುಲಿಯನ್ನು ತಿವಿದು ಕೆಡವುತ್ತಿರುವ ವಿಗ್ರಹವನ್ನು ನೋಡಿದರೆ ಈ ಕೋಟೆಯು ಹೊಯ್ಸಳರ ಕಾಲದಲ್ಲಿ ಕಟ್ಟಿರಬೇಕೆಂದು ಯಾರಿಗಾದರೂ ಗೊತ್ತಾಗುವುದು" ಎಂದಿದ್ದಾರೆ.[೮]

ಆದರೆ ಈ ವಾದವನ್ನು ಪೂರ್ತಿ ಒಪ್ಪಲು ಸಾಧ್ಯವಿಲ್ಲ ಎಂಬುದು ಹಲವು ಇತಿಹಾಸಕಾರರ ಅಭಿಪ್ರಾಯ. ಬೆಂಗಳೂರು ಎಂಬ ಊರು ಕ್ರಿ.ಶ. ೮೯೦ರ ಕಾಲಘಟ್ಟಕ್ಕಾಗಲೇ ಅಸ್ತಿತ್ವದಲ್ಲಿತ್ತು ಎಂಬ ವಿಷಯದಲ್ಲಿ ಯಾರ ಭಿನ್ನಾಭಿಪ್ರಾಯವೂ ಇಲ್ಲ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಶಾಸನದ ಆಧಾರದಿಂದ ಬೆಂಗಳೂರಿನ ಪ್ರಾಚೀನತೆಯು ಖಂಡಿತವಾಗಿ ತಿಳಿದುಬಂದಿದೆ. ಆದರೆ ಬೆಂಗಳೂರಿನ ಸ್ಥಳನಾಮ ನಿಷ್ಪತ್ತಿಯ ಬಗ್ಗೆ ಹಲವಾರು ಬಗೆಯ ಭಿನ್ನಾಭಿಪ್ರಾಯಗಳಿವೆ. ಇನ್ನು ಬೆಂಗಳೂರಿನ ಪ್ರಾಚೀನತೆಯ ಬಗ್ಗೆ ಗಮನಹರಿಸುವುದಾದರೆ ಈ ಕುರಿತು ಪ್ರಸಿದ್ಧ ಇತಿಹಾಸಕಾರರಾದ ಡಾ. ಸೂರ್ಯನಾಥ ಯು ಕಾಮತ್ ಅವರು ಹೀಗೆ ಅಭಿಪ್ರಾಯಪಡುತ್ತಾರೆ. "ಸುಮಾರು ಕ್ರಿಪೂ.೧೦೦೦ದಷ್ಟು ಹಿಂದಿನಿಂದಲೂ ಈ ಪ್ರದೇಶ ಮಾನವನ ಆವಾಸ ಸ್ಥಾನವಾಗಿತ್ತು. ನವಶಿಲಾಯುಗದ ಅನೇಕ ಉಳಿಕೆಗಳು ಇಲ್ಲಿ ದೊರೆತಿದೆ.[೯]

ರೋಮನ್ ಸಾಮ್ರಾಟ ಕಾಲಿಗುಲನ ಹಲವು ಬೆಳ್ಳಿ ನಾಣ್ಯಗಳನ್ನು ಇತ್ತೀಚೆಗೆ ಯಶವಂತಪುರದಲ್ಲಿ ಅಗೆದು ತೆಗೆದಿದ್ದು (ಈ ನಾಣ್ಯಗಳು ಬೆಂಗಳೂರು ಮ್ಯೂಸಿಯಂನಲ್ಲಿವೆ) ಈ ಪ್ರದೇಶವು ಒಂದನೆಯ ಶತಮಾನದಲ್ಲೂ ಜನವಾಸಸ್ಥಾನವಾಗಿರುವುದರ ಜೊತೆಗೆ ಒಂದು ವಾಣಿಜ್ಯ ಕೇಂದ್ರವೂ ಆಗಿದ್ದಿರಬೇಕೆಂದೂ, ರೋಮ್ ಜೊತೆ ಸಂಪರ್ಕ ಹೊಂದಿರಬೇಕೆಂದೂ ಇದರಿಂದ ಸಾಧಿತವಾಗುತ್ತದೆ.

ಇತ್ತೀಚೆಗೆ ಸಿಕ್ಕಿರುವ ಹಳೆಯ ಬೆಂಗಳೂರು ನಕಾಶೆಯ ಪ್ರಕಾರ, ಸುಮಾರು ೧೮ನೇ ಶತಮಾನದ ಆದಿಭಾಗದ ಬೆಂಗಳೂರನ್ನು ಕೇವಲ 'ಪೇಟೆ' ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಎಲ್ಲ ಹಳೆಯ ಪೇಟೆಗಳೂ ಸೇರಿದ್ದವು. ಒಂದು ಕಡೆ ಧರ್ಮಾಂಬುಧಿ ಕೆರೆಯಿಂದ (ಪಶ್ಚಿಮದಿಂದ– ಪೂರ್ವದವರೆಗೆ) ಸಂಪಂಗಿ ಕೆರೆಯವರೆಗೆ ಹಾಗೂ ಉತ್ತರದಿಂದ ದಕ್ಷಿಣದವರೆಗೆ ಈಗಿನ ಮೈಸೂರು ಬ್ಯಾಂಕ್ ವೃತ್ತ ಇರುವ ಸ್ಥಳದಿಂದ ಕೆಂಪಾಂಬುಧಿ ಕೆರೆಯವರೆಗೆ ವಿಸ್ತರಿಸಿತ್ತು. ಇದೇ ರೀತಿ ಬೆಂಗಳೂರು ಸಣ್ಣ ಪ್ರಮಾಣದ ಪಟ್ಟಣದ ಆಕಾರದಲ್ಲಿ ಸುಮಾರು ಒಂದು ನೂರು ವರ್ಷ ಇತ್ತು. ಇದೇ ವೇಳೆಗೆ ಬ್ರಿಟೀಷರ ಸೈನ್ಯದವರು ತಮ್ಮ ನೆಲೆಗಳನ್ನು ಈಗಿನ ದಂಡು ಪ್ರದೇಶ

ಹಾಗೂ ಬ್ಲಾಕ್ ಪಲ್ಲ, ಮುಂತಾದ ಅಕ್ಕ ಪಕ್ಕದ ಹಳ್ಳಿಗಳಲ್ಲಿ ಸ್ಥಾಪಿಸಿ ವೃದ್ಧಿಪಡಿಸಿದರು. ಆದರೆ ೧೮೯೮ರಲ್ಲಿ ಬೆಂಗಳೂರಿಗೆ ಪ್ಲೇಗು ರೋಗ ತಗುಲಿ ಸಾಂಕ್ರಾಮಿಕವಾಗಿ ಹರಡಿ ಜನ ಜಾನುವಾರುಗಳು ಸಾವಿನ ದವಡೆಗೆ ತುತ್ತಾದರು.ಅಳಿದುಳಿದ ಜನಸ್ತೋಮವನ್ನು ರಕ್ಷಿಸುವ ಸಲುವಾಗಿ ಅಂದಿನ ಸರ್ಕಾರದವರು ಈಗಿನ ನರಸಿಂಹರಾಜ ಕಾಲೋನಿಯ ಸ್ಥಳದಲ್ಲಿ ಪ್ಲೇಗ್ ಕ್ಯಾಂಪನ್ನು ನಿರ್ಮಿಸಿ, ಅಲ್ಲಿಗೆ ಕೆಲವು ಸೌಲಭ್ಯಗಳನ್ನು ಒದಗಿಸಿ ಸ್ಥಳಾಂತರ ಮಾಡಿದರು. ಈ ಮಹಾಮಾರಿ ಪ್ಲೇಗ್ ಬಂದ ಕಾರಣ ಹೊಸ ಬಡಾವಣೆಗಳು ಅತಿ ವೇಗವಾಗಿ ಅದರಲ್ಲೂ ಎತ್ತರದ ಪ್ರದೇಶಗಳಲ್ಲಿ ಪ್ರಾರಂಭವಾದವು. ಉತ್ತರದಲ್ಲಿ ಕಾಡು ಮಲ್ಲೇಶ್ವರನ ದೇವಸ್ಥಾನದ ಹೆಸರಿನಲ್ಲಿ 'ಮಲ್ಲೇಶ್ವರ', ದಕ್ಷಿಣದಲ್ಲಿ ದೊಡ್ಡ ಬಸವಣ್ಣನ ಗುಡಿಯ ಹೆಸರಿನಲ್ಲಿ 'ಬಸವನಗುಡಿ' ಎಂದು ಕರೆಯಲಾರಂಭಿಸಿದರು.[೧೦]

ಈ ಬಸವನಗುಡಿ ಹಿಂದೆ ಬಸವನ ಹಳ್ಳಿಯಾಗಿದ್ದಿರಬೇಕು. ಇದಕ್ಕೆ ನಮಗೆ ಶಾಸನೋಕ್ತ ಐತಿಹಾಸಿಕ ದಾಖಲೆಗಳೂ ಕಾಣಸಿಗುತ್ತವೆ.

ಬೆಂಗಳೂರು ನಗರದ ಬಸವನ ಗುಡಿಯಲ್ಲಿರುವ ದೊಡ್ಡ ಬಸವಣ್ಣನ ದೇವಾಲಯದ ಮುಂಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನೈಸರ್ಗಿಕವಾದ ಕಪ್ಪು ಬಣ್ಣದ ಕಲ್ಲು ಬಂಡೆಗಳು ಕಾಣಬರುತ್ತವೆ. ಇವುಗಳಲ್ಲಿ ಕೆಲವು ಬೃಹದಾಕಾರವಾದವು. ಈ ಬಂಡೆಗಳ ಮೇಲೆ ತಟ್ಟೆಯಾಕಾರದ ಕುಳಿಗಳು ಇರುವುದು ಇಲ್ಲಿಯ ವಿಶೇಷ. ಒಂದೇ ಬಂಡೆಗಳ ಮೇಲೆ ಸುಮಾರು ಒಂದು ಅಡಿ ಆಳ ಮೂರು ಅಂಗುಲ. ಗಮನಾರ್ಹ ಸಂಗತಿಯೆಂದರೆ ಈ ಕುಳಿಗಳ ಮಧ್ಯದಲ್ಲಿ ಎರಡು ಅಂಗುಲ ಆಳವುಳ್ಳ ಒಂದು ಸಣ್ಣ ಕುಳಿ ಇರುವುದು. ಒಂದು ಅಡಿಗಿಂತ ಹೆಚ್ಚು ಅಂತರವಿರುವ ಈ ಎಲ್ಲಾ ಕುಳಿಗಳೂ ಇಂದಿಗೂ ಸ್ವಲ್ಪವೂ ಸವೆಯದೇ ಕೆತ್ತಲು ಬಳಸಲಾಗಿರುವ ಕಬ್ಬಿಣದ ಉಳಿಗಳನ್ನು ಕಾಣಬಹುದು.

ಒಂದನೆಯ ಶಾಸನ :

ಈ ಬಂಡೆಗಳ ಸಮೂಹದಲ್ಲಿರುವ ಎತ್ತರವಾದ ಒಂದು ಬಂಡೆಯ ಮೇಲೆ ಕೆಂಪೇಗೌಡರ ಕಾಲದಲ್ಲಿ ಕಹಳೆ ಊದುತ್ತಿರುವುದರಿಂದ ಇದಕ್ಕೆ ಕಹಳೆ ಬಂಡೆ ಎಂಬ ಹೆಸರು ಬಂದಿದ್ದು ಈಗಲೂ ಅದೇ ಹೆಸರು ಮುಂದುವರೆದಿದೆ. ಈ ಬಂಡೆಯ ಪಕ್ಕದಲ್ಲಿ ಪೂರ್ವಾಭಿಮುಖವಾಗಿ ಒಂದು ಸಾಲಿನ ಶಾಸನವಿದೆ. "ದೀವಟಿಗೆ ಸೋಮನು. . . .ಕುಲಗುರುಲಿಂಗ" ಎಂಬುದು ಇದರ ಪಾಠ. ಅಕ್ಷರಗಳ ಲಕ್ಷಣಗಳಿಂದ ಇದು ಹದಿನಾರನೇ ಶತಮಾನದೆನ್ನಬಹುದು. ಈ ಶಾಸನದ ಕೆಲವೇ ಅಡಿಗಳ ಎದುರಿಗೆ ಪುಟ್ಟ ಬಂಡೆಯಲ್ಲಿಯೇ ಒಂದು ವೇದಿಕೆಯನ್ನು ನಿರ್ಮಿಸಲಾಗಿದೆ. ಸುಮಾರು ನಾಲ್ಕು ಜನ ಕುಳಿತುಕೊಳ್ಳಬಹುದಾದ ೧೨ ಅಡಿ ಉದ್ದ, ೬ ಅಡಿ ಅಗಲವಿರುವ ಪೀಠ ಇದು. ಸುತ್ತಲೂ ಹೂವಿನನ ಬಳ್ಳಿಯ ರೇಖಾ ಚಿತ್ರಗಳನ್ನು ಹೊಂದಿದ್ದು ಸುಂದರವಾಗಿ ತೋರುತ್ತದೆ. ಮೇಲ್ಭಾಗದಲ್ಲಿ ವೃತ್ತಾಕಾರದ ರೇಖಾ ಚಿತ್ರವನ್ನು ಹೊಂದಿದೆ.

ಕುಳಿಗಳ ಬಳಿ ಸುತ್ತಲೂ ಎಣ್ಣೆಯ ಜಿಡ್ಡಿನ ಕಪ್ಪಾದ ಗುರುತುಗಳು ಕಾಣುವುದರಿಂದ ಇವುಗಳು ನಾನಾ ಬಗೆಯಲ್ಲಿ ಕುತೂಹಲವನ್ನು ಕೆರಳಿಸುತ್ತವೆ. ಇವುಗಳ ಸ್ವರೂಪ ಮತ್ತು ಇಲ್ಲಿಯೇ ದೊರೆತ ಹಾಗೂ ಈಗ ಪ್ರಸ್ತಾಪಿಸಿರುವ ಶಾಸನದ ಹಿನ್ನೆಲೆಯಲ್ಲಿ ಈ ಕುಳಿಗಳೆಲ್ಲವೂ ದೀವಟಿಗೆಗಳಿಗೆ ಉಪಯೋಗಿಸುತ್ತಿದ್ದರೆಂಬುದಾಗಿ ಹೇಳಬಹುದು. ಈ ಕುಳಿಗಳ ಮಧ್ಯೆ ಇರುವ ಚಿಕ್ಕ ಕುಳಿಗಳಲ್ಲಿ ಬತ್ತಿಯನ್ನು ಉದ್ದದ ಕೊಳವೆಯ ಆಧಾರದಿಂದ ನಿಲ್ಲಿಸುವುದಕ್ಕೆ ಅನುಕೂಲವಾಗಲು ಕೆತ್ತಿರುವುದು ಇದನ್ನು ಸಮರ್ಥಿಸುತ್ತದೆ. ಇದೊಂದು ಬಯಲು ಸಂಸ್ಕೃತಿಗೆ ಸಂಬಂಧಿಸಿದ ವಿಶಿಷ್ಟ ಆಚರಣೆಯ ಕುಳಿಗಳು.[೧೧]

ಕೆಂಪೇಗೌಡರ ಕಾಲದಲ್ಲಿ ಶತ್ರುಗಳು ಬರುವುದನ್ನು ಗುರುತಿಸುವುದಕ್ಕಾಗಿ ಬಹು ಎತ್ತರವಾಗಿದ್ದ ಈ ಪ್ರದೇಶದಲ್ಲಿ ಒಂದು ಪಡೆಯನ್ನು ಇರಿಸಲಾಗಿತ್ತು. ಈ ಪಡೆಯ ನಾಯಕನಾಗಿದ್ದವನು ಗುಜ್ಜಲ ನಾಯಕ ಎಂಬುವವನು, ಈತ ತನ್ನ ಜನಾಂಗ (ಬೇಡ) ಕುಲದೇವರಾದ ಬೇಡರ ಕಣ್ಣಪ್ಪನ ದೇವಾಲಯವನ್ನು ನಿರ್ಮಿಸಿರುವುದು ಕಾಣಬಹುದು. ಈ ಬೇಡ ಪಡೆಯವರೇ ಇಲ್ಲಿನ ದೀಪಗಳನ್ನು ಹಚ್ಚುತ್ತಿದ್ದಾರೆನ್ನಬಹುದು. ಇದೇ ರೀತಿಯಾದಂಥ ಒಂದು ಕುಳಿಯು ಕೆಂಪಾಂಬುಧಿ ಕೆರೆಯ ಬಳಿ ಇರುವ ನಂಜಾಂಬ ಅಗ್ರಹಾರದ ಬಂಡೆಯ ಪ್ರದೇಶದಲ್ಲಿನ ಎತ್ತರವಾದ ಒಂದು ಬಂಡೆಯ ಮೇಲಿನ ಕಹಳೆ ಕಾವಲು ಗೋಪುರದ ಬಳಿ ಕಾಣಬಹುದಾಗಿದೆ. ಇದರಿಂದ ಗ್ರಹಿಸಬಹುದಾದ ಅಂಶವೆಂದರೆ ಶಿಷ್ಟ ದೇವತೆಯೊಂದು ಪೂಜಿಸಲ್ಪಡುವ ನೆಲೆಯಲ್ಲ, ಜನಪದ ದೇವರೊಂದೊ ಸಹಾ ಸಮಕಾಲೀನವಾಗಿ ಪೂಜೆಗೆ ಬಳಸಲ್ಪಡುತ್ತಿರುವಾಗ, ಹಲವಾರು ಸಾಂಸ್ಕೃತಿಕ ವೈರುಧ್ಯಗಳ ಹಿನ್ನೆಲೆಯಲ್ಲಿಯೂ ಸಮಾನ ಚಿಂತನೆಯೊಂದು ರೂಪಗೊಳ್ಳುತ್ತಿದೆ ಎಂಬುದು. ಮೂಲ ಕೃಷಿಕರ ದೇವರಾದ ಬಸವಣ್ಣನ ಹೆಸರು ಜನ ಸಮುದಾಯದವರ ಮನದಲ್ಲಿ ಇಂದು ಹಲವಾರು ರೂಪಾಂತರಗಳನ್ನು ತಾಳಿ ವೈದಿಕ ಸಂಸ್ಕೃತೀಕರಣದ ವ್ಯಾಪ್ತಿಗೆ ಒಳಪಟ್ಟು ಪೂಜಿಸಲ್ಪಡುತ್ತಿದ್ದರೂ, ಆಚರಣೆಗಳು ಸಂಸ್ಕತೀಕರಣದ ಹೆಸರಿನಲ್ಲಿ ತನ್ನ ಮೂಲ ಅಸ್ಮಿತೆಗಳನ್ನು, ಜನಪದ ಚಹರೆಗಳನ್ನು ಉಳಿಸಿಕೊಂಡು ದಾಖಲಾಗಿರುವುದನ್ನು ಕಾಣಬಹುದು. ಇದಕ್ಕೆ ಪೂರಕವಾಗಿ ಇದೇ ಸ್ಥಳದಲ್ಲಿ ದೊರೆತ ಎರಡನೆಯ ಶಾಸನ ಪಾಠ ಹೀಗಿದೆ:

ಎರಡನೆಯ ಶಾಸನ :

ಬಸವಣ್ಣನ ದೇವಾಲಯ ಹೊರಭಾಗದಲ್ಲಿನ ಮೆಟ್ಟಿಲುಗಳ ಬಲಭಾಗದಲ್ಲಿರುವ ೫ ಅಡಿ ಅಗಲ, ೧ ಅಡಿ ಎತ್ತರದ ಬಂಡೆಯ ಮೇಲೆ ಮೂರು ಸಾಲಿನ ಶಾಸನವೊಂದು ಇದೆ. ಇದು ಈಗಾಗಲೇ ಬಸವನ ಪೀಠದಲ್ಲಿರುವ ಪ್ರಕಟಿತ ಶಾಸನ ಪಾಠವನ್ನು ಹೋಲುತ್ತದೆ. ಈ ಶಾಸನ "ಯಾ ಬಸವೇಶ್ವರನ ...... " ಎಂದು ಪ್ರಾರಂಭವಾದರೆ ಬಂಡೆಯ ಮೇಲಿರುವ ಅಪ್ರಕಟಿತ ಶಾಸನ. . . . . . ದೊಡ್ಡ ಬಸವೇಶ್ವರ ಎಂಬ ನಾಮದಿಂದ ಪ್ರಾರಂಭಗೊಳ್ಳುತ್ತಿದೆ, ಈ ಶಾಸನದ ಪಾಠ ಇಂತಿದೆ :

೧. ದೊಡ್ಡ ಬಸವೇಶ್ವರನ ಪಾ

೨. ದ ದಲಿ ವ್ರಿಶಭಾವತಿಯೆಂಬ ನದಿ ವು

೩. ಟ್ಟಿ ಪಶ್ಚಿಮವಾಹಿನಿಯಾಗಿ ನಡೆಯಿತು..."[೨]

ಈ ಶಾಸನವನ್ನು ದೇವಾಲಯ ನಿರ್ಮಾಣದ ನಂತರದಲ್ಲಿ ದೇವಾಲಯಕ್ಕೆ ಭೇಟಿ ಕೊಡುವ ಜನರಿಗೆ ಸೂಚನೆ ನೀಡುವ ನಾಮಫಲಕದಂತೆ ಹಾಕಿಸಿರಬಹುದು ಎಂದು ಕಂಡುಬರುತ್ತದೆ. ಅನೇಕ ರೇಖಾಚಿತ್ರಗಳನ್ನು ಬಂಡೆಗಳ ಮೇಲೆ ಕಾಣಬಹುದು. ಈ ಪರಿಸರದಲ್ಲಿ ಅಲ್ಲಲ್ಲಿ ಇದ್ದ ಅನೇಕ ವೀರಗಲ್ಲುಗಳನ್ನು ಈಗ ಒಂದು ಕಡೆ ಸಾಲಾಗಿ ಇರಿಸಲಾಗಿದ್ದು ಅವುಗಳಿಗೆ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಇಲ್ಲಿ ಕೆಂಪೇಗೌಡರ ಕಾಲದಲ್ಲಿ "ಬಸವನಹಳ್ಳಿ" ಎಂಬ ಹೆಸರಿನಿಂದ ಒಂದು ಹಳ್ಳಿ ಪ್ರಾರಂಭವಾಗಿ ಕ್ರಮೇಣ "ಬಸವನಪುರ" ಆಗಿ ಈಗ ಬಸವನಗುಡಿ ಎಂಬ ಹೆಸರು ಪಡೆದಿರುವುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತಪಟ್ಟಿದೆ. ಇಲ್ಲಿಯ ದೊಡ್ಡ ಬಸವಣ್ಣನ ಎತ್ತರ ೧೧ ಅಡಿ ಇದ್ದರೆ ಸನಿಹದಲ್ಲಿಯೇ ಇರುವ ಕಾರಂಜಿ ಆಂಜನೇಯ ವಿಗ್ರಹ ೧೨ ಅಡಿ ಇದ್ದು ಗಣೇಶ ವಿಗ್ರಹ ೧೩ ಅಡಿ ಇದೆ.

ಡಾ. ಎನ್.ಆರ್. ರಾವ್ ಅವರು ಈ ಬಂಡೆ ಪ್ರದೇಶವನ್ನು ಚರಿತ್ರಾರ್ಹ ಪೂರ್ವ ಕಾಲದ ನೆಲೆ ಎಂದು ಅಭಿಪ್ರಾಯಪಟ್ಟಿರುವರು. ಸಾಂಸ್ಕೃತಿಕವಾಗಿ ಕೆಂಪೇಗೌಡರ ಕಾಲದಲ್ಲಿ ಹಬ್ಬ, ಹರಿದಿನ ಮತ್ತು ಜಾತ್ರೆಯ ಸಂಧರ್ಭಗಳಲ್ಲಿ ಇಲ್ಲಿನ ಬಂಡೆಯ ಮೇಲಿನ ಕುಳಿಗಳು ಯಾವ ಪಾತ್ರ ವಹಿಸಿದ್ದವೆಂಬುದನ್ನು ಅಧಿಕ ಅಧ್ಯಯನದಿಂದ ಅರಿಯಲು ಅವಕಾಶವಿದೆ.

ಇವಿಷ್ಟೂ ದೊಡ್ಡ ಬಸವಣ್ಣನ ದೇವಾಲಯವನ್ನು ಕುರಿತ ಇತಿಹಾಸ ಮತ್ತು ಚರಿತ್ರೆ ಕಟ್ಟಿಕೊಡುವ ಚಾರಿತ್ರಿಕ ದಾಖಲೆಗಳಾದರೆ, ಜನಮಾನಸದಲ್ಲಿ ಈ ದೊಡ್ಡ ಬಸವಣ್ಣ ನಿಂತಿರುವ, ಗಳಿಸಿರುವ ಸ್ಥಾನಮಾನ ಸ್ಥಿತ್ಯಂತರಗಳಿಗೆ ಒಳಪಟ್ಟು ಎಲ್ಲಾ ಬದಲಾವಣೆಗಳ ನಡುವೆಯೂ ಒಂದು ಜನಪದ ಕೃಷಿ ಮೂಲದ ದೈವವಾಗಿಯೇ ಆಗಿರುವುದು ಗಮನಾರ್ಹ ಸಂಗತಿ.

೬.೩. ಕಡಲೆ ಕಾಯಿ ಪರಿಷೆಯ ಒಳನೋಟಗಳು :

ಬೆಂಗಳೂರು ಬಸವನಗುಡಿ ಪ್ರದೇಶದ ದೊಡ್ಡ ಬಸವಣ್ಣನ ಜಾತ್ರೆಯು ಕಡಲೆಕಾಯಿ ಪರಿಷೆಯೆಂದೇ ಪ್ರಸಿದ್ಧಿಯಾಗಿದೆ. ಇದು ಮೂಲತಃ ಕೃಷಿಕರ ಪೂಜೆ. ಇಲ್ಲಿರುವ ದೊಡ್ಡ ಬಸವಣ್ಣನ ವಿಗ್ರಹ ಮೈಸೂರು ಚಾಮುಂಡಿ ಬೆಟ್ಟದ ದೊಡ್ಡ ಬಸವಣ್ಣನಿಗಿಂತ ಭಿನ್ನವಾಗಿದೆ. ಹದಿನೈದು ಅಡಿ ಎತ್ತರ, ಇಪ್ಪತ್ತು ಅಡಿ ಉದ್ದದ ಏಕಶಿಲೆಯ ಬೃಹತ್ ವಿಗ್ರಹ, ದ್ರಾವಿಡ ಶೈಲಿಯಲ್ಲಿ ಕೆತ್ತನೆಯಾಗಿದೆ. ಈ ಬಸವಣ್ಣ ಪ್ರಾರಂಭದಲ್ಲಿ ಬಯಲು ಬಸವಣ್ಣನಾಗಿತ್ತು. ಧರ್ಮಪ್ರಭು ಕೆಂಪೇಗೌಡ ಬಸವಣ್ಣನಿಗೆ ದೇವಾಲಯವನ್ನೂ ಮುಂಭಾಗದಲ್ಲಿ ನಂದಿ ಕಂಬವನ್ನೂ ನಿರ್ಮಿಸಿದ. ನಂತರ ಇದು ಕಾವಲು ಬಸವಣ್ಣನಾಯಿತು. ದೇವಾಲಯದ ವಾಸ್ತುಶಿಲ್ಪ ವಿಜಯನಗರದ ವಾಸ್ತುಶಿಲ್ಪದಂತಿದೆ. ನಂದಿ

ಕಂಬದ ಮೇಲೆ ಕೆಂಪೇಗೌಡನ ವಿಗ್ರಹವೂ ಇದೆ. ಬಸವಣ್ಣನ ದೇವಾಲಯದ ಹತ್ತಿರ ಕಾರಂಜಿ ಆಂಜನೇಯ, ದೊಡ್ಡ ಗಣಪತಿ ದೇವಾಲಯಗಳಿವೆ. ಸುಮಾರು ಐದುನೂರು ವರ್ಷದಿಂದ ಇಲ್ಲಿ ಪೂಜೆ ನಡೆಯುತ್ತಿದೆ. ಹಿಂದಿನಿಂದಲೂ ಇದು ಯಾತ್ರಾ ಸ್ಥಳವಾಗಿದೆ. ಸುತ್ತ ಮುತ್ತ ಜನಸೇರಲು ವಿಶಾಲವಾದ ಬಯಲಿತ್ತು. ಈ ಪ್ರದೇಶವನ್ನು ಸುಂಕೇನಹಳ್ಳಿ ಎಂದೂ ಕರೆಯುತ್ತಿದ್ದರು, ಅದಕ್ಕೆ ಶಾಸನಾಧಾರವಿದೆ ನೆಲದಾಹಿಗಳಿಂದ ಧಾರ್ಮಿಕ ಸ್ಥಳ ಸುಂಕುಚಿತಗೊಂಂಡಿದೆ.

ದೇವಾಲಯದಲ್ಲಿ ನಿತ್ಯಪೂಜೆ ಉಂಟು, ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆ, ಪ್ರತೀ ಕೊನೆಯ ಕಾರ್ತಿಕ ಸೋಮವಾರ ಕಡಲೆಕಾಯಿ ಪರಿಷೆ ನಡೆಯುತ್ತದೆ. ಕಡಲೆಕಾಯಿ ಬೆಳೆದ ರೈತರು ಮಂಡಿಗೆ ಹೋಗದೇ ತಾವೇ ನೇರವಾಗಿ ತಮಗಿಷ್ಟ ಬಂದ ಬೆಲೆಗೆ ಕಡಲೆಕಾಯಿ ಮಾರುವ ಅವಕಾಶ. (ಸ್ವಾರಸ್ಯವಾದ ಸಂಗತಿಯೆಂದರೆ ಕಡಲೆಕಾಯಿಯನ್ನು ಭಾರತಕ್ಕೆ ಪೋರ್ಚುಗೀಸರು ೧೬ನೇ ಶತಮಾನದಲ್ಲಿ ತಂದರು) ರೈತರು ಬೆಳೆದ ಕಡಲೆಕಾಯಿಗೆ ಮುಕ್ತ ಮಾರುಕಟ್ಟೆ ಒದಗಿಸುವುದೇ ಕಡಲೆಕಾಯಿ ಪರಿಷೆಯ ಮೂಲೋದ್ದೇಶವಾಗಿತ್ತು. ಆ ನೆಪದಲ್ಲಿ ಕೃಷಿಗೆ ನೆರವಾಗುವ ಬಸವನಿಗೆ ಪೂಜೆಯಾಗುತ್ತದೆ. ಬಸವ ಶಿವನ ವಾಹನವೆಂಬ ಕಲ್ಪನೆಯೂ ಸೇರಿದೆ. ಬಸವಣ್ಣ ಧಾರ್ಮಿಕ ಸಂಕೇತ. ಈ ಬಸವಣ್ಣನ ಬಗೆಗೆ ಸ್ಥಳೀಯ ಐತಿಹ್ಯಗಳೂ ಹುಟ್ಟಿಕೊಂಡಿವೆ.

ಐತಿಹ್ಯ ೧ : ಕ್ಷೇತ್ರ ಕಾರ್ಯ ನಡೆಸುವಾಗ ತಿಳಿದುಬಂದ ಮಾಹಿತಿಯೆಂದರೆ ಮೊದಲು ಈ ಪ್ರದೇಶದಲ್ಲಿ ಪೂರ್ತಿ ಕಡಲೆಕಾಯಿ ಹೊಲಗಳು ಯಥೇಚ್ಚವಾಗಿ ಸಮೃದ್ಧ ಕಡಲೆಕಾಯಿ ಫಸಲನ್ನು ನೀಡುತ್ತಿದ್ದವು. ಆಗ ಅಲ್ಲಿನ ರೈತರು ಬೆಳೆ ಕೊಯಿಲಿಗೆ ಮುಂಚೆ ರಾತ್ರಿ ಓಡಾಡುತ್ತಿದ್ದ ಬಸವ ಬಂದ ಫಸಲನ್ನು ತಾನೇ ಮುಕ್ಕಾಲುಭಾಗ ತಿಂದು ಮುಗಿಸುತ್ತಿತ್ತಂತೆ, ಆಗ ಅದನ್ನು ತಡೆಯಲು ರೈತರೆಲ್ಲ ಸೇರಿ ತಾವೇ ಬಸವನಿಗೆ ಬೆಳೆದ ಫಸಲಿನ ೧/೩ ಭಾಗವನ್ನು ಒಂದು ನಿರ್ದಿಷ್ಟ ದಿನ ಕೊಡುವುದಾಗಿ ಒಪ್ಪಂದ ಮಾಡಿಕೊಂಡ ಮೇಲೆ ಬಸವನ ಭರಾಟೆ ಕಡಿಮೆಯಾಯಿತಂತೆ. ಹೀಗಾಗಿ ಒಪ್ಪಂದವಾದ ಆ ನಿರ್ದಿಷ್ಟ ದಿನ ಕಾರ್ತಿಕ ಮಾಸದ ಕೊನೆಯ ಸೋಮವಾರ ಇಂದಿಗೂ ಬಸವನಿಗೆ ಕಡಲೆಕಾಯಿ ಪರಿಷೆ ನಡೆಸಿ ನಂತರ ಮಾರುಕಟ್ಟೆಗೆ ಮಾರಾಟ ಮಾಡುವುದು ಚಾಲ್ತಿಗೆ ಬಂತು. ವಕ್ತೃ : ಗೌರಮ್ಮ, ವಯಸ್ಸು : ೬೨ ವರ್ಷ, ಸ್ಥಳ: ಕನಕಪುರ

ಐತಿಹ್ಯ ೨ : ಬಸವನ ದಿಬ್ಬದ ಮೇಲೆ ನಿಜವಾದ ಬಸವಣ್ಣ ಕಲ್ಲಾಗುವ ಮುಂಚೆ ಓಡಾಡುತ್ತಿದ್ದನೆಂದು ಇವರ ಪೂರ್ವಿಕರು ಹೇಳುತ್ತಿದ್ದರು. ಕಡಲೆಕಾಯಿ ಹೊಲವನ್ನು ಬೇರೆಯವರು ದೋಚದಂತೆ ಇವನು ಕಾವಲು ಕಾಯುತ್ತಿದ್ದನೆಂದೂ, ಎಲ್ಲವನ್ನೂ ಕಾಯುತ್ತಾ, ಅದರ ಒಂದು ಭಾಗವನ್ನು ಅವನ ಪ್ರೀತ್ಯರ್ಥವಾಗಿ ರೈತರು ತಾವೇ ಸ್ವತಃ ಬಸವನಿಗೆ ನೀಡುವುದನ್ನು ರೂಢಿ ಮಾಡಿದರು. ನಂತರ ಇದೇ ಪದ್ದತಿ ಮುಂದುವರಿದು ಕಲ್ಲಾದ ಬಸವನಿಗೆ ಪ್ರತೀ ಕಾರ್ತಿಕ ಸೋಮವಾರ ತಮ್ಮ ಬೆಳೆಯನ್ನು ಕಾದ ಬಸವಣ್ಣನಿಗೆ ಕಡಲೆಕಾಯಿಯನ್ನು ಪರಿಷೆಯ ಮೂಲಕ ಅರ್ಪಿಸುತ್ತಾರೆ.

ಮೂಲತಃ ಕತೆ ಯಾವುದೇ ಇರಲಿ, ಎರಡೂ ಕತೆಯ ಹಿಂದೆ ಕೃಷಿಕರ ಸ್ನೇಹಿಯಾದ ಬಸವಣ್ಣನನ್ನು ಕುರಿತ ಪ್ರೀತಿ ಮತ್ತು ಭಕ್ತಿ ಎರಡೂ ವ್ಯಕ್ತವಾಗಿರುವುದು ತಿಳಿದುಬರುತ್ತದೆ. ನಂತರ ರೈತರು ಮತ್ತು ಭಕ್ತರ ಒಳಿತಿಗಾಗಿ ಕೆಂಪೇಗೌಡ ಈ ಬಸವಣ್ಣನಿಗೆ ದೇವಾಲಯವನ್ನೂ ನಿರ್ಮಾಣ ಮಾಡಿದನಂತೆ. : ವಕ್ತೃ- ನಾಗರಾಜ, ವಯಸ್ಸು -೬೨, ಸ್ಥಳ: ಮಾಲೂರು

ಐತಿಹ್ಯ ೩ : ದಿನೇ ದಿನೇ ಕಡಲೇಕಾಯಿ ತಿಂದು ಎತ್ತರಕ್ಕೆ ಬೆಳೆಯುತ್ತಿದ್ದ ಬಸವಣ್ಣನನ್ನು ನಿಯಂತ್ರಿಸಲು ಬಹಳ ಕಷ್ಟವಾಗಿ ಅಂಕೆಗೇ ಸಿಗದೆ ದೊಡ್ಡದಾಗಿ ಬೆಳೆದದ್ದರಿಂದ ಇವನಿಗೆ ದೊಡ್ಡ ಬಸವಣ್ಣ ಎಂಬ ಹೆಸರು ಬಂತು. ಇವನ ಬೆಳವಣಿಗೆಯನ್ನು ನಿಯಂತ್ರಿಸಲು ಅವನ ಬೆನ್ನಿನ ಮೇಲೆ ಎರಡು ಗೂಟವನ್ನು ಹೊಡೆದ ಮೇಲೆ ಬೆಳೆಯುವುದು ನಿಂತಿತು. ಹೀಗಾಗಿ ಅವನಿಗೆ ದೇವಾಲಯ ನಿರ್ಮಿಸಲಾಗಿದೆ. ಬಂಡೆಯ ಬಯಲೇ ದೇವಾಲಯವಾಗಿತ್ತಂತೆ. ನಂತರ ೧ ನೇ ಕೆಂಪೇಗೌಡ ಇವನಿಗೆ ಇಲ್ಲಿ ದೇವಾಲಯವನ್ನು ಕಟ್ಟಿಸಿದನು ಎಂಬುದಕ್ಕೆ ಇರುವ ಶಾಸನೋಕ್ತ ದಾಖಲೆಗಳನ್ನು ಈಗಾಗಲೇ ಸೂಚಿಸಲಾಗಿದೆ. ಹಾಗೂ ಕೆಂಪೇಗೌಡನ ಕಾಲದಲ್ಲಿಯೂ ಇಲ್ಲಿ ಜಾತ್ರೆ ಮತ್ತು ಪರಿಷೆಗಳು ನಡೆದಿದ್ದಕ್ಕೆ ಕುರುಹುಗಳೂ ಇವೆ.

ವಕ್ತೃ- ದೇವಾಲಯದ ಅರ್ಚಕರು.

ಹೀಗೆ ಬೆಂಗಳೂರಿನ ಆಚರಣೆಗಳಲ್ಲಿ ಪ್ರಮುಖವಾದ ಕಡಲೆಕಾಯಿ ಪರಿಷೆಯು ಸ್ಥಳೀಯ ಐತಿಹ್ಯವೊಂದರಿಂದ ರೂಪುಗೊಂಡಿದೆ. ಸಮಾಜ ಶಾಸ್ತ್ರಜ್ಞ, ಜಾನಪದ ವಿದ್ವಾಂಸ ಸಿ.ಎಫ್.ಫಾಟರ್ ಹೇಳುವಂತೆ "ಸಮಾಜದ ಒಳಿತಿಗಾಗಿ, ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಜನರು ಸಂಭ್ರಮ, ಉತ್ಸಾಹಗಳಿಂದ ನಡೆಸುವ ಸಾಂಪ್ರದಾಯಿಕ ಆಚರಣೆಗಳೇ 'ಹಬ್ಬ ಮತ್ತು ಆಚರಣೆಗಳು' ಎಂದು ಕರೆಯುತ್ತಾರೆ.[೧೩]

ಬಸವನ ಗುಡಿಯ ದೊಡ್ಡ ಬಸವ ಸ್ಥಳೀಯ ಜನರ ಬದುಕನ್ನು ಮತ್ತು ಅವರ ವಿಶೇಷ ಪ್ರೀತಿ ಭಕ್ತಿಯನ್ನು ಮೈಗೂಡಿಸಿಕೊಂಡು ಪರಿಷೆಯ ರೂಪದಲ್ಲಿ ಅನನ್ಯತೆಯ ಸಂಕೇತವಾಗಿ ಉಳಿದು ಬಂದಿದ್ದಾನೆ. ಹೀಗಾಗಿ ಇವನನ್ನು ಕೇವಲ ಬಸವನಾಗಿಸದೆ, ಒಂದು ಸಮುದಾಯದ ಆತ್ಮವೆಂಬಂತೆ ಪೋಷಿಸಿಕೊಂಡು ಬಂದಿದ್ದಾರೆ. ಯಾವುದೇ ಜಾತ್ರೆ / ಪರಿಷೆಯಾಗಲೀ ದಿಢೀರನೆ ಆರಂಭವಾಗುವುದಿಲ್ಲ ಮತ್ತು ಹಾಗೇ ಕೊನೆಗೊಳ್ಳುವುದಿಲ್ಲ. ಅವುಗಳಿಗೆ ಅದರದೇ ಆದಂತಹ ವಿಧಿ ವಿಧಾನಗಳು, ಆಚರಣೆಗಳು ಇವೆ. ಹಾಗೆಯೇ ಈ ದೊಡ್ಡ ಬಸವಣ್ಣನಿಗೂ ಬೇರೆ ಯಾವ ಶಿಷ್ಟ ದೈವಕ್ಕೂ ಇರದ ವಿಶೇಷ ಆಚರಣೆಯೊಂದು ಚಾಲ್ತಿಯಲ್ಲಿದೆ.

ಆಚರಣಾ ವಿಧಾನ :

ಕಡಲೆಕಾಯಿ ಅಭಿಷೇಕ : ಬೇರೆ ಎಲ್ಲ ದೇವರಿಗೂ ಅಭಿಷೇಕ ಪೂಜೆ ನಡೆಯುವಂತೆ ಬಸವನಿಗೂ ಸಹಾ ಪೂಜೆ ನಡೆಯುವುದು ಇಲ್ಲಿ ವಾಡಿಕೆ. ಆದರೆ ಅದಕ್ಕೆ ಮೊದಲು ರೈತರು

ಬೆಳೆದ ಕಡಲೆಕಾಯಿಗಳಿಂದಲೇ ಬೆಳಗಿನ ಝಾವ ಕಡಲೆಕಾಯಿ ಅಭಿಷೇಕ ಮಾಡುತ್ತಾರೆ. ಅದನ್ನು ನಂತರ ಪ್ರಸಾದ ರೂಪದಲ್ಲಿ ಜನರಿಗೆ ಹಂಚುತ್ತಾರೆ. ಅಷ್ಟು ದೊಡ್ಡ ಗಾತ್ರದ ಬಸವನಿಗೆ ಕಡಲೆ ಕಾಯಿಯ ಅಭಿಷೇಕವನ್ನು ನೋಡಿ ಕಣ್ಮನ ತಣಿಸಿಕೊಳ್ಳಲು ಅಕ್ಷರಶಃ ಪರಿಷೆಯೇ ನೆರೆದಿರುತ್ತದೆ. ವಿಶೇಷವೆಂದರೆ ರೈತರ ಜೊತೆ ಸ್ಥಳೀಯ ಹೆಂಗೆಳೆಯರೂ ಭಕ್ತಿ ಭಾವದಿಂದ ಬಸವನ ಕಡಲೆಕಾಯಿ ಅಭಿಷೇಕ ಪ್ರಸಾದಕ್ಕೆ ಮುಗಿ ಬೀಳುತ್ತಾರೆ. ಹೆಚ್ಚು ಕಡಿಮೆ ೪೫ ನಿಮಿಷದ ವರೆಗೂ ಕಡಲೆಕಾಯಿ ಮೂಟೆಗಳಿಂದ ಕಡಲೆಕಾಯಿ ತೆಗೆದು ಪ್ರತಿಮೆ ಮೇಲೆ ಸುರಿಯುತ್ತಾರೆ. ನಂತರ ಶಿಷ್ಟ ದೈವದ ಸಂಪ್ರದಾಯದಂತೆ ಇತರ ಹಾಲು, ತುಪ್ಪ, ಮೊಸರು, ಎಳನೀರು, ಅರಿಸಿನದ ನೀರಿನ ಪಂಚಾಮೃತ ಅಭಿಷೇಕ ನೆರವೇರುತ್ತದೆ. ನಂತರ ಹೂಗಳಿಂದ ಅಲಂಕರಿಸಿ ಪೂಜಿಸುವುದು ವಾಡಿಕೆ. ಬೆಳಿಗ್ಗೆ ಅಭಿಷೇಕದ ನಂತರ ಮಂಗಳಾರತಿಯಾಗುತ್ತದೆ.

ತುಲಾಭಾರ : ಈ ಬಸವಣ್ಣನ ಕಡಲೆ ಕಾಯಿ ಪರಿಷೆಯ ಮತ್ತೊಂದು ವಿಶೇಷವೆಂದರೆ ಕಡಲೆಕಾಯಿ ತುಲಾಭಾರ. ಬಸವಣ್ಣನ ಭಾರವಾದ ಪ್ರತಿಮೆಯನ್ನು ತಕ್ಕಡಿಯಲ್ಲಿರಿಸಿ, ಮತ್ತೊಂದು ಕಡೆ ಅಷ್ಟೇ ತೂಕದಷ್ಟು ಕಡಲೆ ಕಾಯಿಯನ್ನು ತೂಗುತ್ತಾರೆ. ನಂತರ ಅದನ್ನು ದೇವರಿಗೆ ಅರ್ಪಿಸಿ ಪ್ರಸಾದದ ರೂಪದಲ್ಲಿ ಜನರಿಗೆ ಹಂಚುತ್ತಾರೆ. ಹಿಂದೆ ಕೆಂಪೇಗೌಡನ ಕಾಲದಲ್ಲಿ ಬಸವನ ತೂಕದಷ್ಟೇ ಪ್ರತಿಮೆಯನ್ನು ತುಲಾಭಾರ ಮಾಡಿಸುತ್ತಿದ್ದರಂತೆ. ಆದರೆ ಈಗ ಸಾಂಕೇತಿಕವಾಗಿ ಕಂಚಿನನ ಪ್ರತಿಮೆಯನ್ನು ಪುಷ್ಪಾಲಂಕೃತ ತಕ್ಕಡಿಯಲ್ಲಿ ದೇವಾಲಯದ ಮುಂಭಾಗದಲ್ಲಿರಿಸಿ, ಸ್ಥಳೀಯ ಮುಖಂಡರಿಂದ ತುಲಾಭಾರ ಕ್ರಿಯೆಯನ್ನು ಸಾಂಕೇತಿಕವಾಗಿ ನಿರ್ವಹಿಸಲಾಗುತ್ತದೆ. ಪರಿಷೆಯೊಂದು ಕೇವಲ ಧಾರ್ಮಿಕ ಆಚರಣೆಯಾಗಿ ಉಳಿಯದೆ ರಾಜಕೀಯ ಆಯಾಮವನ್ನೂ ಪಡೆದುಕೊಳ್ಳುತ್ತಿದೆ.

ಪರಿಷೆಯ ಮುನ್ನಾದಿನವೇ ಸುತ್ತಲಿನ ರೈತರು ಕೆಲವರು ತಾವೇ ಬೆಳೆದ ಅಥವಾ ಮಂಡಿಯಿಂದ ಕೊಂಡುತಂದ ಕಡಲೆಕಾಯಿ ಮೂಟೆಯನ್ನು ರಸ್ತೆಯ ಎರಡೂ ಇಕ್ಕೆಲದಲ್ಲಿ ಅಂಗಡಿ ಸ್ಥಾಪಿಸಿ ಮಾರುತ್ತಾರೆ. ಕನಕಪುರ, ಆನೆಕಲ್, ದೊಡ್ಡಬಳ್ಳಾಪುರ, ಹೀಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಡಲೆಕಾಯಿಗಳಷ್ಟೇ ಅಲ್ಲದೆ ತಮಿಳುನಾಡಿನ ಧರ್ಮಪುರಿ ಹಾಗೂ ಸೇಲಂಗಳಿಂದಲೂ ಕಡಲೆಕಾಯಿ ಬೆಳೆಗಾರರು ಬಂದು ವ್ಯಾಪಾರವನ್ನು ಮಾಡುತ್ತಾರೆ. ಸ್ಥಳೀಯ ವ್ಯಾಪಾರಿಗಳಲ್ಲಿ ಕೆಲವರು ೩ ತಲೆಮಾರುಗಳಿಂದಲೂ ಇಲ್ಲಿ ವ್ಯಾಪಾರ ಮಾಡುತ್ತಿರುವುದು ವೈಶಿಷ್ಟ್ಯ. ಅವರೇ ಹೇಳುವ ಪ್ರಕಾರ ಮುಂಚೆ ಬಸವನ ಗುಡಿಯ ಮುಂದೆ ಕಡಲೆ ಕಾಯಿಯ ಜೊತೆ, ಹೊಸ ಗೆಣಸು, ಕಬ್ಬನ್ನೂ ನೈವೇದ್ಯ ಮಾಡಿ ಅಲ್ಲೇ ಒಲೆ ಹೂಡಿ ಸಿಹಿ ಪೊಂಗಲ್ಲನ್ನು ತಯಾರಿಸಿ ಮೊದಲು ದೇವರಿಗೆ ಅರ್ಪಿಸಿ ತಾವೂ ಆಹಾರ/ಪ್ರಸಾದದ ರೂಪದಲ್ಲಿ ಸ್ವೀಕರಿಸುತ್ತಿದ್ದರು. ಮುಂದೆ ದೇವಾಲಯವನ್ನು ಸರ್ಕಾರದ ಅಧೀನಕ್ಕೆ ಒಪ್ಪಿಸಿದ ಮೇಲೆ ಈ ಪದ್ಧತಿ ಮರೆಯಾಗಿದೆ. ೧೮೦೦ಕ್ಕೆ ಭಾರತಕ್ಕೆ ಬಂದ ಹಲವಾರು ವಿದೇಶೀಯರೂ ಸಹಾ ಈ ಕಡಲೆಕಾಯಿ ಪರಿಷೆಯ ಪ್ರಸ್ತಾಪವನ್ನು

ಮಾಡಿದ್ದಾರೆ. ಮುಂಚೆ ಬೆಳೆಯನ್ನು ಬೆಳೆದ ರೈತರು ಮಾತ್ರ ನೇರವಾಗಿ ಪರಿಷೆಯಲ್ಲಿ ಭಾಗವಹಿಸುತ್ತಿದ್ದರು. (ಇದೇ ರೀತಿ ಇಂದಿಗೂ ದಕ್ಷಿಣ ಅಮೆರಿಕಾದಲ್ಲಿ Peanut Fair ನಡೆದು ಒಂದು ನಿರ್ದಿಷ್ಟ ದಿನ ತಾವು ಬೆಳೆದ ಕಡಲೆಕಾಯಿ ಉತ್ಸವವನ್ನು ರಾಷ್ಟ್ರೀಯ ಕಡಲೆಕಾಯಿ ಉತ್ಸವವಾಗಿ ನಡೆಸುವುದು ವಾಡಿಕೆ) ಆದರೆ ಈಗ ಬೆಳೆಯನ್ನು ಬೆಳೆಯದ ಮಧ್ಯವರ್ತಿಗಳ ಮೂಲಕ ಕಡಲೆಕಾಯಿಯನ್ನು ಕೊಂಡ ವ್ಯಾಪಾರಿಗಳೂ ಪರಿಷೆಯಲ್ಲಿ ಭಾಗವಹಿಸುವುದೊಂದು ಹೆಗ್ಗಳಿಕೆ, ವಿಭಿನ್ನ ಸಮುದಾಯದ, ವಿಭಿನ್ನ ಭಾಷೆಯ, ಸಂಸ್ಕೃತಿಯ ಜನ ಒಂದು ಏಕೋದ್ದೇಶಕ್ಕಾಗಿ ಇಲ್ಲಿ ಸೇರುವುದು ಅದೂ ಪರಂಪರಾಗತವಾಗಿ ಶತಶತಮಾನಗಳಿಂದ ಆಚರಣೆಯ ರೂಪದಲ್ಲಿ ಆಚರಿಸುತ್ತಿರುವುದು ಮೌಖಿಕ ವಾಙ್ಞಯದ ಜೀವನ್ಮುಖೀ ಧೋರಣೆಗೆ ಸಾಕ್ಷಿಯಾಗಿದೆ.

ಆಧುನೀಕರಣ ಸ್ವರೂಪ :

ಇಂದು ಬೆಂಗಳೂರು ಕಡಲೆಕಾಯಿ ಪರಿಷೆಯಲ್ಲಿ ಕೇವಲ ಕಡಲೆಕಾಯಿಯಷ್ಟೇ ಮಾರಾಟವಾಗದೇ, ಅಂಗಡಿ ಮುಗ್ಗಟ್ಟುಗಳು ಇದ್ದು, ಎಲ್ಲ ಬಗೆಯ ವಸ್ತುಗಳೂ ಮಾರಾಟವಾಗುತ್ತಿದೆ, ಜೊತೆಗೆ ಕವಡೆ ಶಾಸ್ತ್ರ, ಗಿಳಿ ಶಾಸ್ತ್ರ ದಂತಹ ಅಲೆಮಾರಿ ವೃತ್ತಿಯವರೂ ಇಲ್ಲಿ ನೆರೆಯುತ್ತಾರೆ. ಹೆಚ್ಚಾಗಿ ಇಂದು ಯುವ ಜನರನ್ನು ಇದು ಆಕರ್ಷಿಸುತ್ತಿದೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಗೀತ, ಭರತನಾಟ್ಯ ನಡೆಯುತ್ತದೆ. ಇಂದು ಪರಿಷೆಯಲ್ಲಿ ವಿವಿಧ ಮುಖವಾಡಗಳು, ಜನಪದ ಕರಕುಶಲ ಸಾಮಗ್ರಿಗಳು, ಮಕ್ಕಳ ದೇಸೀ ಆಟಿಕೆಗಳು ಇವುಗಳ ಮಾರಾಟವೇ ಹೆಚ್ಚು. ಜೊತೆಗೆ ಸ್ಥಳೀಯರಿಂದ ತಯಾರಾದ ವಿವಧ ಮನೆ ಬಳಕೆಯ ವಸ್ತುಗಳೂ ಸಹಾ ಮಾರಾಟವಾಗುತ್ತವೆ. ತೀರಾ ಇತ್ತೀಚಿನ ಅಲ್ಲಿನ ಸಾಂಸ್ಕೃತಿಕ ಬೆಳವಣಿಗೆಯೆಂದರೆ ಸ್ಥಳದಲ್ಲಿಯೇ ಚಿತ್ರ ಬಿಡಿಸುತ್ತಿದ್ದ, ಕೇಶವಿನ್ಯಾಸ ಮಾಡಿಸುತ್ತಿದ್ದ ಪರಿ. 'ಕಾಲಕ್ಕೆ ತಕ್ಕ ಕೋಲ' ಎಂಬ ಗಾದೆಯಂತೆ ವಿಶ್ವವಿದ್ಯಾಲಯದ ಚಿತ್ರಕಲಾ ವಿದ್ಯಾರ್ಥಿಗಳು ಸ್ಥಳದಲ್ಲಿಯೇ ಪರಿಷೆಯ ವಿದ್ಯಮಾನಗಳ ನೇರ ಪ್ರಾತ್ಯಕ್ಷಿಕ ರೇಖಾ ಚಿತ್ರಗಳನ್ನು ಬಿಡಿಸುತ್ತಿದ್ದ ವಿಧಾನ. ಇದರಿಂದ ಆಗುವ ಬಹುಮುಖೀ ಪ್ರಯೋಜನಗಳೆಂದರೆ, ಇಂದಿನ ಯುವ ಪೀಳಿಗೆಗೆ ಪರಿಷೆಯ ವಿದ್ಯಮಾನನಗಳು ತಲುಪಿ, ಅದು ಮುಂದಿನ ಪೀಳಿಗೆಗೆ ರವಾನೆಯಾಗುವುದು. ಎರಡು ಜಾನಪದ ಮೌಖಿಕ ಆಚರಣೆಯ ಸ್ವರೂಪವೊಂದು ಚಿತ್ರದ ರೂಪದಲ್ಲಿ ದಾಖಲಾಗುವುದು. ಇದನ್ನೇ ಲಾರಿ ಹಾಂಕೋ Conservation & preservation ಎಂದು ಕರೆದದ್ದು. ಜೊತೆಗೆ ಸಮಕಾಲೀನ ನಗರೀಕರಣದ ಸೌಂದರ್ಯ ಮೀಮಾಂಸೆಯ ಜೊತೆ ಜಾನಪದದ ತಳುಕು. ಕೇಶ ವಿನ್ಯಾಸಕಾರನೊಬ್ಬ ಸ್ಥಳದಲ್ಲಿಯೇ ಹೆಣ್ಣು ಮಕ್ಕಳಿಗೆ ವಿವಿಧ ಕೇಶ ವಿನ್ಯಾಸಗಳನ್ನು ಮಾಡುತ್ತಿದ್ದುದು ಆಕರ್ಷಣೆಯಾಗಿತ್ತು. ಸಾಂಸ್ಕೃತಿಕ ಅನನ್ಯತೆಯೊಂದು ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಹೇಗೆ ತನ್ನದೇ ಆದ ಹಲವಾರು ಉಪ ಸಂಸ್ಕೃತಿಗಳನ್ನು ಕಟ್ಟಿಕೊಡುತ್ತಿದೆ ಎನ್ನುವುದಕ್ಕೆ ಇದು ನಿದರ್ಶನ. ಒಂದು ಅಧ್ಯಯನದ ವಿಷಯವಾಗಿ ಜನಪದ ವಿಜ್ಞಾನ(Folkloristic) ಮುಂದೆಯೂ ತನ್ನ ಮಹತ್ವವನ್ನು ಉಳಿಸಿಕೊಳ್ಳಬೇಕಾದರೆ ಬದಲಾದ ಕಾಲಸ್ಥಿತಿಗೆ ಅನುಗುಣವಾಗಿ ತನ್ನನ್ನು ಹೇಗೆ

ಒಡ್ಡಿಕೊಳ್ಳುತ್ತದೆ ಎಂಬುದು ಈಗಾಗಲೇ ಹಲವಾರು ನಿದರ್ಶನಗಳಲ್ಲಿ ವ್ಯಕ್ತವಾಗಿರುವುದು ಗಮನಾರ್ಹ ಸಂಗತಿ.

ಇನ್ನು ಈ ಪರಿಷೆಯ ಉಳಿದ ಸೂಕ್ಷ್ಮ ಗ್ರಹಿಕೆಗಳು ಹಲವಾರಿವೆ ಅದನ್ನು ಸಂಪ್ರಬಂಧದಲ್ಲಿ ಸೂಚಿಸಲಾಗುವುದು.

೬.೪. ಪರಿಷೆ ಹಾಗೂ ಇತರ ಜಾಗತಿಕ ಆಚರಣೆಗಳ ಸಾಮ್ಯತೆ :

೧. ಬೆಂಗಳೂರಿನ ಕಡಲೆಕಾಯಿ ಪರಿಷೆಯನ್ನು ಹೋಲುವ ಆಚರಣೆಯೊಂದು ಯು.ಎಸ್.ಎ ದ ಅಲಬಾಮಾ ರಾಜ್ಯದ ಧೋತನ್ ಎಂಬ ಊರಿನಲ್ಲಿ ನಡೆಯುತ್ತದೆ. ಅಲ್ಲಿಯೂ ಸಹಾ ಕಡಲೆಕಾಯಿ ಬೆಳೆದ ರೈತರ ಗೌರವಾರ್ಥ ವರ್ಷಕ್ಕೆ ಒಂದು ದಿನ ಕೊಯಿಲಿನ ದಿನ ಚಳಿಗಾಲದಲ್ಲಿ ರಾಷ್ಟ್ರೀಯ ಕಡಲೆಕಾಯಿ ಉತ್ಸವವನ್ನು ನಡೆಸುತ್ತಿದ್ದಾರೆ. ಅಂದು ಇದೇ ರೀತಿ ಪರಿಷೆ ನಡೆದು, ಆ ಉತ್ಸವದಲ್ಲಿ ರೈತರು ಕಡಲೆಕಾಯಿಯನ್ನು ಮಾರುತ್ತಾರೆ ಮತ್ತು ಉತ್ಸವದಲ್ಲಿ ಎಲ್ಲಾ ವಿಧವಾದ ಸ್ಪರ್ಧೆಗಳು ವಿವಿಧ ವಯೋಮಾನದವರಿಗೆ ನಡೆಸುತ್ತಾರೆ. ಕೇಕ್ ಪ್ರದರ್ಶನ, ಚಿತ್ರಕಲೆ, ಸಂಗೀತ, ನೃತ್ಯ ಉತ್ಸವಗಳೂ ನಡೆಯುತ್ತವೆ. ಅಮೆರಿಕಾದ ಬೇರೆ ಬೇರೆ ಕಡೆ ಇದೇ ಮಾದರಿಯ ಜಾತ್ರೆ ನಡೆದರೂ ಇದೇ ಬಹಳ ದೊಡ್ಡ ಉತ್ಸವ. ಹೀಗಾಗಿ ಇದನ್ನು Peanut Capital of the world ಎಂದೂ ಕರೆಯುತ್ತಾರೆ.

ಇಲ್ಲಿ ಗಮನಹರಿಸಬೇಕಾದ ವಿಷಯವೆಂದರೆ ಸಂಸ್ಕೃತಿಯ ಮೇಲ್ಮುಖ ಚಲನೆ ಜಗತ್ತಿನ ಎಲ್ಲ ಖಂಡ, ದೇಶ, ರಾಜ್ಯಗಳಲ್ಲೂ ಸಮಾನವಾಗಿರುತ್ತದೆ. ಅವುಗಳ ವಿನ್ಯಾಸ, ಸ್ವರೂಪಗಳು ಬೇರೆ ಬೇರೆಯಾದರೂ ಚಿಂತನಾ ಕ್ರಮ ಒಂದೇ ತೆರನಾಗಿರುತ್ತದೆ.

೨. ಕೆಲವೊಮ್ಮೆ ಈ ಮಾದರಿಯ ಜನಪದ ಆಚರಣೆ, ಪರಂಪರೆಗಳನ್ನು ಪುನರುಜ್ಜೀವನಗೊಳಿಸಿ, ಅವುಗಳನ್ನು ಸಮಾಜದ ಸಾಮಾಜಿಕ, ಆರ್ಥಿಕ ಹಾಗೂ ಪರಿಸರದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹೇಗೆ ಬಳಸಿಕೊಳ್ಳಲಾಗಿದೆ ಎಂಬುದನ್ನು ಕೆಲವು ನಿದರ್ಶನಗಳೊಂದಿಗೆ ವಿವರಿಸಿದರು.ಇವುಗಳಲ್ಲಿ ಒಂದನ್ನು ಇಲ್ಲಿ ವಿವರಿಸಲಾಗಿದೆ. ಈಶಾನ್ಯದ ಥಾಯ್ಲೆಂಡಿನ ಬುರಿರಾಮ್ ಪ್ರದೇಶದ ಪ್ರಕೂನ್ ಎಂಬ ಹಳ್ಳಿಯಲ್ಲಿ ಪೈ ಎಂಬುವರು ಗ್ರಾಮದ ಮುಖ್ಯಸ್ಥರಾಗಿ ಆಯ್ಕೆಯಾದರು. ಅದಕ್ಕೆ ಮೊದಲು ಇವರು ಹತ್ತು ವರ್ಷಗಳ ಕಾಲ ಅವರು ಬೌದ್ದ ಸನ್ಯಾಸಿಯಾಗಿದ್ದರು, ಇವರು ಆ ಗ್ರಾಮದ ಜಾನಪದದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವುದು ಮಾತ್ರವಲ್ಲದೇ ಸ್ವತಃ ಧಾರ್ಮಿಕ ಆಚರಣೆಗಳಲ್ಲಿ ಪರಿಣಿತರಾಗಿದ್ದರು. ಇವರು ಗ್ರಾಮದ ಅಭಿವೃದ್ದಿಗೆ ಹಣ ಸಂಗ್ರಹಿಸಲು ಆ ಗ್ರಾಮದಲ್ಲಿ ಹಿಂದೆ ರೂಢಿಯಲ್ಲಿದ್ದ ಒಂದು ಧಾರ್ಮಿಕ ಆಚರಣೆಯನ್ನು ಪುನರುಜ್ಜೀವನಗೊಳಿಸಿದರು. ಮೇಫೋಸೊಪ್ ಎಂಬ ದೇವತೆಗೆ ಸಂಬಂಧಿಸಿದ ಪೌರಾಣಿಕ ಕಥೆಯಲ್ಲಿ ಕಾಣಿಕೆಯ ರೂಪದಲ್ಲಿ ಜನರು ಬತ್ತವನ್ನು ತಂದು ರಾಶಿ ಸುರಿಯುವ ಆಚರಣೆಯಿದೆ, ಪೈ ರವರು ಹಣದ ಬದಲು ಅಂದು ರೈತರು ಧಾನ್ಯಗಳನ್ನು ಕಾಣಿಕೆ ರೂಪದಲ್ಲಿ ಸಂಗ್ರಹಿಸುವ ಧಾರ್ಮಿಕ ಆಚರಣೆಯನ್ನು ಪುನಃ ಬಳಕೆಗೆ

ತಂದರು. ರೈತರು ಪ್ರತಿಯೊಂದು ಮನೆಯಿಂದಲೂ ಒಂದೊಂದು ಚೀಲ ಬತ್ತವನ್ನು ಕಾಣಿಕೆಯಾಗಿ ನೀಡಿದರು ಇದರಿಂದ ಮುಂದೆ ಸಂಗ್ರಹವಾದ ಬತ್ತಕ್ಕಾಗಿ ಬತ್ತದ ಬ್ಯಾಂಕುಗಳ ಸ್ಥಾಪನೆಯಾದವು. ಘಾಪ ಎಂಬ ಈ ಧಾರ್ಮಿಕ ಆಚರಣೆಯಿಂದಾಗಿ ರೂಪುಗೊಂಡ ಬತ್ತದ ಬ್ಯಾಂಕುಗಳು ಬೌದ್ಧ ದೇವಾಲಯಗಳಲ್ಲಿ ಸುರಕ್ಷಿತವಾಗಿದ್ದು ಗ್ರಾಮದ ರೈತರು ಬತ್ತ ತಮ್ಮ ಬಳಿ ಇಲ್ಲದಾಗ ಅದನ್ನು ಆಹಾರಕ್ಕಾಗಿ ಹಾಗೂ ಬಿತ್ತನೆಗಾಗಿ ತೆಗೆದುಕೊಂಡು ಹೋಗಲು ಅನುಕೂಲ ಮಾಡಿ ಕೊಡಲಾಯಿತು.[೧೨]

ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡಾಗ ಒಂದು ಅಂಶ ವೇದ್ಯವಾಗುತ್ತದೆ. ಜಾನಪದಕ್ಕೆ ಸಂಬಂಧಿಸಿದಂತೆ ಪಾಶ್ಚಾತ್ಯ ಮತ್ತು ಪೌರಾತ್ಯ ರಾಷ್ಟ್ರಗಳ ಪರಿಸ್ಥಿತಿಗಳು ಭಿನ್ನವಾಗಿವೆ. ಮೂರನೆಯ ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿಯೂ ಭಾರತದ ಜಾನಪದ ಇತರ ದೇಶಗಳಿಗಿಂತ ಭಿನ್ನವಾಗಿದೆ. ಜಾಗತೀಕರಣ ಮತ್ತು ಇತರ ವಿದ್ಯಮಾನಗಳಿಂದ ಸ್ಥಳೀಯ ಸಂಸ್ಕೃತಿಯೊಂದು ನಶಿಸಿಹೋಗುತ್ತಿದೆ ಎಂಬ ಆರೋಪಗಳ ನಡುವೆ ಇಂತಹ ಪರಿಷೆ, ಜಾತ್ರೆಗಳ ತಾತ್ವಿಕ ಅಧ್ಯಯನ ನಡೆದಲ್ಲಿ ಕನ್ನಡ ಜಾನಪದವು ಪುನರುಜ್ಜೀವನಗೊಳ್ಳುವ ಸಾಧ್ಯತೆಯಿದೆ. ನಾವು ನಮ್ಮ ಜಾನಪದ ಅನನ್ಯವಾದುದು, ವಿಶಿಷ್ಟವಾದುದು ಎಂದು ಹೇಳುತ್ತೇವೆ; ಆದರೆ ಹೀಗೆ ಹೇಳಬೇಕಾದರೆ ನಮ್ಮ ಜಾನಪದವನ್ನು ಭಾರತದ ಹಾಗೂ ಜಗತ್ತಿನ ಇತರ ಭಾಷೆಗಳ ಜಾನಪದರೊಂದಿಗೆ ಹೋಲಿಸಬೇಕಾಗುತ್ತದೆ. ಈ ಬಗೆಯ ತೌಲನಿಕ ಅಧ್ಯಯನದಿಂದ ಉಂಟಾಗುವ ಫಲಿತಗಳು ಎರಡು:

೧. ನಮ್ಮ ಜಾನಪದದ ವೈಶಿಷ್ಟ್ಯ ನಮಗೆ ಗೊತ್ತಾಗಲು ಸಾಧ್ಯ.

೨. ಮುಂದಿನ ಪರಂಪರೆಗೆ ಈ ಜನಪದ ಆಚರಣೆಯೊಂದು ಯಾವ ಸ್ಥಿತ್ಯಂತರಗಳನ್ನು ಹಾದು ಬಂದಿದೆ ಎಂಬ ದಾಖಲಾತಿ ನಡೆಯುವುದು.

ಈ ಎಲ್ಲ ಕಾರಣಗಳಿಂದ ಕನ್ನಡ ಜಾನಪದವು ಮಾನವ ವಿಜ್ಞಾನ ಹಾಗೂ ಜಗತ್ತಿನ ಸಾಂಸ್ಕೃತಿಕ ಚರಿತ್ರೆಯ ಜೊತೆಗೆ ಅಂತರ ಶಿಸ್ತೀಯ ಅಧ್ಯಯನಕ್ಕೆ ಒಳಪಡಬೇಕಾದ ತುರ್ತು ಇಂದು ಇದೆ.

೬.೫. ಆಚರಣೆಗಳ ಪ್ರಜ್ಞಾ ಪಾತಳಿಯ ನೆಲೆಯ ಮರುಶೋಧ :

ಯಾವುದೇ ಒಂದು ಕಾಲಘಟ್ಟವನ್ನು ಸಂಪೂರ್ಣವಾಗಿ ಒಂದೇ ತಾತ್ವಿಕತೆಯ ಒಂದೇ ಅಧ್ಯಯನ ವಿಧಾನದ ಕಾಲಘಟ್ಟವೆಂದು ಕರೆಯಲು ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಕಾಲಘಟ್ಟವೂ ಕೇಂದ್ರೀಯ ಪರಿಕಲ್ಪನೆಗಳಿಗೆ ತನ್ನದೇ ಆದ ಅರ್ಥಗಳನ್ನು ಕೊಡುತ್ತಿರುತ್ತದೆ ಮತ್ತು ವಿಶ್ಲೇಷಣೆಗೆ ಹೊಸ ಸಾಧನೆಗಳನ್ನು ರೂಪಿಸುತ್ತದೆ. ಈ ನಿಟ್ಟಿನಲ್ಲಿ ಜಾಗತಿಕವಾಗಿಯೂ ಜಾನಪದ ಅಧ್ಯಯನದ ಉದ್ದೇಶ ಮತ್ತು ವಿಧಾನಗಳು ಬದಲಾಗುತ್ತವೆ. ಜಾನಪದ ಅಧ್ಯಯನದಲ್ಲಿ ಆಗುತ್ತಿರುವ ಒಂದು ಮೂಲಭೂತ ಬದಲಾವಣೆ ಎಂದರೆ ಜಾನಪದ ಉತ್ಪಾದಕರು, ಬಳಕೆದಾರರು ಮತ್ತು ನಿರ್ವಾಹಕರು ಆಗಿರುವ ಜನಪದವನ್ನು ಕುರಿತ ಧೋರಣೆ. ಜನಪದ ವ್ಯಕ್ತಿಗಳಿಂದ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಜಾನಪದವನ್ನು ಸಂಗ್ರಹ ಮಾಡುವುದು ಮತ್ತು ಪ್ರಕಟಿಸುವುದು ಜಾನಪದ ಅಧ್ಯಯನದ ಬಹಳ

ಮುಖ್ಯ ಗುರಿ ಎಂದು ಭಾವಿಸಲಾಗಿತ್ತು. ಈಗ ಈ ರೊಮ್ಯಾಂಟಿಕ್ ಕಲ್ಪನೆಯ ದೃಷ್ಟಿಕೋನ ಬದಲಾಗಿ ಒಂದು ಲೋಕ ದೃಷ್ಟಿ (world view), ಅನನ್ಯತೆ (identity) ಹಾಗೂ ಮಾನವಿಕ ನೆಲೆಗಳಲ್ಲಿ ಜಾನಪದದ ಸ್ವರೂಪವನ್ನು ಶೋಧಿಸಬೇಕಾಗಿದೆ. ಹೀಗಾಗಿ ಈಗ ಒಂದು ನಿರ್ದಿಷ್ಟ ಗುಂಪಿಗೆ ಜಾನಪದ ಉಂಟೇ ಇಲ್ಲವೇ ಎಂದು ಶೋಧಿಸುವ ಬದಲು, ನಾವು ಶೋಧಿಸಬೇಕಾಗಿರುವುದು ಆ ನಿರ್ದಿಷ್ಟ ಗುಂಪಿನ ಜಾನಪದದ ಸ್ವರೂಪ ಯಾವುದು ಎಂಬುದನ್ನು ಪರಂಪರಾಗತವಾಗಿ (genre) ಪ್ರಕಾರಗಳನ್ನು ಅವಲಂಬಿಸಿದ್ದ ಜಾನಪದ ಅಧ್ಯಯನ ಇಂದು ಕ್ರಿಯೆಗಳನ್ನು ಆಧರಿಸಿ ಸಂಸ್ಕೃತಿಯನ್ನು ಶೋಧಿಸಲು ತೊಡಗಿದೆ. ಇದಕಾಗಿ ಕ್ಷೇತ್ರಕಾರ್ಯವು ಇಂದು ಜಾನಪದದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಯಾಕೆಂದರೆ ಇಂದು ಕ್ಷೇತ್ರಕಾರ್ಯ ಮುಖ್ಯವಾಗಿರುವುದು ಜನರ ನಡವಳಿಕೆಗಳನ್ನು, ಉತ್ಪಾದನೆಗಳನ್ನು ಜಾನಪದ ಉತ್ಪನ್ನಗಳು ಹೇಗೆ ಪ್ರಕಟಿಸುತ್ತವೆ ಎಂಬ ಸೂಕ್ಷ್ಮಾವಲೋಕನಕ್ಕಾಗಿ ಇಂತಹ ಸಂಧರ್ಭದಲ್ಲಿ ಜಾನಪದ ವಿದ್ವಾಂಸರು, ಎರಡೂ ಜಗತ್ತುಗಳ ನಡುವೆ ಸಂವಾದವನ್ನು ಏರ್ಪಡಿಸುವ ಗುರುತರವಾದ ಹೊಣೆಯನ್ನು ನಿರ್ವಹಿಸಬೇಕಾಗುತ್ತದೆ. ಒಂದು ವೈಜ್ಞಾನಿಕ ಜಗತ್ತು, ಇನ್ನೊಂದು ಜಾನಪದ ಜಗತ್ತು. ಆಗ ಮಾತ್ರವೇ ಜಾನಪದ ಅಧ್ಯಯವು ಮನುಷ್ಯರನ್ನು ಮತ್ತು ಕ್ರಿಯಾತ್ಮಕ ಸಮುದಾಯಗಳನ್ನು ಅರ್ಥ ಮಾಡಿಕೊಳ್ಳುವ ಒಂದು ಮಾನವಿಕ ವಿಜ್ಞಾನವಾಗಿ ರೂಪುಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಜಾನಪದ ಅಧ್ಯಯನದಲ್ಲಿ ಸಂಶೋಧನೆಗೆ ಒಳಪಡುವ ಯಾವುದೇ ಪಠ್ಯಗಳು ಇಂದು ಹಲವಾರು ಪ್ರಮುಖ ಸವಾಲುಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ಪ್ರಮುಖವಾದುದ್ದು:

೧. ಇನೇ ಜಗತ್ತು ಕಟ್ಟಿಕೊಟ್ಟ ಓರಿಯಂಟಲಿಸಂ ನೆಲೆಯಲ್ಲಿ ನಿಂತು ನಮ್ಮ ಸಂಸ್ಕೃತಿಯ ಪಠ್ಯವನ್ನು ಪರಿಶೀಲಿಸಬೇಕೇ?

೨. ಆಧುನಿಕತೆ ಸೃಷ್ಟಿಸುತ್ತಿರುವ ದಬ್ಬಾಳಿಕೆಯ ಜಾಗತೀಕರಣದ ನಡುವೆ ಪಠ್ಯದ ಬಹು ಸಂವೇದನೆಯ ನೆಲೆಗಳನ್ನು ಶೋಧಿಸಬೇಕೇ?

೩. ಸಾಂಸ್ಕೃತಿಕ ತಲ್ಲಣ ಮತ್ತು ಪಲ್ಲಟಗಳ ರೂಪಾಂತರಗಳ ಅಗ್ನಿಕುಂಡದಲ್ಲಿ(ಮೂಲ ದೇಶೀಯ ಸಂವೇದನೆ) ಹಾದು ಬರುವ ಅಗ್ನಿದಿವ್ಯವನ್ನು ಉಳಿಸಿಕೊಳ್ಳಬೇಕೇ?

ಈ ಮೂರೂ ಸವಾಲುಗಳ ನಡುವೆಯೂ ನಮಗೆ ಕಾಣಸಿಗುವ ಸಮಾಧಾನಕರ ವಿಷಯವೆಂದರೆ ಜನಪದ ಸಂಸ್ಕೃತಿಯ ನಿರಂಕುಶತ್ವ. ಪ್ರಭುತ್ವ ಪ್ರಜ್ಞೆ ಅದಕ್ಕೆ ಇಲ್ಲದಿರುವುದರಿಂದಲೇ ಅನ್ಯ ಸಂಸ್ಕೃತಿಯಿಂದ ಸ್ವೀಕರಿಸಿದ್ದನ್ನು ತನ್ನ ರೂಪಕ್ಕೆ ತಕ್ಕಂತೆ ಹೇಗೆ ಬೇಕಾದರೂ ಅಳವಡಿಸಿಕೊಂಡಿರುತ್ತದೆ. ತನ್ನ ಪರಂಪರೆಯ ಯಾವುದೇ ಅಂಶವನ್ನು ಬೇರೊಂದು ಸಂಸ್ಕೃತಿ ಆಯ್ಕೆ ಮಾಡಿಕೊಂಡಾಗಲೂ ಜನಪದ ಸಂಸ್ಕೃತಿ ಯಾವುದೇ ತಕರಾರು ತೆಗೆಯುವುದಿಲ್ಲ. ಇದನ್ನೇ ಸಂಸ್ಕೃತೀಕರಣದ ಮಾದರಿ ಎಂದು ಕರೆಯುವುದು. ಆದ್ದರಿಂದಲೇ ಜನಪದ ಆಚರಣೆಗಳಲ್ಲಿ ಆರ್ಯ ದ್ರಾವಿಡ ಎರಡೂ ಹೊಂದಾಣಿಕೆಯಾಗಿಬಿಟ್ಟಿರುವುದು. ಅನೇಕ ಬಾರಿ ಆರ್ಯ ಸಂಸ್ಕೃತಿಯ ಅಂಶಗಳನ್ನು ಸ್ವೀಕರಿಸಿದಾಗ

ಅದನ್ನು ಸಂಸ್ಕೃತೀಕರಣ ಎಂದು ಕರೆದುಬಿಡುತ್ತಾರೆ. ಇದು ಮೂಲತಃ ಸಂಸ್ಕೃತಿಯ ನಿರಂಕುಶ ಪ್ರವೃತ್ತಿಯಾದ್ದರಿಂದ ಹೀಗಾಗುತ್ತದೆ. ಇದನ್ನು ಅನುಕರಣೆ ಎಂದು ಭಾವಿಸದೆ ಮೂಲಸಂಸ್ಕೃತಿಗಳ ವಿಕಾಸ ಎಂದು ನಾವು ತಿಳಿಯಬೇಕು. ಯಾಕೆಂದರೆ ಯಾವುದೇ ಸಂಸ್ಕೃತೀಕರಣವೂ ಕೂಡಾ ತನ್ನ ಸಾಂಸ್ಕೃತಿಕ ಪರಿಸರಕ್ಕೆ ತಕ್ಕಂತೆ ಮರುರೂಪಿಸಿಕೊಳ್ಳುವುದೇ ಆಗಿರುತ್ತದೆ. ಹೀಗೆ ಮರು ರೂಪಿಸಿಕೊಳ್ಳುವಾಗಲೇ ಸಂಸ್ಕೃತಿಯ ಪುನರ್‌ಮೌಲ್ಯೀಕರಣ ಹಾಗೂ ಮರುಸೃಷ್ಟಿಯ ವಿಕಾಸಗಳು ಏರ್ಪಟ್ಟು ಸ್ವಂತಿಕೆಯನ್ನು ಕಟ್ಟಿಕೊಳ್ಳಲು ಸಮುದಾಯಗಳು ಕ್ರಿಯಾಶೀಲವಾಗುತ್ತವೆ.[೧೪]

ಹರ್ಸ್ಕೋವಿಟ್ಸ್ ಹೇಳುವಂತೆ ಕೆಲವು ಕಡೆ ಸಾಂಸ್ಕೃತಿಕ ಸಂಗತಿಗಳನ್ನು ಅನ್ಯ ಸಂಸ್ಕೃತಿಯ ಮೇಲೆ ಹೇರಲಾಗುತ್ತದೆ. ಕೆಲವು ಕಡೆ ಸಂಸ್ಕೃತೀಕರಣ ಸಮ್ಮತಿಯದಾಗಿರುತ್ತದೆ. ಇದು ಯಾವುದಕ್ಕೂ ಒಂದು ಹಿನ್ನೆಲೆ ಇರುತ್ತದೆ. ಉದಾಹರಣೆಗೆ ಟ್ರಿನಿಡಾಡ್ ದ್ವೀಪಕ್ಕೆ ವಲಸೆ ಹೋಗಿ ನೆಲೆಸಿದ ಭಾರತದ ಕೂಲಿಕಾರರ ಹಾಗೂ ನೀಗ್ರೋಗಳ ನಡುವಣ ಸಂಬಂಧವನ್ನು ನೋಡಬಹುದು. ಬ್ರಿಟೀಷರ ಕಾಲದಲ್ಲಿ ಭಾರತೀಯ ಕೂಲಿಕಾರರನ್ನು ಟ್ರಿನಿಡಾಡ್‌ನ ತೋಟಗಳಿಗೆ ಕೆಲಸಕ್ಕೆಂದು ಕರೆದೊಯ್ಯಲಾಯಿತು. ಆ ಜನ ಅಲ್ಲಿಯೇ ನೆಲೆಸಿದರು ಈಗ ಅವರು ಒಂದೂವರೆ ಲಕ್ಷದಷ್ಟು ಹೆಚ್ಚಿನ ಜನಸಂಖ್ಯೆಯಲ್ಲಿದ್ದು ತಮ್ಮದೇ ಆದ ಒಂದು ಗುಂಪು ಜನಾಂಗವನ್ನು ಸ್ಥಾಪಿಸಿಕೊಂಡಿದ್ದಾರೆ. “ಅವರು ತಮ್ಮದೇ ಆದ ಭಾಷೆಯನ್ನಾಡುತ್ತಾರೆ, ಭಾರತೀಯರ ಶೈಲಿಯಲ್ಲಿ ಉಡುಗೆ ತೊಡುಗೆ ಧರಿಸುತ್ತಾರೆ, ತಮ್ಮ ಗದ್ದೆಗಳಲ್ಲಿ ನೀರಾವರಿ ಬೇಸಾಯ ಮಾಡುತ್ತಾರೆ ಮತ್ತು ತಾವು ಹುಟ್ಟಿ ಬಂದ ಭಾರತ ಪ್ರಾಂತ್ಯದ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ.”

ಹೀಗಾಗಿ ಪ್ರಪಂಚದ ಸಮಗ್ರ ಇತಿಹಾಸದ ಬಹುಶಃ ಅರ್ಧಕ್ಕಿಂತ ಹೆಚ್ಚು ಭಾಗ ಕಾಲಕಾಲಕ್ಕಾದ ಪರಸ್ಪರ ಸಾಂಸ್ಕೃತಿಕ ಕೊಳ್ಳುಡುಗೆಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ ಮೆಕ್ಸಿಕೋ ಮತ್ತು ಸಂಯುಕ್ತ ಅಮೆರಿಕೆಯ ಗಡಿಭಾಗಗಳಲ್ಲಿ ಕಂಡು ಬರುವ ಸಾಂಸ್ಕೃತಿಕ ವ್ಯತ್ಯಾಸಗಳು ಗಮನಾರ್ಹವಾಗಿದೆ. ಅಲ್ಲಿ ಲ್ಯಾಟಿನ್ ಅಮೆರಿಕೆ ಮತ್ತು ಸಂಯುಕ್ತ ಅಮೆರಿಕೆಯ ಸಂಸ್ಕೃತಿಗಳ ಪ್ರಭಾವ ಒಡೆದು ಕಾಣಿಸುತ್ತದೆ. ಟೆಕ್ಸಾಸ್‌ನಿಂದ ಕ್ಯಾಲಿಫೋರ್ನಿಯಾದವರೆಗಿನ ಗಡಿ ರಾಜ್ಯಗಳಲ್ಲಿ ವ್ಯಕ್ತಿಗಳ ಹೆಸರು, ವಾಸ್ತುಶಿಲ್ಪ, ಆಹಾರ, ಭೂಮಿ ಹಂಚಿಕೆ, ಮದುವೆಯ ಸಂಪ್ರದಾಯಗಳು ಸ್ಪಾನಿಷ್ ಭಾಷೆಯ ಹೆಚ್ಚಿನ ಬಳಕೆ ಮತ್ತು ಲ್ಯಾಟಿನ್ ಅಮೆರಿಕೆಯ ರೀತಿ ರಿವಾಜುಗಳು ತಿಳವಳಿಕೆ ಮುಂತಾದ ವಿಷಯಗಳಲ್ಲಿ ಮೆಕ್ಸಿಕೋದ ಪ್ರಭಾವಗಳು ಇತರರೆಡೆಗಿಂತ ತೀವ್ರವಾಗಿ ತೋರಿಬರುತ್ತವೆ. ಇದೇ ಇಂದಿನ ಸಮಾಜವಿಜ್ಞಾನಿಗಳು ಎದುರಿಸುತ್ತಿರುವ ಬಹುದೊಡ್ಡ ಸವಾಲು. ಆನಪದ ಸಂಸ್ಕೃತಿಯ ಒಂದೊಂದು ಗುಂಪುಗಳನ್ನು ಅಧ್ಯಯನ ಮಾಡುವಾಗ ದೇಶೀ ಆಂತರ್ಯವನ್ನು ಬಹುಪಠ್ಯಗಳ ನೆಲೆಯಲ್ಲಿಯೇ ಹುಡುಕುವ ಎಚ್ಚರಿಕೆಯನ್ನು ಹಾಗೂ ಸೂಕ್ಷ್ಮ ಸಂವೇದನೆಯನ್ನು ಇಟ್ಟುಕೊಂಡೇ ಇರಬೇಕಾಗುತ್ತದೆ.

ಲ್ಯಾರಿ ಹ್ಯಾಂಕೋ ಸಮುದಾಯದ ಒಳಗಿನ ವಿವರಣೆಯನ್ನು ಸ್ಮೃತಿ ಸಂಸ್ಕೃತಿ (memory culture), ಹಾಗೂ ನಮ್ಮದು ಎಂದು ಗುರುತಿಸಲ್ಪಡುವ ಆಶಯಿತ ಸಂಸ್ಕೃತಿ (aspired culture) ಎಂದು ಗುರುತಿಸಿದ್ದಾನೆ. ಸಾಮಾನ್ಯವಾಗಿ ವಲಸೆಗಾರರಿಗೆ ಸುತ್ತಲಿನ ಸಮಾಜಕ್ಕೆ ಪರಿಸರಕ್ಕೆ ಹೊಂದಿಸಿಕೊಳ್ಳುವ ಅಗತ್ಯ ಬಹಳ ತೀವ್ರವಾಗಿರುತ್ತದೆ. ಸಂದರ್ಭ ಬಂದಾಗ ಎದುರಾಗುವ ಸಮಸ್ಯೆಗಳಿಗೆ ವ್ಯಕ್ತಿಗತವಾಗಿಯೋ ಸಾಮೂಹಿಕವಾಗಿಯೋ ತಲೆಕೊಡಲು ತಯಾರಿರಬೇಕಾಗಿರುತ್ತದೆ. ಹೀಗೆ ವ್ಯಾವಹಾರಿಕವಾಗಿ ನಿರ್ದಿಷ್ಟ ಸನ್ನಿವೇಶದಲ್ಲಿ ರೂಪುಗೊಳ್ಳುವ ಸಂಸ್ಕೃತಿ ಇದು. ಈ ಆಶಯಿತ ಸಂಸ್ಕೃತಿ, ಮಾದರಿ ಸಂಸ್ಕೃತಿಯಂತೆ ಹಳೆಯ ಮೌಲ್ಯಗಳನ್ನು ಪೋಷಿಸುವುದಿಲ್ಲ. ಆದರೆ ಸಂಘರ್ಷ ಮುಕ್ತ ಪರಿಸರ ಅರಿವನ್ನು ಬಯಸುವ ಉಲ್ಲಾಸಶೀಲ ಗುಣದ್ದಾಗಿರುತ್ತದೆ. ಅದರ ಬಳಕೆದಾರರು ಸಾಮಾನ್ಯವಾಗಿ ವಲಸಿಗರಾಗಿರುತ್ತಾರೆ. ಹಲವಾರು ಕಾರಣಗಳಿಗೆ ವಲಸೆ ಬಂದು ನೆಲೆಸಿದ ಜನಾಂಗದ ಸಂಸ್ಕೃತಿಯ ರೀತಿನೀತಿಗಳು ಕಾಲಕ್ರಮೇಣ ತಮ್ಮ ಅಸ್ಮಿತೆಯನ್ನು ಮಾನಸಿಕ ಅಗತ್ಯಗಳಿಗನುಗುಣವಾಗಿ ಪೋಷಿಸಿಕೊಂಡು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು. ನಗರೀಕರಣದ ಪ್ರಕ್ರಿಯೆಗೊಳಗಾದ ಸಂಸ್ಕೃತಿಯ ಅಧ್ಯಯನವನ್ನು ಮಾಡುವಾಗ ಈ ತಲ್ಲಣಗಳನ್ನು ನಾವು ಗುರುತಿಸಬಹುದು.

ಒಟ್ಟಿನಲ್ಲಿ ಒಂದು ಸಂಸ್ಕೃತಿಯ ಸೃಜನಾತ್ಮಕವಾದ ಎಚ್ಚರ ಮತ್ತು ಪ್ರತಿಭಟನೆಯ ಹಿಂದೆ ದೇಶೀಯವಾದ ಮನೆಮಾಡಿಕೊಂಡಿರುತ್ತದೆ. ಸಂಸ್ಕೃತಿ ಮುಖಿಯಾದದ್ದೇ ಆ ದೇಶೀಯವಾದ. ಅದು ಸಂಸ್ಕೃತಿಮುಖಿಯಾಗಿರುತ್ತದೆ. ಪರಸ್ಪರ ವಿರುದ್ಧ ಸಂಸ್ಕೃತಿಗಳ ಮುಖಾಮುಖಿಯಾದಾಗಲೇ ದೇಶೀಯವಾದ ಪ್ರಜ್ಞೆ ಜಾಗೃತವಾಗುತ್ತದೆ. ಈ ಪ್ರಜ್ಞೆ ಗ್ರಾಮೀಣ ಪ್ರದೇಶಕ್ಕಿಂತ ನಗರದಲ್ಲಿ ತೀವ್ರವಾಗಿ ಗೋಚರವಾಗುವಂತಹುದು. ನಂತರ ಅದರ ಬಿಸಿ ಗ್ರಾಮೀಣ ಪ್ರದೇಶಕ್ಕೂ ಹಬ್ಬುತ್ತದೆ. ಹೀಗಾಗಿ ದೇಶೀಯತೆ ಎನ್ನುವುದು ಹಳೆಯದನ್ನು ಆರಾಧಿಸುವಂತದ್ದೂ ಅಲ್ಲ, ಹೊಸದನ್ನು ನಿರಾಕರಿಸುವಂತದ್ದೂ ಅಲ್ಲ. ಈ ಎರಡರ ಕೊಡುಕೊಳ್ಳುವಿಕೆಯಿಂದ ಅಥವಾ ಮಂಥನದಿಂದ ಕಾಣಿಸಿಕೊಳ್ಳುವುದು. ಹೀಗಾಗಿ ದೇಶೀವಾದ ಎನ್ನುವುದು ಒಂದು ಸ್ವಯಂ ವ್ಯವಸ್ಥೆಯನ್ನುಳ್ಳದ್ದು ಎನ್ನುವುದು ಚರಿತ್ರೆ ಸ್ಪಷ್ಟಪಡಿಸುತ್ತದೆ. ಇದರರ್ಥ ಇದು ಸಂಪರ್ಕರಹಿತವಾದದ್ದು, ಸಂವೇದನಾರಹಿತವಾದದ್ದು ಎನ್ನುವುದಲ್ಲ, ಎಲ್ಲರೊಳಗಿದ್ದೂ ಎಲ್ಲರಂತಾಗದೇ ಬೆಳೆದು ನಿಲ್ಲುವ ಶಕ್ತಿ ಇದಕ್ಕಿದೆ. ಈ ಹಿನ್ನೆಲೆಯಲ್ಲಿ ದೇಶೀಯತೆ ಎನ್ನುವುದು ಒಂದು ಜಾನಪದವನ್ನು ಒಡೆದು ಇನ್ನೊಂದನ್ನು ಕಟ್ಟುವುದೇ ಆಗಿದೆ. ಈ ಕ್ರಿಯೆ ವಿರುದ್ಧ ಸಂಸ್ಕೃತಿಯ ಮುಖಾಮುಖಿಯ ಸಂದರ್ಭದಲ್ಲಿ ಆಗಿರಬಹುದು ಅಥವಾ ಪರಸ್ಪರ ಸೃಜನಾತ್ಮಕ ಶಕ್ತಿಯ ಮುಖಾಮುಖಿಯ ಸಂದರ್ಭವಾಗಿರಬಹುದು. ಹೀಗಾಗಿ ದೇಶೀಯವಾದವೆಂದರೆ ವಿವಿಧ ಸಮೂಹಗಳ ಬಹುಮುಖ ಅಸ್ತಿತ್ವವಾದ. ಹೀಗಾಗಿ ಯಾವುದೇ ಸಮಾಜದ ಧರ್ಮದ ಸಂಸ್ಕೃತಿಯ ಮಜಲುಗಳನ್ನು ಅಧ್ಯಯನಕ್ಕೆ ಒಳಪಡಿಸುವಾಗ ಅದರಲ್ಲಿ ದೇಶೀವಾದದ ಅಸ್ಮಿತೆ ಅಂತರ್ಗತವಾಗಿಯೇ ಇರುತ್ತದೆ.

"ಶಂಬಾ. ಜೋಶಿ ಭಾರತೀಯ ಸಂಸ್ಕೃತಿ" ಕೃತಿಯಲ್ಲಿ ಈ ರೀತಿ ವಿವರಿಸುತ್ತಾರೆ. ವಿಮರ್ಶೆಯ ಒರೆಗಲ್ಲಿಗೂ ಹತ್ತಿರವಿರುವ "thoughts have perennial form" ಎಂಬ ಸೂತ್ರವನ್ನು ಒಪ್ಪಿದಲ್ಲಿ ಅರ್ಥ; ವಿಚಾರ; ಜ್ಞಾನ ಇದು ಯಾವ ಜಾತಿ ಮತದ ಸೊತ್ತಲ್ಲ. ಯಾವುದೇ ದೇಶ, ಭಾಷೆ, ಜನ ಪಂಗಡಕ್ಕೆ ಸತ್ಯ; ಜ್ಞಾನದ ಗುತ್ತಿಗೆ ದೊರೆತಿಲ್ಲ. ಆದ ಕಾರಣ ಧರ್ಮ ಮತ್ತು ಸಂಸ್ಕೃತಿ ಎಂಬುದು ಉಂಟು ಎಂದಲ್ಲಿ ಇದು ಮಾನವ ಧರ್ಮವೇ ಆಗಬಲ್ಲದು; ಮತ್ತು ಇದು ಮಾನವ ಸಂಸ್ಕೃತಿಯೇ ಇದ್ದೀತು. ಈ ನಿಟ್ಟಿನಲ್ಲಿ ಮಾನವ ಸಂಸ್ಕೃತಿಯ ಉಗಮ ಕಾಲದಿಂದ ಇಂದಿನವರೆಗೆ ಸಂಸ್ಕೃತಿಯ ವಿಕಾಸದ ಹಾದಿ ಹಾದು ಬಂದಿರುವುದು ಇಂಥ ಸ್ಥಿತ್ಯಂತರಗಳ ಅಗ್ನಿಕುಂಡಗಳಲ್ಲಿಯೇ. ಈ ನೆಲೆಯಲ್ಲಿಯೇ ಪುರಾಣ, ದೈವ, ನಂಬಿಕೆಗಳ ಹಿಂದಿನ ಶಕ್ತಿ ತತ್ವ ರೂಪುಗೊಂಡು ಸಂಸ್ಕೃತಿಯಿಂದ ಸಂಸ್ಕೃತಿಗೆ ಮನುಜರನ್ನು ಬೇರ್ಪಡಿಸಿರುವುದು ಎಂದರೆ ತಪ್ಪಾಗಲಾರದು. ಹೊರನೋಟಕ್ಕೆ ಮಾನವನು ತಾನು ಸೃಷ್ಟಿಸಿದ ರೂಪಿಸಿದ ಈ ಸಂಸ್ಕೃತಿಯಿಂದ ತನ್ನ ಸ್ವರೂಪ ದರ್ಶನ ಮಾಡಿಕೊಳ್ಳುತ್ತಾನೆ. ಆದರೆ ಆಂತರಿಕವಾಗಿ ಅವನ ಪ್ರಜ್ಞಾ ಪಾತಳಿಯಲ್ಲಿ ಸಂಸ್ಕೃತಿಯನ್ನು ಕುರಿತಾದ ಪ್ರಾಣ ಚೇತನವೊಂದು ಸದಾ ಎಚ್ಚರವಾಗಿಯೇ ಇರುತ್ತದೆ. ಈ ಶಕ್ತಿಯನ್ನು ಸಾಕ್ರಟೀಸನು ಋಜಉಟ ಹೆಸರಿನಲ್ಲಿ ಗುರುತಿಸಿರುವುದು. ಇದನ್ನೇ ಕಾಲಾತೀತವಾದ ನಿನ್ನೆ ನಾಳೆಗಳನ್ನು ಸಮಗ್ರ ಗ್ರಹಿಸಿಕೊಳ್ಳಬಲ್ಲ, ಸಮೀಕ್ಷಿಸಬಲ್ಲ ಶಕ್ತಿ ತ್ವತ್ವ ಎಂದು ಕರೆದಿರುವುದು. ಕಾರ್ಲ್‌ಪೊಪ್ಪರ್ ಈ wisdomನ ಸ್ಪಷ್ಟೀಕರಣವನ್ನು ಸಾಕ್ರಟೀಸನ ಪರಿಭಾಷೆಯಲ್ಲಿಯೇ ನೀಡಿದ್ದಾನೆ. ಸುತ್ತಲಿನ ಆಗು ಹೋಗುಗಳನ್ನು ಗ್ರಹಿಸಿಕೊಂಡು ಅದರ ಮೌಲ್ಯಗಳನ್ನುಉ ತಾರತಮ್ಯಗಳನ್ನು ಅರಿಯುವ ಈ ಪ್ರಜ್ಞೆಗೆ ಆ ವ್ಯಕ್ತಿಯ ಇತಿ ಮಿತಿಗಳೂ ಕೊರತೆ–ದೋಷಗಳು ಕಾಣುತ್ತಿರುತ್ತದೆ. ಇಂಥ ಪ್ರಜ್ಞೆ (wisdom) ಅಮಂದವಾಗಿ ಅಂತರಂಗದಲ್ಲಿ ಬೆಳಗತೊಡಗುವುದೇ ಸಂಸ್ಕೃತಿಯ ಲಕ್ಷಣವಾಗಿದೆ. "ಆತ್ಮ ಸಂಸ್ಕೃತಿ ವೈ. ಶಿಲ್ಪಾನಿ" ಎಂದರೆ ಆತ್ಮ ಶಿಲ್ಪವು ಸಂಸ್ಕೃತಿಯ ಲಕ್ಷಣ ಎಂದಿರುವಲ್ಲಿ ಸಂಸ್ಕೃತಿ ಬಾಹ್ಯ ಪ್ರದರ್ಶನಕಾಗಿ ಅಲ್ಲ ಎಂಬುದು ಸ್ಪಷ್ಟವಿದೆ. ಮಾನವೀಯ ಪಾತಳಿಯ ಮೇಲಣ ಪ್ರಜ್ಞಾರೂಪ ಗ್ರಹಣಶಕ್ತಿಯು ಪಾಂಡಿತ್ಯದ ಫಲವಲ್ಲ, ಬೌದ್ಧಿಕ ಕ್ರಿಯೆಯೂ ಅಲ್ಲ, ಇದು ಸಹಜ ಪ್ರವೃತ್ತಿ, (instinct property) ಅಥವಾ ಸಹಜ ಜ್ಞಾನ (intution) ಆಗಿದೆ. ಹೀಗಾಗಿ ಸಂಸ್ಕೃತಿಯನ್ನು ರೂಪಿಸುತ್ತಾ ಹೋಗುವ ಮಾನವ ತನ್ನನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಹಾಗೆ ರೂಪಿಸಿಕೊಳ್ಳುವಾಗ ಪ್ರತಿಯೊಂದು ಹೇರದ ಸಂಸ್ಕೃತಿಯನ್ನು ಇಡಿಯಾಗಿ ರೂಪಿಸಿರುವ ಕಾಲತತ್ವವು ಯಾವುದು ಎಂಬ ಪ್ರಶ್ನೆಯೇ ಮೌಲಿಕ ಮತ್ತು ಮಹತ್ವದ್ದಾಗಿದೆ. ಕೆಲವು ಸಂಸ್ಕೃತಿಗಳು ಅದನ್ನು ಸೌರ ತತ್ವ ಎಂದು ಕರೆದರೆ, ಇನ್ನು ಹಲವು ಸಂಸ್ಕೃತಿಗಳು ಅದನ್ನು ಆದಿಶಕ್ತಿಯ ತತ್ವ ಎಂದು ಕರೆಯುತ್ತವೆ. ನಿಸರ್ಗದ ಆತ್ಯಂತಿಕ ಶಕ್ತಿಗಳಾದ ಸೌರಶಕ್ತಿ ಮತ್ತು ಪ್ರಾಣಶಕ್ತಿಗಳ ನಡುವಿನ ಸ್ಥಿತ್ಯಂತರವೇ ಬಹುಶಃ ಸಂಸ್ಕೃತಿಗಳ ನಡುವಿನ ಬೇರ್ಪಡುವಿಕೆಯ ಗೆರೆಯನ್ನು ಎಳೆದಿರಬೇಕು ಎನ್ನುವುದು ಗಮನಾರ್ಹ ಸಂಗತಿ. ಈ ಎರಡು

ಶಕ್ತಿಗಳ ನಡುವಿನ ಸ್ಥಿತ್ಯಂತರಗಳೇ ಧರ್ಮ ಮತ್ತು ಆಚರಣೆಗಳ ಪಾತಳಿಯನ್ನು ರೂಪಿಸಿ ಸಂಸ್ಕೃತಿಗಳ ನಡುವಿನ ಸಾಮ್ಯತೆ ಮತ್ತು ವೈಷಮ್ಯತೆಯನ್ನು ಉಂಟುಮಾಡಿರುವುದು. ಇಲ್ಲಿ ಎರಡು ಈ ಶಕ್ತಿರೂಪಗಳೇ ಸ್ಥಿತ್ಯಂತರದ ಕಾಲದ ನಡುವೆ ರೂಪುಗೊಂಡಿರುವುದು. ಭಾರತೀಯ ಮೂಲ ಸಂಸ್ಕೃತಿಯ ಈ ಸ್ಥಿತ್ಯಂತರದ ಕಾಲದಲ್ಲಿ ಆದಿಶಕ್ತಿ ಮತ್ತು ಸೌರಶಕ್ತಿಗಳ ನಡುವಿನ ಸಂಘರ್ಷ ಎದ್ದು ಕಾಣುತ್ತದೆ. Thus aditian entirely Indian godess is historically younger than some atleast of her sons ಎಂದು ಮ್ಯಾಕ್ ಡೋನಲ್ ಹೇಳುತ್ತಾನೆ.[೧೫]

ಸೌರದೇವತೆಗಳೆಲ್ಲಾ ಆದಿತ್ಯ ರೂಪಕ್ಕೆ ಈ ಸ್ಥಿತ್ಯಂತರದ ಕಾಲದಲ್ಲಿ ಮಾರ್ಪಟ್ಟಿದೆ ಎಂದು ಹೇಳುವುದರ ಅರ್ಥವೇನು? ಎಂಬುದಕ್ಕೆ ಉತ್ತರ ಸಿಗುವವರೆಗೂ ಯಾವುದು ಮೂಲ ಎಂಬುದರ ವಿಚಾರವು ಸ್ಪಷ್ಟವಾಗಲಾರದು. ಇದಕ್ಕೆ ಉದಾಹರಣೆಯೆಂದರೆ ವಿಶ್ವಾರಂಭದಲ್ಲಿ ಭಾಷೆಗೂ ಮುನ್ನಿನ ಸ್ಥಿತಿಯನ್ನು ಸಾಂಕೇತಿಕವಾಗಿ ಕತ್ತಲೆಯಿಂದ ಆವೃತಸೃಷ್ಟಿ ಎಂದು ಕರೆಯುವ ವಾಡಿಕೆ, ಇನ್ನುಳಿದ ಸಂಸ್ಕೃತಿಗಳಲ್ಲಿಯೂ ಇದೆ. ಈ ಕತ್ತಲೆ (ಆದಿ ಮಾತೆ)ಯ ಶಿಶು ಚಂದ್ರನೆಂದು ಈಜಿಪ್ಟಿನ ಆದಿ ದೇವತೆ ಕಥೆಯಲ್ಲಿಯೂ ಉಂಟು. The spirit knight was great mother and her first born was the moon child life came from death, and light from darkness. Such appears to have been the conception of worshippers of the sky and water goddesses and the lunar god".[೧೬]

ಪಾಶ್ಚಿಮಾತ್ಯ ಸಂಪ್ರದಾಯದಲ್ಲಿ "ಚಂದ್ರ" ಇಂದಿಗೂ ಚಂದ್ರಾದೇವಿ, ಭಾರತೀಯ ಸಂಪ್ರದಾಯಗಳಲ್ಲಿಯೂ ಹುಣ್ಣಿಮೆಯ ಜಾತ್ರೆಗಳಲ್ಲಿ ಹೆಣ್ಣು ದೇವತೆಗಳೊಂದಿಗೆ ಸಂಬಂಧಪಟ್ಟಿರುವುದನ್ನು ಕಾಣಬಹುದಾಗಿದೆ. ಈ ವಿಭಜನೆಯೇ ಆರ್ಯ, ದ್ರಾವಿಡ ಸಂಸ್ಕೃತಿಯ ನಡುವಿನ ಸಂಸ್ಕೃತೀಕರಣದ ಸ್ವೀಕರಣೆ, ನಿರಾಕರಣೆಗಳಲ್ಲಿ ನನಮಗೆ ಕಂಡುಬರುವುದು. ಹೀಗಾಗಿ ಧರ್ಮ, ಆಚರಣೆಗಳು ಇಂತಹ ಸ್ಥಿತ್ಯಂತರಗಳ ನಡುವೆ ದೊರೆಯುವ ಮೌಖಿಕ ಪ್ರಮಾಣಗಳೂ ಕೆಲವು ಸಂಸ್ಕೃತಿಗಳಲ್ಲಿ ಕಂಡುಬಂದರೆ, ಲಿಖಿತ ಪ್ರಮಾಣಗಳಾಗಿ ಕೆಲವು ಸಂಸ್ಕೃತಿಗಳು ರೂಪಿಸಿಕೊಂಡಿವೆ.

ಒಟ್ಟಿನಲ್ಲಿ ಪ್ರಜ್ಞೆಯು ಮಾನವ ಮನಸ್ಸಿನ ಪ್ರೇರಣಾ ಕೇಂದ್ರವಾಗಿದೆ. ಇದು ಕೇವಲ ವೈಯಕ್ತಿಕ ಪ್ರಜ್ಞೆಯಾಗಿ ಉಳಿಯದೆ ಸಾಮಾಜಿಕವಾಗಿ, ಸಮಾಜದ ಸಮಷ್ಟಿಯೊಡನೆ ಬೆರೆತು ಹೋಗಿದೆ. ಹೀಗಾಗಿ ನಮ್ಮ ಜನಪದ ಆಚರಣೆಗಳನ್ನು ಸ್ಥಿತ್ಯಂತರದ ಕಾಲದಲ್ಲಿ ಗ್ರಹಿಸಿನೋಡುವುದು, ಏಕಕಾಲಕ್ಕೆ ಪ್ರಜ್ಞೆ ಮತ್ತು ಸಮಷ್ಟಿಯ ದರ್ಶನವೇ ಆಗಿದೆ. ಇದನ್ನೇ ಶಂಬಾ ಜೋಶಿಯವರು 'ನಮ್ಮ ಧರ್ಮ ಸಂಸ್ಕೃತಿಯ ಸಾಹಿತ್ಯ ಸಂಧರ್ಭ ನಿಯತಿ ನಿಯಮ ರಹಿತ ನಿರಂಕುಶ ಪ್ರವೃತ್ತಿಯ ಕವಿ ಪ್ರತಿಭೆ, ಅತ್ಯಂತ ಅಭಾವವನ್ನೇ ಸ್ಥಾಯೀ ಎಂದು ನಂಬಿಸಲು ಮಾಡಿರುವ ಮಂತ್ರ, ತಂತ್ರ ಇದೀಗ ಬಯಲಿಗೆ ಬರತೊಡಗಿವೆ. ಉದಾ: ಧರ್ಮದ ಹೆಸರಿನಲ್ಲಿ ಆರಾಧಿಸಲಾಗುತ್ತಿರುವ ಗಂಡು ದೈವಗಳೇ ಈ ಮಾತಿಗೆ ಸಾಕ್ಷಿ, ಇವನ್ನು ಗಂಡು ದೈವಗಳು ಎಂದು ಸ್ಥೂಲವಾಗಿ ಹೇಳಿದರೆ

ಸಂದಿಗ್ಧತೆಗೆ ಅವಕಾಶವೂ ದೊರೆಯುತ್ತದೆ. ಭಾರತೀಯ ಪುರಾತನ ಪರಂಪರೆಯ ಸಂದರ್ಭದಲ್ಲಿ ಇದನ್ನು ಆದಿ–ತ್ಯ (ಮಾರ್ತಾಂಡ) ಪುರುಷ ಇತ್ಯಾದಿ ವಿಶಿಷ್ಟ ನಾಮರೂಪದಿಂದ ಎತ್ತಿ ಹೇಳುವುದೇ ಲೇಸು. ಆದರೆ ಈ ಆದಿತ್ಯ–ಅದಿತಿ ಪಾತ್ರಗಳ ನಿಜಸ್ವರೂಪ ಗ್ರಹಣಕ್ಕೆ ಸ್ಥಳ ಹಾಗೂ ಕಾಲದ ತಾತ್ವಿಕ ಭೂಮಿಕೆಯನ್ನು ಸ್ಥೂಲವಾಗಿಯಾದರೂ ಅಲ್ಪ–ಸ್ವಲ್ಪ ಗ್ರಹಿಸಿಕೊಳ್ಳುವ ಅವಶ್ಯಕತೆಯಿದೆ. ಸ್ಥಳವೇ ಕಾಲರೂಪವಾಗುವುದು, ಕಾಲವೇ ಸ್ಥಳ ಸ್ವರೂಪವಾಗುವ ಈ ದೃಶ್ಯವು ಜಾದೂ–ಚಮತ್ಕಾರ ಸ್ವರೂಪದ್ದಾಗಿದೆ. ಅದಿತಿ–ಆದಿತ್ಯರ ನಡುವಿನ ಈ ಮಾಯೆಯನ್ನು ಗಂಡು ಎಂದು ನಂಬಿಸುವ ಈ ಕಾಲಶಕ್ತಿಯು ವಿಕಾಸತತ್ವದ ಪ್ರಕ್ರಿಯೆಯಲ್ಲಿ ಮನುಜನ ಆಲೋಚನಾ ಚಿಂತನೆಯನ್ನೇ ಬದಲು ಮಾಡಿರುವ ಸಾಧ್ಯತೆ ಇದೆ. ಇದಕ್ಕೆ ಉತ್ತರವನ್ನು ಜನಪದ ಆಚರಣೆಗಳಲ್ಲಿ ಹುಡುಕಬೇಕಾಗಿದೆ. ಸಾಹಿತ್ಯ, ಜೀವನ, ಸಂಸ್ಕೃತಿ ಈ ಮೂರರಲ್ಲಿ ಇರಬೇಕಾದ ಅನೂನ್ಯವೂ ವಿಕೃತಗೊಂಡಿದ್ದು ಇದನ್ನು ಪ್ರಾಕೃತಿಕ ಅನ್ವೇಷಣೆಯ ಮೂಲಕ ಸರಿಮಾಡಬೇಕಾಗಿದೆ. ಇದನ್ನೇ ಜುಲ್ಭಿಣಜ ಎಂಬ ತತ್ವಜ್ಞ "we can flout laws of man (but) we cannot flout life laws of nature" ಎಂದು ಹೇಳಿರುವುದು. ಭಾರತೀಯ ಸಂಸ್ಕೃತಿಯಲ್ಲಿನ ಈ ಸ್ಥಿತ್ಯಂತರವು ಆಚರಣೆಗಳ ಅಧ್ಯಯನ ಮಾಡುವಲ್ಲಿ ಬಾಳಿನ ಸ್ವರೂಪ ಮತ್ತು ಅರ್ಥಗ್ರಹಣಕ್ಕೆ ಇವು ನೆರವಾಗಬಲ್ಲವು. ಹಾಗಾದರೆ ಈ ಆಚರಣೆಗಳು ರೂಪುಗೊಂಡಿರಬಹುದಾದ ಕಾಲವು ಕೇವಲ ಅನುಭವಾತ್ಮಕವು ಮಾತ್ರ ಆಗಿರದೇ, ಭಾವನಾತ್ಮಕವೂ ಹಾಗೂ ವಿಶ್ವ ನಿಯಮಾತ್ಮಕವೂ ಆಗಿರುವುದು ನಮಗೆ ಜನಪದ ದೈವಗಳ ಉಗಮದಲ್ಲಿ ಖಚಿತವಾಗಿ ಕಾಣಸಿಗುತ್ತದೆ. ಮಾನವನ ಪ್ರಜ್ಞಾ ಪಾತಳಿಯಲ್ಲಿ ರೂಪುಗೊಂಡಿರುವ ಈ ದೈವಗಳು ಯಾವ ಹಂತದಲ್ಲಿ ಜನ್ಮ ತಾಳಿರಬಹುದು ಎಂಬುದೇ ಈಗ ನಮ್ಮ ಮುಂದಿರುವ ಬಹಳ ದೊಡ್ಡ ಸವಾಲು. ಭಾರತೀಯ ಪುರಾತನರು ಅದಕ್ಕೆ ಋಗ್ವೇದ, ಗೀತೆಗಳ ಮೂಲ ಹುಡುಕಿದರೆ, ಗ್ರೀಕ್ ತತ್ವಶಾಸ್ತ್ರಜ್ಞರು ಅದಕ್ಕೆ ಕಾಲ ಮತ್ತು ಅಂತರದ (time & space) ನಿಯಮದತ್ತ ಬೆರಳು ತೋರಿಸುತ್ತಾರೆ. ಮಾನವ ಶಾಸ್ತ್ರಜ್ಞ ಕ್ರೋಬರನ ನಿಷ್ಕರ್ಷದಂತೆ ಈ ಮಾನವ ಸಂಸ್ಕೃತಿಯು (ಸ್ವರ್) super organic ಪಾತಳಿಯ ಮೇಲೆ ಇದೆ. ಮಾನವ ಸಂಸ್ಕೃತಿಗೆ ಆಕಾರವನ್ನಿತ್ತಿರುವ ಈ ಸ್ವರ್ ಪಾತಳಿಗೆ ಪ್ರತಿಯಾಗಿ ಈ organic ಪಾತಳಿಯೂ ಒಂದುಂಟು ಎಂಬುದನ್ನು ಇಲ್ಲಿ ಒಪ್ಪಿಕೊಂಡಂತೆಯೇ ಇದೆ. ಡಾ.ಕ್ರೋಬರನ ಈ ಆಶಯವನ್ನು ಹೀಗೂ ಹೇಳಬಹುದು; ಈ ಬಾಳಿನಲ್ಲಿ ಜೀವನದ ಪ್ರಜ್ಞೆಯ ಅಂಗವಾದ ಮನಸ್‌ತತ್ವದ (ಚಾಂದ್ರ) ಪ್ರಾಣಲಿಂಗದಿಂದ ಪ್ರಚೋದಿತ ಇಂದ್ರಿಯ ಪಾತಳಿಗಳೂ ಒಂದುಂಟು. ಇವೆರಡೂ ಪಾತಳಿಗಳ ಅಂತಃ ಪ್ರಚೋದನೆಯ ಸ್ವರೂಪವು ತೀರ ಭಿನ್ನವಿದೆ ಎಂಬುದನ್ನು ಮರೆತೂ ನಡೆಯದು, ಜಾಗತಿಕ ಪ್ರಾಚೀನ ಸಂಸ್ಕೃತಿಯ ಈ ಪುರಾತನರಿಗೆ ಬಂದ ಈ ಅಂಕೆಗೆ ಪ್ರಮಾಣವೇನು? ಎಂಬುದನ್ನು ನಿರ್ಧರಿಸಬೇಕಾಗಿದೆ.[೧೭]

ಒಟ್ಟಿನಲ್ಲಿ ಬಹು ಮುಖವಾದ ಹಾಗೂ ಬಹುಶ್ರುತವಾದ ಚಿಂತನೆಗಳ ವ್ಯಾಪ್ತಿಗೆ ಒಳಪಡುವ ಈ ಆಚರಣೆ, ದೈವಗಳ ಉಗಮದ ಮೂಲಪಾತಳಿಗಳನ್ನು ಸಾಂಸ್ಕೃತಿಕ ಸ್ಥಿತ್ಯಂತೀಕರಣದ ನಿಷ್ಕರ್ಷಕ್ಕೆ ಹಚ್ಚಿ ನೋಡಿದಾಗ ಮಾತ್ರ ಮಾತು ಹೋದ ತಥ್ಯಗಳಿಗೆ ಜೀವದಾನವಾಗಿ ಹೊಸ ಬೆಳಕಿನ ಪಥವು ಕಾಣಬಹುದಾಗಿದೆ. ವೈದಿಕ ಚಿಂತನೆಯ ಪಾತಾಳಗರಡಿಯಲ್ಲಿ ಶೋಧಿಸಲ್ಪಟ್ಟಾಗ ಅಲ್ಲಿನ ಎಷ್ಟೋ ದೈವಗಳು ತಮ್ಮ ಮಿಥ್ಯಾವೇಷವನ್ನು ಕಳಚಿಕೊಂಡು ಸತ್ಯದ ಪ್ರಭೆಯಲ್ಲಿ ಹೊಳೆಯುವ ಸಾಧ್ಯತೆಗಳಿವೆ. ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಸಂಕೀರ್ಣ ಪಥಗಳ ಮರುಶೋಧಕ ತುರ್ತೊಂದು ಇಂದು ಅವಶ್ಯ ಮತ್ತು ಅನಿವಾರ್ಯವಾಗಿದೆ.

ಸಂಖ್ಯಾ ಟಿಪ್ಪಣಿಗಳು

೧. Encyclopedia of folkculture of Karnataka- Dr. Shohi kosaka. P 476

೨. ಡಿ.ಡಿ.ಕೊಸಾಂಬಿ, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ. ಪು:೧೨೫

೩. M.N. Srinivas edt " Dimensions of social change in India

೪. ಅವ್ಯಕ್ತ ಚರಿತ್ರೆ, ಮೊಗಳ್ಳಿ ಗಣೇಶ್ ಪು:೧೬೬

೫. ಅವ್ಯಕ್ತ ಚರಿತ್ರೆ, ಮೊಗಳ್ಳಿ ಗಣೇಶ್ ಪು: ೨೧೯

೬. (NIF News letter vol 17-2-3-2989:8)

೭. ಬೆಂಗಳೂರಿನ ಬಿನ್ನಿಮಿಲ್ ಒಂದು ಅಧ್ಯಯನ- ಪು: ೧೩ ಹಂಪಿ ಕನ್ನಡ ವಿ.ವಿ ೨೦೦೯-೧೦

೮. ಕೆಂಪೇಗೌಡ ಜಯ ಪ್ರಶಸ್ತಿ-ಪು:೩೬, ಸಂ: ಕರ್ಲಮಂಗಲಂ ಶ್ರೀಕಂಠಯ್ಯನವರು,

೯. ಬೆಂಗಳೂರು-೧ ಲೇಖನ- ಬೆಂಗಳೂರು ದರ್ಶನ ೧೯೭೫ ವಿಶೇಷ ಸಂಚಿಕೆ ಡಾ. ಸೂರ್ಯನಾಥ ಕಾಮತ್

೧೦. ಬೆಂಗಳೂರು ದರ್ಶನ - ಪು: ೫೬ , ಡಾ. ಸೂರ್ಯನಾಥ ಕಾಮತ್

೧೧. ಇತಿಹಾಸ ದರ್ಶನ- ವೇಮಗಲ್ ಸೋಮಶೇಖರ್, ಪು:೧೨೯, ಸಂ:೧೧

೧೨. ಇತಿಹಾಸ ದರ್ಶನ- ವೇಮಗಲ್ ಸೋಮಶೇಖರ್, ಪು:೧೨೯, ಸಂ:೧೧

೧೩. ಫಿನ್ಲೆಂಡಿನ ಜಾನಪದ ವಿದ್ವಾಂಸರು, ಡಾ. ತೀ.ನಂ. ಶಂಕರನಾರಾಯಣ-ಪು: ೧೫೮

೧೪. ದೇಶೀ, ಮೊಗಳ್ಳಿ ಗಣೇಶ್, ಪು- ೫೨

೧೫. Egyptian Myth, Donald Mackazine, p-281

೧೬. Egyptian Myth, Donald Mackazine, p-287

೧೭. ಶಂಬಾ ಕೃತಿ ಸಂಪುಟ-೫, ಪು-೪೪೨

ಅಧ್ಯಾಯ : ೭

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

"ಅನನ್ಯತೆ ಮತ್ತು ಸಂಸ್ಕೃತಿ", "ಸಂಸ್ಕೃತಿ ಮತ್ತು ನಾಗರಿಕತೆ" ಇಂತಹ ಜೋಡಿ ಪರಿಕಲ್ಪನೆಗಳ ಸಂಬಂಧ ಎಂದಿಗೂ ಸಮಸ್ಯಾತ್ಮಕವಾದದ್ದೇ, ತಾತ್ವಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಸ್ಥಿತ್ಯಂತರಗಳ ನಡುವಿನ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಸಂಸ್ಕೃತಿಯ ಅಖಂಡತೆಯನ್ನು ಸಾಪೇಕ್ಷವಾಗಿ ಪರಿಗಣಿಸಲಾಗುತ್ತದೆ. ಅದರಲ್ಲೂ ವಿಶೇಷವಾಗಿ ಕನ್ನಡ ಸಂಸ್ಕೃತಿಯ ಆಚರಣೆಗೆ ಮತ್ತು ದೈವಗಳ ಜೊತೆಗೆ ಒಂದು ಸಾವಯವ ಸಂಬಂಧ ಇರಿಸಿಕೊಂಡಿರುವುದನ್ನು ಕಾಣಬಹುದು. ಚರಿತ್ರೆಯ ಉದ್ದಕ್ಕೂ ಅಖಂಡತ್ವದ ಭಾರತೀಯ ಸಂಸ್ಕೃತಿಯ ಪರಿಕಲ್ಪನೆಯ ನೆರವಿನೊಡನೆ ವ್ಯಾಖ್ಯಾನಿಸಿದಾಗ್ಯೂ ಆ ವಿಶಾಲ ಪರಿಧಿಯೋ ಒಳಗೇ ಕನ್ನಡ ಸಂಸ್ಕೃತಿ ತನ್ನ ಜೈವಿಕತೆಯನ್ನು ನಿರೂಪಿಸಿಕೊಳ್ಳಲು ಅನೇಕ ಸಂಘರ್ಷದ ಹಾದಿಗಳನ್ನು ದಾಟಿಬಂದಿದೆ; ಅನೇಕ ಸಾಂಸ್ಕೃತಿಕ ನೇಯ್ಗೆಯನ್ನು ವಿನ್ಯಾಸಗೊಳಿಸುತ್ತಾ ಬಂದಿದೆ. ಅದರಲ್ಲೂ ಬೆಂಗಳೂರಿನಲ್ಲಿ "ಕನ್ನಡ ಸಂಸ್ಕೃತಿ" ಯ ಅನೇಕ ಅಗ್ನಿದಿವ್ಯಗಳನ್ನು ಹಾದು ತೀವ್ರವಾದ ಸಂಘರ್ಷದ ಸವಾಲುಗಳೊಂದಿಗೆ ತನ್ನ ಚಹರೆಗಳನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಬೆಂಗಳೂರಿನ ಸಂಸ್ಕೃತೀಕರಣದ ಬಹಳ ಮುಖ್ಯವಾದ ಸವಾಲೆಂದರೆ ಅದು "ಸವಲತ್ತುಗಳ ನಗರವಾಗಿ" ಮಾರ್ಪಾಡಾಗಿರುವುದು. ಒಂದು ಕಾಲಘಟ್ಟದಲ್ಲಿ ಸಮಾನತೆಯನ್ನು ಪಡೆಯುವ ಪ್ರಕ್ರಿಯೆಯಲ್ಲಿ ಗಾಢವಾಗಿ ನಿರತವಾಗಿದ್ದ ಬೆಂಗಳೂರಿನ ಸಂಸ್ಕೃತಿಯು ಇಂದು ಅಸ್ಮಿತೆಯನ್ನು ನಿರೂಪಿಸುವ ಪ್ರಯತ್ನದಲ್ಲಿದೆ. ಸಂಸ್ಕೃತೀಕರಣದ ಪುನರ್‌ವ್ಯಾಖ್ಯಾನವನ್ನು ಇಂದು ಬೆಂಗಳೂರು ಕಟ್ಟಿಕೊಳ್ಳಬೇಕಾಗಿದೆ. ಬಂಡವಾಳಶಾಹಿ ಹೆಸರಿನಲ್ಲಿ ಸಂಸ್ಕೃತೀಕರಣವು ಬುಡಮೇಲುಗೊಳ್ಳುತ್ತಿರುವ ಈ ಸಂಧರ್ಭದಲ್ಲಿ ಅದನ್ನು ಒಡೆಯುವ ಪ್ರಯತ್ನಗಳು ಶುರುವಾಗಿದೆ. ಈವರೆಗಿನ ಸಾಂಸ್ಕೃತಿಕ ಚಲನೆಯ ವಿನ್ಯಾಸದಲ್ಲಿ ಒಂದು ಆರೋಹಣ ಪರ್ವ ಇತ್ತು. ನಾವು ಊರ್ಧ್ವಮುಖಿಯಾಗಿ

ಚಲಿಸಿದರೆ ಮಾತ್ರ ಸಮಾನತೆ ಸಿಗುತ್ತದೆ ಎಂಬ ನಂಬಿಕೆ ಇತ್ತು. ಆದರೆ ಈಗ 'ಮೂಲಮುಖಿ' ಯತ್ತ ಪಯಣ ಆರಂಭವಾಗಿದೆ. ನಮ್ಮ ಹಾಗೆ ನಾವಿದ್ದು ಅಸ್ಮಿತೆಯನ್ನು ಉಳಿಸಿಕೊಳ್ಳುವತ್ತ ಚಿಂತನಧಾರೆಗಳು ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಪ್ರವಹಿಸುತ್ತಿದೆ. ತಳ ಸಂಸ್ಕೃತಿಯು ಆರೋಹಣ ಕ್ರಮದ ಅನುಕ್ರಮಣಿಕೆಯಲ್ಲಿ ಸಮಾನತೆಯನ್ನು ತಲುಪುವ ಮಾರ್ಗವನ್ನು ಬಿಟ್ಟುಕೊಟ್ಟಿದೆ. ಇಂದಿನ ಸಮಾನತೆ ಭಿನ್ನ ಆದರೆ "ಸಮಾನ"ತೆ ಅಮೂರ್ತ ಚಲನೆಯಾಗಿ ಅನುಭವಿಸಲು ಸಾಧ್ಯವಾಗಿದೆ. ಈ ಬಗೆಯ ಒಂದು ಅರಿವು 'ಸಾಂಸ್ಕೃತಿಕ ಎಚ್ಚರ' ಇಲ್ಲದಿದ್ದರೆ 'ಬಾಂಬೆ' 'ಮುಂಬಯಿ' ಆಗುವ ಮತ್ತು 'ಬ್ಯಾಂಗಲೂರ್' 'ಬೆಂಗಳೂರು' ಆಗಿ ಪುನರ್ ಸ್ಥಾಪಿತಗೊಳ್ಳುತ್ತಿರಲಿಲ್ಲ. ಇದು ಬರೀ ಹೆಸರಿನ ಪ್ರಶ್ನೆಯಿಲ್ಲ, ಸಾಮಾಜಿಕ ನ್ಯಾಯದ ಪ್ರಶ್ನೆಯೂ ಆಗಿದೆ. ಸಂಘರ್ಷದ ಹಾದಿಗಳೇ ಈಗ ಜಾಗತೀಕರಣ ಆಗ ವಸಹಾತುಶಾಹಿ, ಈ ಎಲ್ಲವೂ ಸಹಾ ಆಧುನಿಕತೆಯನ್ನು ತೆರೆದುಕೊಳ್ಳುವ ಹಂಬಲದ್ದೇ ಆಗಿದ್ದರೂ ಅವುಗಳ ಹಿಂದೆ ಮೂಲ ಸಂಸ್ಕೃತಿಯನ್ನು ಕಡವುವ ಹುನ್ನಾರಗಳೂ ಮೇಳೈಸಿರುವುದನ್ನು ಮನಗಾಣಬೇಕು. ಕೇವಲ ಸೈದ್ಧಾಂತಿಕವಾಗಿ ಸಂಸ್ಕೃತಿ ಸಿದ್ಧಾಂತಗಳನ್ನು ನೋಡಿದೆ. ಸಾಮಾಜಿಕ ಸಂರಚನೆಯ ವಿನ್ಯಾಸದ ಸ್ತರದಲ್ಲಿಯೂ ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತರಲೇಬೇಕಾಯಿತು. ಕಾಲದಿಂದ ಕಾಲಕ್ಕೆ ಆಗುವ ಸ್ಥಿತ್ಯಂತರಗಳನ್ನು ಮೈಗೂಡಿಸಿಕೊಂಡು, ಯುಗಧರ್ಮದ ಹಿನ್ನೆಲೆಯನ್ನು ಮೀರಿ ಬಹಳ ಮುಂದೆ ಬಂದು ನಿಂತಿರುವ ಬೆಂಗಳೂರಿನ ಸಂಸ್ಕೃತಿಯ ಸ್ಥಿತ್ಯಂತರಗಳು ಹಾದು ಬಂದ ಹಾದಿಯೇ ಸಂಘರ್ಷದ ಹಾದಿ, ಬಹುಷಃ ಇದಕ್ಕೇ ಇರಬೇಕು ಎರಡನೇ ಆಂಗ್ಲೋ ಮೈಸೂರು ಯುದ್ಧದ ಸಂದರ್ಭದಲ್ಲಿ ಕಂಟೋನ್ಮೆಂಟ್ ಶುರುವಾದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬಲವಂತವಾಗಿ ಕನ್ನಡ ಸಂಸ್ಕೃತಿಯ ಮೇಲೆ ಅನ್ಯ ಸಂಸ್ಕೃತಿಯ ಪ್ರಭಾವ ಹೇರಲಾಯಿತು. ಕನ್ನಡ ಸಂಸ್ಕೃತಿಯ ಜೊತೆ ಅನ್ಯ ಸಂಸ್ಕೃತಿಯ ಬೆಸುಗೆ ಮೂರ್ತವಾಗಿ ಬೆಸೆದುಕೊಂಡಿತು. ಹೀಗಾಗಿ ಬೆಂಗಳೂರಿನ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಸಾಮಾಜಿಕ ನ್ಯಾಯ, ರಾಜಕೀಯ ಹಾಗೂ ಆರ್ಥಿಕತೆಯ ಹಿನ್ನೆಲೆಯನ್ನು ಸಾಂಸ್ಕೃತಿಕ ಭಿತ್ತಿಯ ನೆಲೆಯಲ್ಲಿದ್ದು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಬಹು ವಿಧವಾದ ಕಾಲಘಟ್ಟಗಳಲ್ಲಿ ಬಹು ಭಾಗದ ಸಂಸ್ಕೃತಿಯ ನೆಲೆಗಳನ್ನು ತನ್ನೊಳಗೆ ಸಂಯೋಗಗೊಳಿಸಿಕೊಂಡು ಮೂಲ ಸಂವೇದನೆಯನ್ನು ಉಳಿಸಿಕೊಳ್ಳಲು ಹೆಣಗಾಡುವ ತಾಕಲಾಟಗಳನ್ನು ಸ್ಥಿತ್ಯಂತರದ ನೆಲೆಯಲ್ಲಿ ನೋಡಬಹುದಾಗಿದೆ. ಸಾಂಸ್ಥಿಕ ತಲ್ಲಣಗಳು ಚಿತ್ತ ಭಿತ್ತಿಯಲ್ಲಿ ವ್ಯಕ್ತಿಗತವಾಗಿ ಅಸ್ಮಿತೆಯ ಉಳಿವಿನ ತಲ್ಲಣಗಳಾಗಿ ಕೇಂದ್ರ ಪ್ರಜ್ಞೆಯಾದಾಗ ಮಾತ್ರ ಅವು ಅರ್ಥಪೂರ್ಣವಾಗಿ ಉಳಿಯುತ್ತದೆ. ಅಂತಹ ಅಮೂರ್ತ ತಲ್ಲಣಗಳು ಇಂದು ಬೆಂಗಳೂರಿನ ಸ್ಥಿತ್ಯಂತರದ ಕಾಲಘಟ್ಟವನ್ನು ಕಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಭಾರತದ ಎಲ್ಲ ಮಹಾನಗರಗಳ ಸಾಂಸ್ಕೃತಿಕ ಪಲ್ಲಟಗಳಲ್ಲೂ ಈ ಸಾಮಾನ್ಯ ಲಕ್ಷಣವನ್ನು ಗುರುತಿಸಬಹುದಾಗಿದೆ. ನಗರ ದೇವತೆ ಅಣ್ಣಮ್ಮ ಬೆಂಗಳೂರನ್ನು, ಮುಂಬಾದೇವಿ ಮುಂಬೈಯನ್ನು ಕಾಪಾಡುತ್ತಾಳೆ ಎಂಬ

ನಂಬಿಕೆಯಿಂದ ನಡೆಯುತ್ತಿರುವ ವಿಧ್ಯುಕ್ತ ಆಚರಣೆಗಳು ಮೇಲ್ನೋಟಕ್ಕೆ ಕಳೆದು ಹೋದಂತೆ ಕಾಣುವ ಆಚರಣೆಗಳ ಸಾಂಸ್ಕೃತಿಕ ಅನನ್ಯತೆಯನ್ನು ಎತ್ತಿ ತೋರುವಲ್ಲಿ ಸಫಲವಾಗಿದೆ. ಸಂಕರ ಸಂಸ್ಕೃತಿಯೊಂದು ರೂಪುಗೊಂಡು ಮೂರ್ತ ಮತ್ತು ಅಮೂರ್ತ ನೆಲೆಯನ್ನು ಹಿಡಿದಿಡುವ ಪ್ರಯತ್ನವನ್ನು ಮಾಡುತ್ತಿದೆ. ಒಂದು ಕಾಲದಲ್ಲಿ ಬೆಂಗಳೂರು ತನ್ನ ಪ್ರಾದೇಶಿಕ ಸ್ಥಾನೀಯ ಪ್ರಭಾವದಿಂದ ಮಾತ್ರ ಬದಲಾಗುತ್ತಿತ್ತು. ಆದರೆ ಈಗ ಘಟಿತ ಕ್ರಿಯೆಗಳ ಹಿಂದೆ ಸಂವೇದನಾಶೀಲತೆಯ ಪ್ರಭಾವ ಗಾಢವಾಗಿ ಎದ್ದು ಕಾಣುತ್ತಿದೆ. ಸಂಸ್ಕೃತಿಯನ್ನು ಪಳಗಿಸಿ, ಪ್ರತಿ ಸೃಷ್ಟಿಸಿ, ಪುನರ್‌ವ್ಯಾಖ್ಯಾನಗಳನ್ನು ನಿರ್ವಚಿಸುವ ಅಂತರ್ಯಾನದ ಪ್ರಜ್ಞೆಯೊಂದು ಸಮುದಾಯದ ಧಾತುಗಳಲ್ಲಿ ಪ್ರವಹಿಸಿರುವುದು ಸ್ಪಷ್ಟವಾಗಿದೆ. ಈ ಆಚರಣೆಗಳ ಹಿಂದಿನ ಸಾಂಸ್ಕೃತಿಕ ಎಚ್ಚರವು ಸಾಮಾಜಿಕ ನ್ಯಾಯ, ತಳವರ್ಗದ ಆತ್ಮ ಗೌರವದ ಪ್ರಶ್ನೆ ಹಾಗೂ ಆ ಮೂಲಕ ಜಾಗತೀಕರಣದ ಆಕ್ರಮಣದ ನಿರಾಕರಿಸುವ ಪ್ರಶ್ನೆಯೂ ಆಗಿದೆ.

ಸಂಶೋಧನಾ ಫಲಿತಗಳು :

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ಸಂಶೋಧನಾ ಫಲಿತಗಳನ್ನು ಈ ನಿಟ್ಟಿನಲ್ಲಿ ಗುರುತಿಸಬಹುದು. ಬೆಂಗಳೂರಿನ ಸ್ಥಿತ್ಯಂತರ ಕಾಲದ ಆಚರಣೆಗಳನ್ನು ಗಮನಿಸಿದಾಗ ಮೂಲ ಸಂಸ್ಕೃತಿ ಮತ್ತು ಉಪ ಸಂಸ್ಕೃತಿಗಳ ನಡುವೆ ಸಾಮ್ಯತೆ ಮತ್ತು ಸಂಘರ್ಷಗಳನ್ನು ಕಾಣಬಹುದು. ಪಟ್ಟಭದ್ರ ಹಿತಾಸಕ್ತಿಯ ಚೌಕಟ್ಟಿನಲ್ಲಿ ಮೂಲ ಸಂಸ್ಕೃತಿಯ ಉಪ ಸಂಸ್ಕೃತಿಯಲ್ಲಿ ಒಂದು ಕೀಳರಿಮೆಯನ್ನು ಹುಟ್ಟುಹಾಕಿ ಸಂಸ್ಕೃತೀಕರಣದ ಅಮಾನವೀಯತೆಯನ್ನು ಮೆರೆದಿತ್ತು. ಆ ಕಂದರವನ್ನು ಮುಚ್ಚುವ ಪ್ರಯತ್ನ ಇಂದು ಮಾಡಲಾಗುತ್ತಿದೆ. ಸಮವಸ್ತ್ರ ಸಂಸ್ಕೃತಿಯೊಂದು ಸ್ಥಾಪಿತವಾಗಿದ್ದು, ಆಚರಣೆಗಳ ಮೂಲಕ ಸಾಮಾಜಿಕ, ಆರ್ಥಿಕ ಕಂದರಗಳನ್ನು ಮುಚ್ಚಲಾಗಿದೆಯೋ ಎಂಬ ಅನುಮಾನ ಮೂಡುತ್ತದೆ. ಬಸವನಗುಡಿಯ ಕಡಲೆ ಕಾಯಿ ಪರಿಷೆ ಇಂದು ಹಲವಾರು ರೂಪಾಂತರಗಳನ್ನು ಹಾದು ಏಕಕಾಲಕ್ಕೆ ಶಿಷ್ಟ ಮತ್ತು ಜಾನಪದ ಆಚರಣೆಯ ನೆಲೆಯಲ್ಲಿ ವ್ಯಕ್ತವಾಗುತ್ತಿದೆ.

ಸೈದ್ಧಾಂತಿಕ ನೆಲೆಯಲ್ಲಿ ಜಾಗತೀಕರಣ ಮತ್ತು ನಗರೀಕರಣದ ಪ್ರಭಾವಕ್ಕೆ ಒಳಗಾಗಿರುವ ಬೆಂಗಳೂರಿನ ಹಲವು ದೈವ ಮತ್ತು ಆಚರಣೆಗಳನ್ನು "ಒಪ್ಪಿತವೋ" ಅಥವಾ "ಒಪ್ಪಿಸಲ್ಪಟ್ಟಿರುವುದೋ" ಎಂಬ ಸಂಘರ್ಷ ಇನ್ನೂ ತೀರ್ಮಾನವಾಗಬೇಕಾಗಿದೆ. ಈ ಆಚರಣೆಗಳನ್ನು ಸಾಂಸ್ಕೃತಿಕ ರಾಜಕಾರಣದ ಅಧ್ಯಯನದ ಮೂಲದ ಕೆಲವನ್ನು ಅಮೂರ್ತ ನೆಲೆಯಲ್ಲಿ ಅರ್ಥೈಸಿದರೆ, ಸಾಮಾಜಿಕ, ಮಾನವಿಕ ಮತ್ತು ತಾತ್ವಿಕ ಅಧ್ಯಯನದ ಮೂಲಕ ಕೆಲವು ಮೂರ್ತ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತವೆ, ಕಾರಣ ಆಧುನಿಕವಾಗುವ ಪ್ರಕ್ರಿಯೆಯು 'ಘಟಿತ' ಘಟಿಸುವುದು ಅತ್ಯಂತ ಸಾವಯವ ಮತ್ತು ನಿರಂತರವಾಗಿ ನಡೆಯುತ್ತಲೇ ಇರುವುದು. ಹೀಗಾಗಿ ಮೂಲನಿವಾಸಿಗಳ ಜೊತೆ ಸ್ನೇಹ ಮತ್ತು ಸಂಘರ್ಷವನ್ನು ವಲಸೆ ಮತ್ತು ಉಪ ಸಂಸ್ಕೃತಿಗಳು ನಿರಂತರವಾಗಿ

ಹೊಂದುತ್ತಲೇ ಬಂದಿರುವುದನ್ನು ಮನಗಾಣಬೇಕಾಗುತ್ತದೆ. ಹೀಗಾಗಿ ಕೆಲವು ಆಚರಣೆಗಳು 'ಒಪ್ಪಿತ' ಸಂಸ್ಕೃತಿಯವಾಗಿ ಕಂಡುಬಂದರೆ, ಕೆಲವು 'ಒಪ್ಪಿಸಲ್ಪಟ್ಟ' ಸಾಂಸ್ಕೃತಿಕ ಕುರುಹುಗಳಾಗಿ ದಾಖಲಾಗಿವೆ.

ವಲಸಿಗರ ಸಂಸ್ಕೃತಿಯ ಆಚರಣೆಗಳು ಬೆಂಗಳೂರಿನಲ್ಲಿ ಸ್ಥಾಪಿತವಾಗಲು ಕಾರಣ ಇಲ್ಲಿಯ 'ತೆರೆದ ಸಂಸ್ಕೃತಿ'ಯ ಮನೋಭಾವ ಸಹಜವಾಗಿಯೇ ನಗರೀಕರಣದ ಪ್ರಕ್ರಿಯೆಯಲ್ಲಿ ಇತರ ಮಹಾ ನಗರಗಳಂತೆ ಬೆಂಗಳೂರು ಸಹಾ ಹಲವಾರು ಪಲ್ಲಟಗಳಿಗೆ ತನ್ನನ್ನು ತಾನು ಒಡ್ಡಿಕೊಂಡಿದ್ದು ಒಂದು ಮುಕ್ತ ಸಂಸ್ಕೃತಿಯ ನಗರವಾಗಿ ಮಾರ್ಪಟ್ಟಿದೆ. ಈ ಸಂದರ್ಭದಲ್ಲಿ ಬೆಂಗಳೂರಿನ ತೆರೆದ ಸಂಸ್ಕೃತಿ ಮುಂಬಯಿ, ದೆಹಲಿಯ ಸಂಸ್ಕೃತಿಯನ್ನು ಅನುಕರಣೆ ಮಾಡುತ್ತಿದೆ. ಕನ್ನಡಿಗರ ಮನೋವಿನ್ಯಾಸ ಎಲ್ಲ ಇತರ ಭಾಷಿಕರಿಗಿಂತ ಭಿನ್ನ ಎನ್ನುವುದು ವಿಶಿಷ್ಟ. ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವ, ಸ್ವೀಕರಿಸುವ ಮನೋಭಾವ ಬೆಂಗಳೂರಿನ ಮಟ್ಟಿಗೆ ಏಕಕಾಲಕ್ಕೆ ಅನುಕೂಲವೂ ಹೌದು ಅನಾನುಕೂಲವೂ ಹೌದು ಎಂಬುದು ಬಹಳ ಮುಖ್ಯ ಗ್ರಹಿಕೆ. ಏಕೆಂದರೆ ಈ ತೆರೆದ ಸಂಸ್ಕೃತಿಯ ಸ್ವೀಕರಣಾ ಮನೋಭಾವವೇ ಮೂಲ ನಿವಾಸಿಗಳ ಮಟ್ಟಿಗೆ ಬಹಳ ದೊಡ್ಡ ಸವಾಲು. ಭಾಷೆ, ಆಚರಣೆ, ಆಹಾರಗಳ ಮೂಲಕ ತನ್ನ ಮೂಲಧಾತುಗಳನ್ನು ಉಳಿಸಿಕೊಳ್ಳಲೇಬೇಕಾದ ತುರ್ತಿದೆ.

'ಬೆಂಗಳೂರು' ಎಂಬುದನ್ನು ಒಂದು ಸಾವಯವ ಶರೀರವಾಗಿ ಕಲ್ಪಿಸಿಕೊಂಡಾಗ ಇದರ ಮೂಲ ಚಹರೆ ಯಾವುದು, ನಾಡಿ ಮಿಡಿತ ಯಾವುದು, ಇಲ್ಲಿನ ಪ್ರಧಾನ ಸಂಸ್ಕೃತಿಯ ಕುರುಹು ಯಾವುದು ಎಂಬುದಕ್ಕೆ ನಿರ್ದಿಷ್ಟ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಧಾರವಾಡ, ಮೈಸೂರು, ಮಂಗಳೂರಿನ ಸಂಸ್ಕೃತಿಗಳು 'ಕನ್ನಡ ಪ್ರಜ್ಞೆ'ಯ 'ಕರ್ನಾಟಕ ಸಂಸ್ಕೃತಿ'ಯ ಮಾದರಿಗಳಾದಂತೆ ಬೆಂಗಳೂರಿಗೆ ಒಂದೇ ನಿರ್ದಿಷ್ಟ ಮಾದರಿಯ ಮೂರ್ತತೆಯನ್ನು ತೋರುವುದು ಕಷ್ಟ. ಬೆಂಗಳೂರಿನ ಬಹುಮುಖ್ಯ ಆಚರಣೆಯೆಂದು ಒಂದನ್ನು ಮಾತ್ರ ತೋರಲು ಸಾಧ್ಯವಿಲ್ಲ. ಇಲ್ಲಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವೈರುಧ್ಯಗಳನ್ನು ಗಮನಿಸಿದಾಗ "ಇಲ್ಲಿ ಎಲ್ಲವೂ ಮುಖ್ಯ ಹಾಗೂ ಯಾರೂ ಮುಖ್ಯರಲ್ಲ".

ವರ್ಗ ಸಂಘರ್ಷದ ನೆಲೆಯಲ್ಲಿ ಉಳಿದುಕೊಂಡಿರುವ ಕೆಲವು ಅನ್ಯಧರ್ಮೀಯರ ಆಚರಣೆಗಳನ್ನು ಗಮನಿಸಿದಾಗ– ಮಾರ್ಕ್ಸ್ ಹೇಳುವ "ಧರ್ಮ ಅಫೀಮು" ಎಂಬ ಮಾತು ನೆನಪಾಗುತ್ತದೆ. ತಮ್ಮ ಉಳಿವಿನ ಪ್ರಶ್ನೆ ಬಂದಾಗ ಅನ್ಯಧರ್ಮೀಯರು ಸಾಂಸ್ಥಿಕ ಧರ್ಮವನ್ನು ಪ್ರಾದೇಶಿಕವಾಗಿ ಪ್ರತಿಷ್ಠಾಪಿಸಿ, ಆಚರಣೆಗಳ ಮೂಲಕ ಒಂದು ಸಾಂಸ್ಕೃತಿಕ ರಾಜಕಾರಣವನ್ನು ಹುಟ್ಟು ಹಾಕಿತು. ಅದು ಅಪಾಯದ ನೆಲೆಯನ್ನೂ ಮೀರಿ ಮುಟ್ಟಿತ್ತು. ಇಂದು ತಳ ಸಮುದಾಯವನ್ನು ಸಂಯೋಗಗೊಳಿಸುವುದರ ಮೂಲಕ ಸಾಂಸ್ಕೃತಿಕ ವಿಲೀನತೆಯ ಪ್ರಕ್ರಿಯೆಯನ್ನು ಹುಟ್ಟುಹಾಕಿ ಮೂಲ ಸಂಸ್ಕೃತಿಯ ಒಂದು ಭಾಗದೊಂದಿಗೆ ಪರಕಾಯ ಪ್ರವೇಶವನ್ನು ಅನ್ಯ ಧರ್ಮೀಯ

ಆಚರಣೆಗಳು ಮಾಡಿರುವುದನ್ನು ಗಮನಿಸಬಹುದು. ದಕ್ಷಿಣ ಏಷ್ಯಾದ ತೃತೀಯ ಜಗತ್ತಿನ ಅತ್ಯಂತ ಮಹತ್ವದ ಧಾರ್ಮಿಕ ರಾಜಕಾರಣ ಇದು.

ಇನ್ನು ತಳ ಸಮುದಾಯ ಉಪಸಂಸ್ಕೃತಿಯ ಆಚರಣೆಗಳು ಭೌಗೋಳಿಕ ವಿಸ್ತರಣೆಯ ನೆಪದಲ್ಲಿ ವಿಕೇಂದ್ರೀಕರಣಗೊಂಡು ತನ್ನ ಸಾವಯವದ ಸಾಂದ್ರತೆಯನ್ನು ಕಳೆದುಕೊಂಡು ತೆಳುವಾಗಿರುವುದನ್ನು ಕಾಣಬಹುದು. ಆ ಮೂಲಕ ಸಮಷ್ಟಿ ಪ್ರಜ್ಞೆಯೊಂದು ವಿಘಟಿತವಾಗಿ ಅಲ್ಲೊಂದು ಸಮಾಜೋ ರಾಜಕಾರಣ ನೀತಿ ಉದ್ಭವವಾಗಿರುವುದನ್ನು ಕಾಣಬಹುದು.

ಈ ಅಧ್ಯಯನದ ಒಳನೋಟಗಳಿಂದ ಸಾಂಸ್ಕೃತಿಕ ನೀತಿಯೊಂದನ್ನು ಸ್ಥಾಪಿಸಬಹುದು. ಶಿಷ್ಟ ದೈವಗಳು ಮತ್ತು ಗ್ರಾಮ ದೈವಗಳ ಆಚರಣೆಗಳ ಜೊತೆಗೆ ' ಒಂದು ಮೂಕ ಅಮೈತ್ರಿ' ಇದೆ. ಪ್ರಧಾನ ಸಂಸ್ಕೃತಿಯೊಂದು ಅಧೀನ ಸಂಸ್ಕೃತಿಯ ಆಚರಣೆಗಳಲ್ಲಿ ತಾನೂ ಪಾಲ್ಗೊಳ್ಳುವುದು, ಈ ಗ್ರಾಮ ದೈವಗಳ ಪ್ರಜ್ಞೆಯ ಪಯಣದಲ್ಲಿ ತಾವೂ ಸಂಯೋಗಗೊಂಡಿರುವುದನ್ನು ಕಾಣಬಹುದು. ನಗರದ ಸಾಂಸ್ಕೃತಿಕ ಉತ್ಸವ ಕರಗದಂದು ಮತ್ತು ಯಾವುದೇ ಗ್ರಾಮದೇವತೆಗಳ ಹಬ್ಬಗಳಲ್ಲಿ ಶಿಷ್ಟ ದೇವರುಗಳೂ ಸಹಾ ಸಾಲಂಕೃತ ಮೆರವಣಿಗೆ ಹೊರಡುವುದನ್ನು ಕಾಣಬಹುದು, ಇಲ್ಲಿ ಇದು ಅರಿವಿನ ಕ್ರಮದ ಪಲ್ಲಟ, ಶ್ರೇಣೀಕೃತ ಸಮಾಜ ಅಲಿಖಿತ ಕರಾರೊಂದರ ಮೇಲೆ ಅಧೀನ ಸಂಸ್ಕೃತಿಯ ವಿಜಯ ಎಂದು ಮೇಲ್ನೋಟಕ್ಕೆ ಕಾಣಿಸುತ್ತದೆ. ಈ ನಿಟ್ಟಿನಲ್ಲಿ ಶ್ರೇಣೀಕೃತ ಸಮಾಜದ ಸಂರಚನೆಯನ್ನು ಬಾಹ್ಯವಾಗಿ ಒಡೆಯುವುದು ಸಮರ್ಪಕವೋ ಅಥವಾ ಆಂತರಿಕ ಒಡೆತನವನ್ನು ಪಡೆದುಕೊಳ್ಳುವುದು ಸೂಕ್ತವೋ ? ಎಂಬುದು ನಾನೇ ಕೇಳಿಕೊಳ್ಳಬೇಕಾದ ಪ್ರಶ್ನೆ. ಸಾಂಸ್ಕೃತಿಕ ಸ್ಮೃತಿಯ ಭಾಗವಾದ ಆಚರಣೆಯೊಂದು ಆಧುನಿಕತೆಯ ಜೊತೆಗೆ ಮುಖಾಮುಖಿಯಾಗುತ್ತಲೇ ತನ್ನ ಹೊಸ ಅಗತ್ಯ ಮತ್ತು ಅವಶ್ಯಕತೆಗಳನ್ನು ಪೂರೈಸಿಕೊಂಡಿರುವುದನ್ನು ಇಲ್ಲಿ ಮನಗಾಣಬಹುದು.

ಅನುಬಂಧಗಳು

೧. ಕೆಂಪೇಗೌಡನ ಲಾವಣಿ

೨. ಜನಪದ ಕಥೆ

೩. ವಕ್ತೃ ಸೂಚಿ

೪. ಆಕರ ಗ್ರಂಥಗಳು

೫. ನಕ್ಷೆಗಳು

೬. ಛಾಯಾ ಚಿತ್ರಗಳು

೧. ಕೆಂಪೇಗೌಡನ ಲಾವಣಿ

ಅನುಬಂಧ

ಕೆಂಪೇಗೌಡನ ಲಾವಣಿ

ಏಳು ತಿಂಗ್ಳು ಬಿಮ್ಮನ್ಸೆ ಸೊಸೆ ಅವ್ತಿ ಕೊಡಬೇಕು

ಅಯ್ಯ- ಉತ್ತುರ ಹುಲಿಯೂರು ದುರ್ಗ ಹುಲಿಯ ಮಾಗಡಿಕೋಟೆ ತಂದನಾನೆ ತಾನೆ
ಅಂತ-ಹುಲಿಯ ಮಾಗಡಿ ಕೋಟೆ ಕೊನೆಯ ಗೊಂಬಿನನ ಮ್ಯಾಲೆ
ಮಾಗಡಿ ಪಟ್ಣಣದಲ್ಲಿ ಗಜಮುತ್ತೀನರಮನೆ
ಗಜಮುತ್ತಿನರಮಲ್ಲಿ ಗಜೀನ ಕಲುಕಂಬ
ಗಾಜೀನ ಕಲುಕಂಬ ರಝುಜುಣ ಕೆಂಪೇಗೌಡ
ರಾಜುಣ ಕೆಂಪೇಗೌಡ ದೊರೆಯಾಪ್ತಿ ಮಾಡುತಾನೆ
ದೊರೆಯಾಪ್ತಿ ಮಾಡುತಾನೆ ಸಿರಿಯಾಪ್ತಿ ಮಾಡುತಾನೆ
ಮೊರಸು ಒಕ್ಕಲಮಗ ಮಾಗುಡಿಯ ಕೆಂಪೇಗೌಡ
ಅಂಥ ಒಕ್ಲುಮಗನ ದರ್ಬಾರ ಎಷ್ಟೆಂದು ಹೇಳಲಯ್ಯ
ಅವ್ನ ದರ್ಬರದ ಮಾಮೂಲೊತ್ತು ಮಾಡುವಂತ ಕಾಲದಲ್ಲಿ
ನನ್ನ-ಮನನುಸ್ವಾಮಿ ರಂಗಧಾಮ ಕುಲುಸ್ವಾಮಿ ರಂಗಧಾಮ
ನನ್ಗೆ-ಸಕಲ ಭಾಗ್ಯಾನೆಲ್ಲ ಉಂಟುಮಾಡಿ ಕೊಟ್ಟನಲ್ಲ
ಆಗ-ಪೂಜಾರಿ ನರಸಯ್ಯ ಬ್ಯಾಗದಲ್ಲಿ ಕರಿಸ್ಯಾನೆ
ಅವುನ್ಗೆ- ಏನಾಗ್ನೆ ಮಾಡುತಾನೆ ಮಾಗಡಿ ಕೆಂಪೇಗೌಡ
ನಮ್ಮ ಸತ್ಯವುಳ್ಳ ರಂಗಧಾಮ್ನೆ ಏಳು ಪೂಜೆ ಮಾಡಬೇಕು
ಸ್ವಾಮಿ-ಏಳುಪೂಜೆ ಮಾಡಬೇಕು ಏಳು ತಳ್ಗೆ ಮಾಡಬೇಕು
ನಿನ್ಗೆ- ನೂರಾರು ಬಟುಮಾನ್ಯ ಸಂಬಳಾವ ಕೊಡುತೀನಿ
ಸ್ವಾಮಿ- ಹೀಗಂತ ಹೇಳುಬುಟ್ಟು ಮಾಗ್ಡಿ ಕೆಂಪಣ್ಣಗೌಡ
ಅಣ್ಣೋಜಿ ರಾಣೋಜ್ಗೆ ವಾಲೆ ಉತ್ರ ಕಳುಸೀದ
ಅವ್ರು-ವಾಲೆ ಉತ್ರ ಓದೊಕೊಂಡು ಓಡಿ ಓಡಿ ಬಂದಿರಲ್ಲೋ
ಆಗ- ಎಪ್ಪತ್ತು ಏಳುಮಂದಿ ಪಾಳೆಗಾರ್ರ ಕರೆಸೀದ
ಎಪ್ಪತ್ತು ಏಳುಮಂದಿ ಪಾಳಗಾರ್ರ ಕರೆಸೀದ

ಅಪ್ಪ–ದಿನವೂ ಮದ್ದಾನದೊತ್ಗೆ ಸೇರಿತಲ್ಲೋ ರಾನ್ಯೆವು
ಆಗ–ಪಟ್ಟದಾನೆ ಮ್ಯಾಲೆ ಶಿವನೆ ಕುಂತುಕೊಂಡ ಕೆಂಪೇಗೌಡ
ಅವ್ನು ಸಕಲ ಸಂಪತ್ತಿನಲ್ಲಿ ಅಷ್ಟ ಈಭೋಗದಲ್ಲಿ
ಆಗ–ಮನೆದೇವ್ರೆ ಗುಡಿಗಾಗ ಬಂದನೆ ಕೆಂಪೆಗೌಡ
ಅವ್ನು–ಏಳು ಪೂಜೆ ಮಾಡಿಸೀದ ಏಳುತಳ್ಗೆ ಮಾಡಿಸೀದ
ಸ್ವಾಮ್ಗೆ–ಹನ್ನೆರಡು ಕಂಡುಗದಕ್ಕಿ ಪರೂಪಾಡ್ಯ ಮಾಡಿಸೀದ
ಅಲ್ಲಿ–ರಾಣ್ಯವಾದ ರಾಣ್ಯವೆಲ್ಲ ಹಲರ್ಗೂಗಟೆ ಕರುಕೊಂಡು
ಅಂತೆ ಬೆಂಗಳೂರು ಪ್ಯಾಟೆಯಲ್ಲಿ ಹಲಸೂರು ಬೀದಿಯಲ್ಲಿ
ಸೋಮಜಮ್ಮರ ಮಗಳು ರತ್ನೋಜಿ ಎಂಬೋ ಹೆಣ್ಣ
ರತ್ನೋಜಿ ಎಂಬ ಹೆಣ್ಣ ತಂದನಪ್ಪ ಕೆಂಪೇಗೌಡ
ಮಾಗಡಿ ಪಟ್ಟಣದಲ್ಲಿ ಸಾವ್ರೆ ಕಂಬದರುಮಲ್ಲಿ
ಸಾವ್ರೆ ಕಂಬದರುಮಲ್ಲಿ ಮದುವೇನೆ ಆದನಂತೆ
ಆಗ–ಬಂದಂಥ ಜನರೀಗೆ ಅನ್ನ ಛತ್ರ ನಡೆಸೀದ
ಅವ್ನು– ಹನ್ನೆರಡು ದಿವ್ಸಾನೆ ಲಗ್ನವನ್ನೆ ಆದನಲ್ಲೋ
ಆಗ– ಸಾವ್ರ ಕಂಬುದರಮಲ್ಲಿ ಏಳ್ಮೆಟ್ಟಜಾರದಲ್ಲಿ
ಅವ್ನು– ದರ್ಬಾರನಾಳುತಾನೆ ಮಾಗಡಿ ಕೆಂಪಣ್ಣಗೌಡ
ಅವ್ನ– ಹಿಂದೆ ಸಾವುರ ದಂಡು ಮುಂದೆ ಸಾವುರ ದಂಡು
ಅಯ್ಯ–ಹೆತ್ತ ತಾಯಿ ಕುಪ್ಪಮ್ಮ ಅತ್ತಿಗೆ ಹರಿಯಾಲದೇವಿ
ಅಂಥ–ಸಾವುರ್ಕಂಬ್ದ ಅರಮಲ್ಲಿ ಗುಜ್ಜರೀಯ ಮಂಚುದ್ಮೇಲೆ
ಅವ್ರು– ವಜ್ಜುರಾದ ದಿಂಬುನ್ಮೇಲೆ ಒರ್ಗಿ ನಿದ್ದೆ ಮಾಡುತಾರೆ
ಆಗ–ಕೆಲವಾರು ದಿವಸಾವೆ ರಾಜ್ಯಭಾರೊಂದಾಳಿದಾರು
ಆಗ–ಕೆಂಪೇಗೌಡಗಾದರೆ ಮಕ್ಕಳೊಂದಾಗಲಿಲ್ಲ
ಅಯ್ಯ– ಭಾರಿ ಯೋಚ್ನೆ ಬಂದಿತಲ್ಲೊ ಕೆಂಪೇಗೌಡನಿಗೆ ಈಗ
ಆಗ– ಹರಿಯಮ್ಮನಿಗೆ ಈಗ ಏನಂತ ಹೇಳುತಾನೆ
ಅಮ್ಮ–ಇಷ್ಟು ನಮಗೆ ಐಸ್ವರ್ಯ ಇದ್ದು ಇನ್ನು ಫಲವೇನು
ಅಯ್ಯ– ಐಸ್ವಿರಿಗೆ ತಕ್ಕಂತ ಪುತ್ರುಭಾಗ್ಯ ನಮಗಿಲ್ಲ

ಅಯ್ಯ– ಭಾಗ್ಯಾದ ಭಾಗ್ಯಕ್ಕಿಂತ ಪುತ್ರಭಾಗ್ಯ ನಮಗಿಲ್ಲ
ಅಯ್ಯ– ಮಕ್ಕಾಳ ಫಲಕಾಗಿ ಏನು ಕೆಲ್ಸ ಮಾಡಿದಾನು
ಆಗ ಐಸ್ವರಿ ಕೊಟ್ಟಂತ ರಂಗಧಾಮ್ನ ಗುಡಿಯನ್ನು
ಮೂರು ಬಳ್ಸ ಬರುತಾನೆ ಏಳುಪೂಜೆ ಮಾಡ್ಸುತಾನೆ
ಆಗ ದೇವುಸ್ತಾನ್ದ ಪಕ್ಕದಲ್ಲಿ ಇಪ್ಪೇಯ ತೋಪಯ್ಯ
ಇಪ್ಪಯ್ಯ ತೋಪಿನಲ್ಲಿ ಧರ್ಮಛತ್ರ ಕಟ್ಟಿಸವ್ನೆ
ಆಗ– ಬೇಕಾದಷ್ಟು ಈಗ ದಾನಧರ್ಮ ಮಾಡಿದನು
ಆಗ– ಎನು ದಾನ ಮಾಡಿದಾರು ಪುತ್ರಭಾಗ್ಯವೊಂದಾಗಲಿಲ್ಲ
ಅಯ್ಯ–ಕೆಂಪೇಗೌಡನಾದರೇಯ ಏನು ಚಿಂತೆ ಮಾಡುತಾನೆ
ಅಯ್ಯ– ನಮಗಾದ್ರೆ ಪುತ್ರುಭಾಗ್ಯ ಆಗಲಿಲ್ಲ ಜಗದೀಶ ೨೭೦೦
ಆಗ–ಎಲ್ಲಾದರೋಗಬೇದು ಸಾಕುಮಗನೆ ತರಬೇಕು
ಆಗ– ಪಾಳ್ಯಗಾರ್ರ ವಂಶಾಕೆ ಹೋಗುತಾನೆ ಕೆಂಪೆಗೌಡ
ಅಂಥ– ಪಾಳ್ಯೆಗಾರ್ರ ವಂಶಾದಲ್ಲಿ ವೀರಭದ್ರ ಎಂಬ ಮಗನ
ಆಗ– ವೀರಭದ್ರ ಎಂಬ ಮಗನ ಸಾಕುಮಗನ ತಂದುಕೊಂಡ
ಸಾಕುಮಗನ ತಂದುಕೊಂಡ ಸಾಕಿಗೊಂಡ ಕೆಂಪೇಗೌಡ
ವೀರಭದ್ರ ಮಗನನ್ನು ಸುಕದಿಂದ ಸಾಕಿಕೊಂಡ
ಸುಕದಿಂದ ಸಾಕಿಕೊಂಡು ಕೆಂಪೇಗೌಡನಾದರೇಯು
ಆಗ– ಕೆಂಪೇಗೌಡನದರೆ ಯೋಚನೆಯ ಮಾಡಿಕೊಂಡು
ಆಗ– ನನ ಮಗನಾದರೆ ವೀರಭದ್ರನಪ್ಪ
ಆಗ– ನನ ಮಗನಿಗೆ ನಾನು ಲಗ್ನಾವ ಮಾಡಬೇಕು ೨೭೧೦
ಅಂಥ– ಮಾಗುಡಿ ಪ್ಯಾಟೆಯಲ್ಲಿ ಹೆಣ್ಣನ್ನೆ ನೋಡುತಾನೆ
ಆಗ– ಲಕ್ಷ್ಮದೇವಿ ಎಂಬೋ ಹೆಣ್ಣ ಮಗನೀಗೆ ನೋಡುತಾನೆ
ಆಗ– ಮಗನೀಗೆ ಶುಭದಿವಸ ಲಗ್ನಾವ ಮಾಡುತಾನೆ
ಆಗ– ಮಗನೀಗೆ ಮದ್ವೆಮಾಡಿ ಸುಕದಿಂದ ಇರುತಾನೆ.
ಅಯ್ಯ– ಒಂದಾನು ಒಂದು ದಿವ್ಸ ಮಾಗಡಿ ಕೆಂಪೇಗೌಡ
ಮಂತ್ರಿ ಪರಧನಿಗಳೆ ಬೇಸರಕೆ ಆಗುತಾದೆ

ಅಯ್ಯ– ಈವತ್ತುನ ದಿವಸಾವೆ ಬ್ಯಾಟೆ ಮಾರ್ಗಹೋಗಬೇಕು
ಅಯ್ಯ– ವನಾಂತ್ರವನ್ನಾದ್ರೆ ನೋಡಿಕೊಂಡು ಬರಬೇಕು
ಆಗ– ಗೌಡಳಿಕೆ ಕಟಿಕೊಂಡು ಪಾಳೆಗಾರ್ರ ಕಟಿಕೊಂಡು
ಅಯ್ಯ– ಮಂತ್ರಿ ಪ್ರಧಾನಿಗಳ ಹಿಂದುಗಡೆ ಇಟುಕೊಂಡು
ಅಯ್ಯ– ಬಿಳಿಯ ಕುದ್ರೆಮೇಲೆ ಕೆಂಪೇಗೌಡ ಕುಂತುಕೊಂಡು
ಅಯ್ಯ– ಮಂದಿ ಮಾರ್ಬಲ ಕಟಿಕೊಂಡು ಕೆಂಪೇಗೌಡ
ಅಯ್ಯ– ಬೆಂಗಾಡು ಸೀಮೆಗೀಗ ಬ್ಯಾಟೆಮಾರ್ಗ ಬರುತಾರೆ
ಅಯ್ಯ– ಬಿಳಿಕುದ್ರೆಯಾದರೆ ಕೆನೆಯೂತ ಹಾರೀತು
ಅಯ್ಯ– ಗಗನ ಖೇಚರದಲ್ಲಿ ಹೋಗುತಾನೆ ಕೆಂಪೇಗೌಡ
ಅಯ್ಯ– ಮೂರು ಗಾವುದಾವೆ ಕೆಬ್ಬೆಕಾಡಿನಲ್ಲಿ
ಅಯ್ಯ– ಕೀಕಾರಣ್ಯದಲ್ಲಿ ಕುದುರೇಯು ಬರುತಿತ್ತು
ಅಯ್ಯ– ಬರುವಂತ ಗಳುಗೇಲೀ ಏನು ಪವಾಡವೋ
ಬ್ಯಾಟೆ ನಾಯಿ ಬಿಟುಕೊಂಡು ಬರುವಂತ ಕಾಲದಲ್ಲಿ
ಒಂದು ಮೊಲವಾದರಯ್ಯ ಬ್ಯಾಟೆನಾಯಿ ಅಟುಕೊಂಡು
ಅಟುಕೊಂಡು ಬಂದಿತಂತೆ ನಾಯಕಾಲ ಕಚ್ಚಿತಂತೆ
ಅಯ್ಯ– ಕೆಂಪೇಗೌಡ ಕಣ್ಣಿನನಿಂದ ನೋಡಿದಾನೆ ಬೇಗದಿಂದ
ಅಯ್ಯ– ಕುದುರೇಯ ಗಪ್ಪಂತ ಅಲ್ಲೇ ನಿಲ್ಲಿಸೀದ
ಅಯ್ಯ– ಇದು ಏನು ಎಂದು ಜಪ್ಪಂತ ಇಳಿದಾನು
ಅಯ್ಯ– ಮಂತ್ರಿ ಪರಧಾನಿಗಳ ಕರೆದಾನೆ ಬೇಗುದಿಂದ
ಇದು ಏನು ಆಸ್ತರ್ಯ ನೋಡು ಬನ್ನಿ ಎನುತಾನೆ
ಅಯ್ಯ– ಈ ಭೂಮಿ ಎಂತೆ ಗಂಡು ಭೂಮಿಯಯ್ಯ
ಗಂಡು ಭೂಮಿಯಲ್ಲಿ ನನ್ನ ರಾಜ್ಯಾವ ಕಟ್ಬಬೇಕು
ಹಂಗಂತ ಅಂದುಕೊಂಡು ಅರ್ಥಗಾವ್ದ ಬರುತಾರೆ
ಅಯ್ಯ– ಹಸುವಾದ್ರೆ ಆಗುತೀದೆ ದಾವಾದ್ರಾ ಆಗುತೀದೆ
ಅಯ್ಯ– ಅಲ್ಲೋಂದು ಹುಲ್ಲೀನ ಗುಡುಸಾಲ ನೋಡವ್ರೆ
ಅಯ್ಯ– ಗುಡಿಸಾಲಿಗಾದರೆ ಬೇಗದಿಂದ ಬರುತಾರೆ

ಅಯ್ಯ- ಕೆಂಪಮ್ಮದೇವಿ ಅವರ ಮನೆ ದೇವತೆ
ಹಣ್ಣು ಹಣ್ಣು ಮುದುಕ್ಕಾಗಿ ಅಲ್ಲಾದ್ರೆ ಇರುತಾಳೆ
ಅಯ್ಯ- ಮಾಗಡಿ ಕೆಂಪೆಗೌಡ ಗುಡಿಸಲಿಗೆ ಬರುತಾನೆ
ಅಮ್ಮ- ಯಾರವ್ವ ಮನೆಯಲ್ಲಿ ನೀರನ್ನು ಕೊಡಿರವ್ವ
ಬಾಳ ದಾವಾಗುತೀದೆ ಬಾಳ ಹಸುವಾಗಿತೀದೆ
ಅಮಮ- ನೀರ ಕೊಟ್ಟರೆ ನಿಮ್ಗೆ ಬಾಳ ಪುಣ್ಯಾವು
ಕೆಂಪೇಗೌಡ್ನ ದನಿಕೇಳಿ ಕೆಂಪಮ್ಮ ದೇವಿಯು
ಅಯ್ಯ- ಹಣ್ಣು ಹಣ್ಣು ಮುದುಕ್ಕಾಗಿ ಬಂದಾದ್ರೆ ನೋಡುತಾಳೆ
ಅಮ್ಮ- ಕೇಳು ಕೇಳು ಮುದುಕಮ್ಮ ನನ ಮಾತ ಕೇಳಮ್ಮ
ಅಮ್ಮ- ನನಗೀಗ ಸಹುವಾದ್ರೆ ಆಗುತೀದೆ ತಾಯಮ್ಮ
ಅಮ್ಮ- ಅನ್ನಾವ ಕೊಡುತಾಯಿ ಪ್ರಾಣಾವ ಉಳಿಸಮ್ಮ
ಅಯ್ಯ- ಇಲ್ಲಿ ಯಆಕೆ ಬಂದಿರಪ್ಪ ಕೀಕಾರಣ್ಯಾಕೆ
ಅಪ್ಪ- ಮೊದಲು ನೀವೆಲ್ಲ ನೀರಾದ್ರೆ ಕುಡೀರಪ್ಪ
ಹಸಿದು ಬಂದಿವಿ ನಾವು ಏನ ಕೊಡ್ತಿ ತಾಯಿ
ಬೆಂಗೃತ್ತಿದ ಹುಳ್ಳಿಕಾಳ ಕೊಡತೀನಿ ನಿಮಗೆಲ್ಲ
ಅಪ್ಪ ಬಡವರ ಮನೆಯೂಟ ರಾಜರಿಗೆ ಸಮನಲ್ಲ
ಬೆಂಗಾಡು ಜನಕೆಲ್ಲ ಬೆಂಗಾಳ ಪ್ರಾಣವಪ್ಪ
ಅಜ್ಜಿ- ಬೆಂಗಾಳ ತತ್ತವ್ವ ತಿಂದು ನೋಡುತೀನಿ
ಅಪ್ಪ- ಬೆಂಗಾಳ ಕೊಟ್ಟರೆ ನಮ್ಮೂರಿಗೇನಪ್ಪ
ಅಜ್ಜಿ- ಬೆಂಗಾಡು ಭೂಮಿ ಗಂಡು ಭೂಮಿಕಾಣವ್ವ
ನೀನು ಬೆಂಗಾಳ ಕೊಟ್ಟರೆ ಬೆಂಗಾಡು ಭೂಮಿಯನ್ನು
ಅಜ್ಜಿ ಬೆಂಗಾಳ ಕೊಟ್ಟೂರ ಬೆಂಗಳೂರ ಮಾಡುತೀನಿ
ಬೊಕ್ಕೆ ಬೊಕ್ಕೆ ಹುಳ್ಳಿಕಾಳ ಎಲ್ಲರಿಗೂ ಕೊಟ್ಟವುಳೆ
ಹುಳ್ಳಿಕಾಳ ತಿಂದವ್ರೆ ನೀರನ್ನ ಕುಡಿದವ್ರೆ
ಆಗ ಅಜ್ಜೀಯು ಬೆಳ್ಳುಮಾಡಿ ನಾಕುಮೂಲೆ ತೊರಿಸವ್ನೆ
ಅವ್ವು ತೋರ್ಸಿದಂತ ಮೂಲೆಗೆ ನಾಕು ಕಲ್ಲ ಮಡುಗವ್ನೆ

ಅಜ್ಜಿ ಬೆಂಗಾಡ ನಾನು ಬೆಂಗಳೂರ ಮಾಡುತೀನಿ
ಹೋಗಿ ಬರುತೀವಜ್ಜಿ ಅಸುರ್ವಾದ ಮಾಡುತಾಯಿ
ಅಪ್ಪು ನಿನ ವಾಕ್ಯ ಸ್ಥಿರವಾಗ್ಲಿ ಅನುತಾಳೆ ಕೆಂಪಮ್ಮ
ಕುಲಮಗನ ಕಣ್ತುಂಬ ನೋಡಿ ಕಳ್ಸಿಕೊಡುತಾಳೆ
ಅಯ್ಯ ಬೇಗದಿಂದ ಕೆಂಪೆಗೌಡ ಮನಿಗಿನ್ನು ಬರುತಾನೆ
ಆಗ ದುಡ್ಡೀನ ಕಣಜಾವ ಕೀಳುತಾನೆ ಕೆಂಪೇಗೌಡ
ಆಗ ಗಾಡಿಮ್ಯಾಲೆ ಹಣವನ್ನು ಹೇರಿಕೊಂಡು ಕೆಂಪೇಗೌಡ
ಹಣವನ್ನ ಹೇರಿಕೊಂಡು ಬೆಂಗಾಡ್ಗೆ ಬರುತಾನೆ
ಆಗ– ಬೇಕಾದಷ್ಟು ಅಲ್ಲಿ ಮನೆಗಳ ಕಟ್ಟುತಾನೆ
ಅಯ್ಯ– ಬಡವರಿಗೆಲ್ಲ ಮನೆಮಠ ಕಟ್ಟುತಾನೆ
ಅಯ್ಯ– ಬಡವರಿಗೆಲ್ಲ ಮನೆಮಠ ಹಂಚುತಾನೆ
ಅಯ್ಯ– ಹನ್ನೆರ್ಡು ಮೈಲಿ ದೂರ ಏಳುಸುತ್ತಿನ ಕ್ವಾಟೆ
ಆಗ– ಏಳುಸುತ್ತೀನ ಬೆಂಗಳೂರು ಕ್ವಾಟೆಗೆ
ಏಳೇಳು ಆಳುದ್ದ ಬಾಕ್ಲಾನೆ ಕಟ್ಟುತಾನೆ
ಅಯ್ಯ– ಈವತ್ತು ನಿಲ್ಸಿದ ಬಾಕ್ಲು ನಿಲ್ಲಾದೆ ಬಿದ್ದೋಗುತಾದೆ
ಏನು– ಮಾಡಿದರೂ ಕ್ವಾಟೆಬಾಕ್ಲು ನಿಲ್ಲಾದೆ ಹೋಯಿತಯ್ಯ
ಆಗ– ಮಂಚದಲಿ ಮಕ್ಕಾಡೆ ಮನಿಗಿದನು ಕೆಂಪೆಗೌಡ
ಅಯ್ಯ– ಎಲ್ಲೆಲ್ಲೊ ಪುಣ್ಯಛತ್ರ ಮಾಡಿಸೀದೆ ನಾನೀಗ
ಆಗ– ಎಲ್ಲಾದ್ರು ನನಗೀಗ ಅವುಮಾನವಾಗಲಿಲ್ಲ
ಆಗ– ಕ್ವಾಟೆ ಬಾಕ್ಲು ನನಗೀಗ ಅವುಮಾನ ಮಾಡುತೀದೆ
ಅಯ್ಯ– ಎಷ್ಟು ಜನ ಈಗ ನನ್ನ ಆಡಿಕೊಳ್ಳುತರಯ್ಯ
ಅಯ್ಯ– ನಾನು ಬಾಳಿ ಬದುಕಿ ಫಲವೇನು ಬಂದಿತಯ್ಯ
ಅಯ್ಯ– ಮಂಚದಲಿ ಮಕ್ಕಾಡೆ ಮನಿಕೊಂಡು ಕೆಂಪೆಗೌಡ
ಅಯ್ಯ– ಚಿಂತೇಯ ಮಾಡುತಾನೆ ದುಕ್ಕಾವ ಮಾಡುತಾನೆ
ಅಯ್ಯ– ಸಪ್ಪಟ್ಟು ಸರುವೊತ್ತಲ್ ಸೊಂಪು ನಿದ್ದೆ ಹತ್ತಿತಯ್ಯ
ಆಗ ಕನಸೀಗೆ ಬರುತಾವೆ ಕ್ವಾಟೆಬಾಕ್ಲು ಬೇಗದಿಂದ

ಆಗ– ಕನಸೀಗೆ ಬಂದು ಈಗ ಏನಂತ ಹೇಳುತಾದೆ
ಆಗ– ಕೇಳು ಕೇಳು ಕೆಂಪೇಗೌಡ ಕೇಳಯ್ಯ ನನ ಮಾತ
ನಿನ್ನ– ಏಳು ತಿಂಗ್ಳು ಬಿಮ್ಮನ್ಸೆ ನಿನ್ನ ಸೊಸೆ ಲಕ್ಷ್ಮಿದೇವಿ
ನಿನ್ನ– ಏಳುತಂಗ್ಳು ಬಿಮ್ಮನ್ಸೆ ಸೊಸೆ ಆವ್ತಿ ಕೊಡಬೇಕು
ನನ್ನ– ಕ್ವಾಟೆ ಬಾಕ್ಲೂಗೆ ಆವ್ತೀಯ ಕೊಡಬೇಕು
ಕೊಟ್ಟಾರೆ ನಿಲ್ಲುತೀನಿ ಕೊಡದಿದ್ರೆ ಸಾಧ್ಯುವಿಲ್ಲ
ಅಯ್ಯ– ಬಂದು ಈಗ ಕ್ವಾಟೆ ಬಾಕ್ಲು ಕೇಳುತಾದೆ ಕೆಂಪೆಗೌಡ್ನ
ಅಯ್ಯ– ಧಿಗ್ಗಂತ ಮ್ಯಾಲುಕ್ಕೆ ಎದ್ದಾನು ಕೆಂಪೆಗೌಡ
ಅಯ್ಯೊ– ಕ್ವಾಟೆ ಬಾಕ್ಲು ಬಂದು ಈಗ ನನ್ನ ಸೊಸೆ ಕೇಳುತಾದೆ
ನನ್ನ ಸೊಸೆ ಲಕ್ಷ್ಮಿ ದೇವ್ಯ ಯಾವ ರೀತಿ ಬಲಿಕೊಡ್ಲಿ
ಅಯ್ಯ– ಸ್ರಿಸುಹತ್ಯಾ ಸ್ರೀಹತ್ಯ ಗೋಹತ್ಯ ಪಾಪಾವು
ಅಯ್ಯ– ಭರಿ ದುಕ್ಕ ಮಾಡಿಕೊಂಡು ಮಂಚುದ್ಮೇಲೆ ಮನುಗವ್ನೆ
ಅಯ್ಯ– ಏಳುದಿನವಾದರು ಏಳಲಿಲ್ಲ ಕೆಂಪೆಗೌಡ
ಅಯ್ಯ– ಒಳಗಿಂದ ಬರುತಾಳೆ ಲಕ್ಷ್ಮಿದೇವಿ ಬೇಗದಿಂದ
ಆಗ– ಕೇಳಿ ಕೇಳಿ ಮಾವಯ್ಯ ಕೇಳಯ್ಯ ನನ ಮಾತ
ಅಯ್ಯ– ದಿನದಿನ ಕಮಲಂತ ಮುಕದಲ್ಲಿ ಕಳೆಯಿತ್ತು
ನಿಮ್ಮ– ಮುಕವಾದ್ರೆ ಕಂದಿರಲು ಕಾರಣವೇನು ಹೇಳಿ
ಮುಕವ ಸಪ್ಪಾಗೆ ಮಾಡಿದ್ದೀರಲ್ಲ ಸ್ವಾಮಿ
ಅಯ್ಯ– ಯಾವ ಕಷ್ಟವು ನಿಮಗೆ ಒದಗೀತು ಮಾಸ್ವಾಮಿ
ಆಗ– ಲಕ್ಷ್ಮಿ ದೇವಿ ಕೇಳಮ್ಮ ಏನಂಥ ಹೇಳಲಮ್ಮ
ಸ್ವಾಮಿ– ಅಂತ ಕಷ್ಟವೀಗ ಯಾವುದು ಹೇಳಿರಪ್ಪ
ಲಕ್ಷ್ಮಿದೇವಿ ಮುಕವನ್ನು ನೋಡುತಾನೆ ಕೆಂಪೆಗೌಡ
ಅಯ್ಯ– ಮುಕವನ್ನು ನೋಡುತಾನೆ ಭಾರಿದುಕ್ಕ ಮಾಡುತಾನೆ
ಅಯ್ಯ– ಇಂತೆ ಸೊಸೆಯ ನಾನು ಯಾವ ರೀತಿ ಆವುತೀಯ
ಯಾವ ರೀತಿ ನಾನು ಆವುತೀಯ ಕೊಡಲಯ್ಯ
ಆಗ– ಭಾರಿ ದುಕ್ಕ ಮಾಡುತಾನೆ ಭಾರಿಶೋಕ ಮಾಡುತಾನೆ

ಮಾವಾನ ಪಾದವನ್ನು ತಬ್ಬುಕೊಂಡು ಲಕ್ಷ್ಮಿದೇವಿ
ಕೇಳಿ ಕೇಳಿ ಮಾವಯ್ಯ ನನ ಮಾತ ಕೇಳಯ್ಯ
ನನ ಮುಕ ನೋಡಿಕೊಂಡು ಯಾಕೆ ಚಿಂತಿ ಮಾಡುತೀರಿ
ಅಮ್ಮ ಕ್ವಾಟೆ ಬಾಕ್ಲು ನಾನು ಕಟ್ಟೀದೆ ಲಕ್ಷ್ಮಿದೇವಿ
ಕ್ವಾಟೆಬಾಕ್ಲು ಈಗ ನಿಲ್ಲಾದೆ ಹೋಯ್ತಮ್ಮ
ಅಯ್ಯ– ಹಾಳುಬಿದ್ದೆ ಕ್ವಾಟೆಬಾಕ್ಲು ಕನನಸೀಗೆ ಬಂದೀತು
ಅಯ್ಯೊ– ಅದು ನಿನ್ನೆ ಬಲಿಯ ಕೇಳುತಾದೆ ಲಕ್ಷ್ಮಿದೇವಿ
ಅಯ್ಯೊ– ನನ ಕೈಯಿಂದ ನಿನ್ನ ನಾನು ಹೆಂಗೆ ಕಡಿಯಾಲಿ
ಅಪಪ– ಭಾರಿದುಕ್ಕ ಮಾಡುತಾನೆ ಭಾರಿ ಶೋಕ ಮಾಡುತಾನೆ
ಅಯ್ಯ– ಮಾವಾನ ಮಾತೀಗೆ ಲಕ್ಷ್ಮಿದೇವಿಯಾದರೆ
ಅಯ್ಯ– ಏನಂತ ಹೇಳುತಾಳೆ ಪತುರೊತೆ ಲಕ್ಷ್ಮಿದೇವಿ
ಆಗ– ಕೇಳಿ ಕೇಳಿ ಮಾವಯ್ಯ ಕೇಳಯ್ಯ ನನ ಮಾತ
ನಾ ಸತ್ರೆ ಮತ್ತೊಬ್ಬಳ ತರಬೋದು ನೀವೀಗ
ಅಯ್ಯ– ಕ್ವಾಟೆ ಬಾಕ್ಲು ಈಗ ನಿಲ್ಲಾದೆ ಹೋದಾರೆ
ಅಯ್ಯ– ಪ್ರಜೆಗಳು ಎಷ್ಟು ಆಡಿಕೊಳ್ಳುತಾರಯ್ಯ
ಆಗ– ನೀವು ಬಾಳಿ ಫಲವೇನು ಬಂದೀತು ಮಾವಯ್ಯ
ಅಮ್ಮ– ನನ ಕೈಯಿಯಿಂದ ನಾನು ಬಲಿ ಹೆಂಗೆ ಕೊಡಲಮ್ಮ
ಮಾವ–ನಿಮ ಕೈಯ್ಯಿಯಿಂದ ನನ್ನ ಕಡಿಬೇಡಿ ಮಾವಯ್ಯ
ಮಾವ– ನಾನೆ ನನಾಗಿ ಬಲಿಯೊಂದಾಗುತೀನಿ
ಅಯ್ಯ– ವಾರಾವೆ ಒಪ್ಪತ್ತೆ ಇರುತಾಳೆ ಲಕ್ಷ್ಮಿದೇವಿ
ಅಯ್ಯ– ಯಾಲಕ್ಕಿ ಫಲಹಾರದುಪವಾಸ ಇರುತಾಳೆ
ಅಯ್ಯ– ಹನ್ನೆರಡು ದಿವಸಾವೆ ಉಪವಾಸವಿರುತಾಳೆ
ಆಗ– ತಣ್ಣೀರಿನಲ್ಲಿ ಈಗ ಸ್ನಾನಾವ ಮಾಡಿದಾಳು
ಆಗ– ನಾರುಮಡಿಯನ್ನು ತಾಯಿ ಉಟ್ಟಾಳು ಲಕ್ಷ್ಮಿದೇವಿ
ಆಗ– ಅತ್ತೆ ಮಾವದೀರ ಪಾದಪೂಜೆ ಮಾಡಿದಾಳು
ಆಗ– ರಂಗದಾಮ್ನ ದೇವುಸ್ತಾನಕ್ಕೆ ಬರುತಾಳೆ ಲಕ್ಷ್ಮಿದೇವಿ

ಅಯ್ಯ– ಏಳು ಪೂಜೆ ಮಾಡುತಾಳೆ ಏಳು ತಳ್ಗೆ ಮಾಡುತಾಳೆ
ಆಗ– ಏಳು ತಿಂಗ್ಳ ಬಿಮ್ಮನ್ಸೆ ಲಕ್ಷ್ಮಿದೇವಿ ಆದರೇಯ
ತುಂಬೆ ಹೂವ ತರುತಾಳೆ ಪತಿಪಾದ ಪೂಜುತಾಳೆ
ಅಯ್ಯ– ಕ್ವಾಟಿ ಬಾಕ್ಲ ಬಳಿಗೀಗ ಬರುತಾಳೆ ಲಕ್ಷ್ಮಿದೇವಿ
ಅಯ್ಯ– ಕ್ವಾಟಿ ಬಾಕ್ಲ ಮುಂದುಗಡೆ ನಿಂತಾಳು ಲಕ್ಷ್ಮಿದೇವಿ
ಅಯ್ಯ– ಕಣ್ಣ ಮುಚ್ಚಿ ಕಣ್ಣ ಬಿಡುವಷ್ಟು ಗಳುಗೇಲಿ
ಅಯ್ಯ ಒಬ್ಬಾರ ಕಣ್ಣೀಗು ಕಾಣದಂತೆ ಲಕ್ಷ್ಮಿದೇವಿ
ಆಗ– ಕ್ವಾಟೆಬಾಕ್ಲ ಬಳಿಯಲ್ಲಿ ಮಾಯಾವೆ ಆದಾಳು
ಅಯ್ಯ– ಊರಾದ ಊರೆಲ್ಲ ಕಣ್ಣನೀರ ಹಾಕಿತು
ಆಗ– ಲಕ್ಷ್ಮಿದೇವಿ ದೇವ್ರಾಗಿ ಕ್ವಾಟೆ ಬಾಕ್ಲಲುಟ್ಟಿದಾಳು
ಆಗ– ಲಕ್ಷ್ಮಿದೇವಿ ದೇವ್ರಾಗಿ ಬಾಕ್ಲಲ್ಲಿ ನಿಂತಾಳು
ಅಯ್ಯ– ಮಾಗಡಿ ಕೆಂಪೆಗೌಡ್ಗೆ ಎಂತ ಕರ್ಮ ಸುತ್ತೀತು
ಆಗ ಸ್ತ್ರೀಹತ್ಯ ಸಿಸುಹತ್ಯ ದ್ರೋಸಾವೆ ಸುತ್ತೀತು

೨. ಜನಪದ ಕಥೆ

ಜನಪದ ಕಥೆ

ಕೆಂಪೇಗೌಡ ನಿರ್ಮಿಸಿದ ಕೆಂಪಸಾಗರ

ಕೆಂಪೇಗೌಡ ತನ್ನ ಸಾಮ್ರಾಜ್ಯದ ಪಕ್ಕದಲ್ಲಿ ತನ್ನ ಹೆಸರಿನ ನೆನಪಿಗಾಗಿ ಒಂದು ಊರನ್ನು, ತನ್ನ ಹೆಸರಿನನಲ್ಲಿಯೇ ಕೆಂಪಸಾಗರ ಎಂಬುದಾಗಿ ನಿರ್ಮಿಸಿದ. ಆ ಊರಿನ ಜನರಿಗೆ ಕುಡಿಯಲು ಒಂದು ಕೆರೆಯನ್ನು ಕಟ್ಟಿಸಲು ಆಲೋಚಿಸತೊಡಗಿದ. ಹೀಗೆ ಅವನು ಆಲೋಚಿಸುತ್ತಿರುವಾಗ ಒಂದು ದಿನ ಕೆಂಪೇಗೌಡ ಮಲಗಿದ್ದಾಗ, ಅವನ ಕನಸಿನಲ್ಲಿ ದೇವರು ಸರ್ಪದ ರೂಪದಲ್ಲಿ ಬಂದು " ನೋಡು ಕೆಂಪೇಗೌಡ, ಈ ಊರಿನ ಜನರಿಗೆ ಕುಡಿಯಲು ನೀನು ಕೆರೆಯನ್ನು ಕಟ್ಟಿಸು ಒಳ್ಳೆಯದು. ಆದರೆ ನಾನು ಯಾವ ರೀತಿ ನೆಲದಲ್ಲಿ ಹರಿದಾಡಿಕೊಂಡು ಹೋಗುತ್ತೇನೋ ಅದೇ ರೀತಿ ಈ ಕೆರೆಯ ಏರಿಯನ್ನು ನಿರ್ಮಿಸಿದರೆ ಮಾತ್ರ ಆ ಕೆರೆಯು ಉಳಿಯಲು ಸಾಧ್ಯ. ಇಲ್ಲವಾದರೆ ಕೆರೆಯು ಹಾಳಾಗುತ್ತದೆ ಎಂದು ಹೇಳಿ ಮಾಯಯಯವಾಯಿತಂತೆ.

ಅದರಂತೆಯೇ ಕೆಂಪೇಗೌಡ ಆ ಕೆಂಪಸಾಗರದ ಏರಿಯನ್ನು ಹಾವು ನೆಲದಲ್ಲಿ ಯಾವ ರೀತಿ ಹರಿದಾಡಿಕೊಂಡು ಹೋಗುತ್ತದೋ ಅದೇ ರೀತಿಯಲ್ಲಿ ಕೆರೆಯ ಏರಿಯನ್ನು ನಿರ್ಮಿಸಿದನಂತೆ. ಈ ರೀತಿಯ ಕೆರೆಯ ಏರಿಯನ್ನು, ಕೆಂಪಸಾಗರ ಎಂಬ ಊರಿನಲ್ಲಿ ಇಂದಿಗೂ ಕೂಡ ನೋಡಬಹುದಾಗಿದೆ. ಅಲ್ಲಿನ ಜನತೆಯು ಕೂಡ ಈ ಕೆರೆಯ ಏರಿಯನ್ನು ಕೆಂಪೇಗೌಡರು ಕಟ್ಟಿಸಿದರು ಎಂದು ಹೇಳುತ್ತಾರೆ. ಇಂದಿನ ಆಧುನಿಕ ಯುಗದಲ್ಲೂ ಕೂಡಾ ಮಾಗಡಿ ತಾಲೂಕಿನ ಹೆಣ್ಣು ಮಕ್ಕಳು ವರ್ಷಕ್ಕೊಂದು ಸಾರಿ ಕೆಂಪಸಾಗರದ ಕೆರೆಯ ಹತ್ತಿರ ಬಂದು ಗಂಗೆಯನ್ನು ಪೂಜಿಸಿಕೊಂಡು ಹೋಗುತ್ತಾರೆ.

ನಿರೂಪಕಿ ; ಜಯಲಕ್ಷ್ಮಮ್ಮ
ವಯಸ್ಸು : ೬೫
ಮಾಗಡಿ ಟೌನ್, ದೊಂಬಿ ದಾಸರು
ಬೆಂಗಳೂರು ಗ್ರಾ. ಜಿಲ್ಲೆ,
ಇವರ ಅಜ್ಜಿ ತಾಯಿಯಿಂದ ಕೇಳಿದ ಕತೆ

೩. ವಕ್ತೃ ಸೂಚಿ

ವಕ್ತೃಸೂಚಿ

ಕ್ರ.ಸಂ. ಹೆಸರು ವಯಸ್ಸು	ಊರು	ಜಾತಿ	ವೃತ್ತಿ
೧. ಗೌರಮ್ಮ ೬೫	ಕಲಾಸಿಪಾಳ್ಯ	ಗೌಂಡರ್	ವ್ಯಾಪಾರ
೨. ಮಧು ೫೪	ಧರ್ಮಪುರಿ	ಗೌಂಡರ್	ವ್ಯಾಪಾರ
೩. ಸರಸ್ವತಿ ೩೪	ಬೆಂಗಳೂರು	ಗೌಡ	ವ್ಯಾಪಾರ
೪. ಸಾಲಮ್ಮ ೩೨	ಸೇಲಂ	ಗೌಂಡರ್	ವ್ಯಾಪಾರ
೫. ಮನೋಹರ್ ೬೨	ಬೆಂಗಳೂರು	ಮೊದಲಿಯಾರ್	ವ್ಯಾಪಾರ
೬. ಗೌರಿ ೩೫	ಸೇಲಂ	ಗೌಂಡರ್	ವ್ಯಾಪಾರ
೭. ಪೊನ್ನಿ ೩೫	ಬೆಂಗಳೂರು	ಗೌಂಡರ್	ವ್ಯಾಪಾರ
೮. ನಾಗರಾಜ ೪೧	ಮಾಲೂರು	ಗೌಡ	ವ್ಯಾಪಾರ
೯. ಮುಕುಂದ ೪೧	ಬೆಂಗಳೂರು	ತಿಗಳರು	ದೇಗುಲ
೧೦. ಸುಶೀಲ ೪೬	ಬೆಂಗಳೂರು	ತಿಗಳರು	ಗೃಹಿಣಿ
೧೧. ನಾಗರತ್ನಮ್ಮ ೪೦	ಹೆಬ್ಬಾಳ	ತಿಗಳರು	ಗೃಹಿಣಿ
೧೨. ಮುನಿಸ್ವಾಮಪ್ಪ ೫೬	ಬೆಂಗಳೂರು	ತಿಗಳರು	ಧರ್ಮದರ್ಶಿ (ಧರ್ಮರಾಯ ದೇಗುಲ)
೧೩. ಪೂಜಾ ೩೫	ನಗರ್ತಪೇಟೆ	ತಿಗಳರು	ಖಾಸಗಿ ಉದ್ಯೋಗಿ
೧೪. ಸುರೇಶ್ ಬಾಬು ೩೧	ನಗರ್ತಪೇಟೆ	ತಿಗಳರು	ಕೇಬಲ್‌ಉದ್ಯೋಗಿ (ವೀರಕುಮಾರ)

೧೫. ಹರೀಶ್ ೪೧	ಕಾಟನ್‌ಪೇಟೆ	ತಿಗಳರು	ಬ್ಯಾಂಕ್‌ಉದ್ಯೋಗಿ (ವೀರಕುಮಾರ)
೧೬. ನವೀನ್ ೪೧	ಕಾಟನ್‌ಪೇಟೆ	ತಿಗಳರು	ವಿದ್ಯಾರ್ಥಿ (ವೀರಕುಮಾರ)
೧೭. ಗಣಪತಿ ಶಾಸ್ತ್ರಿ ೬೦	ಬಸವನಗುಡಿ	ಬ್ರಾಹ್ಮಣರು	ಟ್ರಸ್ಟೀ (ದೊಡ್ಡ ಬಸವಣ್ಣ ಗುಡಿ)
೧೮. ನಾಗೇಶ್ ೩೩	ದೇವನಹಳ್ಳಿ	ಕುರುಬರು	ಲೆಕ್ಕಿಗ
೧೯. ಸುನಂದ ಮಾರಿಯ ೪೨	ಅಲಸೂರು	ಕ್ರೈಸ್ತರು	ನಿರ್ವಾಹಕರು
೨೦. ಚಂದ್ರ ಸೌಂದರ ರಾಜ್ ೬೨	ಬೆಂಗಳೂರು	ಕ್ರೈಸ್ತರು	ಪ್ರೊಫೆಸರ್
೨೧. ನಾಗರತ್ನ ೪೫	ಶಿವಾಜಿ ನಗರ	ಕ್ರೈಸ್ತರು	ಲೆಕ್ಕಿಗರು (ಸೇಂಟ್ ಮೇರಿಸ್ ಚರ್ಚ್)
೨೨. ಚೆಲುವರಾಜು ೮೨	ಮಾವಳ್ಳಿ	ಬಲಿಜರು	ನಿವೃತ್ತಕಂಟ್ರಾಕ್ಟರ್
೨೩. ನಾಗರತ್ನಮ್ಮ ೭೫	ಮಾವಳ್ಳಿ	ಬಲಿಜರು	ಗೃಹಿಣಿ
೨೪. ಚಂದ್ರು ೪೨	ಶ್ರೀನಗರ	ಗೌಡರು	ಛಾಯಾಗ್ರಾಹಕರು
೨೫. ಶಶಿಕುಮಾರ ೩೫	ಶ್ರೀನಗರ	ಲಿಂಗಾಯತ	ಅರ್ಚಕರು (ಬಂಡಿ ಮಾಂಕಾಳಮ್ಮ ಗುಡಿ)
೨೬. ಭದ್ರಪ್ಪ ೫೮	ಅಶೋಕ ನಗರ	ಕುರುಬರು	ಬ್ಯಾಂಕ್‌ಉದ್ಯೋಗಿ
೨೭. ರಾಮ ಪ್ರಸಾದ್ ೨೮	ಬೆಂಗಳೂರು	ಗಾಣಿಗರು	ಅರ್ಚಕರು
೨೮. ನಾಗೇಶ್ ೩೬	ಬೆಂಗಳೂರು	ಗಾಣಿಗರು	ಖಾಸಗಿಉದ್ಯೋಗಿ
೨೯. ಮಂಜುನಾಥ್ ೪೨	ಬೆಂಗಳೂರು	ಗಾಣಿಗರು	ಟ್ರಸ್ಟೀ (ಅಣ್ಣಮ್ಮ ಗುಡಿ)
೩೦. ಕುಪ್ಪುಸ್ವಾಮಿ ೪೮	ನಗರ್ತಪೇಟೆ	ತಿಗಳರು	ವ್ಯವಸ್ಥಾಪಕರು (ಧರ್ಮರಾಯ ದೇವಸ್ಥಾನ)

೪. ಆಕರ ಗ್ರಂಥಗಳು

ಆಕರ ಗ್ರಂಥಗಳು

೧. ಅರವಿಂದ ಮಾಲಗತ್ತಿ, **ಪುರಾಣ ಮತ್ತು ದೇಶೀ ವಾದ, ಕನ್ನಡ ಸಾಹಿತ್ಯ ಪರಿಷತ್ತು,** ಬೆಂಗಳೂರು,೧೯೯೯

೨. ಅರವಿಂದ ಮಾಲಗತ್ತಿ (ಸಂ), **ಕನ್ನಡ ವಿಷಯ ವಿಶ್ವಕೋಶ (ಜಾನಪದ),** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೩. ಅಂಬಳಿಕೆ ಹಿರಿಯಣ್ಣ, **ಸೈದ್ಧಾಂತಿಕ ಜಾನಪದ,** ಚೇತನ ಬುಕ್ ಹೌಸ್, ೨೦೦೧

೪. ಕೃಷ್ಣಯ್ಯ.ಎಂ.ಎಚ್.ಮತ್ತು ಡಾ.ವಿಜಯ.(ಸಂ), **ಬೆಂಗಳೂರು ದರ್ಶನ,** ಸಂ–೧,೨,೩, ಉದಯಭಾನು ಕಲಾ ಸಂಘ, ಬೆಂಗಳೂರು, ೨೦೦೫

೫. ಕೊಸಾಂಬಿ ಡಿ. ಡಿ.(ಅನು: ಬಿ.ಎಸ್. ವೇಣುಗೋಪಾಲ್, ಶೈಲಜ), **ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ,** ಚಿಂತನ ಪುಸ್ತಕಾಲಯ, ಬೆಂಗಳೂರು, ೨೦೧೧

೬. ಗವೀಶ ಹಿರೇಮಠ.(ಸಂ), **ಜಾಗತೀಕರಣ ಮತ್ತು ಜಾನಪದ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೪

೭. ಗುರುಪ್ರಸಾದ್ ಸಿ.ಟಿ., **ನೀಲಗಾರರು ಸಂಕಥನ,** ಬಂಗಾರಿ ಪಬ್ಲಿಕೇಷನ್, ಶಿಗ್ಗಾಂವಿ, ೨೦೧೪

೮. ಗುರುಪ್ರಸಾದ್ ಸಿ.ಟಿ., **ಹೊನ್ನೇರು,** ಬಂಗಾರಿ ಪಬ್ಲಿಕೇಷನ್, ಶಿಗ್ಗಾಂವಿ, ೨೦೧೪

೯. ಗುರುಮೂರ್ತಿ ಸಿ. ಜಿ., **ಜನಪದ ಸಮಾಜದ ಸಂಸ್ಕೃತಿ,** ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ, ೧೯೭೯

೧೦. ಗೋಪಾಲ್. ಆರ್.(ಸಂ), **ನಾಡಪ್ರಭು ಕೆಂಪೇಗೌಡನ ಜೀವನ ಸಾಧನೆಗಳು,** ಪ್ರಾಚ್ಯ ವಸ್ತುಗಳ ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೦

೧೧. ಗೋಪಾಲ. ಬಾ. ರಾ., **ಇತಿಹಾಸ ಶಾಸ್ತ್ರ ಮತ್ತು ಸಿದ್ಧಾಂತ,** ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೬

೧೨. ಗೋಪಾಲ್ ರಾವ್.ಎಚ್ ಎಸ್., **ಇತಿಹಾಸ ಅಧ್ಯಯನ: ಅಂದು ಇಂದು,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೭

೧೩. ಗಂಗಾ ನಾಯಕ್.(ಸಂ), **ಜಾನಪದ,** ಕುವೆಂಪು ಕನ್ನಡ ಸಂಘ, ಮೈಸೂರು, ೨೦೧೧

೧೪. ಚನ್ನಣ್ಣ ವಾಲೀಕರ್, **ಹೈದರಾಬಾದ್ ಕರ್ನಾಟಕ ಗ್ರಾಮದೇವತೆಗಳು ಒಂದು ಅಧ್ಯಯನ,** ಕಲಬುರಗಿ, ೨೦೦೨

೧೫. ಚಂದ್ರಶೇಖರ ಕಂಬಾರ.(ಸಂ), **ಕನ್ನಡ ಜಾನಪದ ವಿಶ್ವ ಕೋಶ,** ಸಂ.೧, ಬೆಂಗಳೂರು, ೧೯೮೫

೧೬. ಚಿದಾನಂದ ಮೂರ್ತಿ.ಎಂ., **ಗ್ರಾಮೀಣ, ಬೆಂಗಳೂರು, ೧೯೭೭**

೧೭. ಚಿದಾನಂದ ಮೂರ್ತಿ.ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೬೬

೧೮. ಚಿನ್ನಪ್ಪ ಗೌಡ.ಎಂ. **ಭೂತಾರಾಧನೆ,** ಮದಿಪು ಪ್ರಕಾಶನ, ಮಂಗಳೂರು, ೧೯೯೦

೧೯. ಜಮುನ, ಎಂ.ಜಿ. ಮಂಜುನಾಥ್., **ಯಲಹಂಕ ನಾಡಪ್ರಭುಗಳು (ಶಾಸನ),** ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೨೦೦೪

೨೦. ಜವರೇಗೌಡ. ದೇ., **ಜಾನಪದ ಅಧ್ಯಯನ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,೨೦೦೧

೨೧. ಜೀ.ಶಂ. ಪರಮಶಿವಯ್ಯ, **ಜಾನಪದ ಬರಹಗಳು,** ಸಾಗರ್ ಪ್ರಕಾಶನ, ಬೆಂಗಳೂರು, ೧೯೬೭

೨೨. ಡೊಮಿನಿಕ್.ಡಿ, **ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು,** ಸಖಿ ಪ್ರಕಾಶನ, ಹೊಸಪೇಟೆ, ೨೦೦೭

೨೩. ತಪಸ್ವೀ ಕುಮಾರ್ ನಂ., **ಸಂಸ್ಕೃತಿಯ ಅಧ್ಯಯನ,** ಚಾಮುಂಡಿ ಎಂಟರ್‌ಪ್ರೈಸಸ್, ಮೈಸೂರು, ೧೯೮೦

೨೪. ತಪಸ್ವೀ ಕುಮಾರ್ ನಂ., **ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೨೫. ತಲ್ವಾಡಿ. ಬಿ. ಎಸ್., **ದಕ್ಷಿಣ ಕರ್ನಾಟಕದ ಕ್ರೈಸ್ತ ಜನಪದ ಸಾಹಿತ್ಯ,** ಭರತ್ ಪ್ರಕಾಶನ, ಬೆಂಗಳೂರು, ೨೦೦೪

೨೬. ತುಳಸೀರಾಮ ನಾಯಕ್, **ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ,** ೨೦೧೦

೨೭. ದೇವಿ ಪ್ರಸಾದ್ ಚಟ್ಟೋಪಾಧ್ಯಾಯ, **ಲೋಕಾಯತ,** ನವಕರ್ನಾಟಕ ಪ್ರಕಾಶನ, ೨೦೧೧

೨೮. ದೇವುಡು ನರಸಿಂಹ ಶಾಸ್ತ್ರಿ., **ಸಂಸ್ಕೃತಿ,** ಮೈಸೂರು ಸಂಸ್ಥಾನ, ೧೯೫೪

೨೯. ನಾಗಭೂಷಣ್.ಓ.ಎಲ್., **ಸಾಹಿತ್ಯ ಸಂಸ್ಕೃತಿ ಪಥ,** ಸುವರ್ಣ ಕರ್ನಾಟಕ ಗೆಜೆಟಿಯರ್ ಇಲಾಖೆ

೩೦. ಪುಟ್ಟಪ್ಪ. ಕೆ. ವಿ., **ಯುಗಯಾತ್ರೀ ಭಾರತೀಯ ಸಂಸ್ಕೃತಿ,** ಸಂ.೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೭೦

೩೧. ಪುರುಷೋತ್ತಮ ಬಿಳಿಮಲೆ, **ಕೂಡುಕಟ್ಟು,** ಆನಂದಕಂದ ಗ್ರಂಥಮಾಲೆ, ಮಲ್ಲಾಡಿ ಹಳ್ಳಿ, ೧೯೯೭

೩೨. ಪುಷ್ಪ ಭಾರತಿ. ಆರ್. ಎ., **ನಗರ ಹಳ್ಳಿಗಳ ನಡುವೆ ಬೆಂಗಳೂರು,** ಗೀತಾಂಜಲಿ ಪಬ್ಲಿಕೇಷನ್, ಬೆಂಗಳೂರು, ೨೦೦೭

೩೩. ಪೈ.ಸಿ.ಸಿ.ಎ., **ಜಾನಪದ ವೈಜ್ಞಾನಿಕ ಕ್ಷೇತ್ರ ಕಾರ್ಯ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೩೪. ಮಂಜುನಾಥ ಬೇವಿನಕಟ್ಟೆ, **ಜಾನಪದ ಕರ್ನಾಟಕ,** ಸಂ.೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೩೫. ಮೊಗಳ್ಳಿ ಗಣೇಶ್, **ಮೌಖಿಕ ಕಥನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೩೬. ಮೊಗಳ್ಳಿ ಗಣೇಶ್, ಆದಿಮ, ಸಾರಂಗ ಪ್ರಕಾಶನ, ತಿಪಟೂರು, ೨೦೦೫

೩೭. ಮೊಗಳ್ಳಿ ಗಣೇಶ್, **ದಲಿತರು ಮತ್ತು ಜಾಗತೀಕರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,೧೯೯೯

೩೮. ಮೊಗಳ್ಳಿ ಗಣೇಶ್, **ಮೌಖಿಕ ಕಥನ,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೩೯. ಮೊಗಳ್ಳಿ ಗಣೇಶ್, **ಅವ್ಯಕ್ತ ಚರಿತ್ರೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೪೦. ಮೋಹನ ಕೃಷ್ಣ ರೈ. ಕೆ, **ವಸಹಾತುಶಾಹಿ ಮತ್ತು ನಗರೀಕರಣ,** ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, ೨೦೦೪

೪೧. ರಮೇಶ್ ಸ.ಚಿ., **ಕರ್ನಾಟದ ಜನಪದ ಆಚರಣೆಗಳು,** ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ,೨೦೧೧

೪೨. ರಾಜ್ಯ ಪತ್ರಾಗಾರ,(ಸಂ), **ದಾಖಲೆಗಳಲ್ಲಿ ಬೆಂಗಳೂರು,** ೧೯೮೪

೪೩. ರಾಜಶೇಖರ ಪಿ.ಕೆ.(ಸಂ), **ಯಲಹಂಕ ನಾಡ ಪ್ರಭುಗಳು,** ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೨೦೦೪

೪೪. ರಾಜಾರಾಮ ಹೆಗಡೆ.(ಸಂ), **ಭಾರತೀಯ ಇತಿಹಾಸ: ಸಮಾಜ ಮತ್ತು ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೪೫. ರೂತ್ ಬೆನೆಡಿಕ್ಟ್,(ಅನು: ಶಂಕರನಾರಾಯಣ) **ಸಂಸ್ಕೃತಿಯ ರೂಪಿಕೆಗಳು,** ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು, ೧೯೭೮

೪೬. ರಾಮಚಂದ್ರನ್ ಸಿ.ಎನ್., **ಎಡ್ವರ್ಡ್ ಸೈದ್,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೪೭. ಲಕ್ಷ್ಮೀದೇವಿ. ಎಸ್., **ಗ್ರಾಮ ದೇವತೆಗಳು ಮತ್ತು ಶಿಷ್ಟ ದೇವತೆಗಳು,** ಚಿತ್ರಕಲಾ ಪ್ರಕಾಶನ, ಬಳ್ಳಾರಿ,೨೦೦೭

೪೮. ಲಕ್ಕಪ್ಪ ಗೌಡ.(ಸಂ), **ಜಾನಪದ ಗಂಗೋತ್ರಿ, ಸಂ–೮, ಸಂ–೨, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ೧೯೯೫**

೪೯. ಲಕ್ಷ್ಮಣ ತೆಲಗಾವಿ.(ಸಂ), **ಸಂಶೋಧನೆ,** ಬೆಂಗಳೂರು, ೧೯೯೧

೫೦. ಲಿಂಗಯ್ಯ.ಡಿ., **ಜಾನಪದ ಸ್ವರೂಪ,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೩

೫೧. ಲಿಂಗಯ್ಯ.ಡಿ.(ಸಂ), **ಯಲಹಂಕ ನಾಡಪ್ರಭುಗಳು (ಜಾನಪದ),** ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೨೦೦೪

೫೨. ಶಂಕರನಾರಾಯಣ.ತಿ.ನಂ., **ಫಿನ್ಲೆಂಡಿನ ಜಾನಪದ ವಿದ್ವಾಂಸರು,** ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೧

೫೩. ಶಂಕರನಾರಾಯಣ.ತಿ.ನಂ., **ದ್ರಾವಿಡ ಜಾನಪದ,** ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೫

೫೪. ಶಂ.ಬಾ. ಜೋಷಿ, **ಶಂಬಾ ಕೃತಿ,** ಸಂಪುಟ, ಸಂ. ೧–೫, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೫೫. ಶಿವಶಂಕರ್ ಚಕ್ಕೆರೆ, **ಬೆಂಗಳೂರು ಜಾನಪದ,** ಕನ್ನಡ ಸಾಹಿತ್ಯ ಪರಿಷತ್ತು, ೨೦೧೦

೫೬. ಶಿವಶಂಕರ್ ಚಕ್ಕೆರೆ, **ಜನಪದ ತಂತ್ರಜ್ಞಾನ,** ಕರ್ನಾಟಕ ಜಾನಪದ, ಯಕ್ಷಗಾನ ಅಕಾಡೆಮಿ, ಬೆಂಗಳೂರು,೨೦೦೩

೫೭. ಸಂಧ್ಯಾ ರೆಡ್ಡಿ ಕೆ. ಆರ್.(ಸಂ), **ಮಹಿಳಾ ಜಾನಪದ,** ಕರ್ನಾಟಕ ಜಾನಪದ, ಯಕ್ಷಗಾನ ಅಕಾಡೆಮಿ, ಬೆಂಗಳೂರು,೨೦೦೨

೫೮. ಸಿದ್ದಲಿಂಗಯ್ಯ, **ಗ್ರಾಮದೇವತೆಗಳು,** ಮೂಲಭಾರತಿ ಪ್ರಕಾಶನ, ಬೆಂಗಳೂರು, ೧೯೯೭

೫೯. ಸುಮಿತ್ರ. ಎಂ., **ಕರಗ ಸಂಪ್ರದಾಯ,** ಅಂಕಿತ ಪ್ರಕಾಶನ, ಬೆಂಗಳೂರು, ೨೦೦೨

೬೦. ಸುಂದರ ರಾವ್ ಬ. ನ., **ಬೆಂಗಳೂರಿನ ಇತಿಹಾಸ,** ವಸಂತ ಸಾಹಿತ್ಯ ಗಂಥಮಾಲ, ಬೆಂಗಳೂರು, ೧೯೮೫

೬೧. ಹರಿದಾಸ ಭಟ್ಟಾಚಾರ್ಯ, **ಯುಗಯಾತ್ರಿ,** ಭಾರತೀಯ ಸಂಸ್ಕೃತಿ, ಸಂಪುಟ–೪, ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೮

೬೨. ವಿವೇಕ್ ರೈ, **ಜಾನಪದ ಗಂಗೋತ್ರಿ,** ಸಂ–೬, ಸಂ–೨, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ೧೯೯೬

೬೩. ವೀರಣ್ಣ ದಂಡೆ, **ಜಾನಪದ ಸ್ವರೂಪ,** ಕುವೆಂಪು ಕನ್ನಡ ಸಂಸ್ಥೆ, ಮೈಸೂರು, ೨೦೧೧

(ಅಪ್ರಕಟಿತ)

ಎಂ.ಫಿಲ್. ನಿಂಬಂಧ : ಮದನ್.ಪಿ, **ಬೆಂಗಳೂರಿನ ಬಿನ್ನಿಮಿಲ್ ಒಂದು ಅಧ್ಯಯನ,** ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೧೧

ಪಿಎಚ್.ಡಿ ಮಹಾಪ್ರಬಂಧ : ಡಾ. ಸಿ. ಅಶ್ವತ್ಥಮ್ಮ, **ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳು ಒಂದು ಅಧ್ಯಯನ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೧೨

ನಿಯತಕಾಲಿಕೆಗಳು : **ಲೇ: ಡಾ. ಪಿ. ವಿ ಕೃಷ್ಣಮೂರ್ತಿ, ಇತಿಹಾಸ ದರ್ಶನ,** ಸಂ.೧, ಕರ್ನಾಟಕ ಇತಿಹಾಸ ಅಕಾಡೆಮಿ, ೧೯೮೬

: ಲೇ: ವೇಮಗಲ್ ಸೋಮಶೇಖರ್, **ಇತಿಹಾಸ ದರ್ಶನ,** ಸಂ.೧೧, ಕರ್ನಾಟಕ ಇತಿಹಾಸ ಅಕಾಡೆಮಿ, ೧೯೯೭

- Anuradha Mathur, **Deccan traverses- The making of Bangalore's Terrain,** Rupa & co. New Delhi, 2006
- Aitchison C V, **A collection of treaties relating to India,** Vol 6, Bombay Presidency, Calcutta, 1892
- Anantha Krishna Iyer , **The mysore tribes & castes,** Vol 1,2,3, Mysore University 1935
- Anantha Swamy T V , **Bangalore to Bangalore,** Vengadam Publications, Bangalore, 2003
- Ananda Coomaraswamy, **Time & Eternity,** Select books, Bangalaore, 1947
- Alan Dundes, **The study of Folklore,** U.S.A.N.J.Prentice Hill Inc., 1965
- Birendranath Datta, **Folklore and Histirigraphy**, national Folklore,support centre Chennai 1994
- Collingwood R.G. **The idea of History**, Oxford university Press, NewDelhi 1994
- Durga Bhagavath, **An outline of Indian Folklore,** Popular books, Indiana university, 1958
- Edger Thurston, **Ethnographic notes in southern India,** Asian Educational Services, New Delhi, 1906
- Francis Buchanan, **A Journey from Madras through the centuries of Mysore,** Malabar & canara , Bulber &co, London 1807
- Frazer.J.G. **Golden Bough**, Macmillan, 1949
- Fazlul Hasan, **Bangalore Through centuries**., Historical Publications, Bangalore,1970
- Graves R, **Mother Goddess**, Noonday paperback, 1966
- Govind Prasad, Anil Dutt Mira, **Globalisation, Myth, & Reality,** Concept publishing, NewDelhi ,1992
- Henry white Head.D.D. **Village Gods of South India.** Cosmo publications, New Delhi,1983
- Jawaharlal Handoo, **Anna Leena sikala, Folklore and Discourse**, Zoori publications, Mysore,1999
- JawaharlalHandoo, **Reimund kvideland(Edi), Folklore New perspectives**, Zoori publications, Mysore,1999
- Iyer.L.K.A. **Mysore Tribes castes**.vol4 Madras Presidency,1872
- Levi strausses, **Structural Anthropology**, London 1968
- LauriHanko-**NIF news Letter**,vol1 to 18 Turku Nordiac Institute of Folklore, 1964

- Morris.J.w. **Guide to Bangalore Mysore** Dictionary ,London 1906
- Maya jayapal, **The study of a city**, Eastwest Books, Bangalore 1984
- Melville Jean, Herscovitz, **Cultural Anthrapology,** University of Michigan, 1955
- Muthukumar swamy M.D.(Edi) **Voicing Folklore A collection of Interviews**, National Folklore Support centre Chennai, 2002
- Nilakanta sastry(Ed) **Topographical List of the Inscriptions of Madras**, Madras presidency,1919
- Narasinga Rajan, **Bangalore as a commercial city**, Mythic society publication ,1998
- Narayana Rao.P.S., **The corporation of the city of Bangalore**, Mythic society,1970
- Richard.M.Dorson, **Folklore &Folklife**, University of Chicago, press Chicago,Lndon 1972
- Robert A Lourie, **primitive Religion,** Live right Publication, 1960
- Robert Ezra Parak, **Introduction to the science of Sociology,** University of Chicago, 1921
- Robert Sewell, **The historical Inscriptions of South India**, Madras presidency,1932
- Suryanatha Kamath, **Histiriography of Karnataka**, Mythic society publication, Bangalore,1982
- Shivakumaraswamy, **pracya pracjna**, Mythic society publication, Bangalore,2001
- Shamashastry(Ed),**South Indian Inscriptions** vol IX Kannada Inscriptions Madras presidency, 1895
- Srinivas .M.N.(Ed)**Dimensions of social change in India,** Mysore 1962
- Shaik A.A., **Globalisation: Its clashes, contents, and Discontents**, Concepts of publishing company NewDelhi,1992
- Sumit Sarkar, **Writing social History**, Oxford University press,newDelhi,1997
- Tristan Coffin III **American Folklore**, HigginBothoms(p)Ltd, Mountroad Madras,1968
- Wilber Theodre Elmore, **Dravidian Gods in modern Hinduism,** Scholars Choice-1913

Encyclopedias:

- Encyclopedia of the Folk Culture of Karnataka, vol 1, Institute of Ancient studies, Madras, 1991
- Encyclopedia Americana, vol 1 & 2, Scholastic Library, Damburry,
- Encyclopedia Britannica, Ed: Charles Vandoren, vol-9, EBI, UK, 1768
- Encyclopedia of Religion & Ethics, Ed: Jane Ellen Harrison, London, 1908
- International Encyclopedia of Social Sciences, Ed: David Sills, Macmillan, 1968

Dictionaries :

- Directory of Mysore & Bangalore, Campbells & Sons., 1920
- Standard Dictionary of Folklore Mythology & Legend, New York, 1959

Journals


- Annual Report of the Contonment Municipal Council for the year 1970-71
- Essays on Banglaore, Vol 1 & 4, IISc, Bangalore
- Quarterly Journal of Mythic Society, Vol 12, Mythic Society Publication, 1922
- Quarterly Journal of Mythic Society, Vol 31, Mythic Society Publication, 1940
- Quarterly Journal of Mythic Society, Vol 99, Mythic Society Publication, 2008
- Karnataka State Gazettere, Ed: Suryanath Kamath, 1990
- Mysore Gazettere, Ed: Hayavadhana Rao, 1941

೫. ನಕ್ಷೆಗಳು



ಕೆಂಪೇಗೌಡರು ಅಭಿವೃದ್ಧಿಪಡಿಸಿದ ಬೆಂಗಳೂರು

ಕೃಪೆ : [illegible]



ಬೆಂಗಳೂರು

ಮೂರನೆಯ ಮೈಸೂರು ಯುದ್ಧದಲ್ಲಿ (1791ರಲ್ಲಿ) ಲಾರ್ಡ್ ಕಾರ್ನ್‌ವಾಲೀಸನು ವಶಪಡಿಸಿಕೊಂಡಾಗ

ರ್ವೃತ್ತದ (ಅಂಡಾಕಾರದ) ಮಣ್ಣು ಕೋಟೆಯ ಒಳಗಿನ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	184.00
ಮಿ ಆಕಾರದ (ಓವಲ್) ಕೋಟೆಯ ಒಳಗಿನ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	12.00
ಒಟ್ಟು	196.00

ಜನಸಂಖ್ಯೆ : ಸುಮಾರು 80,000

ಕೃಪೆ : ಮಥಿಕ್ ಸೊಸೈಟಿ

೬. ಛಾಯಾ ಚಿತ್ರಗಳು



ನಗರ ದೇವತೆ ಅಣ್ಣಮ್ಮ ದೇವಾಲಯ



ಅಣ್ಣಮ್ಮನ ಮೂರ್ತಿ

ಅಣ್ಣಮ್ಮನಿಗೆ ತಂಪು
ಕಲ್ಲಿನ ಹರಕೆ





ಬಂಡಿ ಕಾಳಮ್ಮನ ಮೂಲ ವಿಗ್ರಹ

ಬಿಸಿಲು ಮಾರಮ್ಮನ ಪಲ್ಲಕ್ಕಿ





ಅಮ್ಮನ ಶಮಿವೃಕ್ಷಕ್ಕೆ ಪೂಜೆ



ಬಿಸಿಲು ಮಾರೆಮ್ಮನ ಜಾತ್ರೆಯಲ್ಲಿ
ಸಿಡಿ ಉತ್ಸವ



ಕೆಂಡ ಹಾಯುವ ಮುನ್ನ
ಮೂರು ವರ್ಣದ ಅನ್ನದ ನೈವೇದ್ಯ



ಕೆಂಡ ಹಾಯುವ ಮಹಿಳೆ




ಬಿಸಿಲು ಮಾರೆಮ್ಮನಿಗೆ ಬೆಣ್ಣೆ ಅಲಂಕಾರ



ಸಿಡಿರನ್



ಭಕ್ತರಿಗೆ ಕಡಲೆಕಾಯಿ ಪ್ರಸಾದ ಹಂಚಿಕೆ



ಧರ್ಮರಾಯ, ದ್ರೌಪದಿ ಮೂಲ ವಿಗ್ರಹ



ಕರಗ ಮರುದಿನ ವಸಂತೋತ್ಸವದ ಮೂಲವಿಗ್ರಹಗಳು



ದೊಡ್ಡ ಬಸವಣ್ಣನಿಗೆ ಅಭಿಷೇಕ



ಬಿಸಿಲು ಮಾರಮ್ಮನ ಜಾತ್ರೆಯಲ್ಲಿ ಉಟ್ಲು ಕಂಬದಾಟ



ಬಂಡಿ ಮಾಂಕಾಳೆಮ್ಮನ ಉತ್ಸವ ಮೂರ್ತಿ



ಪರಿಷೆಯಲ್ಲಿ ಕಡಲೆಕಾಯಿ ಮಾರುತ್ತಿರುವ ರೈತ ಮಹಿಳೆ



ಕಡಲೆಕಾಯಿ ತುಲಾಭಾರ



ಅಲಂಕೃತ ದೊಡ್ಡ ಬಸವಣ್ಣ



ಪರಿಷೆಗೆ ಆಗಮಿಸಿದ ವಿದೇಶೀಯರು



ಕರಗ ಹೊರುವ ಪೂಜಾರಿಗೆ ಉಡಿ ತುಂಬುತ್ತಿರುವುದು

ಕನ್ನಡ ಅಧ್ಯಯನ ವಿಭಾಗ